ಭಾನುವಾರ, ಫೆಬ್ರುವರಿ 19, 2023 | ಬೆಂಗಳೂರು | ₹ 6.00 | ಸಂಪುಟ 76 | ಸಂಚಿಕೆ 50 | ಪುಟ 20
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಮೊಟ್ಟೆ ಎಲ್ಲಿಡಲಿ ಎಂದು ಕೇಳುತ್ತಿವೆ ಹೊನ್ನಾವರ ಟೊಂಕಾ ಬೀಚ್‌ನ ಆಮೆಗಳು...

'ಹೊಂದಾಣಿಕೆ ರಾಜಕೀಯ' ಇಲ್ಲ– 'ಕೈ' ತೀರ್ಮಾನ 5
ಚುನಾವಣಾ ಆಯೋಗ, ಪ್ರಧಾನಿ ಮೋದಿ ವಿರುದ್ಧವೂ ಉದ್ಧವ್ ವಾಗ್ದಾಳಿ
'ಸಚಿವ ಅಶ್ವತ್ಥ ಅಲ್ಲ, ಅಸ್ವಸ್ಥ ನಾರಾಯಣ' 5
'ಶಿವಧನಸ್ಸು ಕಳ್ಳನಿಗೆ ತಕ್ಕ ಪಾಠ ಕಲಿಸಿ' 7

ಮಾರುಕಟ್ಟೆ ಅವ್ಯವಸ್ಥೆ, ಸೂಕ್ತ ಬೆಲೆ ಸಿಗದೆ ಬೆಳೆಗಾರರ ಪರದಾಟ

ಕಮರುತ್ತಿದೆ 'ಏಲಕ್ಕಿ' ಘಮಲು

• ವಿಶ್ವನಾಥ ಎಸ್.

ಬೆಂಗಳೂರು: ಸಂಬಾರ ಪದಾರ್ಥಗಳ 'ರಾಣಿ' ಎಂದು ಗುರುತಿಸಿಕೊಂಡಿರುವ ಏಲಕ್ಕಿ ಬೆಳೆಯು ಕಾರ್ಮಿಕರ ಕೊರತೆ, ಸರಿಯಾದ ಮಾರುಕಟ್ಟೆ ವ್ಯವಸ್ಥೆ ಇಲ್ಲದೇ ಇರುವುದು, ಸೂಕ್ತ ಬೆಲೆ ಸಿಗದ ಕಾರಣಗಳಿಂದಾಗಿ ರಾಜ್ಯದಿಂದ ನಿಧಾನವಾಗಿ ಕಣ್ಮರೆ ಆಗುತ್ತಿದೆ. ಹವಾಮಾನ ಬದಲಾವಣೆ ಹಾಗೂ ಕಟ್ಟೆ ರೋಗದಂತಹ ಸಮಸ್ಯೆಗಳು ಸಹ ಏಲಕ್ಕಿ ಬೆಳೆಯಲು ಬೆಳೆಗಾರರಲ್ಲಿ ನಿರಾಸಕ್ತಿ ಮೂಡಿಸುತ್ತಿವೆ.

ಭಾರತೀಯ ಸಂಬಾರ ಮಂಡಳಿಯಲ್ಲಿ ಇರುವ ಮಾಹಿತಿಯ ಪ್ರಕಾರ, ರಾಜ್ಯದಲ್ಲಿ ಸುಮಾರು 25 ಸಾವಿರ ಹೆಕ್ಟೇರ್ ಪ್ರದೇಶದಲ್ಲಿ ಏಲಕ್ಕಿ ಬೆಳೆಯಲಾಗುತ್ತಿದೆ. 2017–18 ರಿಂದ 2021–22ರವರೆಗಿನ ಅಂಕಿ–ಅಂಶಗಳನ್ನು ಗಮನಿಸಿದರೆ ಬೆಳೆ ಪ್ರದೇಶದಲ್ಲಿ ಯಾವುದೇ ಇಳಿಕೆ ಕಂಡುಬಂದಿಲ್ಲ. 25,135 ಹೆಕ್ಟೇರ್‌ನಷ್ಟೇ ಇದೆ. ಆದರೆ ಉತ್ಪಾದನೆಯಲ್ಲಿ ಹೆಚ್ಚಳ ಆಗಿದೆ. 2020–21ರಲ್ಲಿ 579 ಟನ್ ಉತ್ಪಾದನೆ ಆಗಿತ್ತು. ಇದು 2021–22ರಲ್ಲಿ 697 ಟನ್ ಉತ್ಪಾದನೆ ಆಗಿರುವ ಅಂದಾಜು ಮಾಡಲಾಗಿದೆ. ಆದರೆ, ವಾಸ್ತವದಲ್ಲಿ ಏಲಕ್ಕಿ ಬೆಳೆಯುವ ಪ್ರದೇಶದ ವಿಸ್ತೀರ್ಣದಲ್ಲಿ ಭಾರಿ ಇಳಿಕೆ ಕಂಡುಬಂದಿದೆ. ಸಾಂಪ್ರದಾಯಿಕವಾಗಿ ಏಲಕ್ಕಿ ಬೆಳೆಯುವ ಪ್ರದೇಶದ ವಿಸ್ತೀರ್ಣವು ಸದ್ಯ ಸುಮಾರು 5 ಸಾವಿರ ಹೆಕ್ಟೇರ್‌ನಷ್ಟು ಮಾತ್ರ ಇದೆ. ಈ ಕುರಿತು ಅಧಿಕೃತವಾಗಿ ಯಾವುದೇ ಸಮೀಕ್ಷೆ ನಡೆದಿಲ್ಲ. ತಜ್ಞರು ಅಂದಾಜು ಮಾಡುವ ಪ್ರಕಾರ, ಕಳೆದ ದಶಕದಿಂದ ಏಲಕ್ಕಿ ಬೆಳೆಯುವ ಪ್ರಮಾಣ ಶೇ 30 ರಿಂದ 40 ರಷ್ಟು ಕಡಿಮೆಯಾಗುತ್ತಿದೆ.

ಮಾರುಕಟ್ಟೆಯ ಸವಾಲು: ಏಲಕ್ಕಿ ಬೆಳೆಯಲ್ಲಿ ಕೇರಳಕ್ಕೆ ದೇಶದಲ್ಲಿ ಅಗ್ರಸ್ಥಾನ. ಕರ್ನಾಟಕ ಎರಡನೇ ಸ್ಥಾನದಲ್ಲಿದೆ. ಆದರೆ

ಒಳನೋಟ
ಕೃಷಿಕರ ಸಂಕಷ್ಟ
ಪ್ರತಿಕ್ರಿಯಿಸಿ: 9606038256
feedback@prajavani.co.in

ರಾಜ್ಯದಲ್ಲಿ ಬೆಳೆಯುವ ಏಲಕ್ಕಿಯನ್ನು ಮಾರಾಟ ಮಾಡಲು ಸಮರ್ಪಕ ಮಾರುಕಟ್ಟೆ ವ್ಯವಸ್ಥೆಯೇ ಇಲ್ಲ. ಸರ್ಕಾರಿ ಇಲ್ಲವೇ ಸಹಕಾರಿ ರಂಗದ ಹಿಡಿತವಿಲ್ಲದೆ ಖಾಸಗಿಯವರು ಪ್ರತ್ಯೇಕವಾಗಿ ಹರಾಜು ನಡೆಸಿ ಬೆಳೆಗಾರರಿಂದ ಏಲಕ್ಕಿ ಖರೀದಿಸುತ್ತಿದ್ದಾರೆ. ಇದರಿಂದಾಗಿ ಸರಿಯಾದ ಬೆಲೆ ಸಿಗುತ್ತಿಲ್ಲ. ಅಲ್ಲದೆ, ಸ್ಥಳದಿಂದ ಸ್ಥಳಕ್ಕೆ ಬೆಲೆಯಲ್ಲಿಯೂ ವ್ಯತ್ಯಾಸ ಇದೆ.

ಕೋವಿಡ್‌ಗೆ ಮುನ್ನ, ಏಲಕ್ಕಿ ಮಾರುಕಟ್ಟೆ ಚೆನ್ನಾಗಿತ್ತು. ಲಾಕ್‌ಡೌನ್ ಪರಿಣಾಮ ಏಲಕ್ಕಿ ರಫ್ತು ಮಾಡಲಾಗಲಿಲ್ಲ. ಪ್ರವಾಸಿಗರೂ ಬರದೇ ಮಾರುಕಟ್ಟೆ ಕುಸಿದುಹೋಯಿತು. ಆಗಿನಿಂದ ಬೆಲೆಯೂ ಕಡಿಮೆಯಾಗಿ, ಬೆಳೆಗಾರರು ಏಲಕ್ಕಿ ಕೃಷಿಯಿಂದ ವಿಮುಖರಾಗಲು ಆರಂಭಿಸಿದರು.

ಕರ್ನಾಟಕದಲ್ಲಿ ಕೊಡಗು, ಹಾಸನ, ಚಿಕ್ಕಮಗಳೂರು, ಉತ್ತರ ಕನ್ನಡ ಜಿಲ್ಲೆಗಳಲ್ಲಿ ಏಲಕ್ಕಿ ಬೆಳೆಯಲಾಗುತ್ತಿದೆ. ಮಡಿಕೇರಿ ಭಾಗದಲ್ಲಿ ಎಕರೆಗೆ 50 ರಿಂದ 100 ಕೆಜಿ ಏಲಕ್ಕಿ ಬೆಳೆಯುವವರ ಸಂಖ್ಯೆಯ ರೈತರು ಹೆಚ್ಚು. ಕಡಿಮೆ ಹಿಡುವಳಿ, ಕಡಿಮೆ ಉತ್ಪಾದನೆಯಿಂದಾಗಿ ಮಾರುಕಟ್ಟೆಯಲ್ಲಿ ಬೆಲೆ ಸಿಗುವುದಿಲ್ಲ. ಹೀಗಾಗಿ ರೈತರು ಏಲಕ್ಕಿ ಗಿಡ ಕಿತ್ತುಹಾಕಿ ಅಡಿಕೆ, ಕಾಳುಮೆಣಸಿನತ್ತ ಮುಖಮಾಡಿದ್ದಾರೆ.

ಮನೆ ಅಳತೆಗೆ ಸಣ್ಣ ಪ್ರಮಾಣದಲ್ಲಿ

ಹಾಸನ ಜಿಲ್ಲೆಯ ಸಕಲೇಶಪುರ ತಾಲ್ಲೂಕಿನ ಹೆತ್ತೂರು ಹೋಬಳಿಯ ಬಳಿ ಬೆಳೆದಿರುವ ಏಲಕ್ಕಿ

ಕೆಲವು ರೈತರು ಏಲಕ್ಕಿ ಬೆಳೆಯುತ್ತಿದ್ದು, ಉತ್ತಮ ಇಳುವರಿಯನ್ನೂ ಪಡೆಯುತ್ತಿದ್ದಾರೆ. ಆದರೆ, ಅವರಿಗೂ ಮಾರುಕಟ್ಟೆ ಸಮಸ್ಯೆ, ಬೆಲೆ ಕುಸಿತದ ಸಮಸ್ಯೆ ಕಾಡುತ್ತಿದೆ.

ಸಾಂಪ್ರದಾಯಿಕ ಪ್ರದೇಶಗಳಲ್ಲದೆ ಹೊಸ ಭಾಗಗಳಲ್ಲಿಯೂ ಏಲಕ್ಕಿ ಬೆಳೆಯಲು ರೈತರು ಆಸಕ್ತಿ ತೋರಿಸುತ್ತಿದ್ದಾರೆ. ಒಂದು ಎಕರೆಗೆ ಸರಾಸರಿ ಇಳುವರಿ 40 ರಿಂದ 50 ಕೆ.ಜಿಯಷ್ಟೇ. ಆದರೆ, ಕೆಲವರು ಅರ್ಧ ಎಕರೆಯಲ್ಲೇ 100 ಕೆ.ಜಿಯವರೆಗೂ ಫಸಲು ತೆಗೆದಿದ್ದಾರೆ. ಆದರೆ, ಸೂಕ್ತ ಬೆಲೆ ಸಿಗದೇ ಇರುವುದರಿಂದ ಸಮಸ್ಯೆ ಎದುರಿಸುವಂತಾಗಿದೆ ಎಂದು ಭಾರತೀಯ ಸಂಬಾರ ಮಂಡಳಿಯ ನಿವೃತ್ತ ಸಂಶೋಧನಾ ಅಧಿಕಾರಿ ಬಿ.ಎ. ವಾದಿರಾಜ್ ಹೇಳುತ್ತಾರೆ.

4ನೇ ಪುಟ ನೋಡಿ



ರೋಗಗಳಿಗಿಂತ ನಿರ್ವಹಣಾ ವೆಚ್ಚ ದುಬಾರಿ, ಕೃಷಿ ಕಾರ್ಮಿಕರ ಕೊರತೆಯಿಂದ ಹೆಚ್ಚಿನ ಬೆಳೆಗಾರರು ಏಲಕ್ಕಿ ಬದಲಿಗೆ ಕಾಫಿಯನ್ನು ಬೆಳೆಯುತ್ತಿದ್ದಾರೆ. ವರ್ಷದಿಂದ ವರ್ಷಕ್ಕೆ ಜಿಲ್ಲೆಯಲ್ಲಿ ಏಲಕ್ಕಿ ಬೆಳೆ ಪ್ರದೇಶದ ವಿಸ್ತೀರ್ಣ ಕುಗ್ಗುತ್ತಿದೆ
ಪ್ರಮೋದ್, ಕೊಡಗು ಜಿಲ್ಲಾ ತೋಟಗಾರಿಕಾ ಇಲಾಖೆಯ ಉಪನಿರ್ದೇಶಕ

'ಸುಮಾರು 35 ವರ್ಷಗಳಿಂದ ಏಲಕ್ಕಿ ಕೃಷಿಯಲ್ಲಿ ತೊಡಗಿದ್ದೇವೆ. 20 ಎಕರೆಯಲ್ಲಿ ಏಲಕ್ಕಿ ಬೆಳೆ ಇದೆ. ರೋಗ ಬಾಧೆ, ಜಾಸ್ತಿ ಮಳೆ, ತಾಪಮಾನ ಹೆಚ್ಚಳ, ಕಾರ್ಮಿಕರ ಕೊರತೆಯಿಂದಾಗಿ ನಿರ್ವಹಣೆ ಕಷ್ಟವಾಗಿದೆ. ನಾಲ್ಕು ವರ್ಷದ ಹಿಂದೆ ಏಲಕ್ಕಿ ಕೆ.ಜಿ.ಗೆ ₹ 3.5 ಸಾವಿರ ಇತ್ತು. ಈಗ ಕೆ.ಜಿಗೆ ₹ 1500 ಇದೆ
ಆರ್. ನಾರಾಯಣಮೂರ್ತಿ, ಬಾಳೆಹೊನ್ನೂರಿನ ದೂಬ್ಲಾ ಗ್ರಾಮದ ಬೆಳೆಗಾರ

ಬೆಳೆಗಾರರು ಕಾಫಿ ಬೆಳೆಯತ್ತ ಆಕರ್ಷಿತರಾದ ನಂತರ ಏಲಕ್ಕಿಯ ಅವನತಿ ಶುರುವಾಯಿತು. ಕಾಫಿ ಗಿಡಗಳ ನಾಟಿಗಾಗಿ ತೋಟದಲ್ಲಿದ್ದ ವಿವಿಧ ಬಗೆಯ ಕಾಡುಮರಗಳನ್ನು ಕಡಿದರು. ಇದರಿಂದ ಜೀವವೈವಿಧ್ಯ ಕ್ಷೀಣಿಸಿತು. ಏಲಕ್ಕಿಗೆ ರೋಗಬಾಧೆ ಹೆಚ್ಚಾಯಿತು. ಉತ್ಪಾದನೆ ಕಡಿಮೆ ಆಗಿ, ಬೆಲೆಯೂ ಸಿಗದಂತಾಯಿತು
ಕೆ.ಎನ್. ಹರ್ಷ, ವಿಜ್ಞಾನಿ, ಸಂಬಾರ ಮಂಡಳಿ, ಸಕಲೇಶಪುರ

ತಗ್ಗುತ್ತಲೇ ಇದೆ ಸಂಬಾರ ಪದಾರ್ಥಗಳ ಬೆಳೆ ಪ್ರದೇಶ

ಸಂಬಾರ ಪದಾರ್ಥಗಳಲ್ಲಿ ಕಾಳುಮೆಣಸು ಬೆಳೆಯುವುದರಲ್ಲಿ ದೇಶದಲ್ಲಿ ಕರ್ನಾಟಕ ಮುಂಚೂಣಿಯಲ್ಲಿದೆ. ಅದರೆ, ಬೆಲೆ ಕುಸಿತ, ಪ್ರತಿಕೂಲ ಹವಾಮಾನ ಮತ್ತು ಸೊರಗು ರೋಗದಿಂದ ಕಾಳುಮೆಣಸು ಬಳ್ಳಿಗಳು ನಾಶವಾಗುತ್ತಿವೆ. ಸಂಬಾರ ಮಂಡಳಿಯ ಮಾಹಿತಿ ಪ್ರಕಾರ 2021–22ರಲ್ಲಿ ಅಂದಾಜು 1.90 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ವ್ಯಾಪಿಸಿದ್ದು, 30 ಸಾವಿರ ಟನ್ ಉತ್ಪಾದನೆ ಆಗಿದೆ. ಲವಂಗ, ದಾಲ್ಚಿನ್ನಿಯಂತಹ ಇತರೆ ಸಂಬಾರ ಪದಾರ್ಥಗಳ ಉತ್ಪಾದನೆಯು ರಾಜ್ಯದಲ್ಲಿ ತೀರಾ ಕಡಿಮೆ. ಈ ಬಗ್ಗೆ ಸ್ಥಳೀಯವಾಗಿ ಮಾಹಿತಿಯೂ ಲಭ್ಯವಿಲ್ಲ.

ಶಿವರಾತ್ರಿ ಸಂಭ್ರಮ

ಚಾಮರಾಜನಗರ ಜಿಲ್ಲೆಯ ಮಹದೇಶ್ವರ ಬೆಟ್ಟದಲ್ಲಿ ಶಿವರಾತ್ರಿ ದಿನವಾದ ಶನಿವಾರ ಬಸವವಾಹನ, ಹುಲಿವಾಹನ, ಉತ್ಸವದಲ್ಲಿ ಭಕ್ತರು ಪಾಲ್ಗೊಂಡರು. ಐದು ದಿನಗಳ ಮಹಾಶಿವರಾತ್ರಿ ಜಾತ್ರೋತ್ಸವಕ್ಕೆ ಶುಕ್ರವಾರ ಚಾಲನೆ ಸಿಕ್ಕಿದ್ದು, 21ರವರೆಗೆ ನಡೆಯಲಿದೆ. ಶನಿವಾರ ಒಂದೇ ದಿನ ಲಕ್ಷಕ್ಕೂ ಹೆಚ್ಚು ಜನರು ಕ್ಷೇತ್ರಕ್ಕೆ ಭೇಟಿ ನೀಡಿದ್ದಾರೆ -ಪ್ರಜಾವಾಣಿ ಚಿತ್ರ

ಮಂಡಳಿ ನಿರ್ಧಾರ, ಜನತೆಗೆ ಸ್ವಲ್ಪ ನಿರಾಳ

ಪೆನ್ಸಿಲ್ ಶಾರ್ಪ್‌ನರ್, ಜೋನಿ ಬೆಲ್ಲ ಮೇಲಿನ ಜಿಎಸ್‌ಟಿ ಇಳಿಕೆ

ನವದೆಹಲಿ (ಪಿಟಿಐ): ದ್ರವ ರೂಪದ ಬೆಲ್ಲದ (ಜೋನಿ ಬೆಲ್ಲ) ಮತ್ತು ಪೆನ್ಸಿಲ್ ಶಾರ್ಪ್‌ನರ್ ಮೇಲಿನ ತೆರಿಗೆ ಪ್ರಮಾಣ ಕಡಿಮೆ ಮಾಡಲು ಜಿಎಸ್‌ಟಿ ಮಂಡಳಿಯು ಶನಿವಾರ ಒಪ್ಪಿಗೆ ನೀಡಿದೆ.

ಜೋನಿ ಬೆಲ್ಲದ ಮೇಲೆ ಸದ್ಯ ಶೇ 18ರಷ್ಟು ತೆರಿಗೆ ಇದ್ದು, ಪ್ಯಾಕ್ ಮಾಡಿರುವ ಮತ್ತು ಲೇಬಲ್ ಇರುವ ಜೋನಿ ಬೆಲ್ಲಕ್ಕೆ ಶೇ 5ರಷ್ಟು ಮತ್ತು ಪ್ಯಾಕ್ ಮಾಡದೇ ಇರುವ ಜೋನಿ ಬೆಲ್ಲಕ್ಕೆ ಶೂನ್ಯ ತೆರಿಗೆ ವಿಧಿಸಲು ಮಂಡಳಿಯು ನಿರ್ಧರಿಸಿದೆ. ಪೆನ್ಸಿಲ್ ಶಾರ್ಪ್‌ನರ್ ಮೇಲಿನ ಜಿಎಸ್‌ಟಿಯನ್ನು ಶೇ 18 ರಿಂದ ಶೇ 12ಕ್ಕೆ ಇಳಿಸಲು ನಿರ್ಧರಿಸಲಾಗಿದೆ.

ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ನೇತೃತ್ವದಲ್ಲಿ ನಡೆದ ಮಂಡಳಿಯ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ವಾರ್ಷಿಕ ರಿಟರ್ನ್ಸ್ ಸಲ್ಲಿಕೆಯಲ್ಲಿ (ಜಿಎಸ್‌ಟಿಆರ್–9) ವಿಳಂಬ ಆಗುವುದಕ್ಕೆ ವಿಧಿಸುವ ಶುಲ್ಕವನ್ನು ಕಡಿಮೆ ಮಾಡಲು ಮಂಡಳಿಯು ಶಿಫಾರಸು ಮಾಡಿದೆ. ಹಣಕಾಸು ವರ್ಷವೊಂದರಲ್ಲಿ ₹20 ಕೋಟಿ ಮೊತ್ತದ ವರೆಗಿನ ವಹಿವಾಟು ನಡೆಸುವವರಿಗೆ 2022-23ರಿಂದ ಇದು ಅನ್ವಯಿಸಲಿದೆ.

ಜಿಎಸ್‌ಟಿಯಲ್ಲಿ ನೋಂದಣಿ ಮಾಡಿಕೊಂಡಿರುವವರು ಹಣಕಾಸು ವರ್ಷದಲ್ಲಿ ₹5 ಕೋಟಿಯವರೆಗಿನ ವಹಿವಾಟು ನಡೆಸುತ್ತಿದ್ದರೆ ತಡವಾಗಿ ವಾರ್ಷಿಕ ರಿಟರ್ನ್ಸ್ ಸಲ್ಲಿಸುವುದಕ್ಕೆ ಒಂದು ದಿನಕ್ಕೆ ₹50 ಶುಲ್ಕ ಕಟ್ಟಬೇಕಾಗುತ್ತದೆ. ₹5 ಕೋಟಿಗಿಂತೂ ಹೆಚ್ಚಿನ ಮೊತ್ತದ ವಹಿವಾಟು ನಡೆಸುತ್ತಿದ್ದರೆ ಒಂದು ದಿನದ ಶುಲ್ಕವು ₹20 ಹಾಗೂ ₹20 ಕೋಟಿ ಮೊತ್ತದವರೆಗಿನ ವಹಿವಾಟು ನಡೆಸುವವರಿಗೆ ದಿನಕ್ಕೆ ₹100 ಶುಲ್ಕ ನಿಗದಿಪಡಿಸಲು ಶಿಫಾರಸು ಮಾಡಲಾಗಿದೆ.

ಸದ್ಯ, ವಾರ್ಷಿಕ ರಿಟರ್ನ್ಸ್ ತಡವಾಗಿ ಸಲ್ಲಿಸುವುದಕ್ಕೆ ಪ್ರತಿ ದಿನಕ್ಕೆ ₹200 ಶುಲ್ಕ ವಿಧಿಸಲಾಗುತ್ತಿದೆ (ಗರಿಷ್ಠ ಎಂದರೆ, ವಾರ್ಷಿಕ ವಹಿವಾಟಿನ ಶೇ 0.5ರಷ್ಟು ತೆರಿಗೆ ವಿಧಿಸಬಹುದಾಗಿದೆ).

ಜಿಎಸ್‌ಟಿಆರ್–4, ಜಿಎಸ್‌ಟಿಆರ್–9 ಮತ್ತು ಜಿಎಸ್‌ಟಿಆರ್–10 ರಿಟರ್ನ್ಸ್‌ಗಳನ್ನು ಸಲ್ಲಿಸದೇ ಇರುವವರಿಗೆ ಕರಸಮಾಧಾನ ಯೋಜನೆಯಡಿ ವಿಳಂಬ ಶುಲ್ಕ ಕಡಿಮೆ ಮಾಡಲು ಸಹ ಮಂಡಳಿ ಶಿಫಾರಸು ಮಾಡಿದೆ.

ಜಿಎಸ್‌ಟಿ ಮೇಲ್ಮನವಿ ನ್ಯಾಯ ಮಂಡಳಿ ರಚಿಸುವ ಕುರಿತು ಸಚಿವರ ತಂಡವು ನೀಡಿರುವ ವರದಿಯನ್ನು ಕೆಲವು ಮಾರ್ಪಾಡುಗಳೊಂದಿಗೆ ಒಪ್ಪಿಕೊಳ್ಳಲಾಗಿದೆ. ಈ ಸಂಬಂಧ ಜಿಎಸ್‌ಟಿ ಕಾಯ್ದೆಯಲ್ಲಿ ಮಾಡುವ ಅಂತಿಮ ಕರಡು ತಿದ್ದುಪಡಿಯನ್ನು ರಾಜ್ಯಗಳ ಹಣಕಾಸು ಸಚಿವರ ಪ್ರತಿಕ್ರಿಯೆಗೆ ನೀಡಲಾಗುವುದು ಎಂದು ಸಚಿವೆ ನಿರ್ಮಲಾ ತಿಳಿಸಿದ್ದಾರೆ.

ಪಾನ್ ಮಸಾಲಾ, ಗುಟ್ಕಾ ಮತ್ತು ಅಗಿಯುವ ತಂಬಾಕು ಉತ್ಪನ್ನಗಳಿಂದ ತೆರಿಗೆ ಸೋರಿಕೆ ಆಗುವುದನ್ನು ತಡೆಯಲು ಮತ್ತು ವರಮಾನ ಸಂಗ್ರಹ ಹೆಚ್ಚಿಸುವ ಕುರಿತು ಸಚಿವರ ತಂಡವು ನೀಡಿರುವ ಶಿಫಾರಸುಗಳನ್ನು ಮಂಡಳಿಯು ಒಪ್ಪಿಕೊಂಡಿದೆ.

ಇದೊಂದು ಸಕಾರಾತ್ಮಕ ಬೆಳವಣಿಗೆ ಆಗಿದೆ. ಜಿಎಸ್‌ಟಿ ನ್ಯಾಯಮಂಡಳಿಗಾಗಿ ದೀರ್ಘಾವಧಿಯ ಕಾಯುವಿಕೆಯು ಶೀಘ್ರವೇ ಕೊನೆಯಾಗುವ ಭರವಸೆಯನ್ನು ಉದ್ಯಮ ವಲಯ ಹೊಂದಿದೆ ಎಂದು ಕೆಪಿಎಂಜಿ ಸಂಸ್ಥೆಯ ತೆರಿಗೆ ಪಾಲುದಾರ ಅಭಿಷೇಕ್ ಜೈನ್ ಹೇಳಿದ್ದಾರೆ.

ಜಿಎಸ್‌ಟಿ ಪರಿಹಾರ ಬಾಕಿ ಪಾವತಿಗೆ ನಿರ್ಧಾರ

ಜಿಎಸ್‌ಟಿ ಪರಿಹಾರಕ್ಕೆ ಸಂಬಂಧಿಸಿದಂತೆ ರಾಜ್ಯಗಳಿಗೆ ಬಾಕಿ ಉಳಿಸಿಕೊಂಡಿರುವ ಅಷ್ಟೂ ಮೊತ್ತವನ್ನು ನೀಡಲು ಕೇಂದ್ರ ಸರ್ಕಾರ ನಿರ್ಧರಿಸಿದೆ ಎಂದು ಸಚಿವೆ ನಿರ್ಮಲಾ ತಿಳಿಸಿದ್ದಾರೆ.

ಕರ್ನಾಟಕವನ್ನೂ ಒಳಗೊಂಡು ಒಟ್ಟು 23 ರಾಜ್ಯಗಳಿಗೆ ಜಿಎಸ್‌ಟಿ ಪರಿಹಾರ ಬಾಕಿ ₹16,982 ಕೋಟಿ ಪಾವತಿ ಆಗಲಿದೆ. ಇದರಲ್ಲಿ ಕರ್ನಾಟಕದ ಪಾಲು ₹1,934 ಕೋಟಿ ಇದೆ.

ಪರಿಹಾರ ನಿಧಿಯಲ್ಲಿ ಹಣ ಇಲ್ಲದೇ ಇರುವುದರಿಂದ ಸದ್ಯದ ಮಟ್ಟಿಗೆ ಕೇಂದ್ರ ಸರ್ಕಾರದ ಸಂಪನ್ಮೂಲದಿಂದಲೇ ಪರಿಹಾರದ ಬಾಕಿ ಮೊತ್ತವನ್ನು ಬಿಡುಗಡೆ ಮಾಡಲಾಗುವುದು. ಭವಿಷ್ಯದಲ್ಲಿ ಪರಿಹಾರ ಸೆಸ್ ಸಂಗ್ರಹದಿಂದ ಆ ಮೊತ್ತವನ್ನು ಮರುಪಾವತಿ ಮಾಡಲಾಗುವುದು ಎಂದು ನಿರ್ಮಲಾ ಹೇಳಿದ್ದಾರೆ.

19 ಸೇತುವೆಗಳು ಅಪಾಯಕಾರಿ!

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ದುರಸ್ತಿ ಹಾಗೂ ಪುನರ್ ನಿರ್ಮಾಣಕ್ಕೆ ಕಾದಿರುವ 19 ಸೇತುವೆಗಳನ್ನು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವಾಲಯ ಗುರುತಿಸಿದೆ.

ಹಳೆಯ ಸೇತುವೆಗಳ ಪಟ್ಟಿಯಲ್ಲಿ ಬೆಂಗಳೂರು–ನೆಲಮಂಗಲ ನಡುವಿನ ಪೀಣ್ಯ ಮೇಲ್ಸೇತುವೆಯೂ ಸೇರಿದೆ. ದುರಸ್ತಿಗೆ ಕಾದಿರುವ ಹಳೆಯ ಸೇತುವೆಗಳ ಪಟ್ಟಿಯಲ್ಲಿ ಕರಾವಳಿ ಹಾಗೂ ಮಲೆನಾಡಿನ 10 ಸೇತುವೆಗಳು ಇವೆ. ಕೆಲವೊಂದು ಸೇತುವೆಗಳು ತೀರಾ ಹಳೆಯದಾಗಿದ್ದು, ಅವುಗಳ ಮರು ನಿರ್ಮಾಣ ಮಾಡಬೇಕಿದೆ. ಕೆಲವೊಂದು ಸೇತುವೆಗಳ ತುರ್ತಾಗಿ ದುರಸ್ತಿ ಮಾಡಬೇಕಿದೆ ಎಂದೂ ಸಚಿವಾಲಯ ಹೇಳಿದೆ.

ರಾಷ್ಟ್ರೀಯ ಹೆದ್ದಾರಿ ಹಾಗೂ ಸೇತುವೆಗಳ ದುರಸ್ತಿ ಮತ್ತು ನಿರ್ವಹಣೆ ನಿರಂತರ ಪ್ರಕ್ರಿಯೆ. ಪ್ರತಿವರ್ಷ ಇದಕ್ಕೆ ಅನುದಾನ ಮೀಸಲಿಡಲಾಗುತ್ತದೆ ಎಂದೂ ಸಚಿವಾಲಯದ ಅಧಿಕಾರಿಯೊಬ್ಬರು ತಿಳಿಸಿದರು.

ದುರಸ್ತಿಗೆ ಕಾದಿರುವ ಹಳೆಯ ಸೇತುವೆಗಳು

ರಾಷ್ಟ್ರೀಯ ಹೆದ್ದಾರಿಯಲ್ಲಿರುವ ಸೇತುವೆಗಳು	ಜಿಲ್ಲೆ
ಹೆದ್ದಾರಿ 212ರಲ್ಲಿ ಕಬಿನಿ ನದಿಯ ಪ್ರಮುಖ ಸೇತುವೆ	ಮೈಸೂರು
ಹೆದ್ದಾರಿ 48ರಲ್ಲಿ ಬೆಂಗಳೂರು–ನೆಲಮಂಗಲ ನಡುವಿನ ಮೇಲ್ಸೇತುವೆ	ಬೆಂಗಳೂರು ನಗರ
ಹೆದ್ದಾರಿ 167ರಲ್ಲಿ ಹಗರಿ ಜಡ್ಚೆರ್ಲಾ ಭಾಗದಲ್ಲಿ ಕೃಷ್ಣಾ ನದಿಗೆ ನಿರ್ಮಿಸಿರುವ ಪ್ರಮುಖ ಸೇತುವೆ	ರಾಯಚೂರು
ಹೆದ್ದಾರಿ 150ಎ ಯಲ್ಲಿರುವ (ಜೇವರ್ಗಿ–ಚಾಮರಾಜನಗರ) ಪ್ರಮುಖ ಸೇತುವೆ	ರಾಯಚೂರು
ಹೆದ್ದಾರಿ 63ರ 112.3 ಕಿ.ಮೀಯಲ್ಲಿರುವ ಸೇತುವೆ	ಬೆಳಗಾವಿ
ಹೆದ್ದಾರಿ 218ರ ಮಲಪ್ರಭಾ ಸೇತುವೆ	ಗದಗ
ಹೆದ್ದಾರಿ 766 ಸಿಯಲ್ಲಿರುವ ಏಳು ಸಣ್ಣ ಸೇತುವೆಗಳು	ಶಿವಮೊಗ್ಗ
ಹೆದ್ದಾರಿ 206ರ ತುಂಗಾ ನದಿಯ ಸೇತುವೆ	ಶಿವಮೊಗ್ಗ
ಹೆದ್ದಾರಿ 169ರ ತುಂಗಾ ನದಿಯ ಸೇತುವೆ	ಶಿವಮೊಗ್ಗ
ಹೆದ್ದಾರಿ 234ರ ಸಣ್ಣ ಸೇತುವೆ	ತುಮಕೂರು
ಹೆದ್ದಾರಿ 275ರಲ್ಲಿ ಲಕ್ಷ್ಮಣತೀರ್ಥ ನದಿಯ ಪ್ರಮುಖ ಸೇತುವೆ	ಮೈಸೂರು
ಹೆದ್ದಾರಿ 206ರಲ್ಲಿ ಶಿವಮೊಗ್ಗ ನಗರ ವ್ಯಾಪ್ತಿಯಲ್ಲಿರುವ ತುಂಗಾ ಸೇತುವೆ	ಶಿವಮೊಗ್ಗ
ಹೆದ್ದಾರಿ 13ರಲ್ಲಿ ಹೊಳೆಹೊನ್ನೂರು ಸಮೀಪದ ಸೇತುವೆ	ಶಿವಮೊಗ್ಗ
ಹೆದ್ದಾರಿ 150ಎ ಯಲ್ಲಿರುವ (ಜೇವರ್ಗಿ–ಚಾಮರಾಜನಗರ) ಕಿರಿದಾದ ಸೇತುವೆ	ರಾಯಚೂರು
ಹೊನ್ನಾವರದಲ್ಲಿ ಶರಾವತಿ ನದಿಗೆ ಕಟ್ಟಿರುವ ಸೇತುವೆ	ಉತ್ತರ ಕನ್ನಡ
ಮಂಗಳೂರಿನ ಕೂಳೂರಿನ ಫಲ್ಗುಣಿ ನದಿಯ ಸೇತುವೆ	ದಕ್ಷಿಣ ಕನ್ನಡ
ಸೋಲಾಪುರ– ಮಂಗಳೂರು ಹೆದ್ದಾರಿ 169ರ ಪ್ರಮುಖ ಸೇತುವೆ, ಐದು ಸಣ್ಣ ಸೇತುವೆಗಳು	ಚಿಕ್ಕಮಗಳೂರು
ತೀರ್ಥಹಳ್ಳಿ– ಉಡುಪಿ ಹೆದ್ದಾರಿಯ ಪ್ರಮುಖ ಸೇತುವೆ	ಉಡುಪಿ
ಶರಾವತಿ ಹಿನ್ನೀರು ಮತ್ತು ಸಿಗಂದೂರು ಬಳಿಯ ಅಂಬರಗೋಡು ಮತ್ತು ಕಳಸವಳ್ಳಿ ನಡುವಿನ ಸೇತುವೆ	ಶಿವಮೊಗ್ಗ

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದ 12 ಚೀತಾಗಳು

ಶಿಯೋಪುರ್, ಮಧ್ಯಪ್ರದೇಶ (ಪಿಟಿಐ): ವಾಯುಪಡೆಯ ವಿಶೇಷ ವಿಮಾನದಲ್ಲಿ ಶನಿವಾರ ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ತರಲಾದ 12 ಚೀತಾಗಳನ್ನು ಮಧ್ಯ ಪ್ರದೇಶದ ಶಿಯೋಪುರ್ ಜಿಲ್ಲೆಯ ಕುನೊ ರಾಷ್ಟ್ರೀಯ ಉದ್ಯಾನಕ್ಕೆ (ಕೆಎನ್‌ಪಿ) ಬಿಡಲಾಯಿತು. ಸದ್ಯ ಈ ಚೀತಾಗಳನ್ನು ಕ್ವಾರಂಟೈನ್ ಆವರಣದಲ್ಲಿ ಇರಿಸಲಾಗಿದೆ.

ಗ್ವಾಲಿಯರ್‌ನಿಂದ ಕೆಎನ್‌ಪಿಗೆ ಬಂದ ಚೀತಾಗಳನ್ನು ಮಧ್ಯ ಪ್ರದೇಶದ ಮುಖ್ಯಮಂತ್ರಿ ಶಿವರಾಜ್ ಸಿಂಗ್ ಚೌಹಾಣ್ ಮತ್ತು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಭೂಪೇಂದರ್ ಯಾದವ್ ಅವರು ಉದ್ಯಾನದ ಕ್ವಾರಂಟೈನ್ ಆವರಣಕ್ಕೆ ಬಿಡುಗಡೆ ಮಾಡಿದರು.

5ನೇ ಪುಟ ನೋಡಿ

ನೂತನ ಶಾಲೆಗಳ ಆರಂಭಕ್ಕೆ ಅನುಮತಿ: ನೋಂದಣಿ ನೀತಿಯಲ್ಲಿ ಬದಲಾವಣೆ

ಡಿಡಿಪಿಐಗೆ ಸಂಪೂರ್ಣ ಅಧಿಕಾರ

ಬೆಂಗಳೂರು: ಯಾವುದೇ ಭಾಷಾ ಮಾಧ್ಯಮದ ಹೊಸ ಶಾಲೆಗಳನ್ನು ಆರಂಭಿಸಲು ಅನುಮತಿ ನೀಡುವ ಅಧಿಕಾರವನ್ನು ಆಯಾ ಜಿಲ್ಲೆಗಳ ಉಪ ನಿರ್ದೇಶಕರಿಗೆ (ಡಿಡಿಪಿಐ) ನೀಡಿ ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆಯು ಅಧಿಸೂಚನೆ ಹೊರಡಿಸಿದೆ.

ಕರ್ನಾಟಕ ಶಿಕ್ಷಣ ಸಂಸ್ಥೆಗಳ ನಿಯಂತ್ರಣ ಕಾಯ್ದೆಗೆ ತಿದ್ದುಪಡಿ ತರಲಾಗಿದ್ದು, ಹೊಸ ಶಾಲೆಗಳ ನೋಂದಣಿ ನೀತಿಯಲ್ಲಿ ಹಲವು ಬದಲಾವಣೆಗಳನ್ನು ಮಾಡಲಾಗಿದೆ. ಇದುವರೆಗೂ ಪೂರ್ವ ಪ್ರಾಥಮಿಕ ಶಾಲೆಗಳಿಗೆ ಕ್ಷೇತ್ರ ಶಿಕ್ಷಣಾಧಿಕಾರಿಗಳು, ಒಂದರಿಂದ ಎಂಟನೇ ತರಗತಿಯವರೆಗಿನ ಕನ್ನಡ ಮಾಧ್ಯಮ ಶಾಲೆಗಳಿಗೆ ಡಿಡಿಪಿಐ ಅನುಮತಿ ನೀಡುತ್ತಿದ್ದರು. ಪ್ರೌಢಶಾಲಾ ತರಗತಿಗಳು ಹಾಗೂ ಕನ್ನಡ ಮಾಧ್ಯಮ ಹೊರತುಪಡಿಸಿ, ಇತರೆ ಮಾಧ್ಯಮಗಳಲ್ಲಿ ಯಾವುದೇ ಶಾಲೆ ಆರಂಭಿಸಬೇಕಿದ್ದರೆ ಶಿಕ್ಷಣ ಇಲಾಖೆಯ ಆಯುಕ್ತರ ಅನುಮತಿ ಪಡೆಯಬೇಕಿತ್ತು.

'ಆಂಗ್ಲ ಮಾಧ್ಯಮ ಶಾಲೆಗಳ ಆರಂಭಕ್ಕೆ ಅನುಮತಿಗಾಗಿ ಬೆಂಗಳೂರಿನಲ್ಲಿರುವ ಆಯುಕ್ತರ ಕಚೇರಿಗೆ ಅಲೆಯಬೇಕು. ಇದು ಭ್ರಷ್ಟಾಚಾರಕ್ಕೆ ಆಸ್ಪದವಾಗಿದೆ ಎಂದು ಪ್ರಧಾನಮಂತ್ರಿಗೆ ಬರೆದಿದ್ದ ಪತ್ರದಲ್ಲಿ ನೋಂದಾಯಿತ ಅನುದಾನರಹಿತ ಖಾಸಗಿ ಶಾಲೆಗಳ ಆಡಳಿತ ಮಂಡಳಿಗಳ ಸಂಘ (ರುಪ್ಸ) ಆರೋಪಿಸಿತ್ತು. ನಂತರ ಇಲಾಖೆಯು ನಿಯಮ ಸರಳಗೊಳಿಸಲು ಕಾಯ್ದೆಗೆ ತಿದ್ದುಪಡಿ ತರುವ ಪ್ರಕ್ರಿಯೆ ಆರಂಭಿಸಿತ್ತು.

ಪೂರ್ವ ಪ್ರಾಥಮಿಕ ಶಾಲೆಗಳಿಗೆ ಅನುಮತಿ ನೀಡುವ ಅಧಿಕಾರ ಈಗಲೂ ಬಿಇಒಗಳಿಗೆ ನೀಡಲಾಗಿದೆ. ಒಂದರಿಂದ 10ನೇ ತರಗತಿಯವರೆಗಿನ ಶಾಲೆಗಳ ಆರಂಭಕ್ಕೆ ಡಿಡಿಪಿಐ ಅನುಮತಿ ನೀಡಲಿದ್ದಾರೆ. ಸಿಬಿಎಸ್‌ಸಿ, ಐಸಿಎಸ್‌ಸಿಗೆ ಅನುಮತಿ ಪಡೆಯಲು ಶಿಕ್ಷಣ ಇಲಾಖೆ ನೀಡುವ ನಿರಪೇಕ್ಷಣಾ ಪತ್ರದ ಮಾನ್ಯತಾ ಅವಧಿ ಮೂರು ವರ್ಷಗಳಿಗೆ ಇತ್ತು. ಹೊಸ ನಿಯಮದ ಅನ್ವಯ ಅದನ್ನು ಎರಡು ವರ್ಷಗಳಿಗೆ ಮಿತಿಗೊಳಿಸಲಾಗಿದೆ. ಶಾಲಾ ಮಾನ್ಯತೆ ಪಡೆಯುವಾಗ ತಪ್ಪು ಮಾಹಿತಿ, ನಕಲಿ ದಾಖಲೆಗಳನ್ನು ನೀಡಿದ್ದರೆ ಅಂಥ ಶಾಲೆಗಳ ಆಡಳಿತ ಮಂಡಳಿ ವಿರುದ್ಧ ಕ್ರಿಮಿನಲ್ ಪ್ರಕರಣ ದಾಖಲಿಸಲು ಅವಕಾಶ ಕಲ್ಪಿಸಲಾಗಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

ಬಿಗಿ ಬಂದೋಬಸ್ತ್ ಮಧ್ಯೆ ಆಳಂದದ ಲಾಡ್ಲೆ ಮಶಾಕ್ ದರ್ಗಾದಲ್ಲಿ ಲಿಂಗಪೂಜೆ

ರಾಘವ ಚೈತನ್ಯರ ದೇವಸ್ಥಾನ ಖಚಿತ: ಶ್ರೀರಾಮಸೇನೆ

ಪ್ರಜಾವಾಣಿ ವಾರ್ತೆ

ಕಲಬುರಗಿ: ಜಿಲ್ಲೆಯ ಆಳಂದ ಪಟ್ಟಣದ ಲಾಡ್ಲೆ ಮಶಾಕ್ ದರ್ಗಾದಲ್ಲಿರುವ ರಾಘವ ಚೈತನ್ಯ ಲಿಂಗಕ್ಕೆ ಶಿವರಾತ್ರಿ ಪ್ರಯುಕ್ತ ಶನಿವಾರ ಪೊಲೀಸ್ ಬಿಗಿ ಬಂದೋಬಸ್ತ್‌ನಲ್ಲಿ 15 ಮಂದಿ ಶ್ರೀರಾಮಸೇನೆ ಸಂಘಟನೆ ಹಾಗೂ ಬಿಜೆಪಿ ಮುಖಂಡರು ಪೂಜೆ ಸಲ್ಲಿಸಿದರು.

ಇದಕ್ಕೂ ಮುನ್ನ ನಡೆದ ಶಿವರಾತ್ರಿ ಮಹಾಸಂಗಮ ಕಾರ್ಯಕ್ರಮದಲ್ಲಿ ಮಾತನಾಡಿದ ಶ್ರೀರಾಮಸೇನೆ ರಾಜ್ಯ ಘಟಕದ ಅಧ್ಯಕ್ಷ ಆಂದೋಲಾ ಸಿದ್ದಲಿಂಗ ಸ್ವಾಮೀಜಿ, 'ರಾಘವ ಚೈತನ್ಯರು ನೆಲೆಸಿದ್ದ ಸ್ಥಳದಲ್ಲಿ ಮೊದಲು ದೇವಾಲಯವಿತ್ತು. ನಂತರ ಮುಸ್ಲಿಂ ಆಕ್ರಮಣಕಾರರು ದೇವಾಲಯ ನೆಲಸಮಗೊಳಿಸಿ ದರ್ಗಾ ನಿರ್ಮಿಸಿದ್ದಾರೆ. ಹೀಗಾಗಿ, ಮತ್ತೆ ಅಲ್ಲಿ ದೇವಸ್ಥಾನ ನಿರ್ಮಿಸಿ ಗಂಟೆ ಹೊಡೆಯುತ್ತೇವೆ. ಇದನ್ನು ಮಾಡದಿದ್ದರೆ ನಾವು ಹಿಂದೂಗಳೇ ಅಲ್ಲ' ಎಂದರು.

ಹಿಂದೂ, ಮುಸ್ಲಿಂ ಭಾವನೆ ಕೆರಳಿಸುವ ಪ್ರಯತ್ನ ಒಳ್ಳೆಯದಲ್ಲ. ನ್ಯಾಯಾಲಯದಲ್ಲಿ ದಾವೆ ಇದೆ. ಅದು ನೀಡುವ ತೀರ್ಪನ್ನು ಅಂತಿಮವಾಗಿ ಎಲ್ಲರೂ ಪಾಲಿಸಬೇಕು
ಆಸಿಫ್ ಅನ್ಸಾರಿ
ಲಾಡ್ಲೆ ಮಶಾಕ್ ದರ್ಗಾ ಸಮಿತಿ ಅಧ್ಯಕ್ಷ

5ನೇ ಪುಟ ನೋಡಿ



ಕಲಬುರಗಿ ಜಿಲ್ಲೆ ಆಳಂದದ ಹೊರವಲಯದಲ್ಲಿ ಶನಿವಾರ ದರ್ಗಾ ಪ್ರವೇಶಕ್ಕೂ ಮುನ್ನ ಶ್ರೀರಾಮಸೇನೆ ಸಂಘಟನೆ ಮತ್ತು ಬಿಜೆಪಿ ಮುಖಂಡರು ಶಿವಲಿಂಗ ಪೂಜೆ ನೆರವೇರಿಸಿದರು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ನಗರದ ವಾಣಿವಿಲಾಸ ಆಸ್ಪತ್ರೆಯಲ್ಲಿ ಶೀಘ್ರವೇ ಪ್ರತ್ಯೇಕ ಸಂಸ್ಥೆ ಪ್ರಾರಂಭ

ಸುರಕ್ಷಿತ ಹೆರಿಗೆಗೆ 'ಸೂಲಗಿತ್ತಿ' ತರಬೇತಿ

• ವರುಣ ಹೆಗಡೆ

ವಾಣಿವಿಲಾಸ ಆಸ್ಪತ್ರೆ

ಪ್ರಜಾವಾಣಿ ವಿಶೇಷ

ಬೆಂಗಳೂರು: ಸುರಕ್ಷಿತ ಹೆರಿಗೆ ಹಾಗೂ ತಾಯಂದಿರ ಮರಣ ಪ್ರಮಾಣ ತಗ್ಗಿಸಲು ರಾಷ್ಟ್ರೀಯ ಸೂಲಗಿತ್ತಿ ತರಬೇತಿ ಸಂಸ್ಥೆಯನ್ನು ನಗರದ ವಾಣಿವಿಲಾಸ ಆಸ್ಪತ್ರೆಯಲ್ಲಿ ಪ್ರಾರಂಭಿಸಲಾಗುತ್ತಿದೆ.

ಸಂಸ್ಥೆಯ ಕಾರ್ಯಾರಂಭಕ್ಕೆ ಆರೋಗ್ಯ ಇಲಾಖೆ ಅಗತ್ಯ ಸಿದ್ಧತೆಗಳನ್ನು ಮಾಡಿಕೊಂಡಿದ್ದು, ಇದೇ ತಿಂಗಳು ಕಾರ್ಯಾರಂಭಿಸುವ ಸಾಧ್ಯತೆಯಿದೆ. ಸರ್ಕಾರಿ ವ್ಯವಸ್ಥೆಯಡಿ ದಕ್ಷಿಣ ಭಾರತದಲ್ಲಿ ಇದೇ ಮೊದಲ ಬಾರಿಗೆ ಸಂಸ್ಥೆ ಕಾರ್ಯಾಚರಣೆ ಮಾಡಲಿದೆ. ಯುನಿಸೆಫ್ ಮತ್ತು ಆಸ್ಟ್ರಿಕಾ ಫೌಂಡೇಷನ್ ಸಹಯೋಗದಲ್ಲಿ ಕಾರ್ಯನಿರ್ವಹಿಸಲಿದ್ದು, ಅಂತರರಾಷ್ಟ್ರೀಯ ಶುಶ್ರೂಷಕಿಯರ ಬೆಂಬಲದೊಂದಿಗೆ ಸೂಲಗಿತ್ತಿ ತರಬೇತಿ ನಡೆಯಲಿದೆ.

ಕೇಂದ್ರ ಆರೋಗ್ಯ ಸಚಿವಾಲಯದ ತಾಯಿ ಮತ್ತು ಮಕ್ಕಳ ವಿಭಾಗದ ಮಾದರಿ ನೋಂದಣಿ ವ್ಯವಸ್ಥೆಯ (ಎಸ್‌ಆರ್‌ಎಸ್) ವರದಿ ಪ್ರಕಾರ ರಾಜ್ಯದಲ್ಲಿ ಪ್ರತಿ ಒಂದು ಲಕ್ಷ ಹೆರಿಗೆಗೆ 69 ತಾಯಂದಿರು ಮರಣ ಹೊಂದುತ್ತಿದ್ದಾರೆ. 2017-19ರ ವರದಿಯ ಪ್ರಕಾರ ಈ ಸಂಖ್ಯೆ 83 ಇತ್ತು. ಈಗ ಆ ಸಂಖ್ಯೆ ತಗ್ಗಿದೆ. ದೇಶದಲ್ಲಿ ಪ್ರತಿ ಒಂದು ಲಕ್ಷ ಹೆರಿಗೆಗೆ ಸರಾಸರಿ 97 ತಾಯಂದಿರು ಮೃತಪಡುತ್ತಿದ್ದಾರೆ.

ತಾಯಂದಿರ ಮರಣ ಪ್ರಮಾಣ ಕಡಿಮೆ ಹೊಂದಿರುವ ರಾಜ್ಯಗಳಲ್ಲಿ ಕೇರಳ (19), ಮಹಾರಾಷ್ಟ್ರ (33), ತೆಲಂಗಾಣ (43), ಆಂಧ್ರಪ್ರದೇಶ (45) ಹಾಗೂ ತಮಿಳುನಾಡು (54) ಕ್ರಮವಾಗಿ ಮೊದಲ ಐದು ಸ್ಥಾನದಲ್ಲಿವೆ. ದಕ್ಷಿಣದ ಐದು ರಾಜ್ಯಗಳಿಗೆ ಹೋಲಿಕೆ ಮಾಡಿದಲ್ಲಿ ಕರ್ನಾಟಕದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ತಾಯಂದಿರ ಮರಣ ವರದಿಯಾಗುತ್ತಿದೆ. ಈ ಸಂಖ್ಯೆಯನ್ನು ತಗ್ಗಿಸಲು ಹಾಗೂ ಶಿಶು ಮರಣ ಪ್ರಮಾಣ ತಡೆಗೆ ಈಗ ಸಂಸ್ಥೆ ಪ್ರಾರಂಭಿಸಲಾಗುತ್ತಿದೆ.

ಕೋವಿಡ್‌ನಿಂದ ವಿಳಂಬ: ಕೇಂದ್ರ ಆರೋಗ್ಯ ಸಚಿವಾಲಯದ ಮಾರ್ಗಸೂಚಿ ಅನ್ವಯ ಕಳೆದ ವರ್ಷವೇ ಸಂಸ್ಥೆಯನ್ನು ಪ್ರಾರಂಭಿಸಲು ಆರೋಗ್ಯ ಇಲಾಖೆ ಯೋಜನೆ ರೂಪಿಸಿತ್ತು. ಕೋವಿಡ್‌ನಿಂದಾಗಿ ಪ್ರಾರಂಭ ಸಾಧ್ಯವಾಗಿರಲಿಲ್ಲ. ಈ ಸಂಸ್ಥೆಯು ನೋಡಲ್ ಕೇಂದ್ರದ ಮಾದರಿ ಕಾರ್ಯನಿರ್ವಹಿಸಲಿದೆ. ವಿವಿಧ ಜಿಲ್ಲೆಗಳ ಶುಶ್ರೂಷಕರಿಗೆ ಇಲ್ಲಿ ತರಬೇತಿ ನೀಡಲಾಗುತ್ತದೆ.

'ರಾಷ್ಟ್ರೀಯ ಸೂಲಗಿತ್ತಿ ತರಬೇತಿ ಸಂಸ್ಥೆಯಲ್ಲಿ ಶುಶ್ರೂಷಕರಿಗೆ ಸಹಜ ಹೆರಿಗೆ ಮಾಡಿಸುವ ಬಗ್ಗೆ ತರಬೇತಿ ನೀಡಲಾಗುತ್ತದೆ. ಇದರಿಂದ ಕಡಿಮೆ ಅಪಾಯ ಇರುವ ಹೆರಿಗೆಗಳನ್ನು ತರಬೇತಿ ಪಡೆದ ಶುಶ್ರೂಷಕರೇ ಮಾಡಿಸಬಹುದು. ಹೆಚ್ಚಿನ ಅಪಾಯ ಇರುವ ಪ್ರಕರಣಗಳಲ್ಲಿ ವೈದ್ಯರು ಹೆರಿಗೆ ಮಾಡಿಸುತ್ತಾರೆ. ತಾಯಿ ಮತ್ತು ನವಜಾತ ಶಿಶುಗಳ ಮರಣ ತಡೆಗೂ ಇದು ಸಹಕಾರಿಯಾಗುತ್ತದೆ' ಎಂದು ವಾಣಿವಿಲಾಸ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸಿ. ಸವಿತಾ ತಿಳಿಸಿದರು.

18 ತಿಂಗಳ ತರಬೇತಿ

ಸಹಜ ಹಾಗೂ ಸುರಕ್ಷಿತ ಹೆರಿಗೆ, ತಾಯಿ ಮತ್ತು ನವಜಾತ ಶಿಶುಗಳ ಆರೈಕೆ ಬಗ್ಗೆ ತರಬೇತಿ ಒದಗಿಸಲು ಇಂಗ್ಲೆಂಡ್‌ನಿಂದ ಇಬ್ಬರು ಹಾಗೂ ರಾಜ್ಯದ ಮೂವರು ಅನುಭವಿ ಶುಶ್ರೂಷಕರು ಸಂಸ್ಥೆಗೆ ಬಂದಿದ್ದಾರೆ. ತರಬೇತಿಗೆ ಕೇರಳದಿಂದ 7 ಮಂದಿ ಹಾಗೂ ರಾಜ್ಯದ ವಿವಿಧ ಭಾಗಗಳಿಂದ 20 ಮಂದಿ ಶುಶ್ರೂಷಕರು ಸಂಸ್ಥೆಗೆ ಬಂದಿದ್ದಾರೆ. ಮೊದಲ ಬ್ಯಾಚ್‌ನಲ್ಲಿ 30 ಮಂದಿಗೆ ತರಬೇತಿ ನೀಡಲಾಗುತ್ತದೆ. ಇದು 18 ತಿಂಗಳ ಅವಧಿಯ ಅಂತರ ರಾಷ್ಟ್ರೀಯ ಮಟ್ಟದ ತರಬೇತಿ ಆಗಿದೆ.

> **ರಾಷ್ಟ್ರೀಯ ಸೂಲಗಿತ್ತಿ ತರಬೇತಿ ಸಂಸ್ಥೆಯನ್ನು ಇದೇ ತಿಂಗಳು ಪ್ರಾರಂಭಿಸಲು ಕಾರ್ಯಯೋಜನೆ ರೂಪಿಸಲಾಗಿದೆ. ದಕ್ಷಿಣ ಭಾರತದಲ್ಲಿ ಇದೇ ಮೊದಲ ಬಾರಿ ಸರ್ಕಾರಿ ವ್ಯವಸ್ಥೆಯಡಿ ತರಬೇತಿ ನೀಡಲಾಗುತ್ತಿದೆ**
>
> **ಡಾ.ಎನ್. ರಾಜಕುಮಾರ್,** ಆರೋಗ್ಯ ಇಲಾಖೆ ಉಪನಿರ್ದೇಶಕ (ತಾಯಿ ಆರೋಗ್ಯ)

ಪ್ರತಿಭಟನೆ ನಗರದ ಈಜಿಪುರ ಮೇಲ್ಸೇತುವೆ ನಿರ್ಮಾಣ ಕಾಮಗಾರಿ ವಿಳಂಬ ಧೋರಣೆ ಖಂಡಿಸಿ ಕೋರಮಂಗಲ ಹಾಗೂ ಈಜಿಪುರ ನಿವಾಸಿಗಳು ಶಾಸಕ ರಾಮಲಿಂಗಾರೆಡ್ಡಿ ನೇತೃತ್ವದಲ್ಲಿ ಶನಿವಾರ ಪ್ರತಿಭಟನೆ ನಡೆಸಿದರು – ಪ್ರಜಾವಾಣಿ ಚಿತ್ರ

ಹದಿಹರೆಯ ಗರ್ಭಧಾರಣೆ: ಸಾವಿರಕ್ಕೂ ಅಧಿಕ ಪ್ರಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿಹರೆಯ ಗರ್ಭಧಾರಣೆ ಅಪಾಯದ ಬಗ್ಗೆ ಆರೋಗ್ಯ ಇಲಾಖೆ ಹಾಗೂ ಸರ್ಕಾರೇತರ ಸಂಸ್ಥೆಗಳು ಜಾಗೃತಿ ಮೂಡಿಸುತ್ತಿದ್ದರೂ, ಇಲ್ಲಿನ ವಾಣಿವಿಲಾಸ ಆಸ್ಪತ್ರೆಯಲ್ಲಿ ಕಳೆದ ವರ್ಷ 1,190 ಹದಿಹರೆಯದ ಗರ್ಭಧಾರಣೆ ಪ್ರಕರಣಗಳು ವರದಿಯಾಗಿವೆ.

ಆಸ್ಪತ್ರೆಯ ವೈದ್ಯರು 2018ರಲ್ಲಿ 1,330 ಹಾಗೂ 2019ರಲ್ಲಿ 1,531 ಹದಿಹರೆಯದ ಗರ್ಭಧಾರಣೆ ಪ್ರಕರಣಗಳನ್ನು ನೋಡಿದ್ದಾರೆ. 2020 ಹಾಗೂ 2021ರಲ್ಲಿ ಕೋವಿಡ್ ಕಾರಣ ಈ ಪ್ರಕರಣಗಳನ್ನು ನೋಂದಣಿ ಮಾಡಿಲ್ಲ. 13 ವರ್ಷದ ಬಾಲಕಿ ಗರ್ಭಧರಿಸಿದ ಪ್ರಕರಣವೂ ಇಲ್ಲಿ ವರದಿಯಾಗಿದೆ.

'ಶೇ 70ರಷ್ಟು ಪ್ರಕರಣಗಳಲ್ಲಿ ಗರ್ಭಧರಿಸಿದವರು ವಿವಾಹಿತರಾಗಿದ್ದಾರೆ' ಎಂದು ಆಸ್ಪತ್ರೆಯ ಸಲಹೆಗಾರ್ತಿ ಚಂದನಾ ಡೆಲೀ ತಿಳಿಸಿದರು.

'ಹದಿಹರೆಯದವರು ಗರ್ಭಧರಿಸಿದಲ್ಲಿ ಹೆರಿಗೆ ವೇಳೆ ಅಪಾಯ ಇರುತ್ತದೆ. ಅಧಿಕ ರಕ್ತದೊತ್ತಡದ ಸಮಸ್ಯೆ, ಮಗುವಿನ ಅಪೂರ್ಣ ಬೆಳವಣಿಗೆ, ರಕ್ತ ಹೀನತೆ, ಅಪೌಷ್ಟಿಕತೆ ಸೇರಿ ವಿವಿಧ ಸಮಸ್ಯೆಗಳು ಕಾಣಿಸಿಕೊಂಡು, ಪ್ರಾಣಕ್ಕೆ ಅಪಾಯವಾಗುವ ಸಾಧ್ಯತೆ ಇರುತ್ತದೆ' ಎಂದು ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕಿ ಡಾ.ಸಿ. ಸವಿತಾ ಹೇಳಿದರು.

'ಬೆಂಗಳೂರಿನ ಸುತ್ತಮುತ್ತಲಿನ ಜಿಲ್ಲೆಗಳು ಹಾಗೂ ಹೊರ ರಾಜ್ಯಗಳಿಂದಲೂ ಆಸ್ಪತ್ರೆಗೆ ರೋಗಿಗಳು ಬರುತ್ತಾರೆ. ಹದಿಹರೆಯದ ಗರ್ಭಧಾರಣೆ ಪ್ರಕರಣಗಳಲ್ಲಿ ಶೇ 75ರಿಂದ ಶೇ 80ರಷ್ಟು ಮಂದಿ ಬೆಂಗಳೂರಿಗರೇ ಆಗಿದ್ದಾರೆ' ಎಂದು ಸ್ತ್ರೀರೋಗ ತಜ್ಞೆ ಡಾ. ರಾಧಿಕಾ ತಿಳಿಸಿದರು.

ಅಧ್ಯಾತ್ಮ ಪಯಣದ ಸಂಗೀತ ಇಂದು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಗಭಕ್ತಿ ಮ್ಯೂಸಿಕ್ ಆ್ಯಂಡ್ ಫಿಲ್ಮ್ಸ್ ಮತ್ತು ಪಂಚಮ್ ನಿಷಾದ್‌ನಿಂದ ಫೆ. 19ರಂದು 'ಏಳು ಸಾಧ್ವಿಯರ ಅಧ್ಯಾತ್ಮ ಪಯಣ'ದ ಸಂಗೀತ ಕಾರ್ಯಕ್ರಮ ಮಲ್ಲೇಶ್ವರದ ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಸಂಜೆ 6 ಗಂಟೆಗೆ ನಡೆಯಲಿದೆ.

ಈ ಕಾರ್ಯಕ್ರಮದಲ್ಲಿ ಅಂಡಾಲ್ (ತಮಿಳುನಾಡು), ಅಕ್ಕ ಮಹಾದೇವಿ (ಕರ್ನಾಟಕ), ಜನಬಾಯಿ ಮತ್ತು ಮುಕ್ತಾಬಾಯಿ (ಮಹಾರಾಷ್ಟ್ರ), ಗಂಗಾಸತಿ (ಗುಜರಾತ್), ಮೀರಾ ಬಾಯಿ (ರಾಜಸ್ಥಾನ), ಲಲ್ಲೇಶ್ವರಿ (ಕಾಶ್ಮೀರ್) ಇವರ ವಚನಗಳನ್ನು ಪ್ರಸ್ತುತಪಡಿಸಲಾಗುತ್ತದೆ. ದೇವಕಿ ಪಂಡಿತ್ ಅವರು ಈ ಪರಿಕಲ್ಪನೆಯನ್ನು ಸೃಷ್ಟಿಸಿದ್ದಾರೆ. ಕವಿ ವೈಭವ್ ಜೋಶಿ ಈ ಅಧ್ಯಾತ್ಮ ಸಂಗೀತ ಪಯಣದ ಕಾರ್ಯಕ್ರಮಕ್ಕೆ ಹಿಂದಿಯಲ್ಲಿ ಸಾಹಿತ್ಯ ರಚಿಸಿದ್ದಾರೆ.

ವೈಭವ್ ಜೋಶಿ ಮತ್ತು ದೇವಕಿ ಪಂಡಿತ್

ಸಂಗೀತ ಆಯೋಜಕ ಮತ್ತು ಕೀಬೋರ್ಡ್ ವಾದಕ ಕಮಲೇಶ್ ಭಂಡಕಮ್‌ಕರ್, ವಿನಾಯಕ ನೆಟ್ಕೆ (ತಬಲಾ), ನೀಲೇಶ್ ಪರಬ್ (ಪರ್ಕುಶನ್), ಶ್ರೀಧರ ಪಾರ್ಥಸಾರಥಿ (ಮೃದಂಗ), ಸಾಗರ್ ಸಾಥೆ (ಹಾರ್ಮೋನಿಯಂ), ಅಮರ್ ಓಕ್ (ಕೊಳಲು), ಶೃತಿ ಭಾವೆ (ಪಿಟೀಲು), ಅಮೋಘ್ ದಾಂಡೇಕರ್ (ಗಿಟಾರ್), ಚಂದ್ರಕಾಂತ್ ಲಕ್ಷಪತಿ (ರುಬಾಬ್) ಮತ್ತು ಸುಸ್ಮಿರತಾ ದವಾಲ್ಕರ್ ಮತ್ತು ಮೀರಾ ನಿಲಾಖೆ ಸಹ ಗಾಯನದಲ್ಲಿ ಇರಲಿದ್ದಾರೆ.

ಗೋಪುರ ವಿಚಾರ: ಮಸಿ ಎರಚಿ ಹಲ್ಲೆ

ಬೆಂಗಳೂರು: ಅವೆನ್ಯೂ ರಸ್ತೆಯ ದೊಡ್ಡಪೇಟೆ ವೃತ್ತದಲ್ಲಿರುವ ಗೋಪುರ ವಿಚಾರವಾಗಿ ಗಲಾಟೆ ನಡೆದಿದ್ದು, ಈ ಸಂಬಂಧ ಸಿಟಿ ಮಾರ್ಕೆಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಗೋಪುರ ತೆರವು ಮಾಡುತ್ತಿದ್ದ ಸುದ್ದಿ ಕೇಳಿ ಸ್ಥಳಕ್ಕೆ ಹೋಗಿದ್ದಾಗ ಕರ್ನಾಟಕ ರಕ್ಷಣಾ ವೇದಿಕೆಯ ಶ್ರೀನಿವಾಸ್ ಹಾಗೂ ಇತರರು ನನ್ನ ಮೇಲೆ ಮಸಿ ಎರಚಿ ಹಲ್ಲೆ ಮಾಡಿದ್ದಾರೆ' ಎಂದು ಆರೋಪಿಸಿ ಉಮಾಶಂಕರ್ ಎಂಬುವವರು ದೂರು ನೀಡಿದ್ದಾರೆ. ಶ್ರೀನಿವಾಸ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ' ಎಂದು ಪೊಲೀಸ್ ಮೂಲಗಳು ಹೇಳಿವೆ.

'ಗೋಪುರದ ಕಂಬದಲ್ಲಿ ಕನ್ನಡ ಧ್ವಜ ಇತ್ತು. ಇದನ್ನು ತೆರವು ಮಾಡುವಂತೆ ಉಮಾಶಂಕರ್ ಹಾಗೂ ಇತರರು ಒತ್ತಡ ಹೇರಿದ್ದರು. ಧ್ವಜ ತೆರವು ಮಾಡುವುದನ್ನು ಕರವೇ ಕಾರ್ಯಕರ್ತರು ತಡೆದಿದ್ದರು. ಈ ವಿಚಾರವಾಗಿ ಗಲಾಟೆ ನಡೆದಿದೆ' ಎಂದು ಸ್ಥಳೀಯರು ತಿಳಿಸಿದರು.

ಮೇ 28ಕ್ಕೆ ಕಾಮೆಡ್-ಕೆ ಪರೀಕ್ಷೆ

ಬೆಂಗಳೂರು: 'ಕರ್ನಾಟಕ ವೃತ್ತಿಪರ ಕಾಲೇಜುಗಳ ಒಕ್ಕೂಟ (ಕಾಮೆಡ್-ಕೆ)' ಮೇ 28ರಂದು ಪ್ರವೇಶ ಪರೀಕ್ಷೆ ನಡೆಸಲು (ಯುಜಿಇಟಿ–2023) ನಿರ್ಧರಿಸಿದೆ.

150 ಖಾಸಗಿ ಅನುದಾನರಹಿತ ಎಂಜಿನಿಯರಿಂಗ್ ಕಾಲೇಜುಗಳ ಆಡಳಿತ ಮಂಡಳಿ ಕೋಟಾದ ಸೀಟುಗಳ ಪ್ರವೇಶಕ್ಕಾಗಿ ದೇಶದ 150ಕ್ಕೂ ಹೆಚ್ಚು ನಗರಗಳ 400 ಪರೀಕ್ಷಾ ಕೇಂದ್ರಗಳಲ್ಲಿ ಪರೀಕ್ಷೆ ನಡೆಯಲಿದೆ.

ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಲು ಏ. 24 ಕೊನೆಯ ದಿನ, ಪ್ರವೇಶ ಬಯಸುವ ಅಭ್ಯರ್ಥಿಗಳು www.comedk.org, www.unigauge.com ಸಂಪರ್ಕಿಸಬಹುದು.

ಸುಮಾರು ಒಂದು ಲಕ್ಷ ಅಭ್ಯರ್ಥಿಗಳು ನೋಂದಣಿ ಮಾಡಿಕೊಳ್ಳುವ ನಿರೀಕ್ಷೆ ಹೊಂದಿರುವುದಾಗಿ ಪರೀಕ್ಷಾ ನಿರ್ವಹಣಾ ಸಂಸ್ಥೆ ಹೇಳಿದೆ. ಈ ವರ್ಷದಿಂದ ವಿದ್ಯಾರ್ಥಿಗಳಿಗೆ ಕೋರ್ಸ್‌ಗಳ ಕಲಿಕೆ ಜತೆಗೆ ಕೌಶಲ ತರಬೇತಿ ನೀಡಲಾಗುವುದು. ಅದಕ್ಕಾಗಿ ಬೆಂಗಳೂರಿನಲ್ಲಿ ನಾಲ್ಕು, ಮೈಸೂರು, ಕಲಬುರಗಿ, ಮಂಗಳೂರು ಹಾಗೂ ಬೆಳಗಾವಿಯಲ್ಲಿ ಎಂಟು 'ಇನ್ನೋವೇಶನ್ ಹಬ್' ಸ್ಥಾಪಿಸಲಾಗಿದೆ ಎಂದು ಕಾಮೆಡ್-ಕೆ ಮಾಹಿತಿ ನೀಡಿದೆ.

ಬಸವನಗುಡಿ ವಿಧಾನಸಭಾ ಕ್ಷೇತ್ರ

ಕಾಂಗ್ರೆಸ್: ವೆಂಕಟೇಶ್‌ಗೆ ಟಿಕೆಟ್ ಬಹುತೇಕ ಖಚಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಬಸವನಗುಡಿ ವಿಧಾನಸಭೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ವಿಧಾನ ಪರಿಷತ್ ಸದಸ್ಯ ಯು.ಬಿ. ವೆಂಕಟೇಶ್ ಕಣಕ್ಕಿಳಿಯುವುದು ಬಹುತೇಕ ಖಚಿತವಾಗಿದೆ. ಈ ಕ್ಷೇತ್ರದ ಪ್ರಬಲ ಟಿಕೆಟ್ ಆಕಾಂಕ್ಷಿಯಾಗಿದ್ದ ಕೆಪಿಸಿಸಿ ವಕ್ತಾರ ಡಾ. ಶಂಕರ್ ಗುಹಾ ಅವರ ಮನವೊಲಿಸುವಲ್ಲಿ ಕಾಂಗ್ರೆಸ್ ನಾಯಕರು ಯಶಸ್ವಿಯಾಗಿದ್ದಾರೆ.

ನಗರದ ರ‍್ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಶುಕ್ರವಾರ ರಾತ್ರಿ ನಡೆದ ಕಾಂಗ್ರೆಸ್ ಶಾಸಕಾಂಗ ಪಕ್ಷದ ಸಭೆಯ ಸಂದರ್ಭದಲ್ಲಿ ಇಬ್ಬರ ಜೊತೆಗೂ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ಚರ್ಚೆ ನಡೆಸಿದ್ದಾರೆ. ಈ ವೇಳೆ, ವೆಂಕಟೇಶ್ ಅವರಿಗೆ ಎಲ್ಲ ರೀತಿಯಲ್ಲೂ ಬೆಂಬಲ ನೀಡುವುದಾಗಿ ಶಂಕರ್ ಗುಹಾ ಭರವಸೆ ನೀಡಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಶ್ರೀ ಗುರು ರಾಘವೇಂದ್ರ ಸಹಕಾರಿ ಬ್ಯಾಂಕ್ ಹಗರಣದಲ್ಲಿ ಹಣ ಕಳೆದುಕೊಂಡ ಗ್ರಾಹಕರ ಪರ ಹೋರಾಟ ನಡೆಸುವ ಮೂಲಕ ಯು.ಬಿ. ವೆಂಕಟೇಶ್ ಮತ್ತು ಶಂಕರ್ ಗುಹಾ ಕ್ಷೇತ್ರ ವ್ಯಾಪ್ತಿಯಲ್ಲಿ ಪರಿಚಿತರಾಗಿದ್ದಾರೆ.

ಕೋವಿಡ್ ಸಂದರ್ಭದಲ್ಲಿ ಕೂಲಿ ಕಾರ್ಮಿಕರು ಮತ್ತು ನಿರ್ಗತಿಕರಿಗೆ ಆಹಾರ ಕಿಟ್ ವಿತರಿಸಿದ್ದ ಶಂಕರ್ ಗುಹಾ ಅವರೂ ಸ್ಥಳೀಯವಾಗಿ ಜನಪ್ರಿಯತೆ ಪಡೆದಿದ್ದಾರೆ. ಜೊತೆಗೆ, ಕಾಂಗ್ರೆಸ್ ಪಕ್ಷ ಸಂಘಟನೆಯಲ್ಲೂ ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ. ತಂದೆ ರಾಮಚಂದ್ರ ಗುಹಾ ಅವರ ಜನಪ್ರಿಯತೆ ಹಾಗೂ ಪ್ರಭಾವದ ಜತೆಗೆ ಶಂಕರ್ ಕೂಡ ತಮ್ಮದೇ ಆದ ವರ್ಚಸ್ಸು ಬೆಳೆಸಿಕೊಂಡಿದ್ದಾರೆ. ಹೀಗಾಗಿ, ಅವರಿಗೆ ಟಿಕೆಟ್ ಸಿಗುವ ಸಾಧ್ಯತೆಯಿದೆ ಎಂದು ಕಾಂಗ್ರೆಸ್ ವಲಯದಲ್ಲಿ ಚರ್ಚೆ ನಡೆದಿತ್ತು.

ಬಿಜೆಪಿಯಿಂದ ಹಾಲಿ ಶಾಸಕ ರವಿಸುಬ್ರಹ್ಮಣ್ಯ ಮತ್ತೆ ಕಣಕ್ಕಿಳಿಯಲಿದ್ದು, ಅವರಿಗೆ ಪೈಪೋಟಿ ನೀಡಲು ಯು.ಬಿ. ವೆಂಕಟೇಶ್ ಸೂಕ್ತ ಅಭ್ಯರ್ಥಿ ಎಂಬ ನಿರ್ಧಾರಕ್ಕೆ ಬಂದಿರುವ ಕಾಂಗ್ರೆಸ್ ನಾಯಕರು, ಅವರಿಗೆ ಮಣೆ ಹಾಕಲು ಮುಂದಾಗಿದ್ದಾರೆ. ಪಕ್ಷದಲ್ಲಿ ಶಂಕರ್ ಗುಹಾ ಅವರಿಗೆ ಉತ್ತಮ ಸ್ಥಾನಮಾನ ನೀಡುವ ಜೊತೆಗೆ ಮುಂದಿನ ಅವಧಿಗೆ ಅವಕಾಶ ನೀಡುವ ಭರವಸೆ ನೀಡಲಾಗಿದೆ. ಅದಕ್ಕೆ ಅವರು ಒಪ್ಪಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ.

ನಗರದಲ್ಲಿ ನಡೆದ ಕಾಂಗ್ರೆಸ್ ಪಕ್ಷದ ಸಭೆಯಲ್ಲಿ ಸಿದ್ದರಾಮಯ್ಯ, ಡಾ. ಶಂಕರ್ ಗುಹಾ ಮತ್ತು ಯು.ಬಿ. ವೆಂಕಟೇಶ್, ಬಿ.ಕೆ. ಹರಿಪ್ರಸಾದ್ ಮತ್ತು ಡಿ.ಕೆ. ಶಿವಕುಮಾರ್ ಪಾಲ್ಗೊಂಡಿದ್ದರು

ಉದ್ದೇಶಿತ ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ಭೂಸ್ವಾಧೀನಕ್ಕೆ ಮುಂದಾಗಿರುವ ಬಿಡಿಎ ನಡೆ ವಿರೋಧಿಸಿ ನೂರಾರು ರೈತರು ಶನಿವಾರ ರಾತ್ರಿ ಪಂಜಿನ ಮೆರವಣಿಗೆ ನಡೆಸಿದರು

ರಾಜ್ಯ ಸರ್ಕಾರ, ಬಿಡಿಎ ವಿರುದ್ಧ ಆಕ್ರೋಶ

ಭೂಸ್ವಾಧೀನ ವಿರೋಧಿಸಿ ರೈತರ ಪಂಜಿನ ಮೆರವಣಿಗೆ

ಪ್ರಜಾವಾಣಿ ವಾರ್ತೆ

ಯಲಹಂಕ: ಉದ್ದೇಶಿತ ಡಾ.ಶಿವರಾಮ ಕಾರಂತ ಬಡಾವಣೆ ನಿರ್ಮಾಣಕ್ಕೆ ರೈತರ ನೂರಾರು ಎಕರೆ ಕೃಷಿ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಮುಂದಾಗಿರುವ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಕ್ರಮವನ್ನು ವಿರೋಧಿಸಿ ರೈತರು ಶನಿವಾರ ರಾತ್ರಿ ಪಂಜಿನ ಮೆರವಣಿಗೆ ನಡೆಸಿದರು.

ರಾಮಗೊಂಡನಹಳ್ಳಿಯ ಏಳು ಮಂದಮ್ಮ ದೇವಸ್ಥಾನದಿಂದ ನಾಗಾರ್ಜುನ ಕಾಲೇಜಿನವರೆಗೆ ನೂರಾರು ರೈತರು ಪಂಜುಗಳನ್ನು ಹಿಡಿದು ಮೆರವಣಿಗೆಯಲ್ಲಿ ತೆರಳಿದರು.

'ಬಿಡಿಎ ವಶಪಡಿಸಿಕೊಂಡ ಜಮೀನುಗಳಿಗೆ ಸೂಕ್ತ ಪರಿಹಾರ ನೀಡುವಂತೆ ರೈತರು ನಡೆಸುತ್ತಿರುವ ನಿರಂತರ ಹೋರಾಟಗಳಿಗೆ ಸರ್ಕಾರ ಸ್ಪಂದಿಸುತ್ತಿಲ್ಲ. ಇದರಿಂದ ರೈತರ ಬದುಕು ತೀವ್ರ ಸಂಕಷ್ಟಕ್ಕೆ ಸಿಲುಕಿದೆ. ಬಿಡಿಎ ಅಧಿಕಾರಿಗಳ ರೈತ ವಿರೋಧಿ ಧೋರಣೆ ಇದಕ್ಕೆ ಕಾರಣ' ಎಂದು ರೈತ ಮುಖಂಡ ಮಾವಳಿಪುರ ಬಿ.ಶ್ರೀನಿವಾಸ್ ದೂರಿದರು.

ಯಲಹಂಕ ತಾಲ್ಲೂಕಿನ 17 ಗ್ರಾಮಗಳ 3,546 ಎಕರೆ ಫಲವತ್ತಾದ ಕೃಷಿ ಭೂಮಿ ವಶಪಡಿಸಿಕೊಳ್ಳಲು ಬಿಡಿಎ ಮುಂದಾಗಿದೆ. 1894ರ ಬ್ರಿಟಿಷ್ ಕಾಯಿದೆ ಅನ್ವಯ ಪರಿಹಾರ ಬೇಡ. ಕೇಂದ್ರದ 2013ರ ಭೂಸ್ವಾಧೀನ ಕಾಯಿದೆ ಅಡಿ ಪರಿಹಾರ ನೀಡುವಂತೆ ರಾಜ್ಯ ಸರ್ಕಾರಕ್ಕೆ ಬೇಡಿಕೆ ಸಲ್ಲಿಸಲಾಗಿದೆ. ಆದರೆ, ಸರ್ಕಾರಕ್ಕೆ ರೈತರ ಕೂಗು ಕೇಳುತ್ತಿಲ್ಲ ಎಂದು ರಾಮಗೊಂಡನಹಳ್ಳಿ ಎಂ.ರಮೇಶ್ ಬೇಸರ ವ್ಯಕ್ತಪಡಿಸಿದರು.

'ಶೀಘ್ರದಲ್ಲೇ ಜಾಗಟೆ ಬಾರಿಸುವ ಮೂಲಕ 'ಗೋ ಬಿಡಿಎ' ಚಳವಳಿ ನಡೆಸಲಾಗುವುದು. ಬೆಂಕಿ, ಪೊರಕೆ, ಜಾಗಟೆ ಚಳವಳಿ ಮೂಲಕ ಸರ್ಕಾರವನ್ನು ಎಚ್ಚರಿಸುವ ಕೆಲಸ ಮಾಡುತ್ತೇವೆ. ನ್ಯಾಯ ಸಿಗುವವರೆಗೂ ನಮ್ಮ ಹೋರಾಟ ಮುಂದುವರಿಯಲಿದೆ' ಎಂದು ಅವರು ಹೇಳಿದರು.

'ಭೂಸ್ವಾಧೀನ ವಿರೋಧಿಸಿ ಮತ್ತು ಸೂಕ್ತ ಪರಿಹಾರಕ್ಕೆ ಒತ್ತಾಯಿಸಿ 2008ರಿಂದಲೂ ರೈತರು ಹೋರಾಟ ಮಾಡುತ್ತಿದ್ದಾರೆ. ಸರ್ಕಾರ ಗೆಜೆಟ್ ನೋಟಿಫಿಕೇಶನ್ ಹೊರಡಿಸಿ, ಶೇ 80ರಷ್ಟು ರೈತರ ಒಪ್ಪಿಗೆ ಪಡೆದು ಭೂಸ್ವಾಧೀನ ಪ್ರಕ್ರಿಯೆ ಆರಂಭಿಸಬೇಕು. ಭೂಸ್ವಾಧೀನಕ್ಕೆ ರೈತರು ವಿರೋಧ ವ್ಯಕ್ತಪಡಿಸಿದ್ದಾರೆ. ಇಲ್ಲಿಯವರೆಗೂ ಬಿಡಿಎ ಅಧಿಕಾರಿಗಳು ರೈತರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ವಿಚಾರಿಸಿಲ್ಲ' ಎಂದು ಜಿಲ್ಲಾ ಪಂಚಾಯಿತಿ ಮಾಜಿ ಸದಸ್ಯೆ ಲಾವಣ್ಯ ನರಸಿಂಹಮೂರ್ತಿ ದೂರಿದರು.

ರೈತ ಮುಖಂಡರಾದ ಬಸವರಾಜ ಪಾದಯಾತ್ರಿ, ಮುನಿರಾಜು, ವಸಂತ್ ವೀರಸಾಗರ, ಕೇಶವ ರಾಜಣ್ಣ, ಪಿ. ನಾಗರಾಜಗೌಡ ಪಂಜಿನ ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಶ್ರೀನಗರ: ಮೂರು ವಾಹನಗಳು ವಶ

ಶ್ರೀನಗರ: ಜಮ್ಮು-ಕಾಶ್ಮೀರದಲ್ಲಿ ಭಯೋತ್ಪಾದನಾ ಚಟುವಟಿಕೆಗಾಗಿ ಬಳಸಲಾಗಿದ್ದ ಮೂರು ವಾಹನಗಳನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ವಶಕ್ಕೆ ಪಡೆದಿದೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ **‘ಪಿವಿ ಬ್ರ್ಯಾಂಡ್ ಸ್ಪಾಟ್’**ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ನೇತೃತ್ವ • ಮಾಂಡೋತ್ ಸ್ಟೀಲ್ ಕಂಪನಿಯ ಉಪಕ್ರಮ

‘300 ಕ್ಷಯ ರೋಗಿಗಳ ದತ್ತು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಂಡೋತ್ ಸ್ಟೀಲ್ ಕಂಪನಿಯು ‘ಪ್ರಧಾನಮಂತ್ರಿ ಕ್ಷಯ ಮುಕ್ತ ಭಾರತ’ ಯೋಜನೆ ಅಡಿಯಲ್ಲಿ ನಗರದ 300 ಕ್ಷಯ ರೋಗಿಗಳನ್ನು ಶನಿವಾರ ದತ್ತು ಪಡೆದಿದೆ.

ಕ್ಷಯ ರೋಗಿಗಳಿಗೆ ಸರ್ಕಾರ ಉಚಿತ ಚಿಕಿತ್ಸೆ, ಔಷಧಿ ಮತ್ತು ಆರು ತಿಂಗಳ ಕಾಲ ಪ್ರತಿ ತಿಂಗಳಿಗೆ ₹ 500 ನೆರವು ನೀಡುತ್ತಿದೆ. ಆದರೆ, ಪೌಷ್ಟಿಕ ಆಹಾರ ಪಡೆದು ಬೇಗ ಗುಣಮುಖರಾಗಲು ನೆರವಾಗುವುದಕ್ಕೆ ‘ಪ್ರಧಾನಮಂತ್ರಿ ಕ್ಷಯ ಮುಕ್ತ ಭಾರತ’ ಯೋಜನೆಯಡಿ ಕ್ಷಯ ರೋಗಿಗಳನ್ನು ದತ್ತು ಪಡೆಯುವಂತೆ ಪ್ರಧಾನಿ ನರೇಂದ್ರ ಮೋದಿ ಕರೆ ನೀಡಿದ್ದರು.

2022ರ ನವೆಂಬರ್ 25ರಂದು 500 ಕ್ಷಯ ರೋಗಿಗಳನ್ನು ದತ್ತು ಪಡೆದಿದ್ದ ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ, ಕ್ಷಯ ರೋಗಿಗಳ ನೆರವಿಗೆ ನಿಲ್ಲುವಂತೆ ಇತರರಿಗೂ ಮನವಿ ಮಾಡಿದ್ದರು. ಅವರ ನೇತೃತ್ವದಲ್ಲೇ ರಂಕಾ ಸ್ಟೀಲ್ಸ್ ಕಂಪನಿಯು ಇತ್ತೀಚೆಗೆ 300 ರೋಗಿಗಳನ್ನು ದತ್ತು ಪಡೆದಿತ್ತು.

ಮಾಂಡೋತ್ ಸ್ಟೀಲ್ಸ್ ಕಂಪನಿ ಕೂಡ ಲಹರ್ ಸಿಂಗ್ ಮನವಿಯಂತೆ 300 ರೋಗಿಗಳನ್ನು ದತ್ತು ಪಡೆದಿದೆ. ಮಲ್ಲೇಶ್ವರದ ರೋಟರಿ ಕ್ಲಬ್‌ನಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ 300 ಮಂದಿಗೆ ಪೌಷ್ಟಿಕ ಆಹಾರದ ಕಿಟ್ ವಿತರಿಸಲಾಯಿತು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥ ನಾರಾಯಣ, ಲಹರ್ ಸಿಂಗ್ ಮತ್ತು ಲಲಿತ್ ಕುಮಾರ್ ಮಾಂಡೋತ್ ನೇತೃತ್ವದಲ್ಲಿ ಕಾರ್ಯಕ್ರಮ ನಡೆಯಿತು.

ಬೆಂಗಳೂರಿನ ಮಲ್ಲೇಶ್ವರದಲ್ಲಿ ಶನಿವಾರ ನಡೆದ ಕಾರ್ಯಕ್ರಮದಲ್ಲಿ ಸಚಿವ ಡಾ.ಸಿ. ಎನ್. ಅಶ್ವತ್ಥ ನಾರಾಯಣ ಮತ್ತು ರಾಜ್ಯಸಭಾ ಸದಸ್ಯ ಲಹರ್ ಸಿಂಗ್ ಸಿರೋಯ ಅವರು ಕ್ಷಯ ರೋಗಿಗಳಿಗೆ ಪೌಷ್ಟಿಕ ಆಹಾರದ ಕಿಟ್ ವಿತರಿಸಿದರು. ಮಾಂಡೋತ್ ಸ್ಟೀಲ್ಸ್‌ನ ಲಲಿತ್ ಕುಮಾರ್ ಮಾಂಡೋತ್ ಇದ್ದರು – ಪ್ರಜಾವಾಣಿ ಚಿತ್ರ

ಕಿಟ್‌ನಲ್ಲಿ ಏನೆಲ್ಲಾ ಇರಲಿದೆ?

‘ದತ್ತು ಪಡೆದ ರೋಗಿಗಳಿಗೆ ಆರು ತಿಂಗಳ ಕಾಲ ಪೌಷ್ಟಿಕ ಆಹಾರದ ಕಿಟ್ ನೀಡುತ್ತೇವೆ. ಬೇಳೆ-ಕಾಳು, ಸಕ್ಕರೆ, ಹಾಲಿನಪುಡಿ ಸೇರಿದಂತೆ ಪ್ರೋಟೀನ್‌ಯುಕ್ತ ಆಹಾರ ಪದಾರ್ಥಗಳನ್ನು ವಿತರಿಸಲಾಗುವುದು. ಪ್ರತಿ ಕಿಟ್‌ಗೆ ₹ 850 ವೆಚ್ಚವಾಗುತ್ತದೆ’ ಎಂದು ಲಹರ್ ಸಿಂಗ್ ತಿಳಿಸಿದರು.

ಅಶ್ವತ್ಥ ನಾರಾಯಣ ಮಾತನಾಡಿ, ‘ದೇಹ ಮತ್ತು ಮನಸ್ಸು ಎರಡನ್ನೂ ಆರೋಗ್ಯವಾಗಿ ಇರಿಸಿಕೊಳ್ಳುವುದು ಮುಖ್ಯ. ಲಹರ್ ಸಿಂಗ್ ಅವರು ಮಾನವೀಯ ನೆಲೆಗಟ್ಟಿನಲ್ಲಿ ಸ್ಪಂದಿಸಿ ಕ್ಷಯ ರೋಗಿಗಳಿಗೆ ನೆರವು ನೀಡಲು ವ್ಯವಸ್ಥೆ ಮಾಡುತ್ತಿರುವುದು ಶ್ಲಾಘನೀಯ. ಸಮಾಜವು ಕೈಜೋಡಿಸಿದರೆ ಕ್ಷಯವನ್ನು ಭಾರತದಿಂದಲೇ ನಿರ್ಮೂಲನೆ ಮಾಡಬಹುದು’ ಎಂದರು.

ಲಹರ್ ಸಿಂಗ್ ಮಾತನಾಡಿ, ‘ಪ್ರಧಾನಿಯವರ ಮನವಿಯಂತೆ ಈ ಕೆಲಸವನ್ನು ಕೈಗೆತ್ತಿಕೊಂಡಿದ್ದೇನೆ. ಆರಂಭದಲ್ಲಿ ನಾನೇ 500 ರೋಗಿಗಳನ್ನು ದತ್ತು ಪಡೆದಿದ್ದೆ. ಈಗ ಒಟ್ಟು 1,100 ರೋಗಿಗಳಿಗೆ ನೆರವಿನ ವ್ಯವಸ್ಥೆ ಆಗಿದೆ. ಕ್ಷಯ ರೋಗಿಗಳ ಅನುಕೂಲಕ್ಕಾಗಿಯೇ ಬಿಬಿಎಂಪಿಯ ಬಾಬು ಜಗಜೀವನ್ ರಾಂ ಆಸ್ಪತ್ರೆಗೆ ಎಕ್ಸ್‌ರೇ ಮತ್ತು ಇತರ ಯಂತ್ರೋಪಕರಣ ಖರೀದಿಗೆ ರಾಜ್ಯಸಭಾ ಸದಸ್ಯರ ಸ್ಥಳೀಯ ಪ್ರದೇಶಾಭಿವೃದ್ಧಿ ನಿಧಿಯಿಂದ ₹ 50 ಲಕ್ಷ ಅನುದಾನ ನೀಡಿದ್ದೇನೆ’ ಎಂದರು.

ರಾಷ್ಟ್ರೀಯ ಕ್ಷಯ ರೋಗ ಸಂಸ್ಥೆ ನಿರ್ದೇಶಕ ಡಾ.ಎನ್. ಸೋಮಶೇಖರ್, ರಾಜ್ಯದ ಉಪ ನಿರ್ದೇಶಕ ಡಾ. ಅನ್ವಾರ್ ಅಹಮ್ಮದ್, ರಾಜ್ಯ ಕ್ಷಯ ರೋಗ ನಿವಾರಣಾ ಸಂಸ್ಥೆ ಉಪ ನಿರ್ದೇಶಕ ಡಾ. ಅನಿಲ್ ಕುಮಾರ್, ಜಿಲ್ಲಾ ಕ್ಷಯ ರೋಗ ನಿವಾರಣಾ ಅಧಿಕಾರಿ ಡಾ. ಕಲ್ಪನಾ ಉಪಸ್ಥಿತರಿದ್ದರು.

ಸುದ್ದಿ 2 ನಿಮಿಷ

ಸಿಜಿಕೆ ರಂಗೋತ್ಸವ ಇಂದಿನಿಂದ

ಬೆಂಗಳೂರು: ರಂಗನಿರಂತರ ಸಾಂಸ್ಕೃತಿಕ ಸಂಘವು ಇಲ್ಲಿನ ರವೀಂದ್ರ ಕಲಾಕ್ಷೇತ್ರದಲ್ಲಿ ಭಾನುವಾರದಿಂದ ಬುಧವಾರದವರೆಗೆ (ಫೆ. 19ರಿಂದ 22) 8ನೇ ಸಿಜಿಕೆ ರಾಷ್ಟ್ರೀಯ ರಂಗೋತ್ಸವ ಹಮ್ಮಿಕೊಂಡಿದೆ.

ಭಾನುವಾರ ಸಂಜೆ 6.30ಕ್ಕೆ ರವೀಂದ್ರ ಕಲಾಕ್ಷೇತ್ರದ ಆವರಣದಲ್ಲಿರುವ ಸಂಸ ಬಯಲು ರಂಗಮಂದಿರದಲ್ಲಿ ಉದ್ಘಾಟನೆ ಸಮಾರಂಭ ನಡೆಯಲಿದ್ದು, ರಂಗಭೂಮಿ ಕಲಾವಿದೆ ದು.ಸರಸ್ವತಿ ರಂಗೋತ್ಸವಕ್ಕೆ ಚಾಲನೆ ನೀಡಲಿದ್ದಾರೆ. ಪ್ರತಿನಿತ್ಯ ಸಂಜೆ 7.15ರಿಂದ ನಾಟಕ ಪ್ರದರ್ಶನ ನಡೆಯಲಿದೆ. ಮೊದಲ ದಿನ ಕೆ.ಬಿ. ಸಿದ್ದಯ್ಯ ಅವರ ಖಂಡಕಾವ್ಯ ಆಧಾರಿತ ‘ದಕ್ಲಾಕಥಾ ದೇವಿಕಾವ್ಯ’ ನಾಟಕ ಪ್ರದರ್ಶನ ಕಾಣಲಿದೆ.

ಸೋಮವಾರದಿಂದ ಬುಧವಾರದವರೆಗೆ ಸಂಜೆ 4 ಗಂಟೆಯಿಂದಲೇ ವಿವಿಧ ಕಾರ್ಯಕ್ರಮಗಳು ನಡೆಯಲಿವೆ. ಫೆ.20ರಂದು ‘ಹತ್ತಮಾಲಾಚ್ಯ ಪಲ್ಯಾಡ್’ ಮರಾಠಿ ನಾಟಕ, ಫೆ.21ರಂದು ‘ಶೂದ್ರ ಶಿವ’ ಕನ್ನಡ ನಾಟಕ ಹಾಗೂ ಫೆ.22ರಂದು ‘ತೀಂದಾರಿ ಪಾಚ’ ಮಲಯಾಳ ನಾಟಕ ಪ್ರದರ್ಶನ ಕಾಣಲಿದೆ. ರಂಗಗೀತೆ, ಕಿರುಚಿತ್ರಗಳ ಪ್ರದರ್ಶನವೂ ನಡೆಯಲಿದೆ ಎಂದು ಪ್ರಕಟಣೆ ತಿಳಿಸಿದೆ. ಪಾಸುಗಳಿಗೆ ಮೊ.:9886543697 ಅಥವಾ 9844429792 ಸಂಪರ್ಕಿಸಿ.

ಚಿಕ್ಕತಿಮ್ಮಸಂದ್ರ ಕೆರೆ ಉದ್ಘಾಟನೆ

ಬೆಂಗಳೂರು: ‘ಗಿಡಗಳನ್ನು ನೆಡುವುದರಲ್ಲಿಯೇ ನಾನು ನೆಮ್ಮದಿ ಕಂಡುಕೊಂಡಿದ್ದೇನೆ’ ಎಂದು ಪರಿಸರವಾದಿ ಸಾಲುಮರದ ತಿಮ್ಮಕ್ಕ ಹೇಳಿದರು.

ಫಾರೆಸ್ಟ್ಸ್ ಬೈ ಹಾರ್ಟ್‌ಫುಲ್‌ನೆಸ್ ಮತ್ತು ಪೇಪಾಲ್ ಸಂಸ್ಥೆಯ ಸಹಯೋಗದಲ್ಲಿ ಶನಿವಾರ ನಡೆದ ಚಿಕ್ಕತಿಮ್ಮಸಂದ್ರ ಗ್ರಾಮದ ನವೀಕರಿಸಿದ ಕೆರೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ಸಸ್ಯಪ್ರಪಂಚದ ಪೋಷಣೆ ಹಾಗೂ ಭೂಮಿಯ ರಕ್ಷಣೆ ಮಾಡುವುದು ಪ್ರತಿಯೊಬ್ಬರ ಕರ್ತವ್ಯ. ಇವೆರಡೂ ಸಂಸ್ಥೆಗಳು ಅಳಿವಿನಂಚಿನಲ್ಲಿರುವ ಗಿಡಗಳನ್ನು ನೆಡುತ್ತಿರುವುದು ಮತ್ತು ಕೆರೆಯನ್ನು ನವೀಕರಿಸುತ್ತಿರುವುದು ಶ್ಲಾಘನೀಯ’ ಎಂದರು.

ಕೆರೆಯ ಸುತ್ತಲೂ ನೆಡಲು ಹಾರ್ಟ್‌ಫುಲ್‌ನೆಸ್ ನರ್ಸರಿಯಿಂದ ಬೇಲದ ಮರ, ಅತ್ತಿಮರ, ಮತ್ತಿಗಿಡ, ಅರಳಿ ಮರ, ಬನ್ನಿ ಗಿಡ, ಹಲಸು, ಪೇರಲ, ನೇರಳೆ, ಗಸಗಸೆ ಸಸಿ ಮತ್ತು ಹಲವು ಜಾತಿಯ ಗಿಡಗಳನ್ನು ನೆಡಲಾಗುತ್ತಿದೆ. ಇದರಿಂದ ವಲಸೆ ಹಕ್ಕಿಗಳು, ಸ್ಥಳೀಯ ಕಾಡು ಪ್ರಾಣಿಗಳನ್ನು ಆಕರ್ಷಿಸಲಿದೆ. ನಟ ದಿಗಂತ್, ಸಂಸ್ಥೆಯ ಸಿಬ್ಬಂದಿ ಮತ್ತು ಅಧಿಕಾರಿಗಳು ಇದ್ದರು.

ಅರಕಲಗೂಡು: ಪ್ರಾಚಾರ್ಯ ಬಂಧನ

ಅರಕಲಗೂಡು (ಹಾಸನ ಜಿಲ್ಲೆ): ತಾಲ್ಲೂಕಿನ ಸರ್ಕಾರಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿಯರಿಗೆ ಲೈಂಗಿಕ ಕಿರುಕುಳ ನೀಡಿದ್ದ ಪ್ರಾಚಾರ್ಯರನ್ನು ಪೊಲೀಸರು ಬಂಧಿಸಿದ್ದಾರೆ. ವಿದ್ಯಾರ್ಥಿನಿಯರು, ತಮ್ಮ ಪ್ರಾಚಾರ್ಯರಿಂದ ಲೈಂಗಿಕ ಕಿರುಕುಳವಾದ ಬಗ್ಗೆ ದೂರು ನೀಡಿದ್ದಾರೆ. ಮಾಹಿತಿ ಪಡೆದ ಸಿಡಿಪಿಒ ಇಂದಿರಾ ಕಾಲೇಜಿಗೆ ತೆರಳಿ, ವಿದ್ಯಾರ್ಥಿನಿಯರನ್ನು ವಿಚಾರಿಸಿದ್ದಾರೆ.

‘ಆಳುವವರಿಗೆ ಜನರ ಭಾವನೆ ತಲುಪಿಸುತ್ತಿರುವ ಮಠಗಳು’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶ್ರದ್ಧೆಯ ಭಾವದ ಜೊತೆಗೆ ಜನರ ಭಾವನೆಗಳನ್ನು ಆಳುವವರಿಗೆ ಮುಟ್ಟಿಸುವ ಕೆಲಸ ಮಠಗಳಿಂದ ಆಗುತ್ತಿದೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

‘ಮಠಗಳು ಆಶ್ರಯ, ಅನ್ನ, ಜ್ಞಾನ ಕೊಟ್ಟಿವೆ. ಇವುಗಳು ಇಲ್ಲದಿದ್ದರೆ ನಾವು ಸಂಸ್ಕೃತಿಯಲ್ಲಿ ಇಷ್ಟು ಮುಂದೆ ಬರಲು ಸಾಧ್ಯವಾಗುತ್ತಿರಲಿಲ್ಲ. ಮಠಗಳು ನಮ್ಮ ರಾಜ್ಯದ ಪರಂಪರೆ’ ಎಂದರು.

ಗೋವಿಂದರಾಜನಗರದ ಎಂ.ಸಿ. ಲೇಔಟ್‌ನಲ್ಲಿ ಬಿಬಿಎಂಪಿ ನಿರ್ಮಿಸಿರುವ ‘ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಗೆ’ ಇತ್ತೀಚೆಗೆ ಚಾಲನೆ ನೀಡಿ ಅವರು ಮಾತನಾಡಿದರು.

‘ದೇಶದ ಎಲ್ಲ ಆಸ್ಪತ್ರೆಗಳಲ್ಲಿ ಆಯುಷ್ ವಿಭಾಗವನ್ನು ಪ್ರಧಾನಿ ಆರಂಭಿಸಿದ್ದಾರೆ. ರಾಜ್ಯದ ಎಲ್ಲ ಆಸ್ಪತ್ರೆಗಳಲ್ಲೂ ಆಯುರ್ವೇದ ವಿಭಾಗ ಪ್ರಾರಂಭಿಸಬೇಕು’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಆದಿಚುಂಚನಗಿರಿಯ ನಿರ್ಮಲಾನಂದನಾಥ ಸ್ವಾಮೀಜಿ, ಸಿದ್ಧಗಂಗಾ ಮಠದ ಸಿದ್ದಲಿಂಗ ಸ್ವಾಮೀಜಿ, ಗುರುಗುಂಡ ಬ್ರಹ್ಮೇಶ್ವರ ಸ್ವಾಮಿ ಮಠದ ನಂಜಾವಧೂತ ಸ್ವಾಮೀಜಿ, ವಿಶ್ವ ಒಕ್ಕಲಿಗ ಮಹಾಸಂಸ್ಥಾನ ಮಠದ ಚಂದ್ರಶೇಖರ ಸ್ವಾಮೀಜಿ, ಸಚಿವರಾದ ವಿ.ಸೋಮಣ್ಣ, ಆರ್. ಅಶೋಕ, ಕೆ.ಗೋಪಾಲಯ್ಯ, ಡಾ.ಕೆ. ಸುಧಾಕರ್, ವಿಧಾನ ಪರಿಷತ್ ಸದಸ್ಯ ಅ.ದೇವೇಗೌಡ, ಬಿಬಿಎಂಪಿ ಆಡಳಿತಾಧಿಕಾರಿ ರಾಕೇಶ್ ಸಿಂಗ್, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಇದ್ದರು.

ಎಂ.ಸಿ. ಲೇಔಟ್‌ನಲ್ಲಿ ಬಾಲಗಂಗಾಧರನಾಥ ಸ್ವಾಮೀಜಿ ಮಲ್ಟಿಸ್ಪೆಷಾಲಿಟಿ ಆಸ್ಪತ್ರೆಗೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಇತ್ತೀಚೆಗೆ ಚಾಲನೆ ನೀಡಿದರು. ಸಚಿವರಾದ ಆರ್. ಅಶೋಕ, ವಿ. ಸೋಮಣ್ಣ, ಸಿದ್ದಲಿಂಗ ಸ್ವಾಮೀಜಿ, ನಿರ್ಮಲಾನಂದನಾಥ ಸ್ವಾಮೀಜಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ, ಸಚಿವ ಡಾ. ಕೆ. ಸುಧಾಕರ್ ಇದ್ದರು.

ಕಳಪೆ ಔಷಧ: ಪ್ರಕರಣ ರದ್ದತಿಗೆ ನಕಾರ

ಬೆಂಗಳೂರು: ಕಳಪೆ ಗುಣಮಟ್ಟದ ಔಷಧ ಸರಬರಾಜು ಮಾಡಿದ ಆರೋಪಕ್ಕೆ ಸಂಬಂಧಿಸಿದಂತೆ ಬಿಹಾರದ ಔಷಧ ತಯಾರಿಕಾ ಸಂಸ್ಥೆ ಮೆಸರ್ಸ್ ಹಿಂದುಸ್ಥಾನ್ ಮೆಡಿಕಲ್ ಪ್ರಾಡಕ್ಟ್ಸ್ ಕಂಪನಿ ಮತ್ತು ಪಾಲುದಾರ ಪವನ್ ಕುಮಾರ್ ಎಲ್. ಎಂಬುವರ ವಿರುದ್ಧ ದಾಖಲಾಗಿದ್ದ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಪ್ರಕರಣ ರದ್ದುಪಡಿಸುವಂತೆ ಕೋರಿ ಪವನ್ ಕುಮಾರ್ ಮತ್ತು ಪಾಲುದಾರಿಕಾ ಕಂಪನಿ ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದ್ದು, ‘ಔಷಧ ತಯಾರಿಸುವ ತಾಂತ್ರಿಕ ಸಿಬ್ಬಂದಿಯು ಘಟನೆಗೆ ಕಾರಣ ಮತ್ತು ಹೊಣೆಗಾರರಾಗಿದ್ದಾರೆ’ ಎಂಬ ಅರ್ಜಿದಾರರ ವಾದವನ್ನು ತಳ್ಳಿಹಾಕಿದೆ.

‘ಅರ್ಜಿದಾರರ ವಿರುದ್ಧ ಬೆಂಗಳೂರು ಗ್ರಾಮಾಂತರ ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದಲ್ಲಿ ವಿಚಾರಣೆ ನಡೆಯುತ್ತಿದೆ. ಹಾಗಾಗಿ ಈ ಹಂತದಲ್ಲಿ ಪ್ರಕರಣ ರದ್ದುಪಡಿಸಲು ಸಾಧ್ಯವಿಲ್ಲ’ ಎಂದು ಅರ್ಜಿ ವಜಾಗೊಳಿಸಲಾಗಿದೆ.

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಇಸಿಎನ್–47–2022–ಆರ್‌ಟಿ2
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಕುಡತಿನಿ ಯಾರ್ಡ್‌ನ ಕಿ.ಮೀ. 188/514ನಲ್ಲಿ ಎಲ್‌ಸಿ 102 ಬದಲಿಗೆ ಉದ್ದೇಶಿತ ರಸ್ತೆ ಮೇಲ್ಸೇತುವೆಗಾಗಿ ಪವರ್ ಲೈನ್ ಕ್ರಾಸಿಂಗ್‌ನ ಸ್ಥಳಾಂತರ ಮತ್ತು ಬೆಳಕಿನ ವ್ಯವಸ್ಥೆಗಳು	ರೂ. 26,35,252/–

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09–03–2023 ರಂದು 11:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ. ಯಾವುದೇ ತಿದ್ದುಪಡಿಗಳಿಗಾಗಿ ಮುಕ್ತಾಯದ ದಿನಾಂಕದವರೆಗೆ ವೆಬ್‌ಸೈಟ್‌ಗೆ ಭೇಟಿ ನೀಡುತ್ತಿರಿ.
ಉಪ ಮುಖ್ಯ ವಿದ್ಯುತ್ ಇಂಜಿನಿಯರ್ / ನಿರ್ಮಾಣ ಬೆಂಗಳೂರು ದಂಡು
ಪಿಯುಬಿ/681/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
S.W.Railways SWRRLY SWRRLY

ನೈಋತ್ಯ ರೈಲ್ವೆ

ಟೆಂಡರ್ ಪ್ರಕಟಣೆ ಸಂ. ಎಸ್‌ಬಿಸಿ–ಜಿಎಸ್‌ಯು–ಇಎನ್‌ಜಿಜಿ–2023–06
ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಸಹಿದಾರರು ಕೆಳಕಂಡ ಕೆಲಸಕ್ಕಾಗಿ ಇ–ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕೆಲಸದ ಹೆಸರು	ಅಂದಾಜು ಮೌಲ್ಯ
ಸಬ್‌ವರ್ಕ್–1 : 1. ಬೆಂಗಳೂರು ಪೂರ್ವ – ಬೆಂಗಳೂರು ದಂಡು ನಿಲ್ದಾಣಗಳ ನಡುವೆ ಕಿ.ಮೀ. 349/500–600ನಲ್ಲಿ ರೈಲು ಕೆಳಸೇತುವೆ ಸಂ. 840ಎ (1 x 7.00 x 4.50 ಮೀ) ಆರ್‌ಸಿಸಿ ಬಾಕ್ಸ್‌ನ ಉದ್ದೇಶಿತ ನಿರ್ಮಾಣ (ಬಿಎಂಆರ್‌ಸಿಎಲ್ ಗಾಗಿ ಡೆಪಾಸಿಟ್ ಕಾಮಗಾರಿ). **2.** ಬೆಂಗಳೂರು ಪೂರ್ವ – ಬೆಂಗಳೂರು ದಂಡು ನಿಲ್ದಾಣಗಳ ನಡುವೆ ಕಿ.ಮೀ. 349/800 ನಲ್ಲಿ ಬಾಕ್ಸ್ ಪುಶಿಂಗ್ ವಿಧಾನದಿಂದ ರೈಲ್ವೆ ಕೆಳಸೇತುವೆ ಸಂ. 841ಸಿ (1 x 12.25 x 50.35 ಮೀ) ಆರ್‌ಸಿಸಿ ಬಾಕ್ಸ್‌ನ ಉದ್ದೇಶಿತ ನಿರ್ಮಾಣ (ಬಿಎಂಆರ್‌ಸಿಎಲ್‌ಗಾಗಿ ಡೆಪಾಸಿಟ್ ಕಾಮಗಾರಿ). **ಸಬ್‌ವರ್ಕ್–2 :** ಬೆಂಗಳೂರು ದಂಡು – ವೈಟ್‌ಫೀಲ್ಡ್ ಕ್ವಾಡ್ರುಪ್ಲಿಂಗ್ : 1) ಬೆಂಗಳೂರು ಪೂರ್ವ – ಬೆಂಗಳೂರು ದಂಡು ನಿಲ್ದಾಣಗಳ ನಡುವೆ ಉದ್ದೇಶಿತ 3ನೇ ಮತ್ತು ಉದ್ದೇಶಿತ 4ನೇ ಲೈನ್‌ಗಾಗಿ ಕಿ.ಮೀ. 349/500 – 700ನಲ್ಲಿ 1 x 17.16 ಮೀ ಪ್ಲೇಟ್ ಗರ್ಡರ್‌ಗಳೊಂದಿಗೆ ರೈಲ್ವೆ ಕೆಳಸೇತುವೆ ಸಂ. 840ಎ ನ ಅಗಲೀಕರಣ. 2) ಕೃಷ್ಣರಾಜಪುರಂ ಮತ್ತು ಬೈಯಪ್ಪನಹಳ್ಳಿ ನಿಲ್ದಾಣಗಳ ನಡುವೆ 1 x 5.50 ಮೀ x 7.30 ಮೀ ಆರ್‌ಸಿಸಿ ಬಾಕ್ಸ್‌ನೊಂದಿಗೆ ಕಿ.ಮೀ. 343/500–600ನಲ್ಲಿ ಹಾಲಿ ಇರುವ ರೈಲು ಓವರ್ ರೈಲ್ ಸೇತುವೆ ಸಂ. 834ಎ ನ ವಿಸ್ತರಣೆ. 3) ಕೃಷ್ಣರಾಜಪುರಂ ಮತ್ತು ಬೈಯಪ್ಪನಹಳ್ಳಿ ನಿಲ್ದಾಣಗಳ ನಡುವೆ ಕಿ.ಮೀ. 343/400–500 ನಲ್ಲಿ ಹಾಲಿ ಇರುವ ರೈಲ್ವೆ ಕೆಳಸೇತುವೆಯನ್ನು ಸೂಕ್ತವಾಗಿ ಕಳಚಿಹಾಕುವುದರಿಂದ ಕಿ.ಮೀ. 343/500–600ನಲ್ಲಿ 1 x 5.00 x 2.50 ಆರ್‌ಸಿಸಿ ಬಾಕ್ಸ್ ಆಗಿ ಹಾಲಿ ಇರುವ ರೈಲ್ವೆ ಕೆಳಸೇತುವೆ ಸಂ. 834ಸಿ ನ ಉದ್ದೇಶಿತ ಮರುನಿರ್ಮಾಣ.	ರೂ. 15,19,59,980.67

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ : 09–03–2023 ರಂದು 15:00 ಗಂಟೆವರೆಗೆ
ಹೆಚ್ಚಿನ ವಿವರಗಳಿಗಾಗಿ www.ireps.gov.in ಗೆ ಲಾಗ್‌ಆನ್ ಮಾಡಿ.
ಮುಖ್ಯ ಯೋಜನಾ ವ್ಯವಸ್ಥಾಪಕರು, ಗತಿ ಶಕ್ತಿ, ಬೆಂಗಳೂರು
ಪಿಯುಬಿ/682/ಎಎಸ್/ಪಿಆರ್‌ಬಿ/ಎಸ್‌ಡಬ್ಲ್ಯುಆರ್/2022–23
S.W.Railways SWRRLY SWRRLY

ಕೆ–ರೈಡ್ K RIDE
ರೈಲು ಮೂಲಸೌಲಭ್ಯ ಅಭಿವೃದ್ಧಿ ಕಂಪನಿ (ಕರ್ನಾಟಕ) ನಿಯಮಿತ
(ಕರ್ನಾಟಕ ಮತ್ತು ರೈಲ್ವೆ ಸಚಿವಾಲಯದ ಜಂಟಿ ಉದ್ಯಮ)
ನೋಂದಾಯಿತ ಕಚೇರಿ: ಕೆ–ರೈಡ್, ಸಂಪರ್ಕ ಸೌಧ, 1ನೇ ಮಹಡಿ, ಓರಿಯನ್ ಮಾಲ್ ಎದುರು, ಡಾ. ರಾಜ್‌ಕುಮಾರ್ ರಸ್ತೆ, ರಾಜಾಜಿನಗರ 1ನೇ ಬ್ಲಾಕ್, ಬೆಂಗಳೂರು–560010
ದೂ: +91 6364890808 ಇ–ಮೇಲ್: praveen.kumar.kride@ka.gov.in
CIN: U60100KA2000SGLC028171

ಸಾರ್ವಜನಿಕ ಪ್ರಕಟಣೆ

ಬೈಯಪ್ಪನಹಳ್ಳಿ– ಹೊಸೂರು ಡಬ್ಲಿಂಗ್ ಯೋಜನೆಯ ಕಾರ್ಮೆಲರಾಂ (ಕರ್ನಾಟಕದ ಬೆಂಗಳೂರು ನಗರ ಜಿಲ್ಲೆ)– ಹೀಲಲಿಗೆ (ಕರ್ನಾಟಕದ ಬೆಂಗಳೂರು ನಗರ ಜಿಲ್ಲೆ) ವಿಭಾಗದಲ್ಲಿ ಹೊಸ ಜೋಡಿ ಮಾರ್ಗದ ಕಾಮಗಾರಿಗಳು ಪೂರ್ಣಗೊಂಡ ನಂತರ, ರೈಲ್ವೆ ಸುರಕ್ಷತೆ ಆಯುಕ್ತರು, ದಕ್ಷಿಣ ವೃತ್ತ, ಇವರು ಶಾಸನಬದ್ಧ ಪರಿಶೀಲನೆ ಅಂಗವಾಗಿ ಸದರಿ ವಿಭಾಗದಲ್ಲಿ ವಿಶೇಷ ರೈಲಿನ ಮೂಲಕ ಸ್ಪೀಡ್ ಟ್ರಯಲ್ ಅನ್ನು ದಿನಾಂಕ 20.02.2023 ರಂದು ನಡೆಸುವರು. ಸ್ಪೀಡ್ ಟ್ರಯಲ್ ವೇಳೆಯಲ್ಲಿ ರೈಲುಗಳು ಹೊಸದಾಗಿ ನಿರ್ಮಿಸಿರುವ ರೈಲ್ವೆ ಜೋಡಿ ಮಾರ್ಗದಲ್ಲಿ ಗಂಟೆಗೆ 120 ಕಿ.ಮೀ ವೇಗದಲ್ಲಿ ಚಲಿಸುವವು. ತದನಂತರ ನಿಯಮಿತ ರೈಲು ಸೇವೆಗಳನ್ನು ಸದರಿ ರೈಲ್ವೆ ಮಾರ್ಗದಲ್ಲಿ ಪ್ರಾರಂಭಿಸಲಾಗುವುದು. ಸದರಿ ಮಾರ್ಗವು ಜೀವಿಗಳಿಗೆ ಅಪಾಯಕಾರಿಯಾಗಿರುವುದರಿಂದ ಸಾರ್ವಜನಿಕರು ರೈಲು ಮಾರ್ಗವನ್ನು ಅತಿಕ್ರಮಿಸಬಾರದಾಗಿ ಮತ್ತು ಎಚ್ಚರಿಕೆ ವಹಿಸಬೇಕಾಗಿ ಈ ಮೂಲಕ ಸಲಹೆ ನೀಡಲಾಗಿದೆ. ಯಾರಾದರು ರೈಲ್ವೆ ಮಾರ್ಗವನ್ನು ಅತಿಕ್ರಮಿಸಿದ್ದೇ ಆದರೆ ಅವರನ್ನು ಶಿಕ್ಷೆಗೆ ಗುರಿಪಡಿಸಲಾಗುವುದು. ದಯಮಾಡಿ ಇದನ್ನು ಗಮನಿಸುವುದು.

ವಾಪಾಸಂಇ/ ಉನಿ.ನ/ 4764/ ಎಂಸಿಎ/ 2022–23
ಸಹಿ/– ಪ್ರಧಾನ ವ್ಯವಸ್ಥಾಪಕರು/ಸಿವಿಲ್/ಯೋಜನೆಗಳು, ಕೆ–ರೈಡ್

JOBS CORNER ಕ್ಲಾಸಿಫೈಡ್ಸ್

JOB OPPORTUNITIES

Teachers/ Professors

WANTED TEACHERS with BA/ MA (Eng/ SS) B.Sc, M.Sc with B.ED B.Lib/ M.Lib, & NTT Teachers. Salary upto 28000/- Contact: Sidhartha International School, Peenya Dasarahalli. 9620100046/ 9964670328

JANASEVA VIDYA KENDRA
Residential for Boys
Channenahalli, 20th K.M.Magadi Main Road, Bangalore-562130
WANTED TEACHERS (Only Gents)
M.Sc., or B.Sc., B.Ed. (PCM)
MA. Or B.A., B.Ed., English, Social & Kannada
(English & Kannada Medium Both)
Hindi Teachers (MA. Or B.A., B.Ed.,)
Wardens (Graduates) Only Gents
Email: 123jsvkhighschool@gmail.com
Kindly Send your Resume to the above Email ID Before 28-02-2023
Contact: 70224 28464 Hon. Secretary.

HOLY ANGEL'S High School Hampinagar, Vijayanagar, Bengaluru-560104. Phone:23404465/ 23202042 E-mail: holyangels.highschoolr pclayout@gmail.com Requires Experienced Trained Teachers to handle Nursery, Primary, Higher Primary, High School and Music Teacher for Academic year 2023-2024 STATE & ICSE Qualification : NTT, B.A./B.Sc.,B.Ed, M.A/M.Sc.,M.Ed. Only English medium candidates need apply.

WANTED TRAINED Teachers for the following Subjects- Physics (Msc,BEd) English(MA,BEd) &.SS(MA,BEd) Computers (Msc/MCA). Walkin between 10.30am-1pm with The Secretary Srikrishna International School, ITI-Layout, BSK 3rd Stage Bangalore-85. Ph:080-26690799

ST.PHILOMENA'S PUBLIC SCHOOL BYALAKERE, NEAR YELAHANKA, BANGALORE REQUIRED TRAINED TEACHERS FOR CBSE HIGH SCHOOL ALL SUBJECTS 9480091189/ 9845036582 stphilomenas118@gmail.com

KANNADA TEACHER REQUIRED part time/ full time for middle and High school for KENMORE SCHOOL 31, Kanakapura road, basavanagudi near lalbagh west gate, Bangalore ph or whatsapp 9901501185/ 9880257800. Salary 10K to 14K PM Incentives available

Swamy Vivekananda Rural Education Society® 1963
Chandapura, Anekal Taluk, Bengaluru-560 099
www.svres.org email: hrsvres@gmail.com Mob: 9606009890
Location :
Invites applications for recruitment to the following posts
- **Principal / Headmaster:** Master degree, B.Ed with minimum 5 years of experience
- **Assistant teachers for High School (ICSE/State Board):** MSc / BSc, B.Ed : Chemistry / Botany / Zoology / Mathematics / Physics; MA / BA, B.Ed : History / Geography / English / Hindi; MCA, BE, MSc in Computer Science with B.Ed (Preferable)
- **Lecturers for Pre University College:** MSc B.Ed: Botany / Zoology, MA, B.Ed: Kannada
- **Lecturers in Commerce and Management for First Grade College:** M Com / MBA with NET / SLET qualified. BE, MCA, MSc in Computer Science
- **Others: Teachers for Music, Dance, Abacus and Vedic Maths:** BA / MA Music / Fine arts
- **Accounts Officer:** MCom / MBA minimum 3 years of experience in managing institution accounts
- **Site Supervisor:** BE / Diploma in Civil Engineering
- **School Bus Drivers:** With valid HMV motor vehicle licence and minimum 3 years of experience in driving a school bus
- **Attenders:** SSLC/PUC pass

Interested and eligible candidates with relevant experience are requested to send Bio data addressed to the Secretary, SVRES with copies of relevant documents through mail or post to reach us on or before 28/02/2023.
Sd/- Secretary

A REPUTED ICSE SCHOOL in North Bangalore requires an experienced (minimum 5years) FEMALE PRINCIPAL from the academic year 2023-24. Send ur resume to: faculty22recruit@gmail.com

IMPACT INSTITUTIONS
Sahakara Nagar, Bangalore
WANTED
FACULTY IN CS
Candidates with first class Diploma / BE / MCA / MSc (CS) or MTech in CS / IT
Call: 94487 48297
To schedule your interviews
IMP-22320

SRI AHAM AATHMA VIDYALAYA- (ICSE/ State) Gruhalakshmi layout Nagasandra post, Peenya Dasarahalli, Bangalore-73 Requires TEACHERS for the academic year 2023-2024 (1) Computer Science- BCA/MCA/B.Sc, M.Sc B.Ed (2)Teachers to teach all the subjects for Nursery/Primary/ Middle/ High-School (3) Nursery Staff, NTT& Montessori (4) Office Staff/ Receptionist Clerk/ Data/DTP Operator with Tally, IT System Admin (5) LAB-ASSISTANT Librarian. Academic Co-Ordinator (6) P.T. Offers Attractive Salary. Transportation provided. Call 9880200172, 9663778869 Email: sriaavapplic@gmail.com

WANTED GRADUATE & Post Graduate experienced teachers for Nursery, Primary, Higher primary & High school Walk in : BGS United School Jnanavikas campus, Hesaraghatta, Bangalore - 562123 gmail - bgsunitedschool@gmail.com Contact No .: 8197024884 Interview is on 25/02/2023

B.COM FRESHER'S Residing Bangalore North Required- by Audit firm. Salary-10000/-.Mail Resume: bcmates@hotmail.com

Factory

WANTED IMMEDIATELY Tool & Die-Maker for Plastic Injection Moulding moulds having min.3yrs exp.for-a Manufacturing company-in Bommanahalli, near HSR-Layout, Bangalore-68. Salary based on experience. Send-CV: uppbangalore@gmail.com/ Contact: 9449817703

General

"RD.BUSINESS SERVICE PVT.LTD., OFFICE ASSISTANT CUM-DRIVER near Forum-Mall Koramangala, Minimum-PUC, Kannada & English Knowledge,Below 30years age limit. hariharish2627@gmail.com/ 9066689879"

Accounts & Finance

WANTED ACCOUNTANT, Apply: Secretary Good Shephered Education Society. No.143, 7th Main, 5th-Block, Jayanagar, Bangalore-560041. Mail: gssjnr@gmail.com Ph:-08026646342

WANTED COMMERCE Graduates, Accountants and CA (Inter/ Final - Articles Completed). Apply: Rangaraju and Associates,Chartered Accountants, 503 & 504, Brigade Towers, Brigade Road, Bangalore-560025. Contact: 7338454835. Email:nkrishnappa@rangaraju-associates.com, rangaraju.associates@gmail.com

WANTED FOR Data entry job in accounts department Qualification PU or Bcom-passed wilson garden siddaiah-Road near shantinagar bus-stop Call:9535218502 9845351200

Wanted

WANTED CHOREOGRAPHER/ DANCE TEACHER to train Film/ T.V. Stars. Contact: 9341288049/ 7349730607

Manager

Basava Samithi requires
MANAGER
with 3 to 5 years relevant experience to fully manage **Basava Samithi Auditorium** located at Bengaluru.
SITE ENGINEER
with B.E. or Diploma in Civil Engg. with 2 to 3 years of experience.
Contact:
98452 62373
94480 50290

Marketing & Sales

SRI BALL Bearing Centre Pvt Ltd requires Marketing Executive with Dynamic, result-oriented, relevant exp in Industrial sales. Apply sriballsales@gmail.com

Multiple Vacancy

ಬೆಂಗಳೂರು ಮೂಲದ ಪ್ರತಿಷ್ಠಿತ ರಿಯಲ್ ಎಸ್ಟೇಟ್ ಡೆವಲಪರ್ ಸಂಸ್ಥೆಗೆ ಬೇಕಾಗಿದ್ದಾರೆ
ರಿಯಲ್ ಎಸ್ಟೇಟ್ ಲೀಗಲ್ ಮ್ಯಾನೇಜರ್
– ತಾಲ್ಲೂಕು ಕಚೇರಿ, ಜಿಲ್ಲಾಧಿಕಾರಿ ಕಚೇರಿ, ಗ್ರಾಮ ಪಂಚಾಯಿತಿ, ವಕೀಲರ ಕಚೇರಿ ಮುಂತಾದ ಇಲಾಖೆಗಳಲ್ಲಿ ಜ್ಞಾನ ಮತ್ತು ಅನುಭವ
– ಬಿಲ್ಡರ್‌ಗಳು/ ಡೆವಲಪರ್‌ಗಳು, ಸ್ಟ್ಯಾಂಪ್ ವೆಂಡರ್‌ಗಳು ಅಥವಾ ವಕೀಲರೊಂದಿಗೆ ಕಾರ್ಯ ನಿರ್ವಹಿಸಿರುವ ಹಿಂದಿನ ಅನುಭವವು ಹೆಚ್ಚುವರಿ ಅರ್ಹತೆಯಾಗಲಿದೆ.
ಸರ್ವೆ ಇಂಜಿನಿಯರ್
– ಭೂಮಿ ಟಿಪ್ಪಣಿ, ಲೇಔಟ್ ಪ್ಲಾನ್‌ಗಳು ಇತ್ಯಾದಿಗಳ ಕೆಲಸ ನಿರ್ವಹಿಸಲು ಆಟೋಕ್ಯಾಡ್‌ನಲ್ಲಿ ಜ್ಞಾನ ಮತ್ತು ಅನುಭವ
– ಸರ್ವೆ ದಾಖಲೆಗಳನ್ನು ವಿಶ್ಲೇಷಿಸಲು ಸರ್ವೆ ಇಲಾಖೆಯ ಜ್ಞಾನ ಹೊಂದಿರಬೇಕು.
– ಟೋಟಲ್ ಸ್ಟೇಷನ್ ಉಪಕರಣ ಬಳಕೆಯ ಅನುಭವವು ಹೆಚ್ಚುವರಿ ಅರ್ಹತೆಯಾಗಲಿದೆ ಆದರೆ ಕಡ್ಡಾಯವಲ್ಲ.
– ಲ್ಯಾಂಡ್ ಡೆವಲಪರ್‌ಗಳು ಅಥವಾ ಸರ್ವೇಯರ್‌ಗಳೊಂದಿಗೆ ಕೆಲಸ ಮಾಡಿರುವ ಅನುಭವವು ಹೆಚ್ಚುವರಿ ಅರ್ಹತೆಯಾಗಿದೆ.
ಸಂಪರ್ಕಿಸಿ 6362386190

Situation Required

RNK AGRO chemicals requires fields sales executives any qualification fresh or 2yrs experiance location at Coastal Karnataka, Goa Kindly send resume to hr@rnkrohit.com, 9000115804

WANTED FOR A FINE DINE RESTAURANT OPERATIONS MANAGER
He/she must demonstrate a positive and ambitious mind set.
Be self motivated and with a passion for hospitality, with excellent administration skills.
Fluent communication (in English and Kannada) is a must.
He/she must also possess flawless customer service and interpersonal skills.
Previous Management Experience in Food & Beverages [Wine], Staff Training, and Operating Cost Control in a Fine Dining Restaurant is Essential.
Send Resume to Box No. JA348
C/o Deccan Herald, 75, M. G. Road, Bangalore-560 001

TRAVEL CORNER

India's Biggest Travel Show Network
TTF TRAVEL & TOURISM FAIR
LAST DAY TODAY
17 18 19 February 2023
Palace Grounds, Tripuravasini (Near Mekhri Circle), Bengaluru
INDIA'S BIGGEST TRAVEL SHOW NETWORK
MUMBAI • BENGALURU • CHENNAI • KOLKATA HYDERABAD • AHMEDABAD • DELHI
Open to all
19 Feb: 11:00 am - 7:00 pm
Meet hundreds of exhibitors from all over India and abroad.
Find the best deals in travel and packages for great destinations!
Partner Country: nepal
Host State: Karnataka One State. Many Worlds.
Partner States: ODISHA, kerala
Feature State · Featured Exhibitor
Supported by · Official Publication · Organised by
Free entry for all visitors* • 022 4555 8555 • www.ttfotm.com
(Right of admission reserved)

ಮಂಜೂರಾಗಿದ್ದ ನಿವೇಶನ ವಾಪಸು: ಹೈಕೋರ್ಟ್ ಗರಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮ್ಯಾನ್ ಹೋಲ್‌ಗೆ ಇಳಿದು ಕೆಲಸ ಮಾಡುತ್ತಿದ್ದ ಸಂದರ್ಭದಲ್ಲಿ ಮೃತಪಟ್ಟ ಪೌರಕಾರ್ಮಿಕರೊಬ್ಬರ ಪತ್ನಿಗೆ ಪರಿಹಾರ ರೂಪದಲ್ಲಿ ನೀಡಲಾಗಿದ್ದ ನಿವೇಶನವನ್ನು ವಾಪಸು ಪಡೆದ ದೊಡ್ಡಬಳ್ಳಾಪುರ ತಾಲ್ಲೂಕು ಅಡಳಿತದ ವಿರುದ್ಧ ಹೈಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಈ ಸಂಬಂಧ ನಾಗಮ್ಮ ಎಂಬುವರು ಸಲ್ಲಿಸಿದ್ದ ರಿಟ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಅಧಿಕಾರಿಗಳ ಇಚ್ಛಾಶಕ್ತಿಯ ಕೊರತೆ ಮತ್ತು ಬಡ ನಾಗರಿಕರ ಬಗೆಗಿನ ಅವರ ನಿರಾಸಕ್ತಿ ಪ್ರದರ್ಶನ ಸಲ್ಲದು' ಎಂದು ಎಚ್ಚರಿಸಿದೆ.

'ಉಳ್ಳವರು, ಅಧಿಕಾರದಲ್ಲಿ ಇರುವವರು ಬಡವರ ಹಕ್ಕುಗಳನ್ನು ಕಿತ್ತುಕೊಳ್ಳುವುದನ್ನು ನಿಲ್ಲಿಸಲು ಇದು ಸಕಾಲವಾಗಿದೆ' ಎಂದೂ ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

ಪ್ರಕರಣವೇನು?: ಪೌರಕಾರ್ಮಿಕರೊಬ್ಬರನ್ನು 2008ರಲ್ಲಿ ಯಲಹಂಕ ಬಳಿಯ ಮ್ಯಾನ್‌ಹೋಲ್‌ಗೆ ಬಲವಂತವಾಗಿ ಇಳಿಸಿ ಸ್ವಚ್ಛಗೊಳಿಸಲಾಗುತ್ತಿತ್ತು. ಆ ವೇಳೆ ಅವರು ಉಸಿರುಗಟ್ಟಿ ಮೃತಪಟ್ಟಿದ್ದರು. ಪರಿಹಾರ ರೂಪದಲ್ಲಿ ನಾಗಮ್ಮನವರಿಗೆ 2011-12ರಲ್ಲಿ ದೊಡ್ಡಬಳ್ಳಾಪುರ ತಾಲ್ಲೂಕಿನ ದೊಡ್ಡಬೆಳವಂಗಲದಲ್ಲಿ ನಿವೇಶನವೊಂದನ್ನು ಮಂಜೂರು ಮಾಡಲಾಗಿತ್ತು. ಆದರೆ, 9 ವರ್ಷದ ನಂತರ ದೊಡ್ಡಬೆಳವಂಗಲ ಗ್ರಾಮ ಪಂಚಾಯ್ತಿಯು ಇದೇ ನಿವೇಶನದಲ್ಲಿ ನಾಡಕಚೇರಿ ಸ್ಥಾಪಿಸಲು ಮುಂದಾಗಿತ್ತು. ಇದನ್ನು ಪ್ರಶ್ನಿಸಿದ ನಾಗಮ್ಮ ಹೈಕೋರ್ಟ್ ಮೆಟ್ಟಿಲೇರಿದ್ದರು.

'ಎಂಜಿನಿಯರ್ ರಕ್ಷಣೆಗೆ ಪ್ರಯತ್ನ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಕ್ರಮ ನೇಮಕಾತಿ ಜಾಲದಿಂದ ಮೋಸಕ್ಕೊಳಗಾಗಿ ಕಾಂಬೋಡಿಯಾ ದೇಶದಲ್ಲಿ ಅಪಾಯದ ಸ್ಥಿತಿಯಲ್ಲಿ ಸಿಲುಕಿರುವ ತೀರ್ಥಹಳ್ಳಿ ತಾಲ್ಲೂಕಿನ ಸಾಫ್ಟ್‌ವೇರ್ ಎಂಜಿನಿಯರ್ ಕಿರಣ್ ಶೆಟ್ಟಿ ಎಂಬುವವರನ್ನು ಸುರಕ್ಷಿತವಾಗಿ ಕರೆತರಲು ಪ್ರಯತ್ನ ನಡೆಸಲಾಗುತ್ತಿದೆ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಿಳಿಸಿದ್ದಾರೆ.

'ಹೆಚ್ಚಿನ ವೇತನ ಕೊಡಿಸುವ ಆಮಿಷ ಒಡ್ಡಿದ್ದ ನೇಮಕಾತಿ ಏಜೆನ್ಸಿಯ ಮಾತು ನಂಬಿ ಕಾಂಬೋಡಿಯಾ ದೇಶಕ್ಕೆ ಹೋಗಿದ್ದ ಕಿರಣ್ ಮೋಸ ಹೋಗಿದ್ದಾರೆ. ಅವರು ಈಗ ಅಲ್ಲಿನ ಖಾಸಗಿ ಸಂಸ್ಥೆಯೊಂದರ ವಶದಲ್ಲಿದ್ದಾರೆ. ರಕ್ಷಿಸಿ ಕರೆತರಲು ಕೇಂದ್ರ ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮತ್ತು ವಿದೇಶಾಂಗ ವ್ಯವಹಾರಗಳ ಖಾತೆ ರಾಜ್ಯ ಸಚಿವ ವಿ. ಮುರಳೀಧರನ್ ಅವರ ಕಚೇರಿ ಜತೆ ಸತತ ಸಂಪರ್ಕದಲ್ಲಿದ್ದೇನೆ' ಎಂದು ಗೃಹ ಸಚಿವರು ತಿಳಿಸಿದ್ದಾರೆ.

ತಮ್ಮ ಮಗನನ್ನು ಖಾಸಗಿ ಕಂಪನಿ ವಶದಿಂದ ಬಿಡಿಸಿ, ಸುರಕ್ಷಿತವಾಗಿ ಕರೆತರುವಂತೆ ಕಿರಣ್ ಸಹೋದರ ಪವನ್ ಶೆಟ್ಟಿ ಮನವಿ ಮಾಡಿದ್ದಾರೆ. ಈ ಕುರಿತು ಹಿರಿಯ ಪೊಲೀಸ್ ಅಧಿಕಾರಿಗಳ ಜತೆ ಚರ್ಚಿಸಲಾಗಿದೆ ಎಂದು ಅವರು ಹೇಳಿದ್ದಾರೆ.

ಭಾನುವಾರ ಪುರವಣಿ ಓದಿರಿ

ಶಿಲ್ಪ ಕಲೆ ಮ್ಯೂಸಿಯಂ

ನಗರದ ಕಸ್ತೂರಬಾ ರಸ್ತೆಯಲ್ಲಿ ಶನಿವಾರ ಆರ್ಟ್ ಆ್ಯಂಡ್ ಫೋಟೊಗ್ರಫಿ (ಎಂಎಪಿ) ಮ್ಯೂಸಿಯಂ ಉದ್ಘಾಟನೆ ಮಾಡಲಾಯಿತು. ಇಲ್ಲಿನ ಅಪರೂಪದ ಶಿಲ್ಪಕಲೆ ಹಾಗೂ ಛಾಯಾಚಿತ್ರಗಳನ್ನು ಸಾರ್ವಜನಿಕರು ಕುತೂಹಲದಿಂದ ವೀಕ್ಷಿಸಿದರು.
–ಪ್ರಜಾವಾಣಿ ಚಿತ್ರ

ಅತ್ಯಾಚಾರ ಪ್ರಕರಣ: ಸಿಬಿಐ ತನಿಖೆಗೆ ಬಿಎಸ್‌ಪಿ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅತ್ಯಾಚಾರ ಪ್ರಕರಣದಲ್ಲಿ ಜೈಲು ಸೇರಿರುವ ಚಿತ್ರದುರ್ಗದ ಮುರುಘಾ ಶರಣರ ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸಬೇಕು ಎಂದು ಬಹುಜನ ಸಮಾಜ ಪಕ್ಷದ (ಬಿಎಸ್‌ಪಿ) ಕರ್ನಾಟಕ ಉಸ್ತುವಾರಿ ಮಾರಸಂದ್ರ ಮುನಿಯಪ್ಪ ಆಗ್ರಹಿಸಿದ್ದಾರೆ.

ಇದೇ ಪ್ರಕರಣವನ್ನು ನ್ಯಾಯಾಂಗ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿ, ಡಿಸೆಂಬರ್‌ನಲ್ಲಿ ಚಿತ್ರದುರ್ಗದಲ್ಲಿ ಕಾಲ್ನಡಿಗೆ ಜಾಥಾ ನಡೆಸಲಾಗಿತ್ತು. ಅಲ್ಲಿನ ಜಿಲ್ಲಾಧಿಕಾರಿಗೂ ಮನವಿ ಸಲ್ಲಿಸಲಾಗಿತ್ತು. ಅದಾದ ಮೇಲೆ ಫೆಬ್ರುವರಿಯಲ್ಲಿ ಮುಖ್ಯಮಂತ್ರಿ ಅವರನ್ನು ಭೇಟಿ ಮಾಡಿ ಪ್ರತ್ಯೇಕ ತನಿಖಾ ಸಂಸ್ಥೆಗೆ ಪ್ರಕರಣ ವಹಿಸಲು ಆಗ್ರಹಿಸಲಾಗಿತ್ತು. ಸಿಐಡಿ ಬದಲಿಗೆ ಈ ಪ್ರಕರಣವನ್ನು ಸಿಬಿಐಗೆ ವಹಿಸಬೇಕು ಎಂದು ಮುನಿಯಪ್ಪ ಒತ್ತಾಯಿಸಿದ್ದಾರೆ.

'ಶರಣರಿಗೆ ಜಾತಿಬಲ, ಹಣದಬಲ, ರಾಜಕೀಯ ಬೆಂಬಲ ಇದೆ. ಶಿಕ್ಷೆಯಿಂದ ತಪ್ಪಿಸಿಕೊಳ್ಳುವ ಅಪಾಯವಿದೆ. ಶರಣರು ಜೈಲಿನಲ್ಲಿದ್ದರೂ ಪೊಲೀಸ್ ಅಧಿಕಾರಿಗಳ ಮೇಲೆ ಪ್ರಭಾವ ಬೀರುತ್ತಿದ್ದಾರೆ. ಸತ್ಯಾಸತ್ಯತೆ ಹೊರಬರಬೇಕಾದರೆ ಶಿವಮೂರ್ತಿ ಶರಣರನ್ನು ಬಳ್ಳಾರಿ ಅಥವಾ ಬೆಳಗಾವಿ ಜೈಲಿಗೆ ಸ್ಥಳಾಂತರ ಮಾಡಬೇಕು' ಎಂದು ಆಗ್ರಹಿಸಿದ್ದಾರೆ.

'ಒಡನಾಡಿ ಸಂಸ್ಥೆಯ ಮುಖ್ಯಸ್ಥರ ವಿರುದ್ಧ ದುರುದ್ದೇಶದಿಂದ ಹಾಕಿರುವ ಎಲ್ಲ ಸುಳ್ಳು ಪ್ರಕರಣಗಳನ್ನು ಹಿಂದಕ್ಕೆ ಪಡೆದುಕೊಳ್ಳಬೇಕು. ಸಂತ್ರಸ್ತ ವಿದ್ಯಾರ್ಥಿನಿಯರ ಕುಟುಂಬ ಹಾಗೂ ಒಡನಾಡಿ ಮುಖ್ಯಸ್ಥರಿಗೆ ಪೊಲೀಸ್ ರಕ್ಷಣೆ ಒದಗಿಸಬೇಕು. ಪ್ರಕರಣವನ್ನು ಸಿಬಿಐ ತನಿಖೆಗೆ ವಹಿಸುವ ತನಕವೂ ಹೋರಾಟ ನಡೆಸಲಾಗುವುದು' ಎಂದು ಪ್ರಕಟಣೆಯಲ್ಲಿ ಆಗ್ರಹಿಸಿದ್ದಾರೆ.

On the Occasion of Mahashivarathri Presenting
Presents Weaves ವೀವ್ಸ್
Exhibition & Sale
An exposition of handloom textiles
An opulent show of Ethnic & Traditional Silk, Cotton Handloom Products made by master 100 Weavers from all over India
Silk Saree I Suits I Dress Material I Stoles I Dupattas I Kurtas Kurties I Pure & Probable Silk I Tussar Silk I Shanthipur Silk
SINDOOR CONVENTION CENTER Full A/c
15th Cross, Sarakki, 1st Phase, J.P. Nagar Ring Road, Bengaluru
From :15th to 22nd Feb. 2023
Products on Display - Orissa : Sambhalpuri Ikkat Silk Saree, Bihar : Oragnic Tassar Silk Sarees, Suit & Stoles, Assam : Muga & Eri Silk Sarees, Karnataka : Creap Silk, Georgette Silk, Arini Silk & Printed Sarees, Tamilnadu : Kanjeevaram Silk Sarees & Designer Fancy Sarees, Andra Pradesh : Dharmavara, Uppada, Gadwal, Mangalagiri & Pochampalli Sarees, Uttar Pradesh : Mulbari Silk, Jamdani, Jamawar Silk Sarees & Chiffon Silk, Maharashtra : Designer Dress materials, Chhatisgarh : Exclusive Raw Silk Sarees, Kosa Silk, Tassar Suit & Duppatta, Madhya Pradesh : Maheswari, Chanderi Silk Sarees & Suit, West Bengal : Baluchari, Dhaka Masli, Gicha Sarees, Boutique Sarees, Kantha Sarees, Zordoshi, Jammu & Kashmir : Chinon Silk, Tady Silk Printed Sarees, Pashmina Shawls & Suit, Rajasthan : Kota Silk, Hand Block Print Dress & Sarees, Punjab : Fulkari Dress and many more...
4 Days Only
Don't miss it
Time : 10.30 am - 8.30 pm Call: 08850902824
All Credit & Debit Cards Accepted
Entry & Parking Free

fabindia
60 YEARS OF CELEBRATING INDIA ESTABLISHED 1960
CLEARANCE SALE
FLAT 50%OFF* ON SELECT MERCHANDISE
10 am - 8 pm
Venue :
Safina Plaza, No.84/85, Infantry Road, Bangalore – 560 001
fabindia.com | ALL COVID-19 PROTOCOLS WILL BE TAKEN CARE OF
*T&C Apply

MARVEL STUDIOS
ANT-MAN AND THE WASP QUANTUMANIA
IN CINEMAS NOW
IN ENGLISH, HINDI, TAMIL AND TELUGU
IN 3D AND IMAX 3D
U/A
IN IMAX AT
PVR CINEMAS {Nexus, Koramangala, 8:20, 11:10 a.m., 2:00, 4:50, 7:40, 10:30 p.m. | Vega City, Bannerghatta Road, 7:50, 10:40 a.m., 1:30, 4:20, 7:10, 10:00 p.m. | VR Bengaluru, Whitefield Road, 8:20, 11:10 a.m., 2:00, 4:50, 7:40, 10:30 p.m.} | INOX CINEMAS {Mantri Square Mall, Malleshwaram, 9:00, 11:30 a.m., 2:15, 5:00, 7:45, 10:30 p.m. | Galleria Mall, Yelahanka, 8:30, 11:10, 2:00, 4:50, 7:40, 10:30 p.m.} | CINEPOLIS CINEMAS {Shanthiniketan, 8:45, 11:30, 2:15, 5:00, 7:45, 10:30 p.m.}.
IN 4DX AT
PVR CINEMAS {Phoenix Marketcity Mall, Whitefield Road, 10:40 a.m., 1:30, 4:20, 7:10, 10:00 p.m. | Nexus, Koramangala, 10:40 a.m., 1:30, 4:20, 7:10, 10:00 p.m. | Vega City, Bannerghatta Road, 8:20, 11:10 a.m., 2:00, 4:50, 7:40, 10:30 p.m. | Orion Mall, 8:20, 11:00 a.m., 2:00, 4:50, 7:40, 10:30 p.m.} | CINEPOLIS CINEMAS {Shanthiniketan, 8:00, 10:45 a.m., 1:30, 4:15, 7:00, 9:45 p.m.}.
PVR CINEMAS | INOX CINEMAS | CINEPOLIS CINEMAS | MIRAJ | GOPALAN | INNOVATIVE | ROCKLINE | KINO CINEMAS | CINEPHILE | VICTORY | SWAGATH SHANKARNAG | LAKSHMI Taverkere | MAHADESHWARA Bansankari | PUSHPANJALI Sultanpalaya | SWAGATH POORNIMA JC Road | TULSI Marthahalli | VINAYAKA Marathalli | VAIBHAV Sanjay Nagar | VENKATESHWARA K. R. Puram | MANASA Konanakunte | BRUNDHA Hongasandra | VENKATESHWARA Konappana Agrahara | AMRUTH Lingrajapuram | MUKTA A2 Uttarahalli | SIDDESHWARA JP Nagar | SIDDALINGESHWARA JP Nagar | ANJAN Magadi Raod | HMT Jalahalli | VIJAYALAKSHMI Garudacharpalya | BHARATH CINEMAS {Shivamoga | Manipal | Kundapura | Padubidri} | CINE GALAXY Surathkal | SUCHITRA Mangalore | THIRUMALA Agara | DRC Mysore | INOX Mysore | INOX CENTRO Mysore | PVR CINEMAS FORUM Mysore | PVR CINEMAS GARUDA Mysore | TUMKURU | BELLARY | HOSPET | HASSAN & OTHERS CINEMAS.
FOR ANY CHANGES OR CANCELLATION IN SHOW TIMINGS, PLEASE CONTACT THE THEATRE.
farnaz

ಪ್ರಜಾವಾಣಿ
DH DECCAN HERALD
ಭೂಮಿಕಾ ಕ್ಲಬ್
presented by
MALABAR GOLD & DIAMOND
CELEBRATE THE BEAUTY OF LI
ಬೆಂಗಳೂರಿನ ಮಹಿಳೆಯರಿಗೊಂದು ವಿಶೇಷ ವೇದಿಕೆ
ಮದುವೆಯ ಸಿದ್ಧತೆ!
ಭಾರತೀಯ ವಿವಾಹಗಳ ವೈಭವವನ್ನು ಆಚರಿಸುವ ಚಟುವಟಿಕೆಗಳಿಂದ ತುಂಬಿದ ಮೋಡಿಮಾಡುವ ಈವೆಂಟ್ ಅನ್ನು ಭೂಮಿಕಾ ಕ್ಲಬ್ ನಿಮಗಾಗಿ ತರುತ್ತದೆ.
ಸಮಾರಂಭವನ್ನು ಚಂದನವನದ ಖ್ಯಾತ ನಟಿ ಭೂಮಿ ಶೆಟ್ಟಿ ಅವರು ಉದ್ಘಾಟಿಸಲಿದ್ದಾರೆ.
ಸೆಲೆಬ್ರಿಟಿ ಶೋ ಸ್ಟಾಪರ್
ಭವಾನಿ ಪ್ರಕಾಶ್
25 ಫೆಬ್ರವರಿ 2023, ಮಧ್ಯಾಹ್ನ 2:30 ಗಂಟೆಯಿಂದ
ಸೆಂಟ್ ಜೋಸೆಫ್ ಇನ್ಸ್ಟಿಟ್ಯೂಟ್ ಆಫ್ ಮ್ಯಾನೇಜ್ಮೆಂಟ್
28/1, ಪ್ರಿಮ್‌ರೋಸ್ ರಸ್ತೆ (ಎಂ ಜಿ ರಸ್ತೆ ಪಕ್ಕ),
ಬೆಂಗಳೂರು 25.
20 ಅದೃಷ್ಟವಂತ ಚಂದಾದಾರರಿಗೆ, ₹19000* ಮೌಲ್ಯದ AO ಸ್ಮಿತ್ ವಾಟರ್ ಪ್ಯೂರಿಫೈಯರ್ ಗೆಲ್ಲುವ ಅವಕಾಶ.
ಕಾರ್ಯಕ್ರಮದ ವೈಶಿಷ್ಟ್ಯಗಳು
ಡ್ರೀಮ್-ವೆಡ್ಡಿಂಗ್ ಯೋಜನೆಯ ಸಲಹೆಗಳು ಗೀತಾ ನಾಯ್ಡು
ಬೆಡಗಿನ ಅಲಂಕಾರಿಕ ಸಲಹೆಗಳು ಶೈನಿ ಅಲೆಗ್ಸಾಂಡರ್
ಬ್ರೈಡಲ್ ಫ್ಯಾಷನ್ ಶೋ ಸ್ಟೈಲ್ ಸ್ಟ್ರಾಡಾ
ಆನ್‌ಟ್ರೆಂಡ್ ಮೇಕಪ್ ಸೆಷನ್ ಸುಷ್ಮಾ ನಾಣಯ್ಯ
F&B Partner
ಹಟ್ಟಿಕಾಫಿ Hatti Kaapi
ಗೇಮ್ಸ್ । ಹೈಟೀ । ನೆಟ್ವರ್ಕಿಂಗ್ । ಎಲ್ಲರಿಗೂ ಗಿಫ್ಟ್ ಹ್ಯಾಂಪರ್ಸ್
ಈ ಕಾರ್ಯಕ್ರಮಕ್ಕೆ ನೋಂದಾಯಿತರಾಗಲು QR ಕೋಡ್ ಅನ್ನು ಸ್ಕ್ಯಾನ್ ಮಾಡಿ ಅಥವಾ bit.ly/BhumikaClubWeddingಗೆ ಲಾಗಿನ್ ಆಗಿ.
ಇಂದೇ ನೋಂದಾಯಿಸಿಕೊಳ್ಳಿ
*ಷರತ್ತುಗಳು ಅನ್ವಯ
ನೋಂದಾಯಿತರಿಗೆ ಮಾತ್ರ ಪ್ರವೇಶ.

ನಿಮ್ಮ ಡೀಲ್‌ಗಳು ಮತ್ತು ರಿಯಾಯಿತಿಗಳನ್ನು ಪಡೆದುಕೊಳ್ಳಿ
HOME FURNITURE EXPO
Your home needs
ಇಂದು ಕೊನೆಯ ದಿನ
ಬೆಳಗ್ಗೆ 10 ರಿಂದ 8.30 ಗಂಟೆ
ತ್ರಿಪುರವಾಸಿನಿ ಅರಮನೆ ಮೈದಾನ
ಮೇಖ್ರಿ ಸರ್ಕಲ್ ಹತ್ತಿರ, ಬೆಂಗಳೂರು
• ಲಿವಿಂಗ್ ರೂಮ್ • ಡೈನಿಂಗ್‌ಸೆಟ್ • ಬೆಡ್ ರೂಂ • ಔಟ್‌ಡೋರ್ ಫರ್ನಿಚರ್ • ವಾಲ್ ಪೈಟಿಂಗ್ಸ್ • ಲೆದರ್ ಸೋಫಾ • ಹೋಮ್ ಡೆಕೋರ್
• ಬ್ರಾಸ್ ಆರ್ಟ್‌ಕ್ರಾಫ್ಟ್ಸ್ • ಆಫೀಸ್ ಚೇರ್ • ಕಾರ್ಪೆಟ್ಸ್ & ಕುಶನ್ಸ್ • ಮ್ಯಾಟ್ರೆಸ್ಸಸ್ • ಕರ್ಟೆನ್ಸ್ • ವಾಟರ್ ಫೌಂಟೇನ್ಸ್ • ಮಸಾಜ್ ಚೇರ್ಸ್
exhibitions_iadsnevents
iadsnevents
ಎಲ್ಲಾ ಪ್ರಮುಖ ಕ್ರೆಡಿಟ್/ಡೆಬಿಟ್ ಕಾರ್ಡ್‌ಗಳನ್ನು ಸ್ವೀಕರಿಸಲಾಗುತ್ತದೆ
ಪ್ರವೇಶ ಉಚಿತ
+91 9342577908
AN EVENT BY iads & events COMPLETE BUSINESS SOLUTIONS

ಕಲಾಸಿಪಾಳ್ಯದ ಕ್ಷೇತ್ರ ಕೋಟೆ ಜಲಕಂಠೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಶಿವರಾತ್ರಿ ಅಂಗವಾಗಿ ಅಲಂಕೃತ ಜಲಕಂಠೇಶ್ವರನ ದರ್ಶನ ಪಡೆದ ಭಕ್ತರು. (1) ನಗರದ ಹಳೆ ವಿಮಾನ ನಿಲ್ದಾಣ ರಸ್ತೆಯ ಕೆಂಪ್‌ಫೋರ್ಟ್‌ನಲ್ಲಿರುವ ಈಶ್ವರ ಮೂರ್ತಿಯ ದರ್ಶನ ಪಡೆದ ಭಕ್ತರು (2) ಮಲ್ಲತ್ತಹಳ್ಳಿ ಲೇಕ್ ಬಳಿಯ ದೇವಸ್ಥಾನದಲ್ಲಿ ಶಿವನ ದರ್ಶನ ಪಡೆದ ಭಕ್ತರು (3)
–ಪ್ರಜಾವಾಣಿ ಚಿತ್ರಗಳು ಪ್ರಶಾಂತ್ ಎಚ್‌.ಜಿ./ ಕಿಶೋರ್ ಕುಮಾರ್ ಬೋಳಾರ್/ ಪುಷ್ಕರ್ ವಿ.

ದೇಗುಲಗಳಲ್ಲಿ ಶಿವನ ದರ್ಶನ ಪಡೆದ ಭಕ್ತರು: ವಿಶೇಷ ಪುಷ್ಪಲಿಂಗ ಪ್ರತಿಷ್ಠಾಪನೆ • ಪ್ರಮುಖ ದೇವಾಲಯಗಳಲ್ಲಿ ನಾಟಕ, ಸಂಗೀತ, ಕಾವ್ಯೋತ್ಸವ

ಶಿವರಾತ್ರಿ: ಶಂಕರನ ಜಪ, ರಾತ್ರಿಯಿಡೀ ಜಾಗರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶನಿವಾರ ಸಂಭ್ರಮ ಹಾಗೂ ಶ್ರದ್ಧಾಭಕ್ತಿಯಿಂದ ಮಹಾಶಿವರಾತ್ರಿ ಆಚರಿಸಲಾಯಿತು.

ಬೆಳಿಗ್ಗೆಯಿಂದಲೂ ಶಿವನ ದೇವಾಲಯಗಳತ್ತ ಭಕ್ತರ ದಂಡು ಹರಿದುಬಂದಿತ್ತು. ಭಕ್ತರು ಶಿವನಧ್ಯಾನದಲ್ಲಿ ಮುಳುಗಿದ್ದರು. ಬಗೆಬಗೆಯ ಪುಷ್ಪಗಳಿಂದ ಅಲಂಕೃತಗೊಂಡಿದ್ದ ದೇವಾಲಯಗಳು ಕಂಗೊಳಿಸಿದವು.

ವಿಶೇಷ ಪೂಜೆ, ರುದ್ರಾಭಿಷೇಕ, ಕ್ಷೀರಾಭಿಷೇಕ, ಬಿಲ್ವಪತ್ರೆ ಅರ್ಪಣೆ, ಮಹಾಮಂಗಳಾರತಿ ಸೇರಿದಂತೆ ಧಾರ್ಮಿಕ ವಿಧಿಗಳು ನೆರವೇರಿದವು. ‘ಓಂ ನಮಃ ಶಿವಾಯ’ ಎಂದು ಭಕ್ತರು ಜಪಿಸಿದರು.

ಗವಿಪುರದ ಗವಿ ಗಂಗಾಧರೇಶ್ವರ ದೇವಾಲಯ, ಮಲ್ಲೇಶ್ವರದ ಕಾಡು-ಮಲ್ಲೇಶ್ವರ ದೇವಾಲಯ, ಹಲಸೂರಿನ ಸೋಮೇಶ್ವರ ದೇವಸ್ಥಾನ, ಜರಗನಹಳ್ಳಿ ಗಂಗಾಧರೇಶ್ವರ ಸ್ವಾಮಿ ದೇವಸ್ಥಾನ, ಶ್ರೀಕಂಠೇಶ್ವರ ಸ್ವಾಮಿ ದೇವಸ್ಥಾನ, ಚಂದ್ರಚೂಡೇಶ್ವರ ದೇವಸ್ಥಾನ, ಚಾಮರಾಜಪೇಟೆಯ ಮಲೆ ಮಹದೇಶ್ವರ ದೇವಸ್ಥಾನ, ಮುರುಗೇಶ ಪಾಳ್ಯದ ಶಿವೋಹಂ ಶಿವ ದೇವಸ್ಥಾನ, ಕೋಟೆ ಜಲಕಂಠೇಶ್ವರ ದೇವಸ್ಥಾನಗಳೂ ಸೇರಿ ಪ್ರಮುಖ ದೇಗುಲಗಳಲ್ಲಿ ವಿಶೇಷ ಪೂಜೆಗಳು ನೆರವೇರಿದವು.

ಭಕ್ತರು ಶ್ರದ್ಧೆಯಿಂದ ದೇವಸ್ಥಾನಗಳಿಗೆ ಬಂದು ದರ್ಶನ ಪಡೆದು, ಪೂಜೆ ಸಲ್ಲಿಸಿದರು. ಕೆಲವು ದೇವಸ್ಥಾನಗಳಲ್ಲಿ ಅನ್ನಸಂತರ್ಪಣೆ ಆಯೋಜಿಸಲಾಗಿತ್ತು. ಸರದಿಯಲ್ಲಿ ನಿಂತ ಭಕ್ತರು ಪ್ರಸಾದ ಸೇವಿಸಿದರು. ದೇಗುಲಗಳಲ್ಲಿ ದರ್ಶನಕ್ಕೆ ನೂಕುನುಗ್ಗಲು ಸಹ ಇತ್ತು.

ಕಾಡುಮಲ್ಲೇಶ್ವರದಲ್ಲಿ ಸಡಗರ: ನಗರದ ಪುರಾತನ ಕಾಡುಮಲ್ಲೇಶ್ವರ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಸಂಭ್ರಮ ಮನೆ ಮಾಡಿದೆ. ಸೋಮವಾರದ ವರೆಗೂ ಶಿವರಾತ್ರಿ ಅಂಗವಾಗಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ಜರುಗಲಿವೆ. ಭಾನುವಾರ ಮಲ್ಲೇಶ್ವರದ ವಿವಿಧ ಭಾಗಗಳಲ್ಲಿ ಬ್ರಹ್ಮ ರಥೋತ್ಸವ ಸಂಚರಿಸಲಿದೆ ಎಂದು ದೇವಸ್ಥಾನ ಸಮಿತಿ ಪದಾಧಿಕಾರಿಗಳು ತಿಳಿಸಿದ್ದಾರೆ.

ದೇವಾಲಯದಲ್ಲಿ ಪುಷ್ಪಗಳಲ್ಲಿ 22 ಅಡಿ ಉದ್ದ, ಅಷ್ಟೇ ಅಗಲದ ವಿಶೇಷ ಪುಷ್ಪಲಿಂಗವನ್ನು ಪ್ರತಿಷ್ಠಾಪಿಸಲಾಗಿದೆ.

ಹನುಮಂತನಗರದ ಶೇಷ ಮಹಾ ಬಲಮುರಿ ಗಣಪತಿ ದೇವಸ್ಥಾನದಲ್ಲಿ ಭಕ್ತರು ಶಿವಲಿಂಗಕ್ಕೆ ಹಾಲಿನ ಅಭಿಷೇಕ ಮಾಡಿದರು

ನಾಟಕೋತ್ಸವ: ಪ್ರಮುಖ ದೇವಾಲಯಗಳಲ್ಲಿ ಬೆಳಿಗ್ಗೆಯಿಂದ ಧಾರ್ಮಿಕ ಕಾರ್ಯಗಳು ನಡೆದವು. ರಾತ್ರಿ ಜಾಗರಣೆಗೆ ವ್ಯವಸ್ಥೆ ಮಾಡಲಾಗಿತ್ತು. ಜಾಗರಣೆ ಅಂಗವಾಗಿ ನಾಟಕೋತ್ಸವ, ಸಂಗೀತೋತ್ಸವ, ಕಾವ್ಯೋತ್ಸವ ಆಯೋಜಿಸಲಾಗಿತ್ತು. ದೀಪೋತ್ಸವ ವಿಶೇಷ ಮೆರುಗು ನೀಡಿತು. ಕತ್ತಲು ಆವರಿಸುತ್ತಿದ್ದಂತೆ ಶಿವನ ಆರಾಧನೆಯ ತಾಣಗಳು ವಿದ್ಯುತ್ ದೀಪಗಳಿಂದ ಕಂಗೊಳಿಸಿದವು. ತಳಿರು–ತೋರಣಗಳು ಮಹಾಶಿವರಾತ್ರಿ ಮೆರುಗು ಹೆಚ್ಚಿಸಿದವು.

ಸರ್ಜಾಪುರ ರಸ್ತೆಯ ಅಗರದ ಡಾ.ರಾಜ್‌ಕುಮಾರ್ ಕಲಾಭಿಮಾನಿಗಳ ಸಾಂಸ್ಕೃತಿಕ ವೇದಿಕೆಯಿಂದ ಕುರುಕ್ಷೇತ್ರ ಪೌರಾಣಿಕ ನಾಟಕ ಪ್ರದರ್ಶಿಸಲಾಯಿತು. ಪ್ಯಾಲೆಸ್ ಗುಟ್ಟಹಳ್ಳಿಯಲ್ಲಿ ಶನಿದೇವರ ದೇವಸ್ಥಾನದಲ್ಲಿ ಸಂಜೆ 6.30ರಿಂದ ಭಜನಾ ಕಾರ್ಯಕ್ರಮಗಳು ನಡೆದವು. ನೂರಾರು ಮಂದಿ ಪಾಲ್ಗೊಂಡಿದ್ದರು.

ಬಸವನಗುಡಿಯ ಹನುಮಂತನಗರದ ಶೇಷ ಮಹಾಬಲಮುರಿ ಗಣಪತಿ ದೇವಸ್ಥಾನದಲ್ಲಿ ಮಹಾಶಿವರಾತ್ರಿ ಸಂಭ್ರಮವಿತ್ತು. ರುದ್ರಾಭಿಷೇಕ ಸೇರಿ ವಿವಿಧ ಧಾರ್ಮಿಕ ಕಾರ್ಯಕ್ರಮಗಳು ನಡೆದವು. ಚಿಮಣಿ ಹಿಲ್ಸ್‌ನ ಗುರುಕುಮಾರ ಪಂಚಾಕ್ಷರೇಶ್ವರ ಸಂಗೀತ ಕಲಾ ವೇದಿಕೆಯಿಂದ ಶಿವರಾತ್ರಿ ಸ್ವರ ಸಂಭ್ರಮ ನಡೆಯಿತು. ಶಂಕರನಗರದ ಬಲಮುರಿ ಸಿದ್ದಿವಿನಾಯಕ ದೇವಾಲಯದಲ್ಲಿ ಶಿವರಾತ್ರಿ ಸಂಗೀತೋತ್ಸವ ನಡೆಯಿತು.

ಗವಿಪುರದ ಗವಿ ಗಂಗಾಧರೇಶ್ವರ ಸನ್ನಿಧಿಯಲ್ಲಿ ಶಿವರಾತ್ರಿ ಅಂಗವಾಗಿ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ಶಿವನ ದರ್ಶನ ಪಡೆದರು.

ಸ್ವಾತಂತ್ರ್ಯ ಉದ್ಯಾನದಲ್ಲಿ ಜಾಗರಣೆ

ಸ್ವಾತಂತ್ರ್ಯ ಉದ್ಯಾನದಲ್ಲಿ ಬೇಡಿಕೆ ಈಡೇರಿಕೆಗೆ ಆಗ್ರಹಿಸಿ ಹಲವು ಸಂಘಟನೆಗಳು ಪ್ರತಿಭಟನೆ ನಡೆಸುತ್ತಿವೆ. ಅದೇ ಸ್ಥಳದಲ್ಲಿ ಪ್ರತಿಭಟನಕಾರರು ಜಾಗರಣೆ ನಡೆಸಿದರು.

ಪಂಚಮಸಾಲಿ ಸಮುದಾಯಕ್ಕೆ ‘2ಎ’ ಮೀಸಲಾತಿ ಕಲ್ಪಿಸಬೇಕು ಎಂದು ಆಗ್ರಹಿಸಿ, ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಅವರು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸುತ್ತಿದ್ದಾರೆ. ಶನಿವಾರ ರಾತ್ರಿ ಆ ಸ್ಥಳದಲ್ಲಿ ಹೋರಾಟಗಾರರೊಂದಿಗೆ ಜಾಗರಣೆ ನಡೆಸಿದರು. ಸಾಮೂಹಿಕ ಇಷ್ಟಲಿಂಗ ಪೂಜೆಯ ಮೂಲಕ ಶಿವರಾತ್ರಿ ಆಚರಿಸಿದರು.

ಪ್ರತ್ಯೇಕವಾಗಿ ಪ್ರತಿಭಟನೆ ನಡೆಸುತ್ತಿರುವ ಆರೋಗ್ಯ ಇಲಾಖೆ ಸಿಬ್ಬಂದಿ ಹಾಗೂ ಅರಣ್ಯ ದಿನಗೂಲಿ ನೌಕರರು ಅದೇ ಸ್ಥಳದಲ್ಲಿ ಶಿವರಾತ್ರಿ ಆಚರಿಸಿದರು.

ರಾತ್ರಿಯಿಡೀ ‘ಕಾವ್ಯ ಶಿವರಾತ್ರಿ’

ಎನ್‌.ಆರ್‌.ಕಾಲೊನಿಯ ಸಿ.ಅಶ್ವತ್ಥ್ ಕಲಾಭವನದಲ್ಲಿ ಜನಸಂಸ್ಕೃತಿ ಪ್ರತಿಷ್ಠಾನ ಕಾವ್ಯ ಮಂಡಲದಿಂದ ಕಾವ್ಯ ಶಿವರಾತ್ರಿ ಆಯೋಜಿಸಲಾಗಿತ್ತು. ಅಹೋರಾತ್ರಿ ಕಾವ್ಯ ಗಾಯನ ನಡೆಯಿತು. ಅದಾದ ಮೇಲೆ ಮಂಟೇಸ್ವಾಮಿ ಮತ್ತು ಮಲೆಮಹದೇಶ್ವರ ಮಹಾ ಕಾವ್ಯಗಳ ಗಾಯನ ನಡೆಯಿತು.

ಪ್ರತಿಭಟನಾ ಸ್ಥಳದಲ್ಲಿ ಈಶ್ವರನ ಧ್ಯಾನ

ಕೆಂಗೇರಿ: ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಳಾಂತರಕ್ಕೆ ಆಗ್ರಹಿಸಿ ಬನಶಂಕರಿ 6ನೇ ಹಂತದ ನಿವಾಸಿಗಳು ಘಟಕದ ಎದುರು ಜಾಗರಣೆ ನಡೆಸಿದರು. ಆದರೆ, ಬಿಬಿಎಂಪಿ ಅಧಿಕಾರಿಗಳು ಧರಣಿ ಸ್ಥಳದತ್ತ ಸುಳಿಯಲಿಲ್ಲ.

ಧರಣಿ 6ನೇ ದಿನಕ್ಕೆ ಕಾಲಿಟ್ಟಿದೆ. ಈ ನಡುವೆ ಸ್ಥಳೀಯ ಸಚಿವ ಎಸ್‌.ಟಿ.ಸೋಮಶೇಖರ್ ಗುರುವಾರ ಭೇಟಿ ನೀಡಿದರೂ ಸ್ಥಳೀಯ ನಿವಾಸಿಗಳ ಮನವೊಲಿಸಲು ಸಾಧ್ಯವಾಗಿರಲಿಲ್ಲ. ಭರವಸೆಯಿಂದ ಬೇಸತ್ತ ನಾಗರಿಕರು ಹಬ್ಬದ ದಿನದಂದೂ ಪ್ರತಿಭಟನೆ ನಡೆಸಿದರು. 200ಕ್ಕೂ ಹೆಚ್ಚಿನ ನಿವಾಸಿಗಳು ಘಟಕದ ಎದುರು ಮುಂದೆ ಪೆಂಡಾಲ್ ಅಳವಡಿಸಿ ಅಲ್ಲಿಯೇ ಜಾಗರಣೆ ಮಾಡಿದರು. ಶಿವನ ಮೂರ್ತಿಗೆ ಪೂಜೆ ಸಲ್ಲಿಸಿದರು.

ಸಮಸ್ಯೆಯ ತೀವ್ರತೆ ಅಧಿಕಾರಿಗಳಿಗೆ ಅರ್ಥವಾಗುತ್ತಿಲ್ಲ. ಸಚಿವರು ಸಮಸ್ಯೆ ಬಗೆಹರಿಸುವ ಭರವಸೆ ನೀಡಿದ್ದಾರೆ.

ಇತ್ಯರ್ಥವಾಗದಿದ್ದರೆ ಹೋರಾಟದ ದಿಕ್ಕನ್ನು ಬದಲಾಯಿಸಲಾಗುವುದು ಎಂದು ನಿವಾಸಿಗಳ ಸಂಘದ ಅಧ್ಯಕ್ಷ ಮಹೇಶ್ ಅವರು ಎಚ್ಚರಿಸಿದರು.

ತ್ಯಾಜ್ಯ ಸಂಸ್ಕರಣಾ ಘಟಕ ಸ್ಥಳಾಂತರಕ್ಕೆ ಆಗ್ರಹಿಸಿ ಬನಶಂಕರಿ 6ನೇ ಹಂತದ ನಿವಾಸಿಗಳು ಘಟಕದ ಎದುರು ಶನಿವಾರ ಜಾಗರಣೆ ನಡೆಸಿದರು

ಶಿವ ದೇವಾಲಯಗಳಲ್ಲಿ ವಿಶೇಷ ಪೂಜೆ

ದಾಬಸ್‌ಪೇಟೆ: ಶಿವರಾತ್ರಿ ಹಬ್ಬದ ಅಂಗವಾಗಿ ಸೋಂಪುರ ಹೋಬಳಿಯ ಶಿವಗಂಗೆಯ ಗಂಗಾಧರೇಶ್ವರ, ದೇವರಹೊಸಹಳ್ಳಿಯ ವೀರಭದ್ರ ಸ್ವಾಮಿ ಭದ್ರಕಾಳಮ್ಮ, ಹಳೆ ನಿಜಗಲ್ಲು ಉದ್ಯಾನ ವೀರ ಭದ್ರ ಸ್ವಾಮಿ, ದಾಬಸ್‌ಪೇಟೆ ಪಟ್ಟಣದ ಸೋಮೇಶ್ವರ, ಕರಿಮಣ್ಣೆಯ ಈಶ್ವರ, ಹೆಗ್ಗುಂದ ವೀರಭದ್ರ ದೇವಾಲಯದಲ್ಲಿ ಪೂಜೆ ನೆರವೇರಿಸಲಾಯಿತು.

ಭಕ್ತರು ಉಪವಾಸದ ಮೂಲಕ ಭಕ್ತಿಯಿಂದ ದೇವರ ದರ್ಶನ ಮಾಡಿದರು. ದೇವಾಲಯಗಳಲ್ಲಿ ಭಜನೆ ನಡೆಸುವುದು ಜೊತೆಗೆ ಭಕ್ತರಿಗೆ ಹಣ್ಣಿನ ರಸಾಯನ, ನೀರು ಮಜ್ಜಿಗೆ, ಪಾನಕ ಹಂಚಿದರು.

ಹಬ್ಬದ ದಿನವಾದ ಶನಿವಾರ ಬೆಳಿಗ್ಗೆ 5ರಿಂದಲೇ ದೇವಾಲಯದ ಬಾಗಿಲು ತೆರದು ಭಕ್ತರ ದರ್ಶನಕ್ಕೆ ವ್ಯವಸ್ಥೆ ಮಾಡಲಾಗಿತ್ತು. ಸುಮಾರು ಐದು ಸಾವಿರಕ್ಕೂ ಹೆಚ್ಚು ಭಕ್ತರ ಭೇಟಿ ನೀಡಿ ದೇವರ ದರ್ಶನ ಪಡೆದಿದ್ದಾರೆ.

ಭಕ್ತರು ಉಪವಾಸದ ಮೂಲಕ ಶಿವಗಂಗೆಯ ಬೆಟ್ಟದ ಮೇಲಿನ ಗಂಗಾಧರೇಶ್ವರಸ್ವಾಮಿ ಮತ್ತು ಸ್ವರ್ಣಾಂಬ ದೇವಾಲಯದಲ್ಲಿ ಪೂಜೆ ಸಲ್ಲಿಸಿ ತಮ್ಮ ಇಷ್ಟಾರ್ಥ ನೆರವೇರಿಸುವಂತೆ ಪ್ರಾರ್ಥನೆ ಸಲ್ಲಿಸಿದರು.

ಸೋಂಪುರದ ಸೋಮೇಶ್ವರಸ್ವಾಮಿ ಮೂರ್ತಿಗೆ ಅಲಂಕಾರ ಮಾಡಲಾಗಿತ್ತು

ಗಾಳಿಯಲ್ಲಿ ಗುಂಡು ಹಾರಿಸಿದ ಸ್ವಾಮೀಜಿ

ಹುಮನಾಬಾದ್ (ಬೀದರ್): ಪಟ್ಟಣದ ಹೊರವಲಯದಲ್ಲಿ ಬಸವತೀರ್ಥ ಮಠದ ಜಾತ್ರಾ ಮಹೋತ್ಸವದ ವೇಳೆ ಜಮೀನಿನ ಉಳುಮೆಗಾಗಿ ಎರಡು ಟ್ರ್ಯಾಕ್ಟರ್‌ಗಳಿಗೆ ಪೂಜೆ ಸಲ್ಲಿಸಿದ ಬಳಿಕ ಸಿದ್ದಲಿಂಗ ಸ್ವಾಮೀಜಿ ಶುಕ್ರವಾರ ಗಾಳಿಯಲ್ಲಿ ಗುಂಡು ಹಾರಿಸಿದರು.

‘ಮಠಕ್ಕೆ ಸೇರಿದ ಹೊಲಗಳ ಬದಿ ಇರುವ ಜಮೀನುಗಳನ್ನು ತಮ್ಮ ಅಧೀನಕ್ಕೆ ಪಡೆಯಲು ಸ್ವಾಮೀಜಿ ಈ ರೀತಿ ಮಾಡಿದ್ದಾರೆ. ಈ ಬಗ್ಗೆ ಪೊಲೀಸರಿಗೆ ದೂರು ನೀಡುತ್ತೇವೆ’ ಎಂದು ಕಲ್ಲೂರ್ ತಾಂಡಾದ ಸೋಮಲು ನಾಯಕ ತಿಳಿಸಿದ್ದಾರೆ. ಘಟನೆ ಕುರಿತು ಪ್ರತಿಕ್ರಿಯೆಗೆ ಸ್ವಾಮೀಜಿ ಅವರನ್ನು ಸಂಪರ್ಕಿಸಲು ಪ್ರಯತ್ನಿಸಲಾಯಿತು. ಆದರೆ, ಅವರು ದೂರವಾಣಿ ಕರೆ ಸ್ವೀಕರಿಸಲಿಲ್ಲ.

ಗಡೇನಹಳ್ಳಿ ಎತ್ತುಗಳಿಗೆ ₹3.25 ಲಕ್ಷ

ಪ್ರಜಾವಾಣಿ ವಾರ್ತೆ

ಪೀಣ್ಯ ದಾಸರಹಳ್ಳಿ: ಹೆಸರಘಟ್ಟದ ತೋಟಗೆರೆ ಬಸವಣ್ಣ ದೇವಸ್ಥಾನ ಬಳಿಯ ಹಿತಚಿಂತನ ಚಾರಿಟಬಲ್ ಟ್ರಸ್ಟ್ ವತಿಯಿಂದ 5ನೇ ವರ್ಷದ ದನಗಳ ಜಾತ್ರೆ ನಡೆಯಿತು.

ಬ್ಯಾತ, ಕೊಡಿಹಳ್ಳಿ, ಕಗ್ಗಲಿಪಾಳ್ಯ, ಹುಸ್ಕೂರು, ಹೆಸರಘಟ್ಟ, ಗಡೇನಹಳ್ಳಿ, ರಾಮದೇವನಹಳ್ಳಿ, ಕನ್ನಮಂಗಲ, ಮದ್ದೂರು, ಅಗ್ರಹಾರ ಮುಂತಾದ ಹಳ್ಳಿಗಳಿಂದ ದನಗಳನ್ನು ಕರೆತಂದಿದ್ದರು. ಚರ್ಮಗಂಟು ರೋಗದಿಂದಾಗಿ ಜಾತ್ರೆಗೆ ಬಂದ ಎತ್ತುಗಳ ಸಂಖ್ಯೆ ಕಡಿಮೆ ಇತ್ತು.

ಜಾತ್ರೆಯಲ್ಲಿ ಗಡೇನಹಳ್ಳಿಯಿಂದ ಬಂದಿದ್ದ ಎತ್ತುಗಳು ₹ 3.25 ಲಕ್ಷಕ್ಕೆ ಮಾರಾಟವಾದವು. ಅವುಗಳ ಮಾಲೀಕ ಸುರೇಶ್ ಅವರು 100 ಗ್ರಾಂ ಬೆಳ್ಳಿಯ ಬಹುಮಾನ ಪಡೆದುಕೊಂಡರು.

ಹುಸ್ಕೂರಿನ ರೈತ ಗಿರಿಗೌಡ ತಂದಿದ್ದ ಎತ್ತುಗಳು ₹ 3 ಲಕ್ಷಕ್ಕೆ ಮಾರಾಟವಾದವು. 2ನೇ ಬಹುಮಾನದ ರೂಪದಲ್ಲಿ ಗಿರಿಗೌಡ 50 ಗ್ರಾಂ ಬೆಳ್ಳಿ ಪಡೆದುಕೊಂಡರು.

3ನೇ ಬಹುಮಾನ ಬೀರಯ್ಯನ ಪಾಳ್ಯದ ಕೇಶವಮೂರ್ತಿ ಅವರಿಗೆ ಸಂದಿತು. ಅವರ ಎತ್ತುಗಳು ₹ 2.80 ಲಕ್ಷಕ್ಕೆ ಮಾರಾಟವಾದವು. ಅವರು 30 ಗ್ರಾಂ ಬೆಳ್ಳಿ ಪಡೆದರು. ಯಲಹಂಕ ಶಾಸಕ ಎಸ್‌.ಆರ್‌. ವಿಶ್ವನಾಥ್ ಮಾತನಾಡಿ, ‘ಹುತಾತ್ಮರಾದ ಯೋಧರ ಕುಟುಂಬದವರಿಗೆ ಹಾಗೂ ವಿವಿಧ ಕ್ಷೇತ್ರದಲ್ಲಿ ಸಾಧನೆ ಮಾಡಿದ ಗಣ್ಯರಿಗೆ ಜಾತ್ರೆ ಅಂಗವಾಗಿ ಸನ್ಮಾನ ಮಾಡುತ್ತಿರುವುದು ಶ್ಲಾಘನೀಯ’ ಎಂದರು.

ಶಿವರಾತ್ರಿ ಹಬ್ಬದ ಪ್ರಯುಕ್ತ ಸೂರ್ಯ ಲಕ್ಷ ದೀಪೋತ್ಸವ ಮತ್ತು ಮಹಿಷಾಸುರ ಮರ್ದಿನಿ ಎಂಬ ಯಕ್ಷಗಾನ ಮತ್ತು ಸಾಂಸ್ಕೃತಿಕ ರಸ ಸಂಜೆ ಆಯೋಜಿಸಲಾಗಿತ್ತು.

ಹಿತಚಿಂತನ ಚಾರಿಟಬಲ್ ಟ್ರಸ್ಟ್ ವತಿಯಿಂದ 5ನೇ ವರ್ಷದ ದನಗಳ ಜಾತ್ರೆ ನಡೆಯಿತು

ಸ್ವಾತಂತ್ರ್ಯ ಉದ್ಯಾನದಲ್ಲಿ ಮುಂದುವರಿದ ಪ್ರತಿಭಟನೆ

ನೌಕರರಿಂದ ಸೇವಾ ಭದ್ರತೆಗೆ ಒತ್ತಾಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರೀಯ ಆರೋಗ್ಯ ಅಭಿಯಾನದ (ಎನ್‌.ಎಚ್‌.ಎಂ) ಗುತ್ತಿಗೆ ನೌಕರರ ಕೆಲಸ ಕಾಯಂಗೊಳಿಸುವಂತೆ ಆಗ್ರಹಿಸಿ, ರಾಜ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ಒಳಗುತ್ತಿಗೆ ನೌಕರರ ಸಂಘದ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಮಹಾಶಿವರಾತ್ರಿ ಹಬ್ಬದಿನವಾದ ಶನಿವಾರವೂ ಪ್ರತಿಭಟನೆ ಮುಂದುವರಿಯಿತು.

ಎನ್‌.ಎಚ್‌.ಎಂ ಅಡಿಯಲ್ಲಿ ರಾಜ್ಯದಲ್ಲಿ 20 ವರ್ಷಗಳಿಂದ 30 ಸಾವಿರಕ್ಕೂ ಹೆಚ್ಚು ಸಿಬ್ಬಂದಿ ಕೆಲಸ ಮಾಡುತ್ತಿದ್ದಾರೆ. ಮಣಿಪುರ ಸರ್ಕಾರವು ಎನ್‌ಎಚ್‌ಎಂ ಅಡಿ ಕೆಲಸ ಮಾಡುತ್ತಿರುವ ಎಲ್ಲ ವೃಂದದ ಸಿಬ್ಬಂದಿಯನ್ನು ಕಾಯಂಗೊಳಿಸಿದೆ.

ಒಡಿಶಾ, ರಾಜಸ್ಥಾನ, ಪಂಜಾಬ್, ಹಿಮಾಚಲ ಪ್ರದೇಶದಲ್ಲಿ ಒಳಗುತ್ತಿಗೆ ನೌಕರರ ಸೇವೆ ಕಾಯಂಗೊಳಿಸುವ ಪ್ರಕ್ರಿಯೆ ಆರಂಭವಾಗಿದೆ. ಆದರೆ, ಕರ್ನಾಟಕದಲ್ಲಿ ಸೇವೆ ಕಾಯಂಗೆ ಹಿಂದೇಟು ಹಾಕಲಾಗುತ್ತಿದೆ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು.

‘ಕೋವಿಡ್–19 ಸಾಂಕ್ರಾಮಿಕ ಕಾಯಿಲೆ ವೇಳೆ ಅತ್ಯಂತ ಯಶಸ್ವಿಯಾಗಿ ಕೆಲಸ ನಿರ್ವಹಿಸಿದ್ದೇವೆ. ರೋಗಿಗಳ ಆರೈಕೆ, ಲಸಿಕೆ ಕಾರ್ಯಕ್ರಮವನ್ನು ಯಶಸ್ವಿ ಮಾಡಿ ಸರ್ಕಾರಕ್ಕೂ ಗೌರವ ತಂದುಕೊಟ್ಟಿದ್ದೇವೆ. ಆದರೆ, ಸರ್ಕಾರ ಮಾತ್ರ ನಮ್ಮನ್ನು ಕಡೆಗಣಿಸಿದೆ’ ಎಂದು ಅಳಲು ತೋಡಿಕೊಂಡರು. ಪ್ರತಿಭಟನೆ ಆರಂಭಿಸಿದ ಬಳಿಕ ಫೆ.10ರಂದು ಮುಖ್ಯಮಂತ್ರಿ ಅವರೇ ನಮ್ಮನ್ನು ಕರೆಸಿ ತಕ್ಷಣದಿಂದ ಜಾರಿಗೆ ಬರುವಂತೆ ಶೇ 15ರಷ್ಟು ವೇತನ ಹೆಚ್ಚಳ, 60 ವರ್ಷದ ವರೆಗೆ ಸೇವಾ ಭದ್ರತೆ, ಶ್ರೀನಿವಾಸ್ ಆಚಾರಿ ವರದಿ ಜಾರಿಗೆ ತರುವುದಾಗಿ ಭರವಸೆ ನೀಡಿದ್ದರು. ಆ ಭರವಸೆಗಳು ಆದೇಶ ರೂಪದಲ್ಲಿ ಜಾರಿಗೆ ತರಬೇಕೆಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ಮುಂದುವರಿಸಿದ್ದೇವು. ಸರ್ಕಾರ ಇನ್ನೂ ಭರವಸೆ ಈಡೇರಿಕೆಯ ಪ್ರಕ್ರಿಯೆ ಆರಂಭಿಸಿಲ್ಲ ಎಂದರು.

ಪ್ರತಿಭಟನೆಯಲ್ಲಿ ಸಂಘದ ಅಧ್ಯಕ್ಷ ಎಸ್‌.ಕುಮಾರ್, ಉಪಾಧ್ಯಕ್ಷ ಡಾ.ಸಜೀವ ಬಾವಚಿ ಹಾಜರಿದ್ದರು.

‘ಲವ್ ಜಿಹಾದ್: ನಳಿನ್ ಮಾತಿಗೆ ಬದ್ಧರಾದರೇ ಸಿ.ಎಂ ಬೊಮ್ಮಾಯಿ?’

ಪ್ರಜಾವಾಣಿ ವಾರ್ತೆ

ಮಂಗಳೂರು: ‘ಅಭಿವೃದ್ಧಿ ವಿಷಯ ಮಾತನಾಡಬೇಡಿ, ಲವ್ ಜಿಹಾದ್ ತಡೆಯುವುದಕ್ಕಷ್ಟೇ ಗಮನ ಕೊಡಿ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರು ಕಾರ್ಯಕರ್ತರಿಗೆ ನೀಡಿರುವ ಕರೆಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅಕ್ಷರಶಃ ಪಾಲಿಸಿದಂತಿದೆ. ಇದರಿಂದಾಗಿಯೇ ಅವರು ಬಜೆಟ್‌ನಲ್ಲಿ ದಕ್ಷಿಣ ಕನ್ನಡ ಜಿಲ್ಲೆಯ ಅಭಿವೃದ್ಧಿಗೆ ಏನೇನೂ ಕೊಡುಗೆ ಕೊಟ್ಟಿಲ್ಲ’ ಎಂದು ವಿಧಾನಸಭೆ ವಿರೋಧ ಪಕ್ಷದ ಉಪ ನಾಯಕ ಯು.ಟಿ. ಖಾದರ್ ದೂರಿದರು.

ಶನಿವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ 12 ಮಂದಿ ಬಿಜೆಪಿ ಶಾಸಕರು ಇದ್ದರೂ ಅನುದಾನವನ್ನು ಬಿಡುಗಡೆ ಮಾಡಿಸಲು ಸಾಧ್ಯವಾಗಲಿಲ್ಲ ಎಂದರು.

ಕಡಲ್ಕೊರೆತ ತಡೆಯಲು ಮತ್ತು ಮೀನುಗಾರರ ಅಭಿವೃದ್ಧಿಗಾಗಿ ಬಜೆಟ್ ನಲ್ಲಿ ಯಾವುದೇ ಪ್ರಸ್ತಾವ ಇಲ್ಲ. ದಕ್ಕೆಯಲ್ಲಿ ಮೀನು ಗಾರಿಕಾ ಬೋಟ್‌ಗಳು ಹೂತು ಹೋಗುವುದನ್ನು ತಡೆಯುವುದಕ್ಕಾಗಿ ಹೂಳು ತೆಗೆಯುವ ಭರವಸೆಯೂ ಹುಸಿಯಾಗಿದೆ.

ನಗರದಲ್ಲಿ ಇಂದು

‘ಬೀದಿ ಹಬ್ಬ’: ಆಯೋಜನೆ: ಚೇಂಜ್ ಮೇಕರ್ಸ್, ಸ್ಮಿತಂ, ಸ್ಥಳ: ಸಾರಕ್ಕಿ ಜಂಕ್ಷನ್, ಬೆಳಿಗ್ಗೆ 6.30ರಿಂದ

ಜಲಕಂಠೇಶ್ವರ ಸ್ವಾಮಿ ದೇಗುಲದಲ್ಲಿ ಶಿವರಾತ್ರಿ: ಬೆಳಿಗ್ಗೆ 7ರಿಂದ ಸ್ವಾಮಿಗೆ ಪುಷ್ಪಾಲಂಕಾರ, ಬಂಡಿ ಉತ್ಸವ, ಅತಿಥಿಗಳು: ಉದಯ್ ಬಿ. ಗರುಡಾಚಾರ್, ಆರ್‌.ವಿ. ದೇವರಾಜ್, ಪುರುಷೋತ್ತಮ್, ಎಂ. ನಾರಾಯಣ ಸ್ವಾಮಿ, ಸ್ಥಳ: ಶಿವಸಾನ್ನಿಧ್ಯ ಕ್ಷೇತ್ರ ಕೋಟೆ ಜಲಕಂಠೇಶ್ವರ ಸ್ವಾಮಿ ದೇವಸ್ಥಾನ, ಕಲಾಸಿಪಾಳ್ಯ

ತಾಳಮದ್ದಲೆ ‘ವೀರಸಂನ್ಯಾಸಿ’: ಪ್ರಸ್ತುತಿ: ದಿವಾಕರ ಹೆಗಡೆ, ಭಾಗವತರು: ಪ್ರಸನ್ನ ಹೆಗಡೆ, ಮಾಗೋಡು, ಮದ್ದಲೆ: ಚಿನ್ಮಯ, ಭರತನಾಟ್ಯ ಪ್ರಸ್ತುತಿ: ಕವನಾ ಹೆಗಡೆ, ಆಯೋಜನೆ ಮತ್ತು ಸ್ಥಳ: ಕ.ವಿ.ಪ್ರ.ನಿ.ನಿ ಲೆಕ್ಕಾಧಿಕಾರಿಗಳ ಸಂಘದ ಬೆಳ್ಳಿ ಭವನ, ಆನಂದರಾವ್ ವೃತ್ತ, ಬೆಳಿಗ್ಗೆ 10ರಿಂದ

ಡಾ. ಎಚ್‌.ಎಸ್‌. ಅನುಪಮಾ ಅವರ ‘ಬೆಳಗಿನೊಳಗು ಮಹಾದೇವಿಯಕ್ಕ’ ಕಾದಂಬರಿ ಬಿಡುಗಡೆ: ಓ.ಎಲ್‌. ನಾಗಭೂಷಣ ಸ್ವಾಮಿ, ಅಧ್ಯಕ್ಷತೆ: ಸಬಿಹಾ ಭೂಮಿಗೌಡ, ಪುಸ್ತಕದ ಕುರಿತು: ಬಸವರಾಜ ಸಾದರ, ಆಯೋಜನೆ: ಲಡಾಯಿ ಪ್ರಕಾಶನ, ಪೀಪಲ್ ಮೀಡಿಯಾ, ಸ್ಥಳ: ಬಾಪು ಸಭಾಂಗಣ, ಗಾಂಧಿಭವನ, ಬೆಳಿಗ್ಗೆ 10.30

ನಮ್ಮ ಜಿಕೆಜಿ ನೆನಪು ಮತ್ತು ಶ್ಯಾಮಲಾ ಗುರುಪ್ರಸಾದ್ ಅವರ ‘ನಾನಿನ್ನೂ ಅರಿಯಬೇಕಿದ್ದ ನನ್ನಪ್ಪ’ ಪುಸ್ತಕ ಬಿಡುಗಡೆ: ಅತಿಥಿಗಳು: ಎಸ್‌.ಜಿ. ಸಿದ್ಧರಾಮಯ್ಯ, ಲಕ್ಷ್ಮೀಶ ತೋಳ್ಪಾಡಿ, ಮಾವಳ್ಳಿ ಶಂಕರ್, ವಿನಯಾ, ಕೆ.ವೈ. ನಾರಾಯಣಸ್ವಾಮಿ, ವಿಠಲ ಮಲೆಕುಡಿಯ, ಶ್ಯಾಮಲಾ ಗುರುಪ್ರಸಾದ್, ಅಕ್ಷತಾ ಹುಂಚದಕಟ್ಟೆ, ಆಯೋಜನೆ: ಜಿ.ಕೆ. ಗೋವಿಂದರಾವ್ ಬಳಗ, ಅಹರ್ನಿಶಿ ಪ್ರಕಾಶನ, ಸ್ಥಳ: ಎಚ್‌.ಎನ್‌. ಮಲ್ಟಿಮೀಡಿಯಾ ಸಭಾಂಗಣ, ನ್ಯಾಷನಲ್ ಕಾಲೇಜು, ಬಸವನಗುಡಿ, ಬೆಳಿಗ್ಗೆ 10.30

‘ಎಸ್‌.ಎಲ್‌. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ ಪ್ರಶಸ್ತಿ’ ಪ್ರದಾನ: ಅಧ್ಯಕ್ಷತೆ: ಎಸ್‌. ಆರ್‌. ರಾಮಸ್ವಾಮಿ, ಪ್ರಾಸ್ತಾವಿಕ ನುಡಿ: ಶತಾವಧಾನಿ ಆರ್‌. ಗಣೇಶ್, ಪ್ರಶಸ್ತಿ ಪುರಸ್ಕೃತರು: ಎಲ್‌.ವಿ. ಶಾಂತಕುಮಾರಿ, ಅತಿಥಿಗಳು: ಸಹನಾ ವಿಜಯಕುಮಾರ್, ಬಿ.ಎನ್‌. ಶಶಿಕಿರಣ್, ಉಪಸ್ಥಿತಿ: ಎಸ್‌. ಎಲ್‌. ಭೈರಪ್ಪ, ಆಯೋಜನೆ: ಎಸ್‌. ಎಲ್‌. ಭೈರಪ್ಪ ಸಾಹಿತ್ಯ ಪ್ರತಿಷ್ಠಾನ, ಸ್ಥಳ: ಗೋಖಲೆ ಸಾರ್ವಜನಿಕ ವಿಚಾರ ಸಂಸ್ಥೆ, ಎನ್‌.ಆರ್‌. ಕಾಲೊನಿ, ಬೆಳಿಗ್ಗೆ 10.30

ಸಾಮೂಹಿಕ ಕುಲದೇವರ ಪೂಜೆ, ಮಾರ್ಕಂಡೇಶ್ವರ ರಥೋತ್ಸವ: ಅಧ್ಯಕ್ಷತೆ: ಎನ್‌. ಜಗದೀಶ್, ಆಶೀರ್ವಚನ: ಪ್ರಭುಲಿಂಗ ಸ್ವಾಮೀಜಿ, ಅತಿಥಿಗಳು: ಕೆ.ಸಿ. ಕೊಂಡಯ್ಯ, ಪಿ.ಸಿ. ಮೋಹನ್, ಎಂ.ಡಿ. ಲಕ್ಷ್ಮೀನಾರಾಯಣ, ತೇಜಸ್ವಿಸೂರ್ಯ, ಕೆ. ನಾರಾಯಣ, ಕೇಶವ ಪ್ರಸಾದ್, ದಿನೇಶ್ ಗುಂಡೂರಾವ್, ಸುನೀಲ್ ವೆಂಕಟೇಶ್, ಆಯೋಜನೆ ಕರ್ನಾಟಕ ಪದ್ಮಶಾಲಿ ಸಂಘ, ಸ್ಥಳ: ಮಾರ್ಕಂಡೇಶ್ವರಸ್ವಾಮಿ ದೇಗುಲ ಪ್ರಾರ್ಥನಾ ಮಂದಿರ, ಮಾರ್ಕಂಡೇಶ್ವರ ನಗರ, ಬಿನ್ನಿಮಿಲ್ ರಸ್ತೆ, ಬೆಳಿಗ್ಗೆ 8ರಿಂದ

ಜೋಗಿ ಅವರ ‘ಹಸ್ತಿನಾವತಿ’ ಕಾದಂಬರಿ ಮತ್ತು ‘ವೈಯೆನ್ಕೆ ಅನ್‌ಲಿಮಿಟೆಡ್’ ಪುಸ್ತಕಗಳ ಬಿಡುಗಡೆ: ಅನಂತನಾಗ್, ಅತಿಥಿಗಳು: ಟಿ.ಎನ್‌. ಸೀತಾರಾಮ್, ರವಿ ಹೆಗಡೆ, ಹಸ್ತಿನಾವತಿ ಮುಖಪುಟ ಬಹುಮಾನ ವಿತರಣೆ: ಬಿ.ಆರ್‌. ಲಕ್ಷ್ಮಣರಾವ್, ಕಥಾಭಾಗ ನಿರೂಪಣೆ: ಜಿ.ಕೆ. ನಂದಕುಮಾರ್, ಪ್ರತಿಭಾ, ಆಯೋಜನೆ: ಅಂಕಿತ ಪುಸ್ತಕ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಬೆಳಿಗ್ಗೆ 11

75 ಕಾರ್ಯಕ್ರಮಗಳ ಉದ್ಘಾಟನೆ: ಕೆ.ಎಸ್‌. ಮೋಹನ್ ಕುಮಾರ್ ಮತ್ತು ಮುರಳೀಧರ ಸಂಗೀತ ವಿದ್ಯಾಲಯದ ವಿದ್ಯಾರ್ಥಿಗಳಿಂದ ಸಂಗೀತ ಕಾರ್ಯಕ್ರಮ, ಆಯೋಜನೆ ಮತ್ತು ಸ್ಥಳ: ಮುರಳೀಧರ ಸಂಗೀತ ನೃತ್ಯ ಮಹಾವಿದ್ಯಾಲಯ, ಉಲ್ಲಾಳ ಉಪನಗರ, ಮಧ್ಯಾಹ್ನ 3ರಿಂದ

‘ನಾನು ಮಾಸ್ಟರ್ ಹಿರಣ್ಣಯ್ಯ ನನ್ನ ಕಥೆ ಹೇಳ್ತೀನಿ’ ಪುಸ್ತಕ ಬಿಡುಗಡೆ: ಅತಿಥಿಗಳು: ಎಚ್‌.ಎಸ್‌. ವೆಂಕಟೇಶಮೂರ್ತಿ, ಕೆ. ಸುಚೇಂದ್ರ ಪ್ರಸಾದ್, ನರಸಿಂಹಮೂರ್ತಿ, ವೈ.ವಿ. ಗುಂಡೂರಾವ್, ಬಾಬು ಹಿರಣ್ಣಯ್ಯ, ಆಯೋಜನೆ: ವಿಕ್ರಂ ಪ್ರಕಾಶನ, ಭಾರತೀಯ ಆಯುರ್ವೇದ ಪ್ರತಿಷ್ಠಾನ, ಸ್ವಸ್ಥ ಸಮೃದ್ಧ ಭಾರತ, ಸ್ಥಳ: ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಪಿ. ವಾಡಿಯಾ ರಸ್ತೆ, ಬಸವನಗುಡಿ, ಸಂಜೆ 4

ಫೆಬ್ರುವರಿ ತಿಂಗಳ ಕಾರ್ಯಕ್ರಮ: ‘ಪಾ.ವೆಂ. ಎಂಬ ಚಿಂತಾಮಣಿ’, ಉಪನ್ಯಾಸಕರು: ಎಸ್‌. ದಿವಾಕರ್, ಉಪಸ್ಥಿತಿ: ಲಕ್ಷ್ಮೀಶ ತೋಳ್ಪಾಡಿ, ಆಯೋಜನೆ: ಶಿವರಾಮ ಕಾರಂತ ವೇದಿಕೆ, ತರಳಬಾಳು ಕೇಂದ್ರ, ಪಾ.ವೆಂ. ಆಚಾರ್ಯ ಟ್ರಸ್ಟ್, ಸ್ಥಳ: ವಿನಾಯಕ ದೇವಸ್ಥಾನದ ಸಭಾಂಗಣ, ಆರ್‌.ಟಿ. ನಗರ, ಸಂಜೆ 4

‘ಬಾರೋ ಸಾಧನಕೇರಿಗೆ’ ಬೇಂದ್ರೆ ಕಾವ್ಯಗಾಯನ ಸಂಜೆ: ಅತಿಥಿಗಳು: ಎಚ್‌. ಎಸ್‌. ವೆಂಕಟೇಶಮೂರ್ತಿ, ಬಿ.ಆರ್‌. ಲಕ್ಷ್ಮಣರಾವ್, ಜಯಂತ್ ಕಾಯ್ಕಿಣಿ, ಜೋಗಿ, ಗಾಯನ: ರಾಮಚಂದ್ರ ಹಡಪದ, ಸ್ಪರ್ಶ ಆರ್‌.ಕೆ., ಆಯೋಜನೆ: ಪರಮಪದ, ಸ್ಥಳ: ಅಶ್ವತ್ಥ ಕಲಾಭವನ, ಎನ್‌.ಆರ್‌. ಕಾಲೊನಿ, ಸಂಜೆ 5.30

ನೃತ್ಯ ಬಾಂಧವ್ಯ: ನೃತ್ಯ: ಪ್ರೀತಿ ಕುಮಾರ್, ನೀತಿ ಕುಮಾರ್, ಅತಿಥಿಗಳು: ಎನ್‌. ಸಂತೋಷ್ ಹೆಗ್ಡೆ, ಪ್ರತಿಮಾ ಮೂರ್ತಿ, ವೈಜಯಂತಿ ಕಾಶಿ, ಕೃಪಾ ಫಡ್ಕೆ, ರತೀಶ್ ಬಾಬು, ಆಯೋಜನೆ: ನೃತ್ಯಾಂಜಲಿ, ಸ್ಥಳ: ಎ.ಡಿ.ಎ ರಂಗಮಂದಿರ, ಸಂಜೆ 5

‘ರಂಗಸಿರಿ’ ನೃತ್ಯೋತ್ಸವ: ಅತಿಥಿಗಳು: ಇಂದಿರಾ ಕಡಂಬಿ, ಬೆಳವಾಡಿ ಮಂಜುನಾಥ್, ‘ದೇವಕಿ ಕಂದ ಕಂದ ಮುಕುಂದ’ ನೃತ್ಯ: ವಿದ್ಯಾಲಕ್ಷ್ಮಿ ಎಂ.ಎಸ್‌., ಗೌರಿ ಮನೋಹರಿ ಎಚ್‌., ಆಯೋಜನೆ: ರಂಗರಾಮ್ ಆರ್ಟ್ ಫೌಂಡೇಷನ್, ಸ್ಥಳ: ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 6ರಿಂದ

ನಿರ್ವಾಣಿ ಭಗವತಿ ಮತ್ತು ಅಣ್ಣಮ್ಮ ದೇವಿಯ ಮಹಾ ಶಿವರಾತ್ರಿ ಉತ್ಸವ: ದೇವಿಗೆ ವಿಶೇಷ ಅಲಂಕಾರ, ಮಹಾ ಮಂಗಳಾರತಿ ಮತ್ತು ಪ್ರಸಾದ ವಿನಿಯೋಗ, ಸ್ಥಳ: ನಿರ್ವಾಣಿ ಭಗವತಿ ಪ್ರಾರ್ಥನಾ ಮಂದಿರ, ಜಯನಗರ, ಸಂಜೆ 6.30

ಪ್ರವಚನ ವಾಹಿನಿ ಕಾರ್ಯಕ್ರಮ: ‘ವಿಷ್ಣು ಸಹಸ್ರನಾಮ ಸಾಮೂಹಿಕ ಪಾರಾಯಣ, ಪ್ರವಚನ’ ಕುರಿತು ಉಪನ್ಯಾಸ: ಅರಳು ಮಲ್ಲಿಗೆ ಪಾರ್ಥಸಾರಥಿ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿಯ ಸಾಂಸ್ಕೃತಿಕ ಮಂದಿರ, ಜಯನಗರ, ಸಂಜೆ 6.30

ರಸ್ತೆ ಮಧ್ಯೆ ಬೈಕ್ ನಿಲ್ಲಿಸಿದ್ದನ್ನು ಪ್ರಶ್ನಿಸಿದ್ದಕ್ಕೆ ಹಲ್ಲೆ: ಪ್ರಕರಣ ದಾಖಲು

ಕುತ್ತಿಗೆ ಹಿಸುಕಿ ಕಾನ್‌ಸ್ಟೆಬಲ್ ಕೊಲೆ ಯತ್ನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಸ್ತೆ ಮಧ್ಯೆ ಬೈಕ್ ನಿಲ್ಲಿಸಿದ್ದನ್ನು ಪ್ರಶ್ನಿಸಿದ್ದಕ್ಕಾಗಿ ಕಾನ್‌ಸ್ಟೆಬಲ್ ಎಂ.ವಿ. ಸೋಮಶೇಖರ್ ಎಂಬುವವರ ಮೇಲೆ ಹಲ್ಲೆ ಮಾಡಿ ಕೊಲೆಗೆ ಯತ್ನಿಸಲಾಗಿದ್ದು, ಈ ಸಂಬಂಧ ಕಾಟನ್‌ಪೇಟೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಫೆ. 15ರಂದು ರಾತ್ರಿ ನಡೆದಿರುವ ಘಟನೆ ಸಂಬಂಧ ಸೋಮಶೇಖರ್ ದೂರು ನೀಡಿದ್ದಾರೆ. ಬೈಕ್ ಸವಾರ ಸೇರಿ ಏಳು ಮಂದಿ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದ್ದು, ಅವರು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಪೊಲೀಸರು ಹೇಳಿದರು.

'ಸಿಟಿ ಮಾರ್ಕೆಟ್ ಠಾಣೆ ಕಾನ್‌ಸ್ಟೆಬಲ್ ಸೋಮಶೇಖರ್, ಕೆಲಸ ಮುಗಿಸಿ ಮಫ್ತಿಯಲ್ಲಿ ಕಾರಿನಲ್ಲಿ ಮನೆಯತ್ತ ಹೊರಟಿದ್ದರು. ಮಾರ್ಗಮಧ್ಯೆ ರಾಯಲ್ ಎನ್‌ಫೀಲ್ಡ್ ಬೈಕ್ ನಿಲ್ಲಿಸಿದ್ದ ಸವಾರ, ಅದರ ಮೇಲೆ ಕುಳಿತು ಮೊಬೈಲ್‌ನಲ್ಲಿ ಮಾತನಾಡುತ್ತಿದ್ದ. ವಾಹನಗಳ ಸಂಚಾರಕ್ಕೆ ತೊಂದರೆಯಾಗಿ, ದಟ್ಟಣೆ ಉಂಟಾಗಿತ್ತು' ಎಂದರು.

'ಸವಾರನಿಗೆ ಬುದ್ಧಿವಾದ ಹೇಳಿದ್ದ ಕಾನ್‌ಸ್ಟೆಬಲ್, 'ಬೈಕ್‌ನಿಂದ ಇಳಿದು ನಿಲ್ಲಿಸು' ಎಂದಿದ್ದರು. ಕೋಪಗೊಂಡ ಆರೋಪಿ, ಅವಾಚ್ಯ ಶಬ್ದಗಳಿಂದ ನಿಂದಿಸಿದ್ದ. ಸವಾರನ ಸ್ನೇಹಿತರು ಸ್ಥಳಕ್ಕೆ ಬಂದಿದ್ದರು.'

'ಸವಾರ ಹಾಗೂ ಆತನ ಸ್ನೇಹಿತರು ಸೇರಿಕೊಂಡು ಕಾನ್‌ಸ್ಟೆಬಲ್ ಮೇಲೆ ಹಲ್ಲೆ ಮಾಡಿದ್ದರು. 'ನಮ್ಮ ಏರಿಯಾಗೆ ಬಂದು ನಮಗೇ ಬುದ್ಧಿ ಹೇಳುತ್ತೀಯಾ?' ಎಂದು ಉದ್ಧಟತನದಿಂದ ವರ್ತಿಸಿದ್ದರು. 'ಸಾಯುವವರೆಗೂ ಹೊಡೆಯಿರಿ' ಎಂದು ಮತ್ತೊಬ್ಬ ಹೇಳಿದ್ದ. ಬಳಿಕ, ಕುತ್ತಿಗೆ ಹಿಸುಕಿ ಕೊಲೆ ಮಾಡಲು ಯತ್ನಿಸಿದ್ದ. ಪ್ರತಿರೋಧವೊಡ್ಡಿದ ಕಾನ್‌ಸ್ಟೆಬಲ್, ಆತನ ಕೈ ಬಿಡಿಸಿಕೊಂಡಿದ್ದರು' ಎಂದರು.

'ಕೆಳಗೆ ಬಿದ್ದ ಕಾನ್‌ಸ್ಟೆಬಲ್ ಅವರಿಗೆ ಆರೋಪಿಗಳು ಕಾಲಿನಿಂದ ಒದ್ದಿದ್ದರು. 'ನಾನು ಪೊಲೀಸ್' ಎಂದು ಹೇಳಿದರೂ ಆರೋಪಿಗಳು ಹಲ್ಲೆ ಮಾಡಿ ಪರಾರಿಯಾಗಿದ್ದರು. ಗಾಯಗೊಂಡಿದ್ದ ಕಾನ್‌ಸ್ಟೆಬಲ್ ಕಿಮ್ಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ' ಎಂದು ಪೊಲೀಸರು ತಿಳಿಸಿದರು.

'ಕೊಲೆಗೆ ಯತ್ನಿಸಿರುವ ಆರೋಪಿಗಳು, ಕಾರಿನಲ್ಲಿದ್ದ ₹ 8,000 ನಗದು ಕದ್ದೊಯ್ದಿದ್ದಾರೆ' ಎಂದು ಕಾನ್‌ಸ್ಟೆಬಲ್ ದೂರಿನಲ್ಲಿ ತಿಳಿಸಿದ್ದಾರೆ. ಆರೋಪಿಗಳು ಯಾರು ಎಂಬುದನ್ನು ಪತ್ತೆ ಮಾಡಲಾಗುತ್ತಿದೆ' ಎಂದು ಹೇಳಿದರು.

ಠಾಣೆಯಲ್ಲಿರದ ಸಿಬ್ಬಂದಿ: 45 ನಿಮಿಷ ಕಾದ ದೂರುದಾರ

ಬೆಂಗಳೂರು: ಮಹಾಲಕ್ಷ್ಮಿ ಲೇಔಟ್ ಠಾಣೆಯಲ್ಲಿ ಸಿಬ್ಬಂದಿ ಇಲ್ಲದಿದ್ದರಿಂದ ದೂರುದಾರರೊಬ್ಬರು 45 ನಿಮಿಷ ಕಾದು ಮನೆಗೆ ವಾಪಸು ಹೋಗಿದ್ದು, ಪೊಲೀಸರ ಈ ವರ್ತನೆಗೆ ಸಾಮಾಜಿಕ ಮಾಧ್ಯಮಗಳಲ್ಲಿ ಆಕ್ರೋಶ ವ್ಯಕ್ತವಾಗಿದೆ.

ಸ್ಥಳೀಯ ನಿವಾಸಿ ಮಂಜುನಾಥ್ ಎಂಬುವವರು ತಮ್ಮ ಸ್ಕೂಟರ್ ಕಳವಾದ ಬಗ್ಗೆ ದೂರು ನೀಡಲು ಶುಕ್ರವಾರ ಠಾಣೆಗೆ ಹೋಗಿದ್ದರು. ಠಾಣೆಯಲ್ಲಿ ಯಾವುದೇ ಸಿಬ್ಬಂದಿ ಇರಲಿಲ್ಲ. ಎಲ್ಲ ಕುರ್ಚಿಗಳು ಖಾಲಿ ಇದ್ದವು. ಠಾಣಾಧಿಕಾರಿ ಸಹ ಹೊರಗಡೆ ಹೋಗಿದ್ದರು.

ಸಿಬ್ಬಂದಿ ಬರಬಹುದೆಂದು ಕಾದು ತಾಳ್ಮೆ ಕಳೆದುಕೊಂಡ ಮಂಜುನಾಥ್, ದೂರು ನೀಡದೆಯೇ ಬೇಸರದಿಂದ ಹತಾಶೆಯಿಂದ ಮನೆಗೆ ವಾಪಸು ತೆರಳಿದ್ದರು. ತಮಗಾದ ಅನುಭವವನ್ನು ಟ್ವೀಟ್ ಮಾಡಿರುವ ಮಂಜುನಾಥ್, 'ದೇವರೇ ನಮ್ಮನ್ನು ರಕ್ಷಿಸು' ಎಂದಿದ್ದಾರೆ.

ಮಂಜುನಾಥ್ ಟ್ವೀಟ್ ಹಂಚಿಕೊಂಡಿರುವ ಹಲವರು, ಪೊಲೀಸರ ವರ್ತನೆಯನ್ನು ಖಂಡಿಸಿದ್ದಾರೆ. 'ಠಾಣೆಯಲ್ಲಿ ಸಿಬ್ಬಂದಿ ಇಲ್ಲದಿದ್ದರೆ, ಜನರ ದೂರು ಪಡೆಯುವವರು ಯಾರು. ಹಿರಿಯ ಅಧಿಕಾರಿಗಳು ಏನು ಮಾಡುತ್ತಿದ್ದಾರೆ. ತಪ್ಪಿತಸ್ಥ ಸಿಬ್ಬಂದಿ ವಿರುದ್ಧ ಕ್ರಮ ಕೈಗೊಳ್ಳಿ' ಎಂದು ಒತ್ತಾಯಿಸಿದ್ದಾರೆ.

ಠಾಣೆಗೆ ಕರೆಸಿ ದೂರು ಸ್ವೀಕಾರ: ಟ್ವೀಟ್ ಎಲ್ಲೆಡೆ ಹರಿದಾಡುತ್ತಿದ್ದಂತೆ ಎಚ್ಚೆತ್ತ ಹಿರಿಯ ಅಧಿಕಾರಿಗಳು, ಮಂಜುನಾಥ್ ಅವರನ್ನು ಶನಿವಾರ ಠಾಣೆಗೆ ಕರೆಸಿ ದೂರು ಸ್ವೀಕರಿಸಿದ್ದಾರೆ. ಎಫ್‌ಐಆರ್ ಸಹ ದಾಖಲಿಸಿಕೊಂಡಿದ್ದಾರೆ. 'ಇದಾದ ಬಳಿಕ ಮಂಜುನಾಥ್, ತಮ್ಮ ಟ್ವೀಟ್ ಅಳಿಸಿ ಹಾಕಿದ್ದಾರೆ.

ಕಂದಾಯ ನಿರೀಕ್ಷಕ ಹುದ್ದೆ ಆಮಿಷ: ₹ 47 ಲಕ್ಷ ವಂಚನೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ಕಂದಾಯ ನಿರೀಕ್ಷಕ ಹಾಗೂ ಅಗ್ನಿಶಾಮಕ ಅಧಿಕಾರಿ ಕೆಲಸ ಕೊಡಿಸುವ ಆಮಿಷವೊಡ್ಡಿ ₹ 47 ಲಕ್ಷ ಪಡೆದು ವಂಚಿಸಲಾಗಿದ್ದು, ಈ ಸಂಬಂಧ ಹಲಸೂರು ಗೇಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಕಂಗೇರಿಯ ಹರೀಶ್ ಎಂಬುವವರು ವಂಚನೆ ಬಗ್ಗೆ ದೂರು ನೀಡಿದ್ದಾರೆ. ಆರೋಪಿ ಎಚ್.ಆರ್. ವೀರಭದ್ರ ಅಲಿಯಾಸ್ ಭದ್ರ ಹಾಗೂ ತೇಜಸ್ ಎಂಬುವವರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ' ಎಂದು ಪೊಲೀಸರು ಹೇಳಿದರು.

'ಹರೀಶ್ ಅವರಿಗೆ ಸ್ನೇಹಿತರೊಬ್ಬರ ಮೂಲಕ ಆರೋಪಿ ವೀರಭದ್ರ ಪರಿಚಯವಾಗಿತ್ತು. ಪರಿಚಯಸ್ಥ ತೇಜಸ್ ಮೂಲಕ ಸರ್ಕಾರಿ ಕೆಲಸ ಕೊಡಿಸುವುದಾಗಿ ವೀರಭದ್ರ ಹೇಳಿದ್ದ. ಹರೀಶ್ ಅವರ ಸಂಬಂಧಿಕರೊಬ್ಬರು ಕೆಲಸಕ್ಕಾಗಿ ಹುಡುಕಾಟ ನಡೆಸುತ್ತಿದ್ದರು. ಅವರಿಬ್ಬರಿಗೆ ಕೆಲಸ ಕೊಡಿಸುವುದಾಗಿ ವೀರಭದ್ರ ಜೊತೆ ಹರೀಶ್ ಮಾತುಕತೆ ನಡೆಸಿದ್ದರು.'

'ಅಗ್ನಿಶಾಮಕ ಮತ್ತು ತುರ್ತು ಸೇವೆಗಳ ಇಲಾಖೆಯಲ್ಲಿ ಅಗ್ನಿಶಾಮಕ ದಳದ ಅಧಿಕಾರಿ ಹಾಗೂ ಪೌರಾಡಳಿತ ನಿರ್ದೇಶನಾಲಯದಲ್ಲಿ ಕಂದಾಯ ನಿರೀಕ್ಷಕ (ಆರ್.ಐ) ಹುದ್ದೆಗಳು ಖಾಲಿ ಇರುವುದಾಗಿ ವೀರಭದ್ರ ಹೇಳಿದ್ದ. ಹಿರಿಯ ಅಧಿಕಾರಿಗಳು ಹಾಗೂ ರಾಜಕೀಯ ಪ್ರಭಾವಿಗಳ ಪರಿಚಯವಿದ್ದು, ಹಣ ನೀಡಿದರೆ ಸರ್ಕಾರಿ ಕೆಲಸ ಕೊಡಿಸುವುದಾಗಿ ಭರವಸೆ ನೀಡಿದ್ದ' ಎಂದು ಪೊಲೀಸರು ತಿಳಿಸಿದರು.

'ಆರೋಪಿ ಮಾತು ನಂಬಿದ್ದ ಹರೀಶ್, ಹಂತ ಹಂತವಾಗಿ ₹ 47 ಲಕ್ಷ ನೀಡಿದ್ದರು. ಹಣ ಪಡೆದಿದ್ದ ಆರೋಪಿ, ಯಾವುದೇ ಕೆಲಸ ಕೊಡಿಸಿರಲಿಲ್ಲ. ಹಣವನ್ನೂ ವಾಪಸು ನೀಡಿರಲಿಲ್ಲ. ವಂಚನೆಗೊಳಗಾದ ಗೊತ್ತಾಗುತ್ತಿದ್ದಂತೆ ಹರೀಶ್ ಠಾಣೆಗೆ ದೂರು ನೀಡಿದ್ದಾರೆ. ಆರೋಪಿಗಳ ವಿಚಾರಣೆ ನಡೆಸಬೇಕಿದೆ' ಎಂದು ಹೇಳಿದರು.

ಪಿಎಸ್‌ಐ ಹಗರಣ: ಸಹಾಯಕ ಪ್ರಾಧ್ಯಾಪಕ ಬಂಧನ

ಪ್ರಜಾವಾಣಿ ವಾರ್ತೆ

ಕಲಬುರಗಿ: ಪಿಎಸ್‌ಐ ನೇಮಕಾತಿ ಅಕ್ರಮಕ್ಕೆ ಸಂಬಂಧಿಸಿದಂತೆ ಅಭ್ಯರ್ಥಿಯೊಬ್ಬರಿಗೆ ಬ್ಲೂಟೂತ್ ಉಪಕರಣ ಪೂರೈಸಿದ ಆರೋಪದ ಮೇಲೆ ಸಿಐಡಿ ಪೊಲೀಸರು ನಗರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ (ಸ್ವಾಯತ್ತ) ಸಹಾಯಕ ಪ್ರಾಧ್ಯಾಪಕ ವಿಜಯಕುಮಾರ್ ಹೆಬ್ಬಾಳ್ಕರ್ ಎಂಬುವವರನ್ನು ಶನಿವಾರ ಬಂಧಿಸಿದ್ದಾರೆ.

ವಿಜಯಕುಮಾರ್

'ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಆಯ್ಕೆಪಟ್ಟಿಯಲ್ಲಿ ಸ್ಥಾನ ಪಡೆದಿದ್ದ ಸುಪ್ರಿಯಾ ಎಂಬುವರಿಗೆ ಬ್ಲೂಟೂತ್ ಪೂರೈಸಲು ಪ್ರಕರಣದ ಪ್ರಮುಖ ಆರೋಪಿ ಆರ್.ಡಿ. ಪಾಟೀಲ ಸೂಚಿಸಿದ್ದ. ಅದರಂತೆ ಕಳೆದ ವರ್ಷದ ಅಕ್ಟೋಬರ್ 2ರಂದು ರಾತ್ರಿ ಸರ್ಕಾರಿ ಕಾಲೇಜಿನ ಪರೀಕ್ಷಾ ಕೇಂದ್ರದಲ್ಲಿ ಆರೋಪಿಯ ಬೆಂಚಿನ ಕೆಳಗಡೆ ಬ್ಲೂಟೂತ್ ಇರಿಸಿದ್ದ. ಇದಕ್ಕಾಗಿ ಪಾಟೀಲ ಕಡೆಯಿಂದ ಹಣ ಪಡೆದಿದ್ದ ಎಂದು ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ' ಎಂದು ಮೂಲಗಳು ತಿಳಿಸಿವೆ.

ಆರೋಪಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು, ನ್ಯಾಯಾಂಗ ಬಂಧನಕ್ಕೆ ಒಪ್ಪಿಸಲಾಗಿದೆ.

ಚಿಂಚೋಳಿ ತಾಲ್ಲೂಕಿನ ನಾವದಗಿ ಗ್ರಾಮದ ವಿಜಯಕುಮಾರ್ ಗುಲಬರ್ಗಾ ವಿಶ್ವವಿದ್ಯಾಲಯದಲ್ಲಿ ಅರ್ಥಶಾಸ್ತ್ರ ವಿಭಾಗದಲ್ಲಿ ಸ್ನಾತಕೋತ್ತರ ಪದವಿ ಪಡೆದ ಬಳಿಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಸಹಾಯಕ ಪ್ರಾಧ್ಯಾಪಕರಾಗಿ ನೇಮಕಗೊಂಡಿದ್ದರು.

ಐಪಿಎಸ್ ಅಧಿಕಾರಿ ಪೌಲ್ ಜಾಮೀನು ಅರ್ಜಿ ಮತ್ತೆ ತಿರಸ್ಕೃತ

ಬೆಂಗಳೂರು: ಪೊಲೀಸ್ ಸಬ್ ಇನ್‌ಸ್ಪೆಕ್ಟರ್ (ಪಿಎಸ್‌ಐ) ನೇಮಕಾತಿ ಹಗರಣದ ಆರೋಪಿ, ಐಪಿಎಸ್ ಅಧಿಕಾರಿ ಅಮ್ರಿತ್ ಪೌಲ್ ಅವರ ಜಾಮೀನು ಅರ್ಜಿಯನ್ನು ಬೆಂಗಳೂರಿನ ವಿಶೇಷ ನ್ಯಾಯಾಲಯ ಮತ್ತೊಮ್ಮೆ ವಜಾಗೊಳಿಸಿದೆ.

ಈ ಕುರಿತಂತೆ ಪೌಲ್ ಸಲ್ಲಿಸಿದ್ದ ಅರ್ಜಿಯನ್ನು ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಕೆ. ಲಕ್ಷ್ಮೀನಾರಾಯಣ ಭಟ್ ವಿಚಾರಣೆ ನಡೆಸಿ ಅರ್ಜಿ ವಜಾಗೊಳಿಸಿ ಆದೇಶಿಸಿದ್ದಾರೆ. ಈ ಪ್ರಕರಣದ 35ನೇ ಆರೋಪಿಯಾದ ಪೌಲ್ ಅವರ ಜಾಮೀನು ಅರ್ಜಿಯನ್ನು ನ್ಯಾಯಾಲಯ 4ನೇ ಬಾರಿಗೆ ತಿರಸ್ಕರಿಸಿದಂತಾಗಿದೆ.

ಆರೋಗ್ಯ ವಿಚಾರಿಸಿದ ಶೋಭಾ ಕರಂದ್ಲಾಜೆ, ಹಾಲಪ್ಪ ಆಚಾರ್

ಆ್ಯಸಿಡ್ ದಾಳಿ: ವಿದ್ಯಾರ್ಥಿನಿ ಎಡಗಣ್ಣಿಗೆ ಹಾನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆ್ಯಸಿಡ್ ದಾಳಿಗೆ ಒಳಗಾಗಿದ್ದ ಕನಕಪುರದ ವಿದ್ಯಾರ್ಥಿನಿಗೆ ಇಲ್ಲಿನ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದ್ದು, ಎಡ ಕಣ್ಣಿಗೆ ಹಾನಿಯಾಗಿರುವುದು ವೈದ್ಯಕೀಯ ತಪಾಸಣೆಗಳಿಂದ ದೃಢಪಟ್ಟಿದೆ.

ವಿದ್ಯಾರ್ಥಿನಿಯ ಮೇಲೆ ಶುಕ್ರವಾರ ಆ್ಯಸಿಡ್ ದಾಳಿ ನಡೆದಿತ್ತು. ಕನಕಪುರದ ಸರ್ಕಾರಿ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗೆ ವಿಕ್ಟೋರಿಯಾ ಆಸ್ಪತ್ರೆಗೆ ಕರೆತರಲಾಗಿತ್ತು. ಕಣ್ಣಿಗೆ ಸಂಬಂಧಿಸಿದಂತೆ ಮಿಂಟೊ ವೈದ್ಯರು ಚಿಕಿತ್ಸೆ ಒದಗಿಸುತ್ತಿದ್ದಾರೆ. ಸುಟ್ಟ ಗಾಯಕ್ಕೆ ವಿಕ್ಟೋರಿಯಾದಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ. ಕೇಂದ್ರ ಕೃಷಿ ಇಲಾಖೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವ ಹಾಲಪ್ಪ ಆಚಾರ್ ಅವರು ಆಸ್ಪತ್ರೆಗೆ ಭೇಟಿ ನೀಡಿ, ಆರೋಗ್ಯ ವಿಚಾರಿಸಿದರು.

'ವಿದ್ಯಾರ್ಥಿನಿಯ ಕೆನ್ನೆಯ ಚರ್ಮ ಸುಟ್ಟಿದ್ದು, ಎಡಗಣ್ಣಿನ ದೃಷ್ಟಿ ಭಾಗಶಃ ಕ್ಷೀಣವಾಗಿದೆ. ಬಲ ಕಣ್ಣಿಗೆ ಯಾವುದೇ ರೀತಿಯ ಹಾನಿಯಾಗಿಲ್ಲ' ಎಂದು ಮಿಂಟೊ ಕಣ್ಣಿನ ಆಸ್ಪತ್ರೆ ನಿರ್ದೇಶಕಿ ಡಾ. ಸುಜಾತಾ ರಾಥೋಡ್ ತಿಳಿಸಿದ್ದಾರೆ.

'ತಪ್ಪಿತಸ್ಥರಿಗೆ ಸರ್ಕಾರವು ಕಾನೂನು ಅಡಿ ಕಠಿಣ ಶಿಕ್ಷೆ ನೀಡುತ್ತದೆ. ಹುಚ್ಚು ಕ್ರಿಮಿಗಳು ದುಷ್ಕೃತ್ಯ ಎಸಗಿದ್ದು, ಇಂತಹ ಘಟನೆಗಳು ಮರುಕಳಿಸಬಾರದು. ವಿದ್ಯಾರ್ಥಿನಿ ಚಿಕಿತ್ಸೆಗೆ ಸ್ಪಂದಿಸುತ್ತಿದ್ದು, ಕಾರ್ನಿಯಾವನ್ನು ತಜ್ಞರು ಪರಿಶೀಲಿಸಲಿದ್ದಾರೆ. ಚಿಕಿತ್ಸೆಗೆ ಸರ್ಕಾರ ಸೂಕ್ತ ರೀತಿಯಲ್ಲಿ ನೆರವಾಗಲಿದೆ' ಎಂದು ಸಚಿವ ಹಾಲಪ್ಪ ಆಚಾರ್ ಅವರು ಹೇಳಿದರು.

ಆರೋಪಿ ಸುಮಂತ್ ಬಂಧನ

ರಾಮನಗರ: ಕನಕಪುರದಲ್ಲಿ ಶುಕ್ರವಾರ ವಿದ್ಯಾರ್ಥಿನಿ ಮೇಲೆ ಆ್ಯಸಿಡ್ ಎರಚಿದ್ದ ಆರೋಪಿಯನ್ನು ಪೊಲೀಸರು ಶನಿವಾರ ಬಂಧಿಸಿದ್ದಾರೆ.

ಬಂಧಿತ ಆರೋಪಿ ಸುಮಂತ್ (22) ವಿರುದ್ಧ ಐಪಿಸಿ ಸೆಕ್ಷನ್ 326 ಹಾಗೂ ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಾಗಿದೆ.

ತನ್ನನ್ನು ಪ್ರೀತಿಸುವಂತೆ ಈತ 17 ವರ್ಷದ ವಿದ್ಯಾರ್ಥಿನಿಗೆ ನಿರಂತರ ಕಿರುಕುಳ ನೀಡುತ್ತಿದ್ದ. ಶುಕ್ರವಾರ ಸಂಜೆ ವಿದ್ಯಾರ್ಥಿನಿಯು ಕೆರೆ ಏರಿ ಬಳಿ ವಾಯುವಿಹಾರಕ್ಕೆ ಬಂದಾಗ ಅಡ್ಡಗಟ್ಟಿ ಕಿರುಕುಳ ನೀಡಿದ್ದ. ಆಕೆ ವಿರೋಧಿಸಿದಾಗ ಆ್ಯಸಿಡ್ ಎರಚಿ ಪರಾರಿ ಆಗಿದ್ದ ಎಂದು ಪೊಲೀಸರು ಮಾಹಿತಿ ನೀಡಿದರು.

ಕ್ರಮಕ್ಕೆ ಒತ್ತಾಯ: ಆರೋಪಿ ವಿರುದ್ಧ ಕಠಿಣ ಕ್ರಮ ಜರುಗಿಸುವಂತೆ ಅಖಿಲ ಭಾರತ ಮಹಿಳಾ ಸಾಂಸ್ಕೃತಿಕ ಸಂಘಟನೆಯ ರಾಮನಗರ ಜಿಲ್ಲಾ ಸಮಿತಿಯು ಒತ್ತಾಯಿಸಿದೆ.

ಪ್ರೀತಿಸುವಂತೆ ಹೆಣ್ಣುಮಕ್ಕಳ ಹಿಂದೆ ಬಿದ್ದು ಪೀಡಿಸುವುದು ಸಾಮಾಜಿಕ ಪಿಡುಗಾಗಿದೆ. ಸರ್ಕಾರವು ಈ ಘಟನೆಯನ್ನು ಗಂಭೀರವಾಗಿ ಪರಿಗಣಿಸಬೇಕು. ಸಂತ್ರಸ್ಥೆ ಗುಣಮುಖವಾಗಲು ಅಗತ್ಯವಾದ ವೈದ್ಯಕೀಯ ವೆಚ್ಚವನ್ನು ಸರ್ಕಾರವೇ ಭರಿಸಬೇಕು. ಎಲ್ಲ ತರನಾದ ಅಶ್ಲೀಲತೆಗಳ ಪ್ರಚಾರದ ವಿರುದ್ಧ ಉಗ್ರ ಕ್ರಮ ಕೈಗೊಳ್ಳಬೇಕು ಎಂದು ಸಂಘಟನೆಯ ಎ. ಶಾಂತ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

'ಗಲ್ಲು ಶಿಕ್ಷೆ ವಿಧಿಸಬೇಕು'

'ವಿದ್ಯಾರ್ಥಿನಿ ಮೇಲೆ ಆ್ಯಸಿಡ್ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ ದಾಳಿಕೋರನಿಗೆ ಗಲ್ಲು ಶಿಕ್ಷೆ ವಿಧಿಸಬೇಕು. ಹೆಣ್ಣು ಮಕ್ಕಳ ಮೇಲೆ ನಿರಂತರ ದೌರ್ಜನ್ಯ ನಡೆಯುತ್ತಿದೆ. ಸಂತ್ರಸ್ತೆಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಆಕೆ ಎಲ್ಲಿ ಓದಲು ಇಚ್ಛಿಸುತ್ತಾಳೆಯೋ ಅಲ್ಲಿ ಓದಿಸಲು ಸರ್ಕಾರ ಸಿದ್ಧವಿದೆ' ಎಂದು ಶೋಭಾ ಕರಂದ್ಲಾಜೆ ಅವರು ಹೇಳಿದರು.

ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ಹಾಗೂ ವಿಧಾನ ಪರಿಷತ್ ಸದಸ್ಯೆ ಭಾರತಿ ಶೆಟ್ಟಿ ಇದ್ದರು.

ಪೀಠೋಪಕರಣ ಜಪ್ತಿಗೆ ತಡೆ ತಂದ ಮಂತ್ರಿ ಮಾಲ್ ಮಾಲೀಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡ ಮೊತ್ತದ ತೆರಿಗೆ ಬಾಕಿ ಉಳಿಸಿಕೊಂಡಿರುವ ನಗರದ ಮಂತ್ರಿ ಸ್ಕ್ವೇರ್ ಮಾಲ್‌ನ ಪೀಠೋಪಕರಣಗಳನ್ನು ಶನಿವಾರ ಜಪ್ತಿ ಮಾಡಲು ತೆರಳಿದ್ದ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಅಧಿಕಾರಿಗಳು ತಡೆಯಾಜ್ಞೆ ಹಿನ್ನೆಲೆಯಲ್ಲಿ ವಾಪಸ್ಸಾದರು.

ಬಿಬಿಎಂಪಿ ಅಧಿಕಾರಿಗಳು, ಮಾರ್ಷಲ್‌ಗಳು ಹಾಗೂ ಪೊಲೀಸ್ ಸಿಬ್ಬಂದಿ ಪೀಠೋಪಕರಣಗಳ ಜಪ್ತಿಗೆ ತೆರಳಿದ್ದರು.

'2018ರಿಂದಲೂ ಮಂತ್ರಿ ಸ್ಕ್ವೇರ್ ಮಾಲ್‌ನವರು ₹ 42.63 ಕೋಟಿ ತೆರಿಗೆ ಬಾಕಿ ಉಳಿಸಿಕೊಂಡಿದ್ದಾರೆ. ಅದನ್ನು ಪಾವತಿಸುವಂತೆ ಈ ಹಿಂದೆ ನೋಟಿಸ್ ಜಾರಿ ಮಾಡಲಾಗಿತ್ತು. ಆದರೂ ಅವರು ತೆರಿಗೆ ಪಾವತಿಸದ ಕಾರಣಕ್ಕೆ ಮಾಲ್‌ನಲ್ಲಿದ್ದ ಕುರ್ಚಿ, ಕಂಪ್ಯೂಟರ್ ಹಾಗೂ ಟೇಬಲ್‌ಗಳನ್ನು ವಶಕ್ಕೆ ಪಡೆದುಕೊಂಡು ಲಾರಿಗೆ ಭರ್ತಿ ಮಾಡುತ್ತಿದ್ದೆವು. ಆ ವೇಳೆ ವಕೀಲರು ತಡೆಯಾಜ್ಞೆ ಪ್ರತಿ ನೀಡಿದ್ದರಿಂದ ಪೀಠೋಪಕರಣಗಳನ್ನು ಅಲ್ಲಿಯೇ ಬಿಟ್ಟು ಬಂದೆವು' ಎಂದು ಬಿಬಿಎಂಪಿ ಪಶ್ಚಿಮ ವಲಯದ ಜಂಟಿ ಆಯುಕ್ತ ಯೋಗೇಶ್ ತಿಳಿಸಿದರು.

'ಪೀಠೋಪಕರಣ ಪ್ರಕ್ರಿಯೆ ಆರಂಭಕ್ಕೂ ಮುನ್ನೂ ಯಾರೂ ತಡೆಯಾಜ್ಞೆ ಪ್ರತಿ ನೀಡಿರಲಿಲ್ಲ. ಆದ್ದರಿಂದ ಸಾರ್ವಜನಿಕರ ಪ್ರವೇಶ ನಿರ್ಬಂಧಿಸಿ ಜಪ್ತಿ ಪ್ರಕ್ರಿಯೆ ಆರಂಭಿಸಿದ್ದೆವು' ಎಂದೂ ತಿಳಿಸಿದರು.

'ಮುಂದಿನ ಆದೇಶದ ತನಕವು ಯಾವುದೇ ಕ್ರಮ ಕೈಗೊಳ್ಳದಂತೆ ಸಿಟಿ ಸಿವಿಲ್ ಕೋರ್ಟ್ ಫೆ.1ರಂದು ತಡೆಯಾಜ್ಞೆ ನೀಡಿದೆ. ಅದರ ತೆರವಿಗೆ ನ್ಯಾಯಾಲಯದಲ್ಲಿ ಹೋರಾಟ ನಡೆಸುತ್ತೇವೆ' ಎಂದು ತಿಳಿಸಿದರು.

ಲೋಕಾರ್ಪಣೆಗೆ ಲಕ್ಷ್ಮಿ ಹೆಬ್ಬಾಳಕರ ಸಿದ್ಧತೆ, ರಮೇಶ ಜಾರಕಿಹೊಳಿ ತಕರಾರು

ಶಿವಾಜಿ ಮೂರ್ತಿ ಪ್ರತಿಷ್ಠಾಪನೆ: ಜಟಾಪಟಿ

ಬೆಳಗಾವಿ: ತಾಲ್ಲೂಕಿನ ರಾಜಹಂಸಗಡ ಕೋಟೆಯಲ್ಲಿ ನಿರ್ಮಿಸಿದ ಛತ್ರಪತಿ ಶಿವಾಜಿ ಮಹಾರಾಜರ 50 ಅಡಿ ಎತ್ತರದ ಮೂರ್ತಿ ಪ್ರತಿಷ್ಠಾಪನೆ ಕಾರ್ಯಕ್ರಮ ಈಗ 'ರಾಜಕೀಯ ಪ್ರತಿಷ್ಠೆ'ಯ ಕಣವಾಗಿ ಮಾರ್ಪಟ್ಟಿದೆ.

ಮೂರ್ತಿ ನಿರ್ಮಾಣದ ಕ್ರೆಡಿಟ್ ತೆಗೆದುಕೊಳ್ಳಲು, ಬದ್ಧ ವೈರಿಗಳಾದ ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಹಾಗೂ ಶಾಸಕ ರಮೇಶ ಜಾರಕಿಹೊಳಿ ಮಧ್ಯೆ ತೀವ್ರ ಜಟಾಪಟಿ ನಡೆದಿದೆ. ಶಾಸಕಿ ಲಕ್ಷ್ಮಿ ಹೆಬ್ಬಾಳಕರ ಮಾ. 4 ಹಾಗೂ 5ರಂದು ಮೂರ್ತಿ ಲೋಕಾರ್ಪಣೆ ಸಮಾರಂಭ ಏರ್ಪಡಿಸಿದ್ದಾರೆ. ಇದಕ್ಕೆ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಹಾಗೂ ಮಹಾರಾಷ್ಟ್ರದ ಕಾಂಗ್ರೆಸ್ ಮುಖಂಡರನ್ನೂ ಆಹ್ವಾನಿಸಿದ್ದಾರೆ.

ಶಾಸಕ ರಮೇಶ ಜಾರಕಿಹೊಳಿ, ಬಿಜೆಪಿ ಗ್ರಾಮಾಂತರ ಜಿಲ್ಲಾ ಘಟಕದ ಅಧ್ಯಕ್ಷ ಸಂಜಯ ಪಾಟೀಲ ಹಾಗೂ ಹಲವು ಬಿಜೆಪಿ ನಾಯಕರು ಇದಕ್ಕೆ ತಕರಾರು ತೆಗೆದಿದ್ದಾರೆ.

'ಕೋಟೆಯನ್ನು ಸರ್ಕಾರದ ಅನುದಾನದಲ್ಲಿ ಅಭಿವೃದ್ಧಿ ಮಾಡಲಾಗಿದೆಯೇ ಹೊರತು, ಶಾಸಕಿಯ ಮನೆ ದುಡ್ಡಿನಿಂದ ಅಲ್ಲ. 2010ರಲ್ಲಿ ನಾನು ಜಿಲ್ಲಾ ಉಸ್ತುವಾರಿ ಸಚಿವ ಇದ್ದಾಗಲೇ ಇದನ್ನು ಆರಂಭಿಸಿದ್ದೇನೆ. ಇದರ ಲೋಕಾರ್ಪಣೆ ಜವಾಬ್ದಾರಿ ಜಿಲ್ಲಾಧಿಕಾರಿಯದ್ದು. ಸರ್ಕಾರದ ಶಿಷ್ಟಾಚಾರದಂತೆ ಕಾರ್ಯಕ್ರಮ ಮಾಡದೇ, ಕಾಂಗ್ರೆಸ್ ನಾಯಕರಿಗಷ್ಟೇ ಆಹ್ವಾನ ನೀಡಲಾಗಿದೆ' ಎಂಬುದು ರಮೇಶ ಜಾರಕಿಹೊಳಿ ತಕರಾರು.

'ರಾಜಹಂಸಗಡ ಕೋಟೆ ಬೆಳಗಾವಿ ಗ್ರಾಮೀಣ ಕ್ಷೇತ್ರಕ್ಕೆ ಬರುತ್ತದೆ. ಇದರ ಅಭಿವೃದ್ಧಿಗೆ, ಶಿವಾಜಿ ಮಹಾರಾಜರ ಮೂರ್ತಿ ಪ್ರತಿಷ್ಠಾಪನೆಗಾಗಿ ಶ್ರಮಿಸಿದ್ದೇನೆ. ₹4.5 ಕೋಟಿ ವೆಚ್ಚವಾಗಿದ್ದು, ಪ್ರವಾಸೋದ್ಯಮ ಇಲಾಖೆಯಿಂದ ₹3 ಕೋಟಿ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ₹50 ಲಕ್ಷ ಮಂಜೂರಾಗಿದೆ. ಉಳಿದ ₹ 1ಕೋಟಿ ಸ್ವಂತ ಹಣ ಹಾಕಿದ್ದೇನೆ' ಎಂಬುದು ಲಕ್ಷ್ಮೀ ಹೆಬ್ಬಾಳಕರ ವಾದ.

ಗಾಳ: ಬೆಳಗಾವಿ ದಕ್ಷಿಣ ವಿಧಾನಸಭಾ ಕ್ಷೇತ್ರದಲ್ಲಿ ಮರಾಠಿ ಭಾಷಿಕ ಮತದಾರರು ಶೇ 50ರಷ್ಟಿದ್ದಾರೆ. ಅವರನ್ನು ಓಲೈಸುವ ಕಸರತ್ತನ್ನು ಕಾಂಗ್ರೆಸ್– ಬಿಜೆಪಿ ನಾಯಕರು ಮಾಡುತ್ತಿದ್ದಾರೆ. ಮೂರ್ತಿ ಉದ್ಘಾಟನಾ ಕಾರ್ಯಕ್ರಮಕ್ಕೆ ಶಿವಾಜಿ ಮಹಾರಾಜರ ವಂಶಸ್ಥರಾದ ಯುವರಾಜ ಛತ್ರಪತಿ ಸಂಭಾಜಿರಾಜೇ, ಮಹಾರಾಷ್ಟ್ರದ ವಿಧಾನಪರಿಷತ್ ಸದಸ್ಯ ಸತೇಜ್ (ಬಂಟಿ) ಪಾಟೀಲ, ಮರಾಠಿ ನಟ, ಸಂಸದ ಡಾ.ಅಮೋಲ್ ಕೋಲ್ಹೆ, ಲಾತೂರು ಶಾಸಕ ಧೀರಜ್ ದೇಶಮುಖ್, ರಿತೇಶ ದೇಶಮುಖ್ ಅವರನ್ನು ಲಕ್ಷ್ಮಿ ಹೆಬ್ಬಾಳಕರ ಆಹ್ವಾನಿಸಿದ್ದಾರೆ.

ಕಾರುಗಳ ಮುಖಾಮುಖಿ

ಶಾಸಕ ರಮೇಶ ಜಾರಕಿಹೊಳಿ ಹಾಗೂ ವಿಧಾನಪರಿಷತ್ ಸದಸ್ಯ, ಲಕ್ಷ್ಮಿ ಹೆಬ್ಬಾಳಕರ ಸಹೋದರ ಚನ್ನರಾಜ ಹಟ್ಟಿಹೊಳಿ ಅವರ ಕಾರುಗಳು ಶನಿವಾರ ರಾಜಹಂಸಗಡ ಕೋಟೆ ಬಳಿ ಮುಖಾಮುಖಿಯಾದವು. ಎರಡೂ ಕಾರುಗಳ ಚಾಲಕರು ಒಬ್ಬರಿಗೊಬ್ಬರು ದಾರಿ ಬಿಡಲಿಲ್ಲ.

ಕಾರುಗಳಿಗೆ ಮುತ್ತಿಕೊಂಡ ಇಬ್ಬರ ಕಡೆಯ ಕಾರ್ಯಕರ್ತರು ಅವರ ನಾಯಕರಿಗೆ ಜೈಕಾರ ಕೂಗಲು ಶುರು ಮಾಡಿದರು. ಇದರಿಂದ ಉದ್ವಿಗ್ನ ವಾತಾವರಣ ನಿರ್ಮಾಣವಾಯಿತು. ಕಾರಿನಿಂದ ಇಳಿದ ರಮೇಶ ಜಾರಕಿಹೊಳಿ ಕೋಟೆಯತ್ತ ಹೆಜ್ಜೆ ಹಾಕಿದರು. ಆದರೂ ಅವರ ಚಾಲಕ ಕಾರನ್ನು ಹಿಂತೆಗೆಯಲಿಲ್ಲ. ಕೆಲ ಸಮಯ ಕಾದ ಚನ್ನರಾಜ ತಮ್ಮ ಕಾರನ್ನು ಹಿಂದಕ್ಕೆ ತೆಗೆದು, ಬದಿಯಿಂದ ಹೋದರು.

ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಶೇಷಾದ್ರಿಪುರದ ಅಪೋಲೊ ಆಸ್ಪತ್ರೆ ಸಿಬ್ಬಂದಿ ನಗರದಲ್ಲಿ ಶನಿವಾರ ವಾಕಥಾನ್ ನಡೆಸಿದರು.

ಕಿರಣ್‌ಕುಮಾರ್ ರಾಜೀನಾಮೆ

ಚಿಕ್ಕನಾಯಕನಹಳ್ಳಿ: ಚಿಕ್ಕನಾಯಕನಹಳ್ಳಿ ವಿಧಾನಸಭಾ ಕ್ಷೇತ್ರದಿಂದ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿಯಾಗಿರುವ ಮಾಜಿ ಶಾಸಕ ಕೆ.ಎಸ್. ಕಿರಣ್ ಕುಮಾರ್ ಅವರು ನಿರೀಕ್ಷೆಯಂತೆ ಶನಿವಾರ ಕರ್ನಾಟಕ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ.

ಚಿಕ್ಕನಾಯಕನಹಳ್ಳಿ ಕ್ಷೇತ್ರದ ಬಿಜೆಪಿ ಶಾಸಕ ಮತ್ತು ಸಚಿವ ಜೆ.ಸಿ. ಮಾಧುಸ್ವಾಮಿ ವಿರುದ್ಧ ಬಂಡಾಯ ಸಾರಿರುವ ಕಿರಣ್‌ಕುಮಾರ್ ಶೀಘ್ರ ಕಾಂಗ್ರೆಸ್ ಸೇರುವುದು ಖಚಿತವಾಗಿದೆ.

ನಟ ನಂದಮೂರಿ ತಾರಕ ರತ್ನ ಇನ್ನಿಲ್ಲ

ಬೆಂಗಳೂರು: ತೆಲುಗು ಚಿತ್ರನಟ, ತೆಲುಗು ದೇಶಂ ಪಕ್ಷದ ಮುಖಂಡ ನಂದಮೂರಿ ತಾರಕ ರತ್ನ (40) ಅವರು ನಗರದ ನಾರಾಯಣ ಹೃದಯಾಲಯದಲ್ಲಿ ಶನಿವಾರ ನಿಧನರಾದರು.



ನಂದಮೂರಿ ತಾರಕ ರತ್ನ

ಕಳೆದ ಜ. 27ರಂದು ಅವರು ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್. ಚಂದ್ರಬಾಬು ನಾಯ್ಡು ಅವರ ಪುತ್ರ ನಾರಾ ಲೋಕೇಶ್ ನೇತೃತ್ವದಲ್ಲಿ ಕುಪ್ಪಂನಿಂದ ಹಮ್ಮಿಕೊಂಡ 'ಯುವಗಳಂ' ಪಾದಯಾತ್ರೆಯ ಉದ್ಘಾಟನಾ ಸಮಾರಂಭದಲ್ಲಿ ಭಾಗವಹಿಸಿದ್ದರು. ಅಂದು ತೀವ್ರ ಹೃದಯಾಘಾತಕ್ಕೊಳಗಾಗಿದ್ದ ಅವರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ನೀಡಿ, ಹೆಚ್ಚಿನ ಚಿಕಿತ್ಸೆಗಾಗಿ ಬೆಂಗಳೂರಿನ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಎರಡು ದಿನಗಳ ಹಿಂದೆ ಅಮೆರಿಕದ ಹೃದಯ ತಜ್ಞರ ತಂಡವೊಂದು ಅವರ ಆರೋಗ್ಯದ ಮೇಲೆ ನಿಗಾ ಇರಿಸಿತ್ತು.

ತೆಲುಗು ಚಿತ್ರರಂಗದ ಖ್ಯಾತ ಛಾಯಾಗ್ರಾಹಕ ನಂದಮೂರಿ ಮೋಹನ ಕೃಷ್ಣ ಅವರ ಪುತ್ರರಾದ ತಾರಕ ರತ್ನ 1983ರ ಫೆ. 22ರಂದು ಹೈದರಾಬಾದ್‌ನಲ್ಲಿ ಜನಿಸಿದ್ದರು. ತಾರಕ ರತ್ನ ಅವರು ತೆಲುಗು ಚಿತ್ರರಂಗದ ಖ್ಯಾತ ತಟ, ಆಂಧ್ರಪ್ರದೇಶದ ಮಾಜಿ ಮುಖ್ಯಮಂತ್ರಿ ಎನ್.ಟಿ.ರಾಮರಾವ್ ಅವರ ಮೊಮ್ಮಗ. ಎನ್. ಚಂದ್ರಬಾಬು ನಾಯ್ಡು ಅವರ ಸೋದರಳಿಯನೂ ಹೌದು. ನಂದಮೂರಿ ಕಲ್ಯಾಣ ರಾಮ್ ಮತ್ತು ಜ್ಯೂನಿಯರ್ ಎನ್‌ಟಿಆರ್ ಅವರು ತಾರಕರತ್ನ ಅವರ ಸೋದರ ಸಂಬಂಧಿಗಳು.

ತಾರಕ ರತ್ನ ಅವರಿಗೆ ಪತ್ನಿ, ವಸ್ತ್ರವಿನ್ಯಾಸಕಿ ಅಲೇಖ್ಯಾ ರೆಡ್ಡಿ ಮತ್ತು ಪುತ್ರಿ ನಿಷ್ಕಾ ಇದ್ದಾರೆ.

2002ರಿಂದ ಕಳೆದ ವರ್ಷದವರೆಗೆ ಸುಮಾರು 22 ಚಲನಚಿತ್ರಗಳು ಹಾಗೂ ಒಂದು ವೆಬ್ ಸರಣಿಯಲ್ಲಿ ಅವರು ನಟಿಸಿದ್ದರು. ಒಕ್ಕಟೊ ನಂಬರ್ ಕುರ್ರಾಡು, ಯುವರತ್ನ, ತಾರಕ್, ಅಮರಾವತಿ ಅವರು ನಟಿಸಿದ ಪ್ರಮುಖ ಚಿತ್ರಗಳು. ಅಮರಾವತಿ ಚಿತ್ರದ ಖಳ ಪಾತ್ರದ ನಟನೆಗೆ ಅವರಿಗೆ 'ನಂದಿ' ಚಲನಚಿತ್ರ ಪ್ರಶಸ್ತಿ ಲಭಿಸಿತ್ತು.

ತಾರಕ ರತ್ನ ಅವರ ನಿಧನಕ್ಕೆ ಚಿತ್ರರಂಗ ಕಂಬನಿ ಮಿಡಿದಿದೆ.

ಮೈಸೂರಿನಿಂದ ವೇಗ, ನಗರ ಪ್ರವೇಶಿಸಿದೊಡನೆ ನಿಧಾನ; ಸವಾರರ ಪರಿತಾಪ

ಎಕ್ಸ್‌ಪ್ರೆಸ್ ವೇ ಅಂತ್ಯದಲ್ಲಿ ದಟ್ಟಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿದಿನ ಬೆಳಿಗ್ಗೆ ಹಾಗೂ ಸಂಜೆ ಮೈಸೂರು ರಸ್ತೆ ರಾಜರಾಜೇಶ್ವರಿ ಆಸ್ಪತ್ರೆ ಬಳಿ ವಾಹನ ದಟ್ಟಣೆ ಉಂಟಾಗುತ್ತಿದ್ದು, ಮೈಸೂರಿನಿಂದ ನಗರಕ್ಕೆ ಒಂದೂವರೆ ಗಂಟೆಯಲ್ಲಿ ಬರುವ ನಾಗರಿಕರು ಇಲ್ಲಿನ ದಟ್ಟಣೆಯಿಂದ ಪರಿತಪಿಸುತ್ತಿದ್ದಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇಯಿಂದ ಎರಡೂ ನಗರಗಳ ನಡುವಿನ ಪ್ರಯಾಣದ ಸಮಯ ಕಡಿಮೆಯಾಗಿದೆ. ಆದರೆ, ರಾಜರಾಜೇಶ್ವರಿ ಆಸ್ಪತ್ರೆ ಬಳಿ ಎಕ್ಸ್‌ಪ್ರೆಸ್ ವೇ ಅಂತ್ಯಗೊಂಡು, ಆ ಮೇಲ್ಸೇತುವೆ ಇಳಿಜಾರು ಆರಂಭದಿಂದಲೇ ದಟ್ಟಣೆಯಲ್ಲಿ ಸಿಲುಕಿಕೊಳ್ಳಬೇಕಾದ ಪರಿಸ್ಥಿತಿ ಇದೆ. ಏಕೆಂದರೆ, ಈ ಮೇಲ್ಸೇತುವೆ ಮುಗಿದ ಕೂಡಲೇ ರಸ್ತೆ ಕಿರಿದಾಗುತ್ತದೆ. ಮೇಲ್ಸೇತುವೆ ಹಾಗೂ ಸರ್ವೀಸ್ ರಸ್ತೆಗಳ ಸಂಚಾರ ಒಂದೇ ಪಥದಲ್ಲಿ ಸಾಗಬೇಕಾಗಿದೆ.

'ನಮ್ಮ ಮೆಟ್ರೊ'ದ ಚಲ್ಲಘಟ್ಟ ಸ್ಟೇಷನ್ ಇಲ್ಲಿ ನಿರ್ಮಾಣ ಹಂತದಲ್ಲಿದೆ. ಅದರ ಸುತ್ತ ಮಳೆನೀರಿನ ಕಾಲುವೆ ಹಾದು ಹೋಗುತ್ತಿದೆ. ಮೆಟ್ರೊ ಸ್ಟೇಷನ್‌ನಿಂದ ಪಂಚಮುಖಿ ಗಣೇಶ ದೇವಸ್ಥಾನದ ಎದುರಿನ ರಸ್ತೆಯವರೆಗೂ ಮಳೆನೀರಿನ ಕಾಲುವೆಯನ್ನು ಬಾಕ್ಸ್ ಮಾದರಿಯಲ್ಲಿ ನಿರ್ಮಾಣ ಮಾಡಲಾಗುತ್ತಿದೆ. ಈ ಕಾಮಗಾರಿಯಿಂದ ಇರುವ ರಸ್ತೆಯೂ ಕಿರಿದಾಗಿದೆ. ಇದರಿಂದ ಬೆಳಿಗ್ಗೆ ಹಾಗೂ ಸಂಜೆ 'ಪೀಕ್ ಅವರ್'ನಲ್ಲಿ ವಾಹನ ಸವಾರರು ನಿತ್ಯ ಸಂಕಷ್ಟ ಎದುರಿಸುತ್ತಿದ್ದಾರೆ.

ನೈಸ್ ರಸ್ತೆಯಿಂದ ಬರುವ ವಾಹನಗಳಿಗೆ ಪಂಚಮುಖಿ ಗಣೇಶ ದೇವಸ್ಥಾನದ ಬಳಿ ಬಲ ಹಾಗೂ 'ಯೂ' ತಿರುವಿಗಿದ್ದ ಅವಕಾಶ ಇದೀಗ ಇಲ್ಲ. ಆ ವಾಹನಗಳು ಮೇಲ್ಸೇತುವೆಯ ಕೆಳಗೆ 'ಯೂ' ತಿರುವು ಪಡೆದು ಬರುತ್ತಿವೆ. ಇಷ್ಟಾದರೂ, ಮೈಸೂರು ಕಡೆಯಿಂದ, ಕೆಳಭಾಗದಿಂದ ಬರುವ ಎಲ್ಲ ವಾಹನಗಳು ಮುಂದೆ ಸಾಗುವ ರಸ್ತೆ ಕಿರಿದಾಗುತ್ತದೆ. ನಂತರ ನೈಸ್ ರಸ್ತೆಗೆ ಭಾರಿ ವಾಹನಗಳು ತಿರುವು ಪಡೆಯುವ ಸಂದರ್ಭದಲ್ಲೂ ಸಂಚಾರ ನಿಧಾನಗತಿಯಾಗಿ, ಕೆಲವು ಬಾರಿ ನಿಂತಲ್ಲೇ ನಿಲ್ಲಬೇಕಾಗುತ್ತದೆ.

'ನೈಸ್ ರಸ್ತೆ ಜಂಕ್ಷನ್‌ನಿಂದ ಮೈಸೂರು ಕಡೆಗೆ ಮೇಲ್ಸೇತುವೆ ಹಾಗೂ ಕೆಳರಸ್ತೆಯಿಂದ ಕುಂಬಳಗೋಡು ಕಡೆಗೆ ಹೋಗುವಾಗ ಸಮಸ್ಯೆ ಆಗುವುದಿಲ್ಲ. ಆದರೆ, ಕುಂಬಳಗೋಡು, ದೊಡ್ಡ ಆಲದಮರ, ಅಂಚೆಪಾಳ್ಯ ಸುತ್ತಮುತ್ತ ಪ್ರದೇಶಕ್ಕೆ ಸುಗಮವಾಗಿ ಸಾಗಲು ಸಾಧ್ಯವಾಗುತ್ತಿಲ್ಲ. ರಸ್ತೆ ಕಿರಿದಾಗಿ, ಕಾಮಗಾರಿಯ ಸಾಮಗ್ರಿಗಳು ಇರುವುದಿಂದ ಸಂಚಾರ ದಟ್ಟಣೆ ಉಂಟಾಗುತ್ತಿದೆ' ಎಂದು ಕುಂಬಳಗೋಡಿನ ರಮೇಶ್ ಶ್ರೀನಿವಾಸ್ ಹೇಳಿದರು.

'ರಾಜರಾಜೇಶ್ವರಿ ಆಸ್ಪತ್ರೆಗೆ ಸಾಕಷ್ಟು ಜನ ಬರುತ್ತಾರೆ. ಅವರು ಮತ್ತೆ ನಗರದ ಕಡೆಗೆ ಹೋಗುವಾಗ 15ರಿಂದ 20 ನಿಮಿಷ ದಟ್ಟಣೆಯಲ್ಲೇ ಸಿಲುಕುತ್ತಾರೆ. ಸಂಚಾರ ಪೊಲೀಸರಿದ್ದರೂ ಭಾರಿ ವಾಹನಗಳನ್ನು ನಿಯಂತ್ರಿಸುತ್ತಿಲ್ಲ. ಅವು ರಸ್ತೆ ಪಕ್ಕದಲ್ಲಿ ನಿಂತಿರುವುದೂ ದಟ್ಟಣೆಗೆ ಮತ್ತೊಂದು ಕಾರಣವಾಗಿದೆ. ಕಾಮಗಾರಿಯನ್ನು ಬೇಗ ಮುಗಿಸಿ, ರಸ್ತೆ ವಿಸ್ತರಿಸಬೇಕು' ಎಂದು ಅಂಗಡಿ ಮಾಲೀಕರಾದ ಸ್ವರ್ಣಮ್ಮ ಆಗ್ರಹಿಸಿದರು.

ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಸಂಪರ್ಕಿಸಲು ಯತ್ನಿಸಿದಾಗ, ಅವರು ಪ್ರತಿಕ್ರಿಯಿಸಲಿಲ್ಲ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್ ವೇ ಕೊನೆಗೊಳ್ಳುವ ಚಲ್ಲಘಟ್ಟ 'ನಮ್ಮ ಮೆಟ್ರೊ' ಸ್ಟೇಷನ್ ಬಳಿ ಸಂಚಾರ ದಟ್ಟಣೆಯಲ್ಲಿ ಸಿಲುಕೊಂಡಿರುವ ಆಂಬುಲೆನ್ಸ್ ಪ್ರಜಾವಾಣಿ ಚಿತ್ರ

ಚಲ್ಲಘಟ್ಟ 'ನಮ್ಮ ಮೆಟ್ರೊ' ಸ್ಟೇಷನ್ ಬಳಿ ಕಂಡುಬಂದ ಸಂಚಾರ ದಟ್ಟಣೆ.

ಮೈಸೂರು ರಸ್ತೆ– ಉತ್ತರಹಳ್ಳಿ ಜಂಕ್ಷನ್: ದಟ್ಟಣೆ

'ಕೆಂಗೇರಿ ಪೊಲೀಸ್ ಠಾಣೆಯಿಂದ ಕೆಂಗೇರಿ ಸ್ಯಾಟಲೈಟ್ ಬಸ್ ನಿಲ್ದಾಣದವರೆಗೂ ದಿನದ ಬಹುತೇಕ ಸಮಯ ವಾಹನ ದಟ್ಟಣೆ ಇರುತ್ತದೆ. ಕೋಟೆ ಬೀದಿ ಹಾಗೂ ಕೆಂಗೇರಿ ಊರಿನ ಒಳಗೆ ಹೋಗಲು ತಿರುವುಗಳಿವೆ. ಇದು ಮುಖ್ಯರಸ್ತೆಯಲ್ಲಿ ವಾಹನ ದಟ್ಟಣೆ ಸೃಷ್ಟಿಸುತ್ತಿದೆ. ಇದಾದ ಮೇಲೆ ಉತ್ತರಹಳ್ಳಿ ಕಡೆಗೆ ಸಾಗುವ ಜಂಕ್ಷನ್‌ನಲ್ಲಿ 10ರಿಂದ 20 ನಿಮಿಷ ಕಾಯಬೇಕಾದ ಪರಿಸ್ಥಿತಿ ಇದೆ. ಇಲ್ಲಿನ ದಟ್ಟಣೆ ನಿವಾರಣೆಗೆ ಶಾಶ್ವತ ಪರಿಹಾರ ಕಲ್ಪಿಸಬೇಕು. ಪೊಲೀಸರು ಸೇರಿದಂತೆ ಎಲ್ಲ ಇಲಾಖೆಗಳ ಸಹಯೋಗದಲ್ಲಿ ಸುಗಮ ಸಂಚಾರ ಅಥವಾ ಮುಕ್ತ ಸಂಚಾರಕ್ಕೆ ಅವಕಾಶ ಮಾಡಿಕೊಡಬೇಕು' ಎಂದು ಸುನಂದಮ್ಮ, ಮಲ್ಲೇಶಪ್ಪ, ಜಗದೀಶ್, ಮುರುಳಿ ಒತ್ತಾಯಿಸಿದರು.

ವೃದ್ಧೆ ಆತ್ಮಹತ್ಯೆ

ದಾಬಸ್‌ಪೇಟೆ: ಸೋಂಪುರ ಹೋಬಳಿಯ ನರಸೀಪುರ ಹಾಲೇನಹಳ್ಳಿ ಗ್ರಾಮದ ನರಸಹನುಮಕ್ಕ (65) ಎಂಬುವವರು ಕೆರೆಗೆ ಹಾರಿ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ಇವರು ಕಳೆದ ಮೂರು ದಿನಗಳಿಂದ ನಾಪತ್ತೆಯಾಗಿದ್ದರು. ಮನೆಯವರು ಎಲ್ಲ ಕಡೆ ಹುಡುಕಾಟ ನಡೆಸಿದ್ದರೂ ಪತ್ತೆಯಾಗಿರಲಿಲ್ಲ. ಗ್ರಾಮಸ್ಥರೊಬ್ಬರು ಕೆರೆಯಲ್ಲಿ ಮೃತದೇಹ ತೇಲುತ್ತಿರುವುದನ್ನು ಕಂಡು ಪೊಲೀಸರಿಗೆ ವಿಷಯ ತಿಳಿಸಿದ್ದರು.

ಆತ್ಮಹತ್ಯೆಗೆ ಶರಣಾದ ವೃದ್ಧೆ ಹಲವು ವರ್ಷಗಳಿಂದ ಅನಾರೋಗ್ಯದಿಂದ ಬಳಲುತ್ತಿದ್ದರು. ಚಿಕಿತ್ಸೆ ಪಡೆದಿದ್ದರೂ ಗುಣವಾಗಿರಲಿಲ್ಲ. ನೊಂದು ಆತ್ಮಹತ್ಯೆ ಮಾಡಿಕೊಂಡಿದ್ದಾರೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ. ದಾಬಸ್‌ಪೇಟೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಆನ್‌ಲೈನ್ ಜೂಜಿಗಾಗಿ ಸಾಲ: ವ್ಯಕ್ತಿ ಆತ್ಮಹತ್ಯೆ

ತುರುವೇಕೆರೆ: ಆನ್‌ಲೈನ್‌ನಲ್ಲಿ ಜೂಜಾಟವಾಡಲು ಮಾಡಿದ್ದ ಸಾಲ ತೀರಿಸಲಾಗದೆ ದಂಡಿನಶಿವರ ಹೋಬಳಿಯ ಮಾದಪಟ್ಟಣದ ಮಂಜುನಾಥ್ (34) ಎಂಬುವರು ಮನೆಯಲ್ಲಿಯೇ ನೇಣು ಹಾಕಿಕೊಂಡು ಶನಿವಾರ ಆತ್ಮಹತ್ಯೆ ಮಾಡಿಕೊಂಡಿದ್ದಾರೆ.

ವರ್ಷದ ಹಿಂದಷ್ಟೇ ಅವರು ಮದುವೆಯಾಗಿದ್ದರು. ಮನೆಯಲ್ಲಿ ಹಸುಗಳನ್ನು ಸಾಕಿಕೊಂಡಿದ್ದ ಅವರು ಅದರಿಂದ ಬರುವ ಆದಾಯದಿಂದಲೇ ಜೀವನ ನಡೆಸುತ್ತಿದ್ದರು. ಆದರೆ, ಇತ್ತೀಚೆಗೆ ಮೊಬೈಲ್‌ನಲ್ಲಿ ಆನ್‌ಲೈನ್ ಜೂಜಾಟದಲ್ಲಿ ತೊಡಗಿದ್ದರು. ಅದಕ್ಕಾಗಿ ವಿಪರೀತ ಕೈಸಾಲ ಮಾಡಿಕೊಂಡಿದ್ದರು ಎಂದು ದಂಡಿನಶಿವರ ಪೊಲೀಸರು ತಿಳಿಸಿದ್ದಾರೆ.

ಮುಂಬೈ ರೇಸ್

ಅಲೆಕ್ಸಾಂಡ್ರಸ್ ಗೆಲ್ಲುವ ನಿರೀಕ್ಷೆ

ಲೆಫ್ಟಿನೆಂಟ್ ಕರ್ನಲ್ ಗೋವಿಂದ್ ಸಿಂಗ್ ಟ್ರೋಫಿ ಭಾನುವಾರದ ಮುಂಬೈ ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಲೆಕ್ಸಾಂಡ್ರಸ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 3ಕ್ಕೆ ಪ್ರಾರಂಭವಾಗಲಿರುವ ದಿನದ ಏಳು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಡಫಿ 3, ಡೆಮಿಟ್ರಿಯಸ್ 1, ಲಾರ್ಡ್ ಮರ್ಫಿ 5
2ನೇ ರೇಸ್: ಗೋಲ್ಡನ್ ನೀಲ್ 1, ಲೆಟೊ 5, ಸಿಯೆರಾ ಡೆಲಾ ಪ್ಲಾಟಾ 2
3ನೇ ರೇಸ್: ಲಾರ್ಡ್ ವೇಡರ್ 2, ಸ್ನೋಫಾಲ್ 3, ಸಾವರಿನ್ ಮಾಸ್ಟರ್ 5
4ನೇ ರೇಸ್: ಆಲ್‌ಫೈನ್ ಸ್ಟಾರ್ 2, ಲಾರ್ಡ್ ಫೆನಿಸಿಯಾ 3, ಜೆರುಸಲೆಮ್ 4
5ನೇ ರೇಸ್: ಅಲೆಕ್ಸಾಂಡ್ರಸ್ 1, ವಿಂಟರ್ ಅಜೆಂಡ 6, ಆಶ್‌ಫೋರ್ಡ್ 7
6ನೇ ರೇಸ್: ವಾಲ್ಟರ್ 5, ಫ್ರೀಡಂ 6, ಸ್ಟನ್ನಿಂಗ್ ವಿಶೂಯಲ್ 8
7ನೇ ರೇಸ್: ರಿದ್ಮ್ ಆಫ್ ನೇಚರ್ 2, ಪರ್ಫೆಕ್ಟ್ ವಿನ್ 3, ಟಾರ್ಜಾನ್ 11

ಉತ್ತಮ ಬೆಟ್: ಗೋಲ್ಡನ್ ನೀಲ್

ಜಾಕ್‌ಪಾಟ್	ಟ್ರಿಬಲ್
3,4,5,6,7	4,5,6

ಕಮರುತ್ತಿದೆ ‘ಏಲಕ್ಕಿ’ ಘಮಲು

ಒಂದನೇ ಪುಟದಿಂದ...

ಹೆಚ್ಚುತ್ತಿದೆ ನಿರ್ವಹಣಾ ವೆಚ್ಚ

ಹೊಸದಾಗಿ ಒಂದು ಎಕರೆಯಲ್ಲಿ ಏಲಕ್ಕಿ ಬೆಳೆಯಲು ಕನಿಷ್ಠ ₹40 ಸಾವಿರ ಬೇಕಾಗುತ್ತದೆ. ಅದನ್ನು ಸಾಗಿಸುವ, ಮಾರಾಟ ಮಾಡುವ ಇತ್ಯಾದಿ ವೆಚ್ಚಗಳು ಪ್ರತ್ಯೇಕ. ಒಟ್ಟಿನಲ್ಲಿ ಕೆ.ಜಿಗೆ ಕನಿಷ್ಠ ₹ 800ರಷ್ಟು ಬೆಲೆಯಾದರೂ ಸಿಗಬೇಕು. ಎಲ್ಲಾ ಖರ್ಚು ಕಳೆದು ಒಂದು ಎಕರೆಗೆ ಕನಿಷ್ಠ ₹25 ಸಾವಿರದಿಂದ ₹30 ಸಾವಿರ ಉಳಿದರೆ ಮಾತ್ರ ಏಲಕ್ಕಿ ಬೆಳೆ ಉಳಿಸಿಕೊಳ್ಳಲು ರೈತರಿಗೂ ಆಸಕ್ತಿ ಬರುತ್ತದೆ ಎಂಬುದು ವಾದಿರಾಜ್ ಅಭಿಪ್ರಾಯ.

‘ಒಂದು ದಿನಕ್ಕೆ ಒಬ್ಬ ಕೆಲಸಗಾರ ಐದರಿಂದ ಆರು ಸೇರು ಏಲಕ್ಕಿ ಬಿಡಿಸುತ್ತಾರೆ. ಅದು ಒಣಗಿದರೆ ಒಂದು ಕೆ.ಜಿಯಾಗುತ್ತದೆ. ಮಾರುಕಟ್ಟೆಯಲ್ಲಿ 1 ಕೆ.ಜಿ ಏಲಕ್ಕಿಗೆ ₹500 ಬೆಲೆ ಇದೆ ಎಂದುಕೊಳ್ಳೋಣ. ಒಂದು ಆಳಿಗೆ ದಿನಕ್ಕೆ ₹500 ಕೂಲಿ ಕೊಟ್ಟು, ಅಷ್ಟೇ ಬೆಲೆಗೆ ಏಲಕ್ಕಿ ಮಾರಾಟವಾದರೆ, ಬೆಳೆದವರಿಗೆ ಅಸಲೂ ಹುಟ್ಟುವುದಿಲ್ಲ. ಹೀಗಾಗಿ ಏಲಕ್ಕಿ ಬೆಳೆಯುವುದನ್ನು ದಶಕದ ಹಿಂದೆಯೇ ನಿಲ್ಲಿಸಬೇಕಾಯಿತು’ ಎನ್ನುತ್ತಾರೆ ಹಾಸನ ಜಿಲ್ಲೆ ಸಕಲೇಶಪುರ ತಾಲ್ಲೂಕಿನ ಅಚ್ಚನಹಳ್ಳಿಯ ಕೃಷಿಕ ಸುಚೇತನ.

ಹೀಗಿರಲಿಲ್ಲ ಪರಿಸ್ಥಿತಿ: 1995ಕ್ಕಿಂತ ಮುಂಚೆ ಏಲಕ್ಕಿ ಉತ್ತಮ ಸ್ಥಿತಿಯಲ್ಲಿತ್ತು. ಆಗ ಪ್ರತಿ ಮನೆಯಲ್ಲಿ ಕಾಯಂ ಆಗಿ ಕಾರ್ಮಿಕರಿದ್ದರು. ಹೊರಗಿನಿಂದಲೂ ಕಾರ್ಮಿಕರು ಏಲಕ್ಕಿ ಕೊಯ್ಲಿಗಾಗಿ ಬರುತ್ತಿದ್ದರು. ಏಲಕ್ಕಿ ಬೆಳೆ ಒಂದು ರೀತಿ ವರ್ಷದಲ್ಲಿ (ಸೆಪ್ಟೆಂಬರ್‌ನಿಂದ ಫೆಬ್ರುವರಿವರೆಗೆ) ನಾಲ್ಕೈದು ತಿಂಗಳು ನಿರಂತರವಾಗಿ ಹಣ ಕೊಡುವ ಬೆಳೆಯಾಗಿತ್ತು. ವರ್ಷಪೂರ್ತಿ ಕಾರ್ಮಿಕರಿಗೆ ಉದ್ಯೋಗ ನೀಡುತ್ತಿದ್ದ ಬೆಳೆಯಾಗಿತ್ತು. ಒಂದೆಡೆ ಉತ್ಪಾದನೆ ಚೆನ್ನಾಗಿದ್ದರೆ, ಮತ್ತೊಂದೆಡೆ ಉತ್ತಮ ಬೆಲೆ ಸಿಗುತ್ತಿತ್ತು. 1997–98 ಅವಧಿಯಲ್ಲಿ ಏಲಕ್ಕಿ ಬೆಲೆ ಕೆ.ಜಿಗೆ ₹600 ರಿಂದ ₹900 ವರೆಗೆ ಇತ್ತು. 2018–19ರಲ್ಲಿ ಕೆ.ಜಿ ಏಲಕ್ಕಿ ಬೆಲೆ ₹ 3000ದವರೆಗೂ ಹೋಗಿತ್ತು. ಆಗ ಅನೇಕ ರೈತರು ಏಲಕ್ಕಿ ಬೆಳೆ ನಾಟಿ ಮಾಡಿದರು. ಕೋವಿಡ್‌ನಿಂದಾಗಿ ಈಗ ಅವರೆಲ್ಲ ಬೆಲೆ ಕುಸಿತವನ್ನು ಎದುರಿಸುತ್ತಿದ್ದಾರೆ.

ಸಮಸ್ಯೆಗಳು ಹಲವು: ಏಲಕ್ಕಿ ಬೆಳೆ ಹಾಸನ ಜಿಲ್ಲೆಯ ವಾತಾವರಣಕ್ಕೆ ಹೊಂದಿಕೊಂಡು ಬೆಳೆಯುತ್ತಿತ್ತು. ಇಳುವರಿ ಕೂಡ ಉತ್ತಮವಾಗಿತ್ತು. ಹೀಗಾಗಿ ದಟ್ಟ ಕಾಡುಗಳ ನಡುವೆ ಏಲಕ್ಕಿಯನ್ನು ಬೆಳೆಯಲಾಗುತ್ತಿತ್ತು. ಯಾವುದೇ ಗೊಬ್ಬರ ಹಾಕದೇ ನೈಸರ್ಗಿಕವಾಗಿಯೇ ಬೆಳೆಯಲಾಗುತ್ತಿತ್ತು. ಹೀಗಾಗಿ ಕಡಿಮೆ ಖರ್ಚಿನಲ್ಲಿ ಹೆಚ್ಚು ಆದಾಯ ತರುವ ಬೆಳೆಯಾಗಿತ್ತು. ಎಲ್ಲವೂ ನೆಮ್ಮದಿಯಾಗಿದ್ದ ಕಾಲದಲ್ಲಿ ಕಟ್ಟೆ ರೋಗ, ಕೊಕ್ಕೆ ಕಂದು ರೋಗ ಏಲಕ್ಕಿಯನ್ನು ಕಾಡಲು ಆರಂಭಿಸಿತು. ಪರಿಣಾಮ ಇಡೀ ಏಲಕ್ಕಿ ಬೆಳೆಯೇ ನಾಶವಾಗಿ ಹೋಯಿತು.

ಹಾಸನ ಜಿಲ್ಲೆಯಲ್ಲಿ 3,167 ಹೆಕ್ಟೇರ್ ಪ್ರದೇಶದಲ್ಲಿ ಏಲಕ್ಕಿ ಬೆಳೆಯಲಾಗುತ್ತಿದ್ದು, ಹೆಕ್ಟೇರ್‌ಗೆ ಸರಾಸರಿ 62 ಕೆ.ಜಿ ಇಳುವರಿ ಇದೆ. ಕಾಡುಪ್ರಾಣಿ, ಮಂಗಗಳ ಹಾವಳಿ ಹಾಗೂ ರೋಗಬಾಧೆಯಿಂದ ಏಲಕ್ಕಿ ಬೆಳೆಯುವ ಪ್ರದೇಶ ಕ್ಷೀಣಿಸಿದೆ. ಹೆತ್ತೂರು ಸುತ್ತಮುತ್ತಲಿನ 15 ಗ್ರಾಮಗಳಲ್ಲಿ ಏಲಕ್ಕಿ ಬೆಳೆಯಲಾಗುತ್ತಿದ್ದು, ಇಲ್ಲಿನ ಬೆಳೆಗಾರರು ಒಂದಿಲ್ಲೊಂದು ಸಮಸ್ಯೆಯಿಂದ ನಲುಗುತ್ತಿದ್ದಾರೆ. ಕೆ.ಜಿಗೆ ₹4 ಸಾವಿರದವರೆಗೂ ಇದ್ದ ಬೆಲೆ ಇದೀಗ ₹700 ರಿಂದ ₹800ರ ಆಸುಪಾಸಿನಲ್ಲಿದೆ.

ಕೊಡಗು ಜಿಲ್ಲೆಯಲ್ಲಿ 5 ವರ್ಷದ ಹಿಂದೆ ಏಲಕ್ಕಿ ಬೆಳೆ ವಿಸ್ತೀರ್ಣ ಪ್ರದೇಶವು 7,065 ಹೆಕ್ಟೇರ್ ಇದ್ದದ್ದು ಈಗ 985.7 ಹೆಕ್ಟೇರ್‌ಗೆ ಕುಗ್ಗಿದೆ. ಒಂದು ಕಾಲದಲ್ಲಿ ಕಾಫಿ ಬೆಳೆಯಷ್ಟೇ ತೀವ್ರವಾಗಿ ಕೊಡಗಿನಲ್ಲಿ ವ್ಯಾಪಿಸಿದ್ದ ಏಲಕ್ಕಿ ಇದೀಗ ನಶಿಸುವ ಹಂತಕ್ಕೆ ಬಂದುನಿಂತಿದೆ.

ಕೊಡಗಿನ ಎಲ್ಲೆಡೆ ಮಾರಾಟವಾಗುತ್ತಿರುವ ಏಲಕ್ಕಿ ನಿಜಕ್ಕೂ ಕೊಡಗಿನದ್ದಲ್ಲ. ಕೇರಳದಿಂದ ಬರುವ ಈ ಏಲಕ್ಕಿಯನ್ನು ಅಧಿಕ ದರಕ್ಕೆ ಮಾರಾಟ ಮಾಡಲಾಗುತ್ತಿದೆ. ಅಧಿಕ ರಾಸಾಯನಿಕಗಳನ್ನು ಬಳಸಿ ಬೆಳೆಯುವ ಕೇರಳದ ಏಲಕ್ಕಿಯ ಬಣ್ಣದ ಮುಂದೆ ಕಡಿಮೆ ರಾಸಾಯನಿಕ ಬಳಸಿ ಬೆಳೆಯುವ ಕೊಡಗಿನ ಏಲಕ್ಕಿಯ ಬಣ್ಣವಷ್ಟೇ ಅಲ್ಲದೆ ಬೇಡಿಕೆಯೂ ಮಾಸುತ್ತಿದೆ.

ರಾಜ್ಯವಾರು ಏಲಕ್ಕಿ ಬೆಳೆಯ ವಿವರ

ರಾಜ್ಯ	2017-18 ಪ್ರದೇಶ (ಹೆಕ್ಟೇರ್)	ಉತ್ಪಾದನೆ (ಟನ್)	2018-19		2019-20		2020- 21		2021-22*	
ಕೇರಳ	39,080	18,135	38,822	11,535	39,697	10,075	39,143	20,570	39,143	21,270
ಕರ್ನಾಟಕ	25,135	1,450	25,135	690	25,135	620	25,135	579	25,135	697
ತಮಿಳುನಾಡು	5,115	850	5,115	715	5,162	540	4,912	1,372	4,912	1,373

*ಅಂದಾಜು

ಮಾಹಿತಿ: ಭಾರತೀಯ ಸಂಬಾರ ಮಂಡಳಿ

> **ದಿನದಿಂದ ದಿನಕ್ಕೆ ನಿರ್ವಹಣಾ ವೆಚ್ಚ ಏರುತ್ತಿದೆ. ಒಳ್ಳೆಯ ದರವೂ ಸಿಗುತ್ತಿಲ್ಲ. ಏಲಕ್ಕಿ ಉಳಿಸಿಕೊಳ್ಳುವುದೇ ದೊಡ್ಡ ಸವಾಲಾಗಿದೆ**
> **ಪ್ರಮೋದ್**
> ಏಲಕ್ಕಿ ಬೆಳೆಗಾರ, ಕೊಡಗು

> **ಸ್ಥಳೀಯ ಹವಾಮಾನಕ್ಕೆ ಒಗ್ಗುವ, ಹೆಚ್ಚು ಇಳುವರಿ ನೀಡುವ ಏಲಕ್ಕಿ ತಳಿಯನ್ನು ಅಭಿವೃದ್ಧಿಪಡಿಸಿ, ಸರ್ಕಾರವೇ ಒಂದು ವೈಜ್ಞಾನಿಕ ಬೆಲೆ ನಿಗದಿಪಡಿಸಿದರೆ (ಬೆಂಬಲ ಬೆಲೆ ರೀತಿ ನೀಡಿದರೂ ಒಳಿತು) ಭವಿಷ್ಯದಲ್ಲಿ ಏಲಕ್ಕಿ ಬೆಳೆಯುವವರ ಸಂಖ್ಯೆ ಹೆಚ್ಚುತ್ತದೆ.**
> **ಸುಚೇತನ**, ಕೃಷಿಕ, ಅಚ್ಚನಹಳ್ಳಿ



‘ಶಬರಿಮಲೆ ಪ್ರಸಾದದಲ್ಲಿ ಬಳಕೆ ಮಾಡುವ ಏಲಕ್ಕಿಯಲ್ಲಿ ನಿಗದಿತ ಪ್ರಮಾಣಕ್ಕಿಂತ ಅಧಿಕ ಕೀಟನಾಶಕ ಪತ್ತೆಯಾಗಿದ್ದರಿಂದ ಈಚೆಗಷ್ಟೇ ಕೇರಳ ಹೈಕೋರ್ಟ್ ಪ್ರಸಾದ ಮಾರಾಟಕ್ಕೆ ತಡೆ ನೀಡಿತ್ತು. ವಿದೇಶದಲ್ಲೂ ಭಾರತೀಯ ಸಂಬಾರ ಪದಾರ್ಥಗಳಲ್ಲಿ ಅಧಿಕ ಕೀಟನಾಶಕದ ಅಂಶಗಳು ಪತ್ತೆಯಾಗಿದ್ದು, ತಿರಸ್ಕೃತಗೊಂಡಿವೆ’ ಎಂದು ರಫ್ತುದಾರ ಸ್ವರೂಪಾ ರೆಡ್ಡಿ ಸಹ ಹೇಳುತ್ತಾರೆ. ವಿದೇಶದಲ್ಲಿ ತಿರಸ್ಕೃತಗೊಂಡಾಗ ಸಹಜವಾಗಿಯೇ ದೇಶಿ ಮಾರುಕಟ್ಟೆಯಲ್ಲಿ ಪೂರೈಕೆ ಅಧಿಕವಾಗಿ ಬೆಲೆ ಕುಸಿತವಾಗುತ್ತದೆ.

‘ಅಧಿಕ ರಾಸಾಯನಿಕ ಬಳಸಿ ಬೆಳೆಯುವ ಕೇರಳದ ಬಣ್ಣದ ಏಲಕ್ಕಿಯೇ ಜನರಿಗೆ ಆಕರ್ಷಣೆಯಾಗಿದೆ. ಜತೆಗೆ, 5 ವರ್ಷದ ಹಿಂದೆ ಏಲಕ್ಕಿ ಕೆ.ಜಿಗೆ ₹ 4 ಸಾವಿರ ಇದ್ದಿದ್ದು, ಈಗ ₹ 400ಕ್ಕೆ ಕುಸಿದಿದೆ. ಏಲಕ್ಕಿ ತೋಟದ ನಿರ್ವಹಣಾ ವೆಚ್ಚ ಹಲವುಪಟ್ಟು ಹೆಚ್ಚಾಗಿದೆ. ಕಾಡುತ್ತಿರುವ ಕಟ್ಟೆರೋಗ, ಕೊಳೆರೋಗದಿಂದ ಬೆಳೆಗಾರರು ಏಲಕ್ಕಿ ಕಿತ್ತು ಕಾಫಿ ಬೆಳೆಯುತ್ತಿದ್ದಾರೆ’ ಎಂದು ಭಾರತೀಯ ಸಂಬಾರ ಬೆಳೆಗಳ ಸಂಶೋಧನಾ ಸಂಸ್ಥೆಯ ಅಪ್ಪಂಗಳದ ಪ್ರಾದೇಶಿಕ ಕೇಂದ್ರದ ಮುಖ್ಯಸ್ಥ ಡಾ.ಎಸ್.ಜೆ.ಅಂಕೇಗೌಡ ತಿಳಿಸುತ್ತಾರೆ.

‘4 ವರ್ಷದ ಹಿಂದೆ ಒಂದು ವರ್ಷಕ್ಕೆ 15 ಸಾವಿರ ಏಲಕ್ಕಿ ಕಂದುಗಳನ್ನು ಬಿತ್ತನೆ ಮಾಡಲು ರೈತರು ನಮ್ಮಿಂದ ಖರೀದಿಸಿದ್ದರು. ಆದರೆ, ಕಳೆದ ವರ್ಷ 5 ಸಾವಿರ ಕಂದುಗಳಷ್ಟೇ ಮಾರಾಟವಾಗಿವೆ’ ಎಂದು ಅವರು ಮಾಹಿತಿ ನೀಡುತ್ತಾರೆ.

ಚಿಕ್ಕಮಗಳೂರು ಜಿಲ್ಲೆಯಲ್ಲಿ ಕೆಲ ವರ್ಷಗಳ ಹಿಂದೆ ಸುಮಾರು ಸಾವಿರ ಹೆಕ್ಟೇರ್ ಪ್ರದೇಶಲ್ಲಿ ಇದ್ದ ಏಲಕ್ಕಿ ಬೆಳೆ ಇದೀಗ 530 ಹೆಕ್ಟೇರ್‌ಗೆ ಇಳಿದಿದೆ.

ತಾಲ್ಲೂಕುವಾರು– ಮೂಡಿಗೆರೆ: 255 ಹೆಕ್ಟೇರ್, ಕೊಪ್ಪ: 115, ಶೃಂಗೇರಿ: 60, ಎನ್.ಆರ್.ಪುರ: 38, ಕಳಸ: 35, ಚಿಕ್ಕಮಗಳೂರು: 15, ಕಡೂರು: 9 ಹಾಗೂ ತರೀಕೆರೆ: 5 ಹೆಕ್ಟೇರ್ ಏಲಕ್ಕಿ ಬೆಳೆ ಪ್ರದೇಶ ಇದೆ. ವಾರ್ಷಿಕ ಸುಮಾರು 950 ಕ್ವಿಂಟಲ್ ಉತ್ಪಾದನೆ ಇದೆ.

ಕಟ್ಟೆ ರೋಗ, ಬುಡ ಕೊಳೆಯುವ ರೋಗ, ಕಾಂಡ ಕೊರಕ ಬಾಧೆ, ಪ್ರತಿಕೂಲ ಹವಾಮಾನ ಮೊದಲಾದವು ಏಲಕ್ಕಿ ಬೆಳೆಗೆ ಕಂಟಕವಾಗಿ ಪರಿಣಮಿಸಿವೆ. ಬೆಲೆಯೂ ಇಳಿಮುಖವಾಗಿದೆ. ಇಲ್ಲಿನ ಹಲವು ರೈತರು ಏಲಕ್ಕಿ ಕೃಷಿಯಿಂದ ವಿಮುಖರಾಗಿದ್ದಾರೆ.

ಅಡಿಕೆ ಪ್ರಧಾನ ಬೆಳೆಯಾಗಿರುವ ಉತ್ತರ ಕನ್ನಡದಲ್ಲಿ ದಶಕಗಳ ಹಿಂದೆ ಅಡಿಕೆ ಮರಗಳ ಜತೆ ಏಲಕ್ಕಿ ಬೆಳೆಯುವುದು ರೈತರ ವಾಡಿಕೆ ಆಗಿತ್ತು. ಎರಡು ಸಾವಿರ ಹೆಕ್ಟೇರ್ ಪ್ರದೇಶದಷ್ಟಿದ್ದ ಏಲಕ್ಕಿ ಹತ್ತೇ ವರ್ಷದಲ್ಲಿ ಪಾತಾಳಕ್ಕೆ ಇಳಿದಿದೆ. ಸದ್ಯ ಜಿಲ್ಲೆಯಲ್ಲಿ 392 ಹೆಕ್ಟೇರ್ ಪ್ರದೇಶಲ್ಲಿ ಮಾತ್ರ ಏಲಕ್ಕಿ ಬೆಳೆಯಲಾಗುತ್ತಿದೆ. ಜಿಲ್ಲೆಯ ಶಿರಸಿ, ಯಲ್ಲಾಪುರ, ಸಿದ್ದಾಪುರ, ಜೋಯಿಡಾ ಭಾಗದಲ್ಲಿ ಅಲ್ಲಲ್ಲಿ ಏಲಕ್ಕಿ ಬೆಳೆಯಲಾಗುತ್ತಿದೆ. ಮನೆಯ ಉಪಯೋಗದ ಸಲುವಾಗಿ ರೈತರು ತೋಟದಲ್ಲಿ ಬೆರಳೆಣಿಕೆಯಷ್ಟು ಏಲಕ್ಕಿ ಗಿಡ ಉಳಿಸಿಕೊಂಡಿದ್ದಾರೆ. ಕೆಲವೇ ರೈತರು ಎಕರೆಗಟ್ಟಲೆ ಏಲಕ್ಕಿ ಬೆಳೆಯುತ್ತಿದ್ದಾರೆ.

‘ಏಲಕ್ಕಿಯನ್ನೂ ರಾಸಾಯನಿಕ ಬಳಸದೆ ಬೆಳೆಯುವ ಹಂಬಲವಿತ್ತು. ಮೊದಲ ವರ್ಷ ಸುಮಾರು ಒಂದು ಸಾವಿರ ಗಿಡಗಳು ಪ್ರಾಣಿಗಳ ಹಾವಳಿಗೆ ತುತ್ತಾಗಿದ್ದವು. ನಂತರದ ವರ್ಷದಲ್ಲೂ ಒಂದು ಸಾವಿರದಷ್ಟು ಗಿಡಗಳು ಅತಿವೃಷ್ಟಿಯಿಂದ ಕೊಳೆರೋಗಕ್ಕೆ ತುತ್ತಾಗಿ ಹಾಳಾದವು. ಆನಂತರದಲ್ಲೂ ರೋಗಬಾಧೆಗೆ ಮತ್ತೆ ಸಾವಿರಾರು ಗಿಡ ನಾಶವಾಯಿತು. ಆದರೂ ಸಾವಯವ ಪದ್ಧತಿ ಕೈಬಿಡದೆ ಏಲಕ್ಕಿ ಗಿಡ ಬೆಳೆಸಿದ್ದೇನೆ’ ಎನ್ನುತ್ತಾರೆ ನಾಲ್ಕು ಸಾವಿರ ಏಲಕ್ಕಿ ಗಿಡ ಬೆಳೆಸಿರುವ ಶಿರಸಿ ತಾಲ್ಲೂಕು ಮಾವಿನಕೊಪ್ಪದ ರೈತ ದತ್ತಾತ್ರೇಯ ಹೆಗಡೆ.

‘ಏಲಕ್ಕಿ ಬೆಳೆಗೆ ಕಟ್ಟೆ ಕಂದು ರೋಗ ವಿಪರೀತ ಬಾಧಿಸುತ್ತಿದೆ. ಇದರಿಂದ ಗಿಡಗಳು ನಾಶವಾಗುತ್ತವೆ. ಸೂಕ್ತ ಔಷಧ ಸಿಗದ ಕಾರಣ ರೈತರು ಏಲಕ್ಕಿ ಬೆಳೆಯುವುದನ್ನು ಕಡಿಮೆ ಮಾಡಿದ್ದಾರೆ. ಜತೆಗೆ ಏಳೆಂಟು ವರ್ಷದಿಂದ ಈಚೆಗೆ ಏಲಕ್ಕಿ ದರದಲ್ಲೂ ಭಾರಿ ಕುಸಿತವಾಗಿದೆ. ಕೆ.ಜಿ.ಗೆ ಸರಾಸರಿ ₹4 ಸಾವಿರದಷ್ಟಿದ್ದ ದರ ಈಗ ₹700 ರಿಂದ ₹1 ಸಾವಿರದವರೆಗೆ ನಡೆಯುತ್ತಿರುವುದು ರೈತರ ಆಸಕ್ತಿ ಕುಂದುವಂತೆ ಮಾಡಿದೆ’ ಎನ್ನುತ್ತಾರೆ ತೋಟಗಾರಿಕಾ ಇಲಾಖೆಯ ಹಿರಿಯ ಸಹಾಯಕ ನಿರ್ದೇಶಕ ಸತೀಶ ಹೆಗಡೆ.

ಸಂಬಾರ ಮಂಡಳಿ ಎಚ್ಚೆತ್ತುಕೊಳ್ಳಬೇಕಿದೆ: ರಾಜ್ಯದಲ್ಲಿ ಏಲಕ್ಕಿ ಬೆಳೆ ಮತ್ತೆ ತನ್ನ ಹಿಂದಿನ ವೈಭವ ಕಂಡುಕೊಳ್ಳಬೇಕಾದರೆ ಸಂಬಾರ ಮಂಡಳಿಯ ಸಕ್ರಿಯ ಭಾಗವಹಿಸುವಿಕೆ ಅಗತ್ಯ. ಸೂಕ್ತವಾದ ಮಾರುಕಟ್ಟೆ ವ್ಯವಸ್ಥೆ ಕಲ್ಪಿಸುವುದು, ಹರಾಜು ಪ್ರಕ್ರಿಯೆಯ ಮೇಲ್ವಿಚಾರಣೆ ನಡೆಸುವ ಮೂಲಕ ಬೆಳೆಗಾರರಿಗೆ ಕನಿಷ್ಠ ಬೆಲೆ ಸಿಗುವಂತೆ ಮಾಡುವ ತುರ್ತು ಅಗತ್ಯ ಇದೆ ಎನ್ನುವುದು ಬೆಳೆಗಾರರು ಮತ್ತು ವ್ಯಾಪಾರಿಗಳ ಒಕ್ಕೊರಲಿನ ಅಭಿಪ್ರಾಯವಾಗಿದೆ.

ಕೇರಳದಲ್ಲಿ ಸಂಬಾರ ಮಂಡಳಿಯ ನಿರ್ವಹಣೆಯಲ್ಲಿಯೇ ಇ–ಹರಾಜು ನಡೆಯುತ್ತದೆ. ಇದರಿಂದಾಗಿ ಬೆಳೆಗಾರರಿಗೆ ಸೂಕ್ತ ಬೆಲೆ ಸಿಗುತ್ತಿದೆ. ಆದರೆ, ನಮ್ಮಲ್ಲಿ ಒಂದೆರಡು ಕಡೆ ಹರಾಜು ನಡೆಯುತ್ತಿದೆಯಾದರೂ ಅದರ ಮೇಲೆ ಮಂಡಳಿಯ ನಿಯಂತ್ರಣವಾಗಲಿ, ಮೇಲ್ವಿಚಾರಣೆಯಾಗಲಿ ಇಲ್ಲ. ಹೀಗಾಗಿ ಬೆಳೆಗಾರರಿಗೆ ಅದರಲ್ಲಿಯೂ ಸಣ್ಣ ಪ್ರಮಾಣದಲ್ಲಿ ಬೆಳೆಯುತ್ತಿರುವವರಿಗೆ ಮಾಡಿದ ಖರ್ಚೂ ಸಿಗದೇ ಇರುವಂತಾಗಿದೆ. ಹರಾಜು ಪ್ರಕ್ರಿಯೆಯ ಮೇಲೆ ಕೆಲವೇ ಕೆಲವು ಮಂದಿಯ ಪ್ರಭಾವ ಇದೆ. ಅಲ್ಲದೆ, ಯಾವ ಬೆಳೆ ಯಾರಿಗೆ ಸೇರಿದ್ದು ಎನ್ನುವುದು ಹರಾಜಿಗೂ ಮುನ್ನವೇ ಖರೀದಿದಾರರಿಗೆ ತಿಳಿದಿರುತ್ತದೆ. ಇದರಿಂದ ಉತ್ತಮ ಬೆಳೆ ಇದ್ದರೂ ಅದಕ್ಕೆ ಸರಿಯಾದ ಬೆಲೆ ಸಿಗುತ್ತಿಲ್ಲ. ಒಟ್ಟಾರೆ, ರಾಜ್ಯದಲ್ಲಿ ಏಲಕ್ಕಿಯ ಭವಿಷ್ಯ ನಿಶ್ಚಿತ, ಉತ್ತಮ ಬೆಲೆ ಹಾಗೂ ಉತ್ತಮ ಇಳುವರಿ ನೀಡುವ ತಳಿ ಅಭಿವೃದ್ಧಿಯ ಮೇಲೆ ಅವಲಂಬಿತವಾಗಿದೆ.

(ಪೂರಕ ಮಾಹಿತಿ: **ಕೆ.ಎಸ್. ಗಿರೀಶ, ಬಿ.ಜೆ. ಧನ್ಯಪ್ರಸಾದ್, ಗಣಪತಿ ಹೆಗಡೆ, ಚಿದಂಬರ ಪ್ರಸಾದ್, ಗಾಣಧಾಳು ಶ್ರೀಕಂಠ**)

ಏಲಕ್ಕಿ ಪ್ರಮುಖ ತಳಿಗಳು

ಅಪ್ಪಂಗಳ –1, ಅಪ್ಪಂಗಳ –2 ಮತ್ತು ಅಪ್ಪಂಗಳ–3 ಇವು ಕೊಡಗಿನಲ್ಲಿ ಹೆಚ್ಚಾಗಿ ಬೆಳೆಯುತ್ತಿರುವ ತಳಿಗಳು. ಇದರ ಜೊತೆಗೆ ಅವಿನಾಶ್ ಸಕಲೇಶಪುರದ ಐಸಿಆರ್‌ಐ–3(ಎಸ್‌ಕೆ-ಪಿ14), ಮೂಡಿಗೆರೆ 1,2,3, ನೆಲ್ಯಾನಿ ಗ್ರೀನ್ ಗೋಲ್ಡ್ ಏಲಕ್ಕಿ ತಳಿ, ಐಐಎಸ್‌ಆರ್ ವಿಜೇತ– ಇದು ಕಟ್ಟೆ ರೋಗನಿರೋಧಕ ತಳಿ.

ಕಾಳ್ಗಿಚ್ಚು: ಗಾಯಾಳು ಗಾರ್ಡ್ ಸಾವು

ಸುಂದರೇಶ್

ಸಕಲೇಶಪುರ (ಹಾಸನ): ತಾಲ್ಲೂಕಿನ ಕಾಡುಮನೆ ಬಳಿ ರಣಭಿಕ್ತಿ ರಕ್ಷಿತಾರಣ್ಯದಲ್ಲಿ ಗುರುವಾರ ಬೆಂಕಿ ನಂದಿಸಲು ಹೋಗಿ ಗಾಯಗೊಂಡಿದ್ದ ಅರಣ್ಯ ಇಲಾಖೆಯ ಗಾರ್ಡ್ ಸುಂದರೇಶ್ (42) ಶನಿವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಘಟನೆಯಲ್ಲಿ ತೀವ್ರವಾಗಿ ಗಾಯಗೊಂಡಿದ್ದ ಫಾರೆಸ್ಟರ್ ಮಂಜುನಾಥ ಹಾಗೂ ಗಾರ್ಡ್ ಸುಂದರೇಶ್ ಅವರನ್ನು ಬೆಂಗಳೂರಿನ ಸೇಂಟ್ ಜಾನ್ಸ್ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಶಾಸಕ ಎಚ್.ಕೆ. ಕುಮಾರಸ್ವಾಮಿ ಆಸ್ಪತ್ರೆಗೆ ಭೇಟಿ ನೀಡಿ, ಗಾಯಾಳುಗಳ ಆರೋಗ್ಯ ವಿಚಾರಿಸಿದ್ದರು.

ಕಾಡುಮನೆ ಇಟ್ಟಿಗೆಗೂಡು ಪ್ರದೇಶದಲ್ಲಿ ಬೆಂಕಿ ಹತ್ತಿಕೊಂಡಾಗ ಅರಣ್ಯ ಇಲಾಖೆ ಅಧಿಕಾರಿಗಳು ಅಲ್ಲಿಗೆ ತೆರಳಿದ್ದರು. ಗಾಳಿಯ ತೀವ್ರತೆಗೆ ಬೆಂಕಿ ಎಲ್ಲೆಡೆ ಆವರಿಸಿದ್ದರಿಂದ ಅರಣ್ಯ ಇಲಾಖೆಯ ನಾಲ್ವರು ಸಿಬ್ಬಂದಿ ಗಾಯಗೊಂಡಿದ್ದರು.

ಶೇ 80ರಷ್ಟು ಸುಟ್ಟ ಗಾಯಗಳಾಗಿದ್ದ ಸುಂದರೇಶ್ ಸ್ಥಿತಿ ಚಿಂತಾಜನಕವಾಗಿತ್ತು. ಹೀಗಾಗಿ, ಝೀರೊ ಟ್ರಾಫಿಕ್‌ನಲ್ಲಿ ಸುಂದರೇಶ್ ಹಾಗೂ ಮಂಜುನಾಥ ಅವರನ್ನು ಬೆಂಗಳೂರಿನ ಆಸ್ಪತ್ರೆಗೆ ಕರೆದೊಯ್ಯಲಾಗಿತ್ತು.

ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಸಂಪಿಗೆಸರ ಗ್ರಾಮದ ಸುಂದರೇಶ್ ಮೃತದೇಹವನ್ನು ಶನಿವಾರ ಸಂಜೆ ಸಕಲೇಶಪುರದ ಅರಣ್ಯ ಇಲಾಖೆ ಕಚೇರಿಗೆ ತರಲಾಗಿತ್ತು. ಗೌರವ ಸಲ್ಲಿಸಿದ ಬಳಿಕ ಸ್ವಗ್ರಾಮಕ್ಕೆ ಕಳುಹಿಸಲಾಯಿತು.

ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬಂಡೀಪುರದಲ್ಲೂ ನಡೆದಿತ್ತು..

ಚಾಮರಾಜನಗರ: ಆರು ವರ್ಷಗಳ ಹಿಂದೆ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಫೆ.18ರಂದೇ ಕಾಳ್ಗಿಚ್ಚು ನಂದಿಸುವ ಕಾರ್ಯಾಚರಣೆಯಲ್ಲಿ ವಿಜಯಪುರ ಜಿಲ್ಲೆಯ ಅರಣ್ಯ ರಕ್ಷಕ ಮುರುಗಪ್ಪ ಮೃತಪಟ್ಟಿದ್ದರು.

ಬಂಡೀಪುರದ ಕಲ್ಕೆರೆ ವಲಯದಲ್ಲಿ ಕಂಡು ಬಂದ ಬೆಂಕಿಯನ್ನು ನಂದಿಸುವ ಸಂದರ್ಭದಲ್ಲಿ ಬೆಂಕಿಯ ಜ್ವಾಲೆಯ ಶಾಖ ಹಾಗೂ ಆಮ್ಲಜನಕದ ಕೊರತೆಯಿಂದ ಕುಸಿದು ಬಿದ್ದು ಸಜೀವ ದಹನವಾಗಿದ್ದರು. ಘಟನೆಯಲ್ಲಿ ಆರ್‌ಎಫ್‌ಒ ಹಾಗೂ ಇನ್ನಿಬ್ಬರು ವಾಚರ್‌ಗಳಿಗೆ ಸುಟ್ಟಗಾಯಗಳಾಗಿದ್ದವು. ಅರಣ್ಯ ಇಲಾಖೆಯು ಮುರುಗಪ್ಪ ಕುಟುಂಬಕ್ಕೆ ₹30 ಲಕ್ಷ ಪರಿಹಾರ ಹಾಗೂ ಅವರ ಪತ್ನಿಗೆ ಕೆಲಸವನ್ನೂ ನೀಡಿತ್ತು.

ಮಾವುತನ ಉದಾಸೀನ: ಕೊನೆಯುಸಿರೆಳೆದ ‘ಮೋತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಮೋತಿ’ ಹೆಸರಿನ 35 ವರ್ಷ ವಯಸ್ಸಿನ ಖಾಸಗಿ ಒಡೆತನಕ್ಕೆ ಸೇರಿದ ಆನೆಯೊಂದು ಉತ್ತರಾಖಂಡದಲ್ಲಿ ತಿಂಗಳ ಹಿಂದೆ ತಪ್ಪಲಿನಲ್ಲಿ ಕುಸಿದುಬಿದ್ದಿತ್ತು. ಬಲಪಾದದ ಮೂಳೆಮುರಿತಕ್ಕೆ ಒಳಗಾಗಿದ್ದ ಆನೆಗೆ, ಸಕಾಲದಲ್ಲಿ ಚಿಕಿತ್ಸೆ ಸಿಗದೇ ಐದಾರು ತಿಂಗಳು ಪರದಾಡಿತ್ತು. ಶನಿವಾರ ಕೊನೆಯುಸಿರೆಳೆಯಿತು.

ವೈಲ್ಡ್‌ಲೈಫ್ ಎಸ್‌ಒಎಸ್ ಹಾಗೂ ಭಾರತೀಯ ಸೇನೆ ಎಚ್ಚರಿಸುವವರೆಗೆ ಅದಕ್ಕೆ ಚಿಕಿತ್ಸೆ ದೊರೆತಿರಲಿಲ್ಲ. ಮಾವುತನ ಉದಾಸೀನದಿಂದಾಗಿ ಪಾದದ ಮೂಳೆ ಮುರಿತಕ್ಕೆ ಚಿಕಿತ್ಸೆ ಸಿಗದೆ, ಸ್ನಾಯುಗಳಲ್ಲಿನ ಕೋಶಗಳೆಲ್ಲ ಸಡಿಲಗೊಂಡು ಇನ್ನಷ್ಟು ಆರೋಗ್ಯದ ಸಮಸ್ಯೆಗಳು ಆನೆಯನ್ನು ಬಾಧಿಸಿದ್ದವು.

‘ನಾಲ್ಕು ವಾರ ಮೋತಿ ಉಳಿಸಿಕೊಳ್ಳಲು ಸಾಕಷ್ಟು ಪ್ರಯತ್ನಪಟ್ಟೆವು. ಆನೆಯೂ ಚಿಕಿತ್ಸೆಗೆ ಸ್ಪಂದಿಸಿ, ಹೋರಾಟದ ಮನೋಭಾವ ತೋರಿತ್ತು. ಆದರೂ ಉಳಿಸಿಕೊಳ್ಳಲು ಆಗಲಿಲ್ಲ’ ಎಂದು ವೈಲ್ಡ್‌ಲೈಫ್ ಎಸ್‌ಒಎಸ್ ಸಂಸ್ಥೆಯ ಸಹ ಸ್ಥಾಪಕ ಹಾಗೂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕಾರ್ತಿಕ್ ಸತ್ಯನಾರಾಯಣ್ ಬೇಸರದಿಂದ ಪ್ರತಿಕ್ರಿಯಿಸಿದರು.

ಭಾರತದ ರಾಷ್ಟ್ರೀಯ ಸಂಪತ್ತು ಎನಿಸಿರುವ ಆನೆಗಳನ್ನು ಉದಾಸೀನದಿಂದ ನೋಡಬಾರದು. ಅವುಗಳ ಆರೋಗ್ಯ ಸಮಸ್ಯೆ ನಿರ್ಲಕ್ಷಿಸಿದರೆ ಮೋತಿಗೆ ಆದಂಥ ಗತಿ ಒದಗುತ್ತದೆ ಎಂದು ಸಂಸ್ಥೆಯ ಕಾರ್ಯದರ್ಶಿ ಗೀತಾ ಶೇಷಮಣಿ ವಿಷಾದಿಸಿದರು.

‘ಮೋತಿ’ಗೆ ಭಾವುಕ ವಿದಾಯ

ಸಂಸ್ಥೆಯ ಪಶುವೈದ್ಯಾಧಿಕಾರಿ ಡಾ. ರಾಹುಲ್ ರಜಪೂತ್ ಅವರ ಪ್ರಕಾರ ರಕ್ತದ ಪರೀಕ್ಷೆಯಿಂದ ಆನೆಯ ಮೂತ್ರ ಕೋಶ ಹಾಗೂ ಯಕೃತ್‌ನಲ್ಲೂ ಸಮಸ್ಯೆ ಇರುವುದು ದೃಢಪಟ್ಟತ್ತು. ದೀರ್ಘಾವಧಿ ಪೋಷಕಾಂಶಗಳ ಕೊರತೆಯಿಂದ ಹೀಗೆ ಆಗಿತ್ತು.

‘1972ರ ವನ್ಯಜೀವಿ ಸಂರಕ್ಷಣಾ ಕಾಯ್ದೆ ಉತ್ತಮ ಅಂಶಗಳನ್ನು ಒಳಗೊಂಡಿದೆ. ಆದರೆ, ಅದರ ಅನುಷ್ಠಾನ ಸರಿಯಾಗಿ ಆಗುತ್ತಿಲ್ಲ’ ಎಂದು ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿದ್ದು ನಿವೃತ್ತರಾಗಿರುವ ಬಿ.ಕೆ. ಸಿಂಗ್ ಅಭಿಪ್ರಾಯಪಡುತ್ತಾರೆ.

ಸಾಮೂಹಿಕ ಅತ್ಯಾಚಾರ: ವರ್ಷದೊಳಗೆ ತೀರ್ಪು

ನಾಲ್ವರಿಗೆ ಜೀವಾವಧಿ ಶಿಕ್ಷೆ

ಪ್ರಜಾವಾಣಿ ವಾರ್ತೆ

ಆನಂದ್

ಕಾಂತರಾಜ್

ಪ್ರವೀಣ್

ವೇಣು

ಕೋಲಾರ: ಕಳೆದ ವರ್ಷ ಹದಿನಾಲ್ಕರ ಹರೆಯದ ಬಾಲಕಿಯೊಬ್ಬಳನ್ನು ಅಪಹರಿಸಿ ಸಾಮೂಹಿಕ ಅತ್ಯಾಚಾರವೆಸಗಿದ್ದ ಬಂಗಾರಪೇಟೆ ತಾಲ್ಲೂಕಿನ ನಾಲ್ವರು ಯುವಕರಿಗೆ ಪೋಕ್ಸೊ ವಿಶೇಷ ನ್ಯಾಯಾಲಯ ಜೀವಾವಧಿ ಶಿಕ್ಷೆ ವಿಧಿಸಿದೆ.

ಬಂಗಾರಪೇಟೆ ತಾಲ್ಲೂಕಿನ ಹೊಸಕೋಟೆ ಗ್ರಾಮದ ಆನಂದ್ (27), ಕಾಮಸಮುದ್ರ ಎ.ಕೆ. ಕಾಲೊನಿ ನಿವಾಸಿ ಪ್ರವೀಣ್ (21), ಕೆಜಿಎಫ್ ತಾಲ್ಲೂಕಿನ ತಿಮ್ಮಾಪುರ ಗ್ರಾಮದ ಕಾಂತರಾಜ್ (28) ಮತ್ತು ಬೆಂಗನೂರು ಗ್ರಾಮದ ವೇಣು (19) ಶಿಕ್ಷೆಗೆ ಒಳಗಾದ ಅತ್ಯಾಚಾರಿಗಳು.

ಜನ್ಮದಿನಕ್ಕೆ ಹೊಸ ಬಟ್ಟೆ ಕೊಡಿಸದ ತಾಯಿಯೊಂದಿಗೆ ಮುನಿಸಿಕೊಂಡ ಬಾಲಕಿ 2022ರ ಫೆಬ್ರುವರಿ 18ರಂದು ಬಂಗಾರಪೇಟೆ ಬಸ್ ನಿಲ್ದಾಣದಲ್ಲಿ ಕುಳಿತಿದ್ದಳು. ಬಾಲಕಿಯನ್ನು ಅಪಹರಿಸಿದ ಯುವಕರು ತನಿಮಡುಗು ಗ್ರಾಮದ ಬಾರ್ ಹಿಂಭಾಗದಲ್ಲಿ ಸಾಮೂಹಿಕ ಅತ್ಯಾಚಾರ ಎಸಗಿದ್ದರು. ಈ ಸಂಬಂಧ ಬಂಗಾರಪೇಟೆ ತಾಲ್ಲೂಕಿನ ಕಾಮಸಮುದ್ರ ಠಾಣೆಯಲ್ಲಿ ದೂರು ದಾಖಲಾಗಿತ್ತು.

ಪೋಕ್ಸೊ ಕಾಯ್ದೆ ಅಡಿ ಪ್ರಕರಣ ದಾಖಲಿಸಿಕೊಂಡ ಪೊಲೀಸರು ತನಿಖೆ ನಡೆಸಿ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದರು.

ಪ್ರಕರಣದ ವಿಚಾರಣೆ ನಡೆಸಿದ ನ್ಯಾಯಾಧೀಶ ಬಿ.ಪಿ. ದೇವಮಾನೆ ಅವರು ಅಪರಾಧಿಗಳಿಗೆ ಶುಕ್ರವಾರ ಜೀವಾವಧಿ ಶಿಕ್ಷೆ ಹಾಗೂ ತಲಾ ₹25 ಸಾವಿರ ದಂಡ ವಿಧಿಸಿದ್ದಾರೆ. ಸರ್ಕಾರದ ಪರವಾಗಿ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಡಿ. ಲಲಿತಕುಮಾರಿ ವಾದ ಮಂಡಿಸಿದ್ದರು.

ಗುಂಡಣ್ಣ

25 ವರ್ಷಗಳ ಹಿಂದೆ

ಗುರುವಾರ, 19-2-1998

● **ಸಿ. ಸುಬ್ರಮಣ್ಯಂಗೆ ‘ಭಾರತ ರತ್ನ’**

ನವದೆಹಲಿ, ಫೆ. 18 (ಪಿಟಿಐ): ಹಿರಿಯ ಗಾಂಧಿವಾದಿ ಹಾಗೂ ಕೇಂದ್ರದ ಮಾಜಿ ಕೃಷಿ ಸಚಿವ ಸಿ. ಸುಬ್ರಮಣ್ಯಂ ಅವರನ್ನು ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿಯಾದ ‘ಭಾರತ ರತ್ನ’ಕ್ಕೆ ಆಯ್ಕೆ ಮಾಡಲಾಗಿದೆ.

ಅರವತ್ತರ ದಶಕದಲ್ಲಿ ಅವರು ದೇಶದಲ್ಲಿ ಹಸಿರು ಕ್ರಾಂತಿಗೆ ಉತ್ತೇಜನ ನೀಡಿದ್ದರು.

● **ಅಂತರಿಕ್ಷ ನೌಕೆಯ ದಾಖಲೆ**

ಪಾಸದೇನಾ (ಯುಎಸ್‌ಎ) ಫೆ. 18 (ಎಪಿ): ಭೂಮಿಯಿಂದ 6.5 ಶತಕೋಟಿ ಮೈಲುಗಳ ದೂರದಲ್ಲಿ ಪ್ರಯಾಣ ಮಾಡುತ್ತಿರುವ ಅಮೆರಿಕದ ಅಂತರಿಕ್ಷ ನೌಕೆ ವಾಯೇಜರ್–1 ಭೂಮಿ ಬಿಟ್ಟು ಇಷ್ಟು ದೂರ ಕ್ರಮಿಸಿದ ಮೊದಲ ಮಾನವ ನಿರ್ಮಿತ ವಸ್ತು ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ.

50 ವರ್ಷಗಳ ಹಿಂದೆ

ಸೋಮವಾರ, 19-2-1973

● **ಹೊಸ ಕಾರ್ಮಿಕ ಶಾಸನ: ಕೇಂದ್ರಕ್ಕೆ ರಾಜ್ಯಗಳ ಮನವಿ**

ನವದೆಹಲಿ, ಫೆ. 18– ಕೈಗಾರಿಕಾ ಬಾಂಧವ್ಯ ಸುಧಾರಣೆಗಾಗಿ ಹೊಸ ಕಾರ್ಮಿಕ ಶಾಸನಗಳನ್ನು ಜಾರಿಗೆ ತರಲು ರಾಜ್ಯ ಸರ್ಕಾರಗಳು ಕೇಂದ್ರ ಸರ್ಕಾರದ ಅನುಮತಿ ಕೇಳಿವೆ.

ಮುಷ್ಕರ ಮತ್ತು ಬೀಗಮುದ್ರೆ ನಿಷೇಧಿಸಿ ಸುಗ್ರೀವಾಜ್ಞೆ ಹೊರಡಿಸಿರುವ ಪಶ್ಚಿಮ ಬಂಗಾಳ, ತಮಿಳುನಾಡು, ಕೇರಳ, ಮಹಾರಾಷ್ಟ್ರ, ಉತ್ತರಪ್ರದೇಶ ಮತ್ತು ಗುಜರಾತ್ ರಾಜ್ಯಗಳು ಕೇಂದ್ರಕ್ಕೆ ಹೊಸ ಕಾರ್ಮಿಕ ಶಾಸನಗಳನ್ನು ಕಳುಹಿಸಿವೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಭಾನುವಾರ ಫೆಬ್ರುವರಿ 19, 2023

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯನ ಶಿಶಿರ ಋತು ತಿಥಿ: ಮಾಘ ಕೃಷ್ಣ ಚತುರ್ದಶಿ ಗಂ. 16-19 ನಕ್ಷತ್ರ: ಶ್ರವಣ ಗಂ. 14-44 ಯೋಗ: ವರಿಯಾನ್ ಗಂ. 15-19, ಕರಣ: ಶಕುನಿ ಗಂ. 16-19, ಕುಂಭ ಮಾಸದ 06 ನೇ ದಿನ. ರಾಹುಕಾಲ : ಸಾಯಂಕಾಲ 04-30–06-00
ಸೂರ್ಯೋದಯ : 06-55 ಸೂರ್ಯಾಸ್ತ : 06-34 ಮುಸ್ಲಿಂ ದಿನಾಂಕ : 27 ರಜಬ್
ದಿನ ವಿಶೇಷ : ಶಿವಾಜಿ ಜಯಂತಿ, ಕ್ವಿಂಕ್ವಗೇಶಿಮಾ (ಶ್ರೋವ್) ಭಾನುವಾರ (ಕ್ರಿಶ್ಚಿಯನ್), ಸಬ್-ಎ-ಮಿರಾಜ್ (ಹಿಂದಿನ ದಿನ ರಾತ್ರಿ) (ಮುಸ್ಲಿಂ)
ಅದೃಷ್ಟ ಸಂಖ್ಯೆ : 4, 9

ಮೇಷ: ಗೃಹದಲ್ಲಿ ಸುಖ-ಶಾಂತಿ ಇರಲಿದೆ. ನಿಲುವು ಸ್ಪಷ್ಟಪಡಿಸಿಕೊಂಡಲ್ಲಿ ಗೆಲುವು ನಿಮ್ಮದಾಗುವುದು. ವಸ್ತುಗಳ ವ್ಯಾಪಾರಿಗಳಿಗೆ ಹೆಚ್ಚಿನ ಆದಾಯ. ಸ್ನೇಹಿತರೊಡನೆ ವ್ಯವಹಾರ ನಡೆಸುವ ನಿರ್ಧಾರ ಕೈ ಬಿಡುವುದು ಉತ್ತಮ.

ವೃಷಭ: ಈ ದಿನ ಮಾಡುವ ಕೆಲಸದಲ್ಲಿ ನಿಮಗೆ ತೃಪ್ತಿ ಇರುತ್ತದೆ. ಮಗನ ಮುಖ್ಯ ವಿಷಯದಲ್ಲಿ ಪ್ರಗತಿ ಇದ್ದು ಶುಭ ವಾರ್ತೆ ಕೇಳುವಿರಿ. ಶ್ರೀ ಸುಬ್ರಮಣ್ಯಸ್ವಾಮಿ ಪ್ರಾರ್ಥನೆಯಿಂದ ನಿಮ್ಮ ಕೆಲಸ ಕಾರ್ಯಗಳಿಗೂ ಯಶಸ್ಸು ದೊರೆಯುವುದು.

ಮಿಥುನ: ಪ್ರತಿನಿತ್ಯದ ದಿನಚರಿಯ ಹೊರತಾಗಿ ಹೊಸ ಕೆಲಸ ನಿಮ್ಮ ಹೆಗಲೇರುವುದು. ಹಿರಿಯರ ಆಶೀರ್ವಾದದೊಂದಿಗೆ ಕಾರ್ಯ ಆರಂಭಿಸಿ, ಒಳ್ಳೆಯದಾಗುತ್ತದೆ. ಮಕ್ಕಳ ಆರೋಗ್ಯದ ಮೇಲೆ ಹೆಚ್ಚಿನ ನಿಗಾ ಇಡಬೇಕಾಗಬಹುದು.

ಕರ್ಕಾಟಕ: ಇಷ್ಟು ದಿನ ಶ್ರಮಪಟ್ಟ ನಿಮಗೆ ನಿರೀಕ್ಷೆಯ ಫಲ ದೊರೆಯದಿರಬಹುದು. ಧೃತಿಗೆಡದೆ ಮುಂದುವರೆದಲ್ಲಿ ಈಶ್ವರನ ಕೃಪೆಯಿಂದ ಉತ್ತಮವಾದ ಫಲ ದೊರೆಯುತ್ತದೆ. ವಿದ್ಯಾರ್ಥಿಗಳು ಓದಿನಲ್ಲಿ ಹೆಚ್ಚಿನ ಗಮನವಿಡಬೇಕು.

ಸಿಂಹ: ಮನೋರಂಜನೆಗಾಗಿ ಪ್ರವಾಸ ಕೈಗೊಳ್ಳುವಂತಾಗುವುದು. ಪಾಲುದಾರಿಕೆ ವ್ಯವಹಾರದಿಂದ ಹೊರಬರುವ ಪ್ರಯತ್ನವನ್ನು ನಡೆಸಿ. ಪತ್ನಿಯ ಆರೋಗ್ಯದಲ್ಲಿ ರಕ್ತದೊತ್ತಡದಂತಹ ಸಮಸ್ಯೆಗಳು ಉಂಟಾಗುತ್ತದೆ.

ಕನ್ಯಾ: ಕಬ್ಬಿಣದ ಕೆಲಸ ಮಾಡುವವರಿಗೆ ಅಧಿಕವಾದ ದೇಹಾಯಾಸವಾಗುವ ಸಂಭವ. ಮಹಿಳೆಯರಿಗೆ ಆಭರಣ ಕೊಳ್ಳುವಂತಹ ಇಷ್ಟಾರ್ಥ ಸಿದ್ಧಿಯಾಗಲಿದೆ. ಸಂಪರ್ಕ ಸಾರಿಗೆಯಲ್ಲಿ ಸೇವೆ ಸಲ್ಲಿಸುವವರಿಗೆ ಲಾಭವಾಗುವುದು.

ತುಲಾ: ನಿಮ್ಮ ಪೂರ್ವ ಆಲೋಚನೆಯ ಕೌಟುಂಬಿಕ ಅಭಿವೃದ್ಧಿಯ ಕೆಲಸಗಳು ಮಂದಗತಿಯಲ್ಲಿ ಸಾಗಲಿದೆ. ಅದರಿಂದಾಗಿ ಕಷ್ಟ- ನಷ್ಟವೂ ಉಂಟಾಗಬಹುದು. ಕೌಟುಂಬಿಕ ವಿಚಾರದಲ್ಲಿ ಸಂಗಾತಿಯ ಸಲಹೆಗಳಿಗೆ ಗಮನಹರಿಸಿ.

ವೃಶ್ಚಿಕ: ಇತರರ ಮಾತಿಗೆ ಕಿವಿಗೊಡದೆ ನಿಮ್ಮಂತೆ ಇರುವುದು ಉತ್ತಮ. ಮನೆಯಲ್ಲಿ ಮಕ್ಕಳಿಂದ ಸಂಭ್ರಮದ ವಾತಾವರಣ ಮೂಡುವುದು. ನೀವಾಡಿದ ಮಾತುಗಳು ನಿಮಗೆ ಮುಳ್ಳಾಗಬಹುದು. ಕೆಂಪು ಬಣ್ಣ ಶುಭ ತರಲಿದೆ.

ಧನು: ಮಕ್ಕಳ ಹೆಸರಿನಲ್ಲಿ ಹರಕೆಯ ರೂಪದಲ್ಲಿ ಮಾಡಬೇಕಾಗಿರುವ ಧರ್ಮ ಕಾರ್ಯಗಳನ್ನು ಶ್ರದ್ಧೆಯಿಂದ ಆಚರಿಸಿ. ದಿನಗೂಲಿ ಕಾರ್ಮಿಕ ವರ್ಗದವರಿಗೆ ಪರಿಶ್ರಮದಿಂದ ಹೆಚ್ಚಿನ ಆದಾಯ. ಮಾನಸಿಕವಾಗಿ ಸದೃಢರಾಗುವಿರಿ.

ಮಕರ: ನಿಮ್ಮನ್ನು ಅತಿಯಾಗಿ ಪ್ರೀತಿಸುವ, ಆದರಿಸುವ ಜನರೊಂದಿಗೆ ಕಾಲ ಕಳೆಯುವಿರಿ. ವ್ಯವಹಾರದಲ್ಲಿ ಎಲ್ಲಾ ಸನ್ನಿವೇಶಗಳು ನಿಮ್ಮ ಪರವಾಗಿರುವಂತೆ ತೋರಿದರೂ, ಮೋಸ ಹೋಗುವ ಸಂಭವವಿದೆ. ಜಾಗೃತರಾಗಿರಿ.

ಕುಂಭ: ತಾಂತ್ರಿಕ ವಿದ್ಯೆಯಲ್ಲಿ ಯಶಸ್ಸನ್ನು ಹೊಂದುವ ಎಲ್ಲಾ ಲಕ್ಷಣಗಳೂ ಕಂಡರೂ ವಿದ್ಯಾಭ್ಯಾಸಕ್ಕೆ ತೊಂದರೆಯಾಗುವ ಪರಿಸ್ಥಿತಿ ಎದುರಾಗಬಹುದು. ಬೆನ್ನು ನೋವು ಹೋಗಲಾಡಿಸಿಕೊಳ್ಳಲು ಯೋಗದಲ್ಲಿ ಆಸಕ್ತಿ ಮೂಡಲಿದೆ.

ಮೀನ: ಕುಟುಂಬದಲ್ಲಿ ಹಿಂದೆ ನಡೆದ ಕೆಟ್ಟ ವಿಚಾರಗಳ ಬಗ್ಗೆ ಮಾತನಾಡುವುದು ಸಹೋದರರಲ್ಲಿ ಪುನಃ ಪುನಃ ಭಿನ್ನಾಭಿಪ್ರಾಯ ಬೆಳೆಯಲು ಕಾರಣವಾಗುತ್ತದೆ. ದುರ್ಗಾದೇವಿಯಲ್ಲಿ ಶರಣಾಗುವುದರಿಂದ ಶುಭ ಸಂತೋಷ ಪ್ರಾಪ್ತಿ.

ಪದಬಂಧ 5235

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಮಂಗಳ ಕಾರ್ಯವಾದ ಮೇಲೆ ಮಾಡುವ ಜಳಕ (6)
4. ಗುರಿಯಿಟ್ಟು ಹೊಡೆಯುವುದರಲ್ಲಿ ನಿಪುಣ (4)
5. ಅಧಿಕಾರ ಪತ್ರವಿದು (3)
7. ನೀರ ಮೇಲಣ ಗುಳ್ಳೆ (3)
10. ರೀತಿಯೊಡಗೂಡುವ ಸಂಪ್ರದಾಯ (3)
11. ಚುರುಕ್ಕೆನ್ನುವ ಅಂತಃಕರಣ! (3)
13. ರಾತ್ರಿವೇಳೆ ಸಂಚರಿಸುವ ಕಳ್ಳ ಪಿಶಾಚಿ (4)
15. ಚರ್ಚಿಸುವ ಸ್ಥಳವಿದು (6)

ಮೇಲಿಂದ ಕೆಳಕ್ಕೆ
1. ಅಗಸೆ ಬಾಗಿಲಲ್ಲಿರುವ ಮಡಿವಾಳ (3)
2. ನಡುಗುವುದನ್ನು ನೋಡಿದ್ದಕ್ಕೇ ಈ ಮಂದಹಾಸ (2)
3. ದಿಕ್ಕಿಲ್ಲದವನು ಇಲ್ಲಿಗೆ ಬಂದಿಹನಲ್ಲಾ? (4)
6. ಈತ ಕೆಟ್ಟ ನಡತೆಯವನು (4)
7. ಕೋಟೆಯ ಮೇಲಿನ ಕೊತ್ತಳ (3)
8. ಸೇನಾಧಿಪತಿ ಇಲ್ಲಿದ್ದಾನೆ (4)
9. ತೆಳ್ಳಗಿನ ಸೊಂಟ (4)
12. ತಿರುಗಿ ನಿಂತು ಹೀಗೆ ಸಿಟ್ಟಾಗು (3)
14. ಸೂರ್ಯನ ಇನ್ನೊಂದು ಹೆಸರು (2)



5234ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಚಾರಣಕವಿ 4.ಪಾಷಾಂಡಿ
5.ಧಾವಂತ 6.ಕಶೇರು
8.ತಪ 9.ಅಂಡ
10.ಕುಣಿಕೆ 14.ಲಕ್ಷಣ
15.ಆಯಾಸ 16.ಮರುಕಳಿಸು

ಮೇಲಿಂದ ಕೆಳಕ್ಕೆ:
1.ಚಾರ್ವಾಕ 2.ಣರಕಕೀಲ
3.ವಿಧಾತ 4.ಪಾತಕ
7.ಶೇಕಡ 8.ತರುಣಿ
9.ಅಂಗರಕ್ಷಕ 11.ಕೆಲಸ
12.ಕಣಮ 13.ಮುನಿಸು

ಸುಡೊಕು 5621

	5		4		2		7	6
3		6				2		5
				5			8	
8		5						1
			5	9	3		2	
7		2		6		5		4
				2		8		7
2		7					6	
6			7		9	4		2

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5620 ಸುಡೊಕು

5	3	4	9	8	2	1	7	6
1	7	6	3	4	5	9	8	2
9	8	2	1	6	7	3	4	5
7	2	3	5	9	8	6	1	4
6	5	9	7	1	4	2	3	8
4	1	8	2	3	6	5	9	7
2	9	5	8	7	1	4	6	3
3	6	7	4	2	9	8	5	1
8	4	1	6	5	3	7	2	9

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಬಿಜೆಪಿ ಸರ್ಕಾರದ ವಿರುದ್ಧ ಕಿಡಿಕಾರಿದ ಸಿದ್ದರಾಮಯ್ಯ • 'ಕೈ'– 'ಕಮಲ' ನಾಯಕರ ನಡುವೆ ಜಟಾಪಟಿ

'ಸಚಿವ ಅಶ್ವತ್ಥ ಅಲ್ಲ, ಅಸ್ವಸ್ಥ ನಾರಾಯಣ'

ಪ್ರಜಾವಾಣಿ ವಾರ್ತೆ

ಯಲಬುರ್ಗಾ (ಕೊಪ್ಪಳ ಜಿಲ್ಲೆ): 'ಟಿಪ್ಪು ಸುಲ್ತಾನ್ ರೀತಿಯಲ್ಲಿ ಹೊಡೆದು ಸಾಯಿಸಬೇಕು ಎಂದು ನನ್ನ ಬಗ್ಗೆ ಹೇಳಿರುವ ಸಚಿವ ಅಶ್ವತ್ಥನಾರಾಯಣ ಈಗ ಅಸ್ವಸ್ಥ ನಾರಾಯಣ ಆಗಿದ್ದು, ಅವರಿಗೆ ಮಾನಸಿಕ ಕಾಯಿಲೆ ಇರಬೇಕು. ಅವರು ರಾಜಕಾರಣದಲ್ಲಿ ಇರಲು ಲಾಯಕ್ಕಿಲ್ಲ' ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಕಿಡಿಕಾರಿದರು.

ಕಾಂಗ್ರೆಸ್ ಕಚೇರಿಯಲ್ಲಿ ಶನಿವಾರ ಮಾತನಾಡಿದ ಅವರು, 'ರೈತರು, ದಲಿತರು, ಅಲ್ಪಸಂಖ್ಯಾತರು, ಬಡವರ ಬಗ್ಗೆ ಚರ್ಚಿಸುವ ಬದಲು ಇನ್ನೊಬ್ಬರನ್ನು ಹೊಡೆದು ಹಾಕುವ ಬಗ್ಗೆ ಬಿಜೆಪಿ ಮಾತನಾಡುತ್ತಿದೆ. ನಳಿನ್ ಕುಮಾರ್ ಕಟೀಲ್ ಅಭಿವೃದ್ಧಿ ಕೆಲಸ ಕೇಳಬೇಡಿ. ಲವ್ ಜಿಹಾದ್ ಬಗ್ಗೆ ಮಾತನಾಡಿ ಎನ್ನುತ್ತಾರೆ. ಇಂಥವರ ಸರ್ಕಾರ ಅಧಿಕಾರದಲ್ಲಿ ಇರಬೇಕಾ' ಎಂದು ಪ್ರಶ್ನಿಸಿದರು.

ಕೊಪ್ಪಳ ಜಿಲ್ಲೆಯ ಯಲಬುರ್ಗಾದಲ್ಲಿ ಶನಿವಾರ ನಡೆದ ಸಂಗೊಳ್ಳಿ ರಾಯಣ್ಣ ಪ್ರತಿಮೆ ಅನಾವರಣ ಸಮಾರಂಭದಲ್ಲಿ ಶಾಸಕ ಬೈರತಿ ಸುರೇಶ್ ಮಾತಿಗೆ ಬಿಜೆಪಿ ಮುಖಂಡರು ಆಕ್ಷೇಪ ವ್ಯಕ್ತಪಡಿಸಿದರು

ಸಿದ್ದರಾಮಯ್ಯ ಎದುರೇ ಜಟಾಪಟಿ: ಸಂಗೊಳ್ಳಿ ರಾಯಣ್ಣ ಮೂರ್ತಿ ಅನಾವರಣ ಮತ್ತು ಶಿಲಾ ಮಂಟಪ ಉದ್ಘಾಟನೆಯ ಧಾರ್ಮಿಕ ಕಾರ್ಯಕ್ರಮದಲ್ಲಿ ಸಿದ್ದರಾಮಯ್ಯ ಅವರ ಎದುರೇ ಕಾಂಗ್ರೆಸ್, ಬಿಜೆಪಿ ನಾಯಕರ ನಡುವೆ ಜಟಾಪಟಿ ನಡೆಯಿತು.

ಶಾಸಕ ಬೈರತಿ ಸುರೇಶ್ ಮಾತನಾಡಿ, 'ಯಲಬುರ್ಗಾ ಕ್ಷೇತ್ರದಲ್ಲಿ ರಾಯರಡ್ಡಿ ಅಧಿಕಾರಕ್ಕೆ ಬರಲು ನೀವೆಲ್ಲ ಆಶೀರ್ವಾದ ನೀಡಿ. ಕ್ಷೇತ್ರದ ಈಗಿನ ಶಾಸಕರು ಏನಾದರೂ ಅಭಿವೃದ್ಧಿ ಮಾಡಿದ್ದಾರೆಯೇ?' ಎಂದು ಹಾಲಪ್ಪ ಆಚಾರ್ ಅವರನ್ನು ಟೀಕಿಸಿದರು.

ಸಂಗೊಳ್ಳಿ ರಾಯಣ್ಣ ಪ್ರತಿಮೆಯನ್ನು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅನಾವರಣ ಮಾಡಿದರು

ಇದಕ್ಕೆ ಆಕ್ಷೇಪಿಸಿದ ಬಿಜೆಪಿ ಮುಖಂಡರಾದ ಕಳಕಪ್ಪ ಕಂಬಳಿ, ಬಸಲಿಂಗಪ್ಪ ಭೂತೆ, ಅಮರೇಶ ಹುಬ್ಬಳ್ಳಿ, ಶರಣಕುಮಾರ ಅಮರಗಟ್ಟಿ, 'ಧಾರ್ಮಿಕ ಕಾರ್ಯಕ್ರಮದಲ್ಲಿ ರಾಜಕೀಯದ ಮಾತು ಬೇಡ' ಎಂದರು.

ಬೈರತಿ ಸುರೇಶ್ ಅವರನ್ನು ತಳ್ಳಾಡಿದ ಹಾಲುಮತ ಸಮಾಜದ ಮುಖಂಡ ಶೇಖರ್ ಗುರಾಣಿ, 'ಈ ಕಾರ್ಯಕ್ರಮಕ್ಕೆ ಬಿಜೆಪಿ ಮುಖಂಡರದ್ದು ಆರ್ಥಿಕ ನೆರವಿದೆ' ಎಂದರು. ನಂತರ ಕಾಂಗ್ರೆಸ್ ನಾಯಕರು ಮತ್ತು ಪೊಲೀಸರು ಎಲ್ಲರನ್ನೂ ಸಮಾಧಾನಪಡಿಸಿ, ಪರಿಸ್ಥಿತಿ ತಿಳಿಗೊಳಿಸಿದರು.

'ಸಿದ್ದರಾಮಯ್ಯ ಮುಂದಿನ ಮುಖ್ಯಮಂತ್ರಿ'

'ಎಲ್ಲರ ಏಳ್ಗೆಗಾಗಿ ಸಿದ್ದರಾಮಯ್ಯ ಅನೇಕ ಅಭಿವೃದ್ಧಿ ಕೆಲಸಗಳನ್ನು ಮಾಡಿದ್ದಾರೆ. ಅನೇಕ ಭಾಗ್ಯಗಳನ್ನು ಕೊಟ್ಟಿದ್ದಾರೆ. ಅತ್ಯಂತ ಪ್ರಾಮಾಣಿಕ ರಾಜಕಾರಣಿಯಾದ ಅವರೇ ಮುಂದಿನ ಮುಖ್ಯಮಂತ್ರಿ ಆಗಬೇಕು' ಎಂದು ಶಾಸಕ ಬೈರತಿ ಸುರೇಶ ಹೇಳಿದರು.

'ರಾಜ್ಯ ಅಭಿವೃದ್ಧಿ ಆಗಲು ಸಿದ್ದರಾಮಯ್ಯ ಮುಖ್ಯಮಂತ್ರಿ ಆಗುವುದು ಸೂಕ್ತ' ಎಂದು ಶಾಸಕ ರಾಘವೇಂದ್ರ ಹಿಟ್ನಾಳ ಮತ್ತು ಕಾಂಗ್ರೆಸ್ ನಾಯಕ ಬಸವರಾಜ ರಾಯರಡ್ಡಿ ಧ್ವನಿಗೂಡಿಸಿದರು.

ಪ್ರಜಾ ಮತ
ಜನತಂತ್ರದ ಹಬ್ಬ
ಕರ್ನಾಟಕ ವಿಧಾನಸಭಾ ಚುನಾವಣೆ - 2023

ಹೊಡಿ ಬಡಿ ಸಂಸ್ಕೃತಿ ಇರುವ ಜನರನ್ನು ಗೆಲ್ಲಿಸಬೇಡಿ. ಅಂಥವರು ಜನಪ್ರತಿನಿಧಿ ಆಗಲು ಲಾಯಕ್ಕಿಲ್ಲ. ಜನರಿಗೆ ಒಳ್ಳೆಯ ಸಂದೇಶ ನೀಡುವ ರಾಜಕಾರಣಿಗಳನ್ನು ಆಯ್ಕೆ ಮಾಡಿ
ಸಿದ್ಧರಾಮಾನಂದಪುರಿ ಸ್ವಾಮೀಜಿ,
ಕನಕಗುರು ಪೀಠ, ತಿಂಥಣಿ

ಬಹು ಮಾಧ್ಯಮ ಪ್ರಜಾವಾಣಿ@75
www.prajavani.net
ಇಂದು
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ಪ್ರಸಾರ
ಸೆಲೆಬ್ರಿಟಿ PREMIERE

ಜೀವಾ ನವೀನ್
ನಿರ್ದೇಶಕ

ವೈ.ಜಿ.ಉಮಾ ಕೋಲಾರ
ನಟಿ, ಗಾಯಕಿ

'ಪಾಲಾರ್'- ಇದು ಶೋಷಿತರ ಕಥೆ
ಬೆಳಿಗ್ಗೆ 10 ಕ್ಕೆ
Prajavani.net Prajavani Prajavani

ಪಾಡ್‌ಕಾಸ್ಟ್: ಕಥಾಸಾಗರ: ಬೆಳಿಗ್ಗೆ 9
ಪ್ರಜಾವಾಣಿ ವಾರ್ತೆ: ಬೆಳಿಗ್ಗೆ 8, ಮಧ್ಯಾಹ್ನ 2 ಮತ್ತು ರಾತ್ರಿ 8
ಪ್ರಜಾವಾಣಿ ಕನ್ನಡ ಧ್ವನಿ

ದಕ್ಷಿಣ ಆಫ್ರಿಕಾದಿಂದ ಭಾರತಕ್ಕೆ ಬಂದ 12 ಚೀತಾಗಳು

ಒಂದನೇ ಪುಟದಿಂದ...

ದಕ್ಷಿಣ ಆಫ್ರಿಕಾದಿಂದ ಮರದ ಪೆಟ್ಟಿಗೆಗಳಲ್ಲಿ ಇರಿಸಲಾಗಿದ್ದ ಚೀತಾಗಳನ್ನು ಹೊತ್ತ ವಿಮಾನ ಶನಿವಾರ ಬೆಳಿಗ್ಗೆ 10 ಗಂಟೆಗೆ ಗ್ವಾಲಿಯರ್ ವಿಮಾನನಿಲ್ದಾಣಕ್ಕೆ ಬಂದಿಳಿಯಿತು. ಅಲ್ಲಿಂದ ಐಎಎಫ್ ಹೆಲಿಕಾಪ್ಟರ್‌ಗಳ ಮೂಲಕ ಇವುಗಳನ್ನು ಕೆಎನ್‌ಪಿಗೆ ಕರೆತರಲಾಯಿತು.

ಭಾರತಕ್ಕೆ ಕರೆತಂದಿರುವ ಚೀತಾಗಳಲ್ಲಿ ಏಳು ಗಂಡು ಮತ್ತು ಐದು ಹೆಣ್ಣು. ಈ ಹಿಂದೆ ನಮೀಬಿಯಾದಿಂದ ತಂದಿದ್ದ ಎಂಟು ಚೀತಾಗಳನ್ನು ಪ್ರಧಾನಿ ನರೇಂದ್ರ ಮೋದಿ ಅವರು ಕಳೆದ ವರ್ಷ ಸೆಪ್ಟೆಂಬರ್ 17ರಂದು (ತಮ್ಮ ಜನ್ಮದಿನ) ಕೆಎನ್‌ಪಿಗೆ ಬಿಡುಗಡೆ ಮಾಡಿದ್ದರು. ಈ ಮೂಲಕ ಕೆಎನ್‌ಪಿಯಲ್ಲಿ ಇದೀಗ ಚೀತಾಗಳ ಸಂಖ್ಯೆ 20ಕ್ಕೆ ಏರಿದಂತಾಗಿದೆ.

ಚೀತಾಗಳನ್ನು ಭಾರತಕ್ಕೆ ಕಳುಹಿಸುವ ಮೊದಲು ದಕ್ಷಿಣ ಆಫ್ರಿಕಾ ಅವುಗಳನ್ನು ಕ್ವಾರಂಟೈನ್‌ನಲ್ಲಿಟ್ಟಿತ್ತು ಎಂದು ಕುನೊ ಡಿಎಫ್‌ಒ ಪಿ.ಕೆ.ವರ್ಮಾ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ.

ಭಾರತದಲ್ಲಿ ಚೀತಾಗಳನ್ನು ಮರು ಪರಿಚಯಿಸುವ ಕೇಂದ್ರ ಸರ್ಕಾರದ ಮಹತ್ವಾಕಾಂಕ್ಷಿ ಯೋಜನೆಯ ಭಾಗವಾಗಿ ನಮೀಬಿಯಾ ಮತ್ತು ದಕ್ಷಿಣ ಆಫ್ರಿಕಾಗಳಿಂದ ಚೀತಾಗಳನ್ನು ತರಿಸಿಕೊಳ್ಳಲಾಗಿದೆ.

ಚೀತಾಗಳು 2–8 ವರ್ಷದವು

ಇದೀಗ ಭಾರತಕ್ಕೆ ಬಂದಿರುವ ಚೀತಾಗಳ ವಯಸ್ಸು 2ರಿಂದ 8 ವರ್ಷಗಳು. ಇವುಗಳ ಸರಾಸರಿ ಜೀವಿತಾವಧಿ 8ರಿಂದ 10 ವರ್ಷಗಳು ಎಂದು ಚೀತಾಗಳನ್ನು ಭಾರತದಲ್ಲಿ ಮರು ಪರಿಚಯಿಸುವ ಯೋಜನೆಯ ತಜ್ಞರೊಬ್ಬರು ಮಾಹಿತಿ ನೀಡಿದ್ದಾರೆ.

ಒಂದು ಗಂಡು ಚೀತಾ 8 ವರ್ಷ 3 ತಿಂಗಳಷ್ಟು ಪ್ರಾಯದ್ದಾಗಿದ್ದು, 2 ವರ್ಷ 4 ತಿಂಗಳ ಅತಿ ಕಿರಿಯ ಚೀತಾವೂ ತಂಡದಲ್ಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ.

'ರಾಘವ ಚೈತನ್ಯರ ದೇವಸ್ಥಾನ ಖಚಿತ'

ಒಂದನೇ ಪುಟದಿಂದ...

ಸಭೆಯಲ್ಲಿ ಪ್ರಚೋದನಕಾರಿ ಹೇಳಿಕೆ ನೀಡದಂತೆ ಆಂದೋಲಾ ಸಿದ್ಧಲಿಂಗ ಸ್ವಾಮೀಜಿಗೆ ಪೊಲೀಸರು ಸೂಚಿಸಿದ್ದರು.

ಮಧ್ಯಾಹ್ನ 2ರಿಂದ ಸಂಜೆ 6ರವರೆಗೆ ಹಿಂದೂ ಮುಖಂಡರಿಗೆ ಪೂಜೆ ಸಲ್ಲಿಸಲು ಹೈಕೋರ್ಟ್‌ನ ಕಲಬುರಗಿ ಪೀಠ ಅನುಮತಿ ನೀಡಿತ್ತು. ಶಿವರಾತ್ರಿ ಮಹಾಸಂಗಮ ಕಾರ್ಯಕ್ರಮದ ಬಳಿಕ ಸಿದ್ಧಲಿಂಗ ಸ್ವಾಮೀಜಿ, ಕಡಗಂಚಿ ವೀರಭದ್ರ ಸ್ವಾಮೀಜಿ, ಶಾಸಕರಾದ ಸುಭಾಷ್ ಗುತ್ತೇದಾರ, ಬಸವರಾಜ ಮತ್ತಿಮಡು ಸೇರಿದಂತೆ 15 ಜನರು ಈ ಅವಧಿಯಲ್ಲಿ ದರ್ಗಾಕ್ಕೆ ತೆರಳಿ ರಾಘವ ಚೈತನ್ಯ ಲಿಂಗಕ್ಕೆ ಪೂಜೆ ಸಲ್ಲಿಸಿ ವಾಪಸಾದರು.

ದರ್ಗಾ ಆವರಣದಲ್ಲಿರುವ ಹಜರತ್ ಮರ್ದಾನೆ ಗೈಬ್ ಅವರಿಗೆ 'ಸಂದಲ್' (ಗಂಧ ಅರ್ಪಿಸುವ ಧಾರ್ಮಿಕ ಕಾರ್ಯ) ನಡೆಸಲು ಶನಿವಾರ ತಮಗೂ ಅವಕಾಶ ನೀಡಬೇಕು ಎಂದು ಮುಸ್ಲಿಂ ಸಮುದಾಯದವರು ವಕ್ಫ್ ನ್ಯಾಯಮಂಡಳಿ ಎದುರು ಮನವಿ ಸಲ್ಲಿಸಿದ್ದರು. ಹೀಗಾಗಿ ಅವರಿಗೂ ಬೆಳಿಗ್ಗೆ 8ರಿಂದ ಮಧ್ಯಾಹ್ನ 12ರವರೆಗೆ ಅವಕಾಶ ನೀಡಲಾಗಿತ್ತು. ದರ್ಗಾದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಆಸಿಫ್ ಅನ್ಸಾರಿ ಸೇರಿದಂತೆ 14 ಮಂದಿ ಸಂದಲ್ ನೆರವೇರಿಸಿದರು.

'ಕುಮಾರಸ್ವಾಮಿ ಹೇಳಿಕೆ ಅಪ್ರಬುದ್ಧ'

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪ್ರಧಾನಿ ನರೇಂದ್ರ ಮೋದಿ ಅವರ ಕೈಕೆಳಗೆ ನಾನು ಪ್ರಮುಖ ಖಾತೆ ನಿರ್ವಹಿಸುತ್ತಿದ್ದೇನೆ. ಅಲ್ಲಿ ನನಗೆ ಸಂತೃಪ್ತಿ ಇದೆ. ಬೇರೆ ಹುದ್ದೆಗಳ ಬಗ್ಗೆ ಚಿಂತಿಸುವ ಪ್ರಶ್ನೆಯೇ ಇಲ್ಲ' ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಪೇಶ್ವೆ ವಂಶದವರು ಮುಖ್ಯಮಂತ್ರಿ ಆಗಬಾರದು ಎಂಬ ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ಅವರ ಹೇಳಿಕೆ ಕುರಿತು ಮಾಧ್ಯಮ ಪ್ರತಿನಿಧಿಗಳ ಪ್ರಶ್ನೆಗೆ ಶನಿವಾರ ಪ್ರತಿಕ್ರಿಯಿಸಿದರು. 'ಕುಮಾರಸ್ವಾಮಿ ಅವರ ಅಪ್ರಬುದ್ಧ–ಬಾಲಿಶ ಹೇಳಿಕೆಗಳಿಗೆ ಇದಕ್ಕಿಂತ ಹೆಚ್ಚು ಪ್ರತಿಕ್ರಿಯಿಸುವುದಿಲ್ಲ' ಎಂದರು.

'ಸಿದ್ದರಾಮಯ್ಯ ಅವರನ್ನು ಹೊಡೆದುಹಾಕಬೇಕು' ಎಂಬ ಸಚಿವ ಅಶ್ವತ್ಥನಾರಾಯಣ ಅವರ ಹೇಳಿಕೆಗೆ ಪ್ರತಿಕ್ರಿಯಿಸಿ, 'ಈಗಾಗಲೇ ಬಾಯಿತಪ್ಪಿನಿಂದ ನೀಡಿದ ಹೇಳಿಕೆಗೆ ಅವರು ಕ್ಷಮೆ ಕೇಳಿದ್ದಾರೆ' ಎಂದರು.

ನೋಟಿಸ್ ನೀಡುವೆ: 'ರಾಷ್ಟ್ರೀಯ ವೈದ್ಯಕೀಯ ಮಂಡಳಿಗೆ ಸದಸ್ಯರನ್ನು ನೇಮಿಸುವ ಸಂಬಂಧ ನನ್ನ ಕಚೇರಿಯ ಸಿಬ್ಬಂದಿಗೆ ₹ 2.5 ಕೋಟಿ ಹಣ ಸಂದಾಯವಾಗಿದೆ ಎಂದು ಆರೋಪಿಸಿರುವ ವಿಧಾನ ಪರಿಷತ್ ಸದಸ್ಯ, ಜೆಡಿಎಸ್‌ನ ಎಸ್.ಎಲ್. ಭೋಜೇಗೌಡ ಅವರಿಗೆ ನೋಟಿಸ್ ನೀಡಲಿದ್ದೇನೆ' ಎಂದು ಪ್ರತಿಕ್ರಿಯಿಸಿದರು.

'ಹೊಂದಾಣಿಕೆ ರಾಜಕೀಯ' ಇಲ್ಲ– 'ಕೈ' ತೀರ್ಮಾನ

ಬಜೆಟ್ ವಾಸ್ತವಾಂಶ ಜನರ ಮುಂದಿಡಿ– ಶಾಸಕರಿಗೆ ವಿರೋಧಪಕ್ಷದ ನಾಯಕ ಸಿದ್ದರಾಮಯ್ಯ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯ ವಿಧಾನಸಭೆ ಚುನಾವಣೆಯಲ್ಲಿ ಈ ಬಾರಿ ಅಭ್ಯರ್ಥಿಗಳ 'ಹೊಂದಾಣಿಕೆ ರಾಜಕೀಯ'ಕ್ಕೆ ಅವಕಾಶ ನೀಡದಿರಲು ರಾಜ್ಯ ಕಾಂಗ್ರೆಸ್ ನಾಯಕರು ನಿರ್ಧರಿಸಿದ್ದಾರೆ.

'ಕಳೆದ ಕೆಲವು ಚುನಾವಣೆಗಳಲ್ಲಿ ಪಕ್ಷದ ಅಭ್ಯರ್ಥಿಗಳು ವಿರೋಧಪಕ್ಷಗಳ ಜೊತೆ ಹೊಂದಾಣಿಕೆ ಮಾಡಿಕೊಂಡು ಸ್ಥಳೀಯಮಟ್ಟದಲ್ಲಿ 'ರಾಜಕೀಯ' ಮಾಡುತ್ತಿರುವುದು ಗಮನಕ್ಕೆ ಬಂದಿದೆ. ಈ ಹೊಂದಾಣಿಕೆ ರಾಜಕೀಯವು ಕಾರ್ಯಕರ್ತರಲ್ಲಿ ಗೊಂದಲ ಮೂಡಿಸುತ್ತದೆ. ಇದರಿಂದ ಪಕ್ಷಕ್ಕೆ ಹಾನಿಯಾಗುತ್ತಿದೆ. ಹೀಗಾಗಿ, ಅಂತಹ ಬೆಳವಣಿಗೆಗೆ ಈ ಬಾರಿ ಅವಕಾಶ ನೀಡದಿರಲು ತೀರ್ಮಾನಿಸಲಾಗಿದೆ' ಎಂದು ಮುಖಂಡರೊಬ್ಬರು ತಿಳಿಸಿದರು.

'ಬೆಳಗಾವಿ, ದಕ್ಷಿಣ ಕನ್ನಡ, ಬೆಂಗಳೂರು, ರಾಮನಗರದಲ್ಲಿ ಇಂಥ ಹೊಂದಾಣಿಕೆ ಈ ಹಿಂದಿನ ಚುನಾವಣೆಗಳಲ್ಲಿ ಆಗಿವೆ. ತಮ್ಮ ಸ್ಥಾನವನ್ನು ಗಟ್ಟಿ ಮಾಡಿಕೊಳ್ಳಲು ಕೆಲವರು ಈ ರೀತಿಯ ಒಳ ಒಪ್ಪಂದದ ರಾಜಕೀಯ ಮಾಡಿಕೊಳ್ಳುತ್ತಾರೆ' ಎಂದೂ ಅವರು ಹೇಳಿದರು.

ವಾಸ್ತವಾಂಶ ಬಿಚ್ಚಿಡಬೇಕು– ಸಲಹೆ: 'ರಾಜ್ಯ ಸರ್ಕಾರ ಮಂಡಿಸಿರುವ ಬಜೆಟ್‌ನಲ್ಲಿ ಏನೂ ಇಲ್ಲ. ಇದೊಂದು ಚುನಾವಣಾ ಗಿಮಿಕ್. ಇದನ್ನು ಜನರಿಗೆ ಮನವರಿಕೆ ಮಾಡಿಕೊಡಬೇಕಿದೆ. ಸದನ ಒಳಗೆ ಮತ್ತು ಹೊರಗೆ ಬಜೆಟ್ ಬಗ್ಗೆ ವಾಸ್ತವಾಂಶ ಬಿಚ್ಚಿಡಬೇಕು' ಎಂದು ಪಕ್ಷದ ಶಾಸಕರಿಗೆ ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಸೂಚನೆ ನೀಡಿದ್ದಾರೆ.

ರ್‍ಯಾಡಿಸನ್ ಬ್ಲ್ಯೂ ಹೋಟೆಲ್‌ನಲ್ಲಿ ಶುಕ್ರವಾರ ರಾತ್ರಿ ಸುಮಾರು ಎರಡು ಗಂಟೆ ನಡೆದ ಶಾಸಕಾಂಗ ಪಕ್ಷದ ಸಭೆಯಲ್ಲಿ ಬಜೆಟ್ ಮೇಲಿನ ಚರ್ಚೆ, ಸರ್ಕಾರದ ವಿರುದ್ಧ ಹಮ್ಮಿಕೊಳ್ಳಬೇಕಾದ ಹೋರಾಟ ಮತ್ತು ಚುನಾವಣಾ ರಣತಂತ್ರ ಕುರಿತು ಸಮಾಲೋಚನೆ ನಡೆದಿದೆ.

'ಎಲ್ಲರೂ ಒಟ್ಟಾಗಿ ಅಭ್ಯರ್ಥಿಗಳನ್ನು ಗೆಲ್ಲಿಸಲು ಪ್ರಾಮಾಣಿಕವಾಗಿ ಕೆಲಸ ಮಾಡಬೇಕು. ಪಕ್ಷ ಅಧಿಕಾರಕ್ಕೆ ಬಂದರೆ ಸಹಜವಾಗಿಯೇ ಎಲ್ಲರಿಗೂ ಅಧಿಕಾರ ಸಿಗಲಿದೆ. ಹೀಗಾಗಿ ಪಕ್ಷವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಕೆಲಸ ಮಾಡಬೇಕು. ಟಿಕೆಟ್ ಸಿಗದೆ ಇದ್ದರೆ ಬಂಡಾಯಕ್ಕೆ ಅವಕಾಶ ನೀಡದಂತೆ ನೋಡಿಕೊಳ್ಳಬೇಕು. ಮೊದಲ ಹಂತದಲ್ಲಿ ಕನಿಷ್ಠ 140 ಕ್ಷೇತ್ರಗಳಿಗೆ ಟಿಕೆಟ್ ಘೋಷಿಸಬೇಕೆಂದು ವರಿಷ್ಠರಿಗೆ ಶಿಫಾರಸು ಮಾಡಲಾಗಿದೆ. ಮಾರ್ಚ್ 10ರೊಳಗೆ ಮೊದಲ ಹಂತದ ಅಭ್ಯರ್ಥಿಗಳ ಪಟ್ಟಿ ಘೋಷಣೆಯಾಗಲಿದೆ' ಎಂದು ಸಭೆಗೆ ಡಿ.ಕೆ. ಶಿವಕುಮಾರ್ ಮಾಹಿತಿ ನೀಡಿದ್ದಾರೆ.

'ಕಿವಿಗೆ ಹೂವು': ಕಾಂಗ್ರೆಸ್‌ನಿಂದ ಬೀದಿ ಅಭಿಯಾನ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಶುಕ್ರವಾರ ಬಜೆಟ್ ಮಂಡಿಸಿದ ಸಂದರ್ಭದಲ್ಲಿ, ಕಿವಿ ಮೇಲೆ ಹೂವು ಇಟ್ಟುಕೊಂಡು ಕಾಂಗ್ರೆಸ್ ಶಾಸಕರು ವ್ಯಕ್ತಪಡಿಸಿದ್ದ ಪ್ರತಿಭಟನೆಗೆ ಹೆಚ್ಚು ಪ್ರಚಾರ ಸಿಗುತ್ತಿದ್ದಂತೆ, ಅದನ್ನು ಬೀದಿ ಅಭಿಯಾನದಂತೆ ಪಕ್ಷ ಮುಂದುವರಿಸಿದೆ.

ಕಾಂಗ್ರೆಸ್ ಕಾರ್ಯಕರ್ತರು ಬೆಂಗಳೂರಿನ ಹಲವೆಡೆ 'ಕಿವಿ ಮೇಲೆ ಹೂವು' ಭಿತ್ತಿಪತ್ರಗಳನ್ನು ಅಂಟಿಸಿದರು

ನಗರದ ಕೆಲವು ಕಡೆ ಕಿವಿ ಮೇಲೆ ಹೂವು ಅಭಿಯಾನ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು, ರಸ್ತೆ ಬದಿಯ ಗೋಡೆಗಳ ಮೇಲೆ ಭಿತ್ತಿಪತ್ರಗಳನ್ನು ಅಂಟಿಸಿದ್ದಾರೆ.

'ಬಿಜೆಪಿಯೇ ಭರವಸೆ' ಎಂಬ ಪೋಸ್ಟರ್‌ಗಳನ್ನು ಬಿಜೆಪಿ ಹಲವೆಡೆ ಹಾಕಿದೆ. ಅವುಗಳ ಮೇಲೆ ಕಾಂಗ್ರೆಸ್ ಕಾರ್ಯಕರ್ತರು, ಕಿವಿಗೆ ಹೂವು ಇಟ್ಟುಕೊಂಡಿರುವ ಚಿತ್ರಗಳಿರುವ 'ಸಾಕಪ್ಪಾ ಸಾಕು' ಎಂದು ಬರೆದಿರುವ ಪೋಸ್ಟರ್‌ಗಳನ್ನು ಅಂಟಿಸಲಾಗಿದೆ. ಬ್ಯಾಟರಾಯನಪುರ ಕ್ಷೇತ್ರದ ವ್ಯಾಪ್ತಿಯಲ್ಲಿ ಕಾಂಗ್ರೆಸ್ ಶಾಸಕ ಕೃಷ್ಣಬೈರೇಗೌಡ ಅವರ ನೇತೃತ್ವದಲ್ಲಿ ಕಾರ್ಯಕರ್ತರು ಈ ಭಿತ್ತಿಪತ್ರಗಳನ್ನು ಅಂಟಿಸಿದ್ದಾರೆ.

ರಾಜ್ಯ ಸರ್ಕಾರದ ಸಾಧನೆಗಳನ್ನು ಹೇಳಿಕೊಂಡ ಪೋಸ್ಟರ್‌ಗಳ ಸುತ್ತಮುತ್ತ ಅದನ್ನು ಲೇವಡಿ ಮಾಡುವಂತೆ ಕಾಂಗ್ರೆಸ್ ಕಾರ್ಯಕರ್ತರು ಈ ಭಿತ್ತಿಪತ್ರಗಳನ್ನು ಅಂಟಿಸಿರುವುದು ಬಿಜೆಪಿ ಕಾರ್ಯಕರ್ತರನ್ನು ಕೆರಳಿಸಿದೆ.

ರಾಜ್ಯ ಸರ್ಕಾರ 'ಶೇ 40 ಕಮಿಷನ್ ಸರ್ಕಾರ' ಎಂದು ಆರೋಪಿಸಿ, ಕಾಂಗ್ರೆಸ್ ಇತ್ತೀಚೆಗೆ 'ಪೇ ಸಿಎಂ' ಅಭಿಯಾನ ನಡೆಸಿತ್ತು. ಈ ಅಭಿಯಾನ ರಾಜ್ಯ ರಾಜಕೀಯದಲ್ಲಿ ಸಂಚಲನ ಮೂಡಿಸಿತ್ತು.

ಕಾಂಗ್ರೆಸ್‌ನಿಂದ 'ಕೋವಿಡ್ ಫೈಲ್ಸ್'?

ಬೆಂಗಳೂರು: ವಿಧಾನಸಭೆ ಚುನಾವಣೆ ಹತ್ತಿರವಾಗುತ್ತಿದ್ದಂತೆ 'ಕೋವಿಡ್ ಫೈಲ್ಸ್' ಎಂಬ ಸಾಕ್ಷ್ಯಚಿತ್ರವನ್ನು ಸದ್ದಿಲ್ಲದೆ ಸಿದ್ಧಪಡಿಸಿ ಮತದಾರರ ಬಳಿಗೆ ತೆಗೆದುಕೊಂಡು ಹೋಗಲು ರಾಜ್ಯ ಕಾಂಗ್ರೆಸ್ ಮುಂದಾಗಿದೆ.

ಕೋವಿಡ್ ಸಂದರ್ಭದಲ್ಲಿ ಚಿಕಿತ್ಸೆ ಸಿಗದೆ ಜನರು ಪಟ್ಟ ಪಾಡು, ಚಾಮರಾಜನಗರದಲ್ಲಿ ಆಮ್ಲಜನಕ ಕೊರತೆಯಿಂದ ಸಂಭವಿಸಿದ ಸಾವು, ಕೋವಿಡ್‌ಗೆ ರಾಜ್ಯ ಸರ್ಕಾರ ಸ್ಪಂದಿಸಿದ ರೀತಿ, ಕೇಳಿಬಂದ ಭ್ರಷ್ಟಾಚಾರ ಆರೋಪ ವಿಷಯ ಆಧರಿಸಿ ಸಾಧುಕೋಕಿಲ ಅವರ ಮೂಲಕ ಈ ಸಾಕ್ಷ್ಯಚಿತ್ರ ತಯಾರಿಸಲಾಗುತ್ತಿದೆ ಎಂದು ಮೂಲಗಳು ಹೇಳಿವೆ.

ಜನ್ಮದಿನ ಕಾರ್ಯಕ್ರಮ ಚಿತ್ರೀಕರಣಕ್ಕೆ ಹೋಗಿದ್ದಾಗ ಘಟನೆ: ಎನ್‌ಸಿಆರ್ ದಾಖಲು

'ನಟ ದರ್ಶನ್ ಬಾಡಿಗಾರ್ಡ್‌ನಿಂದ ಹಲ್ಲೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಟ ದರ್ಶನ್ ಅವರ ಬಾಡಿಗಾರ್ಡ್ ಹಾಗೂ ಇತರರು ನಮ್ಮ ಮೇಲೆ ಹಲ್ಲೆ ಮಾಡಿ, ಜೀವ ಬೆದರಿಕೆಯೊಡ್ಡಿದ್ದಾರೆ' ಎಂದು ಆರೋಪಿಸಿ 'ವಿ2 ನ್ಯೂಸ್' ಯೂಟ್ಯೂಬ್ ಚಾನೆಲ್ ಕ್ಯಾಮೆರಾಮನ್ ಕೆ.ಪಿ. ದಯಾನಂದ್ ರಾಜರಾಜೇಶ್ವರಿನಗರ ಠಾಣೆಗೆ ದೂರು ನೀಡಿದ್ದಾರೆ.

ದೂರಿನ ಬಗ್ಗೆ ಪ್ರತಿಕ್ರಿಯಿಸಿದ ಪೊಲೀಸರು, 'ದೂರಿನಲ್ಲಿ ಸಾಕಷ್ಟು ಗೊಂದಲಗಳಿವೆ. ಸೂಕ್ತ ಪುರಾವೆಗಳು ಲಭ್ಯವಿಲ್ಲ. ಹೀಗಾಗಿ, ಎನ್‌ಸಿಆರ್ (ಗಂಭೀರವಲ್ಲದ ಪ್ರಕರಣ) ಮಾತ್ರ ದಾಖಲಿಸಿಕೊಳ್ಳಲಾಗಿದೆ. ಇದರ ಮಾಹಿತಿಯನ್ನು ನ್ಯಾಯಾಲಯಕ್ಕೆ ಸಲ್ಲಿಸಲಾಗುವುದು' ಎಂದು ತಿಳಿಸಿದ್ದಾರೆ.

ದೂರಿನ ವಿವರ: 'ವಿ2 ನ್ಯೂಸ್ ಯೂಟ್ಯೂಬ್ ಚಾನೆಲ್‌ನಲ್ಲಿ ಹಲವು ವರ್ಷಗಳಿಂದ ಕೆಲಸ ಮಾಡುತ್ತಿದ್ದೇನೆ. ದರ್ಶನ್ ಹುಟ್ಟುಹಬ್ಬವಿದ್ದಿದ್ದರಿಂದ, ಮನೆ ಬಳಿ ಚಿತ್ರೀಕರಣ ಮಾಡಬೇಕಿತ್ತು. ಸಹೋದ್ಯೋಗಿ ಮಧುಸೂದನ್ ಜೊತೆ ಫೆ. 16ರಂದು ಸಂಜೆ 6.15ರ ಸುಮಾರಿಗೆ ರಾಜರಾಜೇಶ್ವರಿನಗರದಲ್ಲಿರುವ ದರ್ಶನ್ ಮನೆ ಬಳಿ ಹೋಗಿದ್ದೆ' ಎಂದು ದಯಾನಂದ್ ದೂರಿನಲ್ಲಿ ಹೇಳಿದ್ದಾರೆ.

'ಮನೆ ಬಳಿ ಅಭಿಮಾನಿಗಳು ಸೇರಿದ್ದರು. ಆದರೆ, ದರ್ಶನ್ ಅವರಿಲ್ಲ ಎಂಬುದು ನಮ್ಮ ಗಮನಕ್ಕೆ ಬಂದಿರಲಿಲ್ಲ. ಮನೆ ಎದುರೇ ಎರಡು ನಿಮಿಷ ಚಿತ್ರೀಕರಣ ಮಾಡಿದ್ದೆ. ನಂತರದ ಚಿತ್ರೀಕರಣಕ್ಕೆ ಅಡ್ಡಿಪಡಿಸಿದ್ದ ಬಾಡಿಗಾರ್ಡ್ ಹಾಗೂ ಇತರರು ಹಲ್ಲೆ ಮಾಡಿದರು. ಕ್ಯಾಮೆರಾ ಹಾಗೂ ಮೊಬೈಲ್ ಕಿತ್ತುಕೊಂಡರು. ರಕ್ಷಣೆಗೆ ಬಂದ ಮಧುಸೂದನ್ ಅವರನ್ನೂ ಥಳಿಸಿದರು. ನಂತರ, ಅಲ್ಲಿಂದ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿದ್ದೇವೆ. ದರ್ಶನ್ ಮನೆ ಬಳಿಯೇ ನಮ್ಮ ಬೈಕ್ ಇದ್ದು, ಅದನ್ನು ವಾಪಸು ತರಲು ಭಯವಾಗುತ್ತಿದೆ' ಎಂದು ತಿಳಿಸಿದ್ದಾರೆ.

'ಹಲ್ಲೆ ಮಾಡಿದ್ದ ಬಾಡಿಗಾರ್ಡ್ ಸಫಾರಿ ಧರಿಸಿದ್ದ. ನಾಲ್ವರು ದರ್ಶನ್ ಫೋಟೊ ಇದ್ದ ಟೀ–ಶರ್ಟ್ ಧರಿಸಿದ್ದರು. ಹಲ್ಲೆ ನಂತರ ನಮಗೆ, ನಮ್ಮ ಕುಟುಂಬದವರಿಗೆ ಜೀವ ಬೆದರಿಕೆ ಇದೆ. ರಕ್ಷಣೆ ನೀಡಿ' ಎಂದೂ ಕೋರಿದ್ದಾರೆ.

'6 ಗಂಟೆ ಸತಾಯಿಸಿದ ಪೊಲೀಸರು'

'ಚಿಕಿತ್ಸೆ ಪಡೆದು ರಾಜರಾಜೇಶ್ವರಿನಗರ ಠಾಣೆಗೆ ಹೋಗಿದ್ದೆವು. ದೂರು ಪಡೆಯಲು ಹಿಂದೇಟು ಹಾಕಿದ್ದ ಪೊಲೀಸರು, 6 ಗಂಟೆ ಠಾಣೆಯಲ್ಲೇ ಕೂರಿಸಿ ಸತಾಯಿಸಿದರು' ಎಂದು ದಯಾನಂದ್ ದೂರಿದರು.

'ನಿಮ್ಮ ಬಳಿ ಪುರಾವೆಯಿಲ್ಲ. ಹೊಡೆದವರು ಯಾರು ಎಂಬುದು ಗೊತ್ತಿಲ್ಲ. ಯಾರನ್ನು ಆರೋಪಿ ಮಾಡುವುದು? ಎಂಬಿತ್ಯಾದಿ ಪ್ರಶ್ನೆಗಳನ್ನು ಪೊಲೀಸರು ಕೇಳಿದರು. ಹೆಚ್ಚು ಒತ್ತಾಯಿಸಿದ ಬಳಿಕ, ಕಾಟಾಚಾರಕ್ಕೆಂದು ಎನ್‌ಸಿಆರ್ ದಾಖಲಿಸಿಕೊಂಡಿದ್ದಾರೆ. ಇದರ ಹಿಂದೆ ಯಾರ ಪ್ರಭಾವವಿದೆ ಎಂಬುದು ಗೊತ್ತಿಲ್ಲ' ಎಂದು ಅವರು ಹೇಳಿದರು.

ಎಫ್‌ಐಆರ್ ಬದಲು ಎನ್‌ಸಿಆರ್ ಮಾತ್ರ ದಾಖಲಿಸಿಕೊಂಡಿರುವ ಬಗ್ಗೆ ಪ್ರತಿಕ್ರಿಯೆ ಪಡೆಯಲು ಪಶ್ಚಿಮ ವಿಭಾಗದ ಡಿಸಿಪಿ ಲಕ್ಷ್ಮಣ ನಿಂಬರಗಿ ಲಭ್ಯರಾಗಲಿಲ್ಲ.

'ವಿಕೃತಿ ತುಂಬಿ ನಂಬಿಕೆ ಪಲ್ಲಟಗೊಳಿಸುವ ಯತ್ನ'

ಪ್ರಜಾವಾಣಿ ವಾರ್ತೆ

ಮಂಗಳೂರು: 'ಆಧುನಿಕ ರಂಗಭೂಮಿಯ ಹೆಸರಿನಲ್ಲಿ ಸಾಹಿತ್ಯ ಕೃತಿಗಳನ್ನು ರಂಗರೂಪಕ್ಕಿಳಿಸುವಾಗ ಕೃತಿಯ ಮೂಲ ಆಶಯವನ್ನು ಆಚೆಗೆ ದೂಡಿ 'ಇಸಂ'ಗಳನ್ನು ತುರುಕುವ ಕೆಲಸ ಆಗುತ್ತಿದೆ. ವಿಕೃತಿಗಳನ್ನು ತುಂಬಿ ಜನರ ನಂಬಿಕೆಗಳನ್ನು ಪಲ್ಲಟಗೊಳಿಲಾಗುತ್ತಿದೆ' ಎಂದು ಮೈಸೂರು ರಂಗಾಯಣದ ನಿರ್ದೇಶಕ ಅಡ್ಡಂಡ ಸಿ.ಕಾರ್ಯಪ್ಪ ಟೀಕಿಸಿದರು.

ಭಾರತ್ ಫೌಂಡೇಷನ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಹಾಗೂ ಮಿಥಿಕ್ ಸೊಸೈಟಿ ಆಶ್ರಯದಲ್ಲಿ ಇಲ್ಲಿ ಏರ್ಪಡಿಸಿರುವ ಮಂಗಳೂರು ಲಿಟ್ ಫೆಸ್ಟ್‌ನಲ್ಲಿ (ಮಂಗಳೂರು ಸಾಹಿತ್ಯ ಉತ್ಸವ) 'ರಂಗಭೂಮಿ, ಪ್ರಯೋಗ ಮತ್ತು ಪ್ರಭಾವ' ಕುರಿತ ಗೋಷ್ಠಿಯಲ್ಲಿ ಅವರು ಶನಿವಾರ ಮಾತನಾಡಿದರು.

'ನಂಬಿಕೆಗಳನ್ನು ಈ ರೀತಿ ಪಲ್ಲಟಗೊಳಿಸುವುದನ್ನೇ ಕಮ್ಯುನಿಸಂ ಥಿಯರಿ ಎನ್ನಬಹುದು. ರಂಗಭೂಮಿಯನ್ನು ಅಸ್ತ್ರವನ್ನಾಗಿ ಬಳಸಿ, ತಮ್ಮ ವಿಚಾರಧಾರೆಗಳನ್ನು ತುರುಕಿಸುವ ಪ್ರಯತ್ನವನ್ನು ಕೆಲವರು ಮಾಡುತ್ತಿದ್ದಾರೆ. ಅದನ್ನೇ ಅಭಿವ್ಯಕ್ತಿ ಸ್ವಾತಂತ್ರ್ಯ ಎಂದು ಸಮರ್ಥಿಸಿಕೊಳ್ಳುತ್ತಾರೆ. ಆದರೆ, ಈ ಅಭಿವ್ಯಕ್ತಿ ಸ್ವಾತಂತ್ರ್ಯ ಎಲ್ಲರಿಗೂ ಇರುವುದಿಲ್ಲ' ಎಂದು ವ್ಯಂಗ್ಯವಾಡಿದರು.

'ರಂಗಕರ್ಮಿ ಪ್ರಸನ್ನ ಅವರು 'ಅಯೋಧ್ಯೆ ಕಾಂಡ'ದಲ್ಲಿ ರಾಮಾಯಣದ ಮಂಥರೆಯನ್ನೇ ನಾಯಕಿಯನ್ನಾಗಿ ಬಿಂಬಿಸಿದ್ದಾರೆ. 'ಅರಣ್ಯ ಕಾಂಡ'ದಲ್ಲಿ ಶೂರ್ಪನಖಿಯನ್ನೇ ನಾಯಕಿಯನ್ನಾಗಿ ತೋರಿಸಿದ್ದಾರೆ.

ಮಂಗಳೂರು ಲಿಟ್ ಫೆಸ್ಟ್ ಉದ್ಘಾಟನೆಗೂ ಮೊದಲು ಎನ್.ವಿನಯ ಹೆಗ್ಡೆ, ವಿ.ನಾಗರಾಜ್ ಹಾಗೂ ಇತರರು ಪುಸ್ತಕಗಳನ್ನು ಪಲ್ಲಕ್ಕಿಯಲ್ಲಿ ಇರಿಸಿ ಮೆರವಣಿಗೆ ಮೂಲಕ ಸಭಾಂಗಣಕ್ಕೆ ತಂದರು –ಪ್ರಜಾವಾಣಿ ಚಿತ್ರ/ಫಕ್ರುದ್ದೀನ್ ಎಚ್.

ಇದು ನಂಬಿಕೆಗಳನ್ನು ಅಸ್ಥಿರಗೊಳಿಸುವ ಸಲುವಾಗಿ ನಡೆಯುತ್ತಿರುವ ಉದ್ದೇಶಪೂರ್ವಕ ಕೃತ್ಯ. ಮೂಲ ಲೇಖಕರಿಗೆ ಅಪಚಾರ ಉಂಟುಮಾಡುವ ಇಂತಹ ರಂಗ ಪ್ರಯೋಗಗಳು ರಂಗಾಯಣದಲ್ಲೂ 30 ವರ್ಷಗಳಿಂದ ಆಗಿವೆ' ಎಂದು ಕಾರ್ಯಪ್ಪ ಆರೋಪಿಸಿದರು.

'ರಾಷ್ಟ್ರೀಯ ನಾಟಕ ಶಾಲೆಯಲ್ಲಿ, ನೀನಾಸಂನಲ್ಲಿ ತರಬೇತಿ ಪಡೆದವರಿಗೆ ತಾವು ಹೇಳಿದ್ದು ಮಾತ್ರ ಸತ್ಯ ಎಂದು ಬಿಂಬಿಸಿಕೊಳ್ಳುವ ಚಾಳಿ ಇದೆ' ಎಂದರು.

ಇದಕ್ಕೆ ಪ್ರತಿಕ್ರಿಯಿಸಿದ ರಂಗಕರ್ಮಿ ಬಾಸುಮ ಕೊಡಗು, 'ಯಾರೋ ಒಬ್ಬರು ಇಬ್ಬರು ನಿರ್ದೇಶಕರು ಜನಪ್ರಿಯತೆಯ ತೆವಲಿನಲ್ಲಿ ಮಾಡಿರುವ ಕೃತ್ಯಗಳಿಗೆ ಇಡೀ ರಂಗ ಸಮುದಾಯವನ್ನು ದೂಷಿಸುವುದು ಸರಿಯಲ್ಲ' ಎಂದರು.

ಪಠ್ಯದಲ್ಲೂ ಇತಿಹಾಸವಾಗಿ ಪುರಾಣ: 'ಆಧುನಿಕ ಚಿಂತನೆಯವರು ಪುರಾಣವನ್ನು ಕಲ್ಪಿತ ಎಂದು ಅಲ್ಲಗಳೆಯುತ್ತಾರೆ. ಪುರಾಣವನ್ನೂ ಇತಿಹಾಸ ಎಂದು ಪಠ್ಯದಲ್ಲೂ ನೋಡುವ ಕಾಲ ಬರಲಿದೆ' ಎಂದು 'ಪುರಾಣ ಕತೆ–ಹೊಸ ರೂಪ ಹೊಸ ದೃಷ್ಟಿ' ಗೋಷ್ಠಿಯಲ್ಲಿ ಮಾತನಾಡಿದ ಕಾದಂಬರಿಕಾರ ವಿದ್ವಾನ್ ಜಗದೀಶ ಶರ್ಮಾ ಸಂಪ ಹೇಳಿದರು.

'ಇತಿಹಾಸ ಎಲ್ಲವೂ ಪುರಾಣವಾಗಲು ಸಾಧ್ಯವಿಲ್ಲ. ಆದರೆ ಪುರಾಣಗಳೆಲ್ಲವೂ ಇತಿಹಾಸ. ಪುರಾಣ ಕಲ್ಪಿತವಲ್ಲ ಅದು ನಡೆದದ್ದು ಎಂದು ನಿರೂಪಿಸುವ ಕಾರ್ಯ ಆಧುನಿಕ ಚಿಂತನೆಯ ಮಾನದಂಡಗಳಿಗೆ ಅನುಗುಣವಾಗಿಯೇ ನಡೆಯುತ್ತಿದೆ' ಎಂದರು.

ಮಿಥಿಕ್ ಸೊಸೈಟಿಯ ಗೌರವ ಕಾರ್ಯದರ್ಶಿ ವಿ.ನಾಗರಾಜ್ ಲಿಟ್ ಫೆಸ್ಟ್‌ಗೆ ಚಾಲನೆ ನೀಡಿದರು. ನಿಟ್ಟೆ ವಿ.ವಿಯ ಕುಲಾಧಿಪತಿ ವಿನಯ್ ಹೆಗ್ಡೆ ಅಧ್ಯಕ್ಷತೆ ವಹಿಸಿದ್ದರು. ಸ್ವರಾಜ್ಯ ಪತ್ರಿಕೆಯ ಸಂಪಾದಕೀಯ ಮಂಡಳಿ ನಿರ್ದೇಶಕ ಆರ್.ಜಗನ್ನಾಥನ್ ಅತಿಥಿಯಾಗಿದ್ದರು.

ಚೂರಿ ಇರಿತ: ಐವರ ವಿರುದ್ಧ ಎಫ್‌ಐಆರ್

ಪ್ರಜಾವಾಣಿ ವಾರ್ತೆ

ದೊಡ್ಡಬಳ್ಳಾಪುರ: ದೊಡ್ಡಬೆಳವಂಗಲದಲ್ಲಿ ಶುಕ್ರವಾರ ಕ್ರಿಕೆಟ್ ಟೂರ್ನಿ ವೇಳೆ ಚಾಕು ಇರಿದು ಯುವಕರಿಬ್ಬರನ್ನು ಹತ್ಯೆ ಮಾಡಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಹುಲಿಕುಂಟೆ ಗ್ರಾಮದ ಕಾಂಗ್ರೆಸ್ ಮುಖಂಡನ ಪುತ್ರ ವಿನಯ್ ಹಾಗೂ ಆತನ ನಾಲ್ವರು ಸ್ನೇಹಿತರ ವಿರುದ್ಧ ಪ್ರಕರಣ ದಾಖಲಾಗಿದೆ.

ಚಾಕು ಇರಿತದಿಂದ ಮೃತಪಟ್ಟ ಬಿ.ಇ ಪದವೀಧರ ಭರತ್‌ಕುಮಾರ್ ಅವರ ತಂದೆ ಶಿವಪ್ರಕಾಶ್ ನೀಡಿದ ದೂರಿನ ಮೇರೆಗೆ ಹುಲಿಕುಂಟೆ ನಿವಾಸಿಗಳಾದ ವಿನಯ್, ಅನಿಲ್, ತ್ರಿಮೂರ್ತಿ, ಕೋರಿ, ದೀಪು ಎಂಬುವರ ವಿರುದ್ಧ ಎಫ್‌ಐಆರ್ ದಾಖಲಾಗಿದೆ.

ಐವರೂ ಆರೋಪಿಗಳು ತಲೆಮರೆಸಿಕೊಂಡಿದ್ದು, ಇದುವರೆಗೂ ಅವರ ಸುಳಿವು ದೊರೆತಿಲ್ಲ. ಆರೋಪಿಗಳಿಗಾಗಿ ಪೊಲೀಸರ ತಂಡಗಳು ಹುಡುಕಾಟ ನಡೆಸಿವೆ. ಶೀಘ್ರ ಆರೋಪಿಗಳನ್ನು ಬಂಧಿಸದಿದ್ದರೆ ಪೊಲೀಸ್ ಇಲಾಖೆ ವಿರುದ್ಧ ಪ್ರತಿಭಟನೆ ನಡೆಸುವುದಾಗಿ ಗ್ರಾಮಸ್ಥರು ಎಚ್ಚರಿಕೆ ನೀಡಿದ್ದಾರೆ.

ದೊಡ್ಡಬೆಳವಂಗಲ ಬಂದ್: 'ಆರೋಪಿಗಳನ್ನು ಬಂಧಿಸುವವರೆಗೂ ಮೃತ ಯುವಕರ ಅಂತ್ಯಕ್ರಿಯೆ ನಡೆಸುವುದಿಲ್ಲ' ಎಂದು ಗ್ರಾಮಸ್ಥರು ಶನಿವಾರ ದಾಬಸ್‌ಪೇಟೆ–ದೊಡ್ಡಬಳ್ಳಾಪುರ ರಾಷ್ಟ್ರೀಯ ಹೆದ್ದಾರಿ ತಡೆದು ಪ್ರತಿಭಟನೆ ನಡೆಸಿದರು.

'ನಿಫ್ಟಿ ನೆಕ್ಸ್ಟ್ 50'ಗೆ ಅದಾನಿ ವಿಲ್ಮರ್

ನವದೆಹಲಿ (ಪಿಟಿಐ): ರಾಷ್ಟ್ರೀಯ ಷೇರು ವಿನಿಮಯ ಕೇಂದ್ರವು (ಎನ್‌ಎಸ್‌ಇ) ಅದಾನಿ ವಿಲ್ಮರ್ ಮತ್ತು ಅದಾನಿ ಪವರ್ ಕಂಪನಿಗಳನ್ನು ನಿಫ್ಟಿ ಸೂಚ್ಯಂಕಗಳಲ್ಲಿ ಸೇರಿಸಿದೆ.

ಮಾರ್ಚ್ 31ರಿಂದ ಜಾರಿಗೆ ಬರುವಂತೆ ಅದಾನಿ ವಿಲ್ಮರ್ ಕಂಪನಿಯು ನಿಫ್ಟಿ ನೆಕ್ಸ್ಟ್ 50 ಮತ್ತು ನಿಫ್ಟಿ 100ನ ಭಾಗವಾಗಲಿದೆ. ಅದಾನಿ ಪವರ್ ಕಂಪನಿಯು ನಿಫ್ಟಿ 500, ನಿಫ್ಟಿ 200, ನಿಫ್ಟಿ ಮಿಡ್‌ಕ್ಯಾಪ್ 100, ನಿಫ್ಟಿ ಮಿಡ್‌ಕ್ಯಾಪ್ 150, ನಿಫ್ಟಿ ಲಾರ್ಜ್ ಮಿಡ್‌ಕ್ಯಾಪ್ 250 ಮತ್ತು ನಿಫ್ಟಿ ಮಿಡ್‌ಸ್ಮಾಲ್‌ಕ್ಯಾಪ್ 400 ಸೂಚ್ಯಂಕಗಳಲ್ಲಿ ಸೇರಲಿದೆ.

ಅದಾನಿ ವಿಲ್ಮರ್ ಅಲ್ಲದೆ ಎಬಿಬಿ ಇಂಡಿಯಾ, ಕೆನರಾ ಬ್ಯಾಂಕ್, ಪೇಜ್ ಇಂಡಸ್ಟ್ರೀಸ್ ಮತ್ತು ವರುಣ್ ಬೆವರೇಜಸ್ ಕಂಪನಿಗಳನ್ನು ಸಹ ನಿಫ್ಟಿ ನೆಕ್ಸ್ಟ್ 50 ಇಂಡೆಕ್ಸ್‌ನಲ್ಲಿ ಸೇರಿಸಲಾಗಿದೆ.

ಬಂಧನ್ ಬ್ಯಾಂಕ್, ಬಯೋಕಾನ್, ಗ್ಲಾಂಡ್ ಫಾರ್ಮಾ, ಎಂಫಸಿಸ್ ಮತ್ತು ಒನ್ 97 ಕಮ್ಯುನಿಕೇಷನ್ಸ್ ಕಂಪನಿಗಳನ್ನು ನಿಫ್ಟಿ ನೆಕ್ಸ್ಟ್ 50 ಇಂಡೆಕ್ಸ್‌ನಿಂದ ಕೈಬಿಡಲಾಗಿದೆ.

ಎನ್‌ಎಸ್‌ಇ ಇಂಡಿಸಿಸ್ ಲಿಮಿಟೆಡ್‌ನ ಉಪ ಸಮಿತಿಯು ಈ ಬದಲಾವಣೆಗಳನ್ನು ಮಾಡಲು ನಿರ್ಧರಿಸಿದೆ. ಎಲ್ಲಾ ಬದಲಾವಣೆಗಳು ಸಹ ಮಾರ್ಚ್ 31ರಿಂದ ಜಾರಿಗೆ ಬರಲಿವೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ನಿಫ್ಟಿ 50 ಇಂಡೆಕ್ಸ್‌ನಲ್ಲಿ ಯಾವುದೇ ಬದಲಾವಣೆಗಳನ್ನು ಮಾಡಲಾಗಿಲ್ಲ.

ಚಿನ್ನ, ಬೆಳ್ಳಿ ಧಾರಣೆ

ಬೆಂಗಳೂರು

ಸ್ಟ್ಯಾಂಡರ್ಡ್ ಚಿನ್ನ 10ಗ್ರಾಂ	₹58,320
ಒಡವೆ ಚಿನ್ನ 1ಗ್ರಾಂ	₹5,365
ಬೆಳ್ಳಿ ಕೆ.ಜಿಗೆ	₹67,700

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹450
12 ಮೊಟ್ಟೆಗೆ	₹60
ಮೈಸೂರು	
100 ಮೊಟ್ಟೆಗೆ	₹453

ಖಾದ್ಯ ತೈಲ ಮುಂಬೈ

(10 ಕೆ.ಜಿಗೆ)

ಶೇಂಗಾ (ರಿಫೈನ್ಡ್)	₹1710 (1710)
ಸೋಯಾ (ರಿಫೈನ್ಡ್)	₹1155 (1160)
ಸೂರ್ಯಕಾಂತಿ (ರಿಫೈನ್ಡ್)	₹1160 (1160)
ಪಾಮೋಲಿನ್	₹968 (970)

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಕೆ.ಜಿ)	₹422-666
ದ್ವಿತಳಿ (ಕೆ.ಜಿ)	₹333-759

ಎನ್.ಆರ್.ಪುರ ರಬ್ಬರ್

(ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹140.50
ಆರ್‌ಎಸ್‌ಎಸ್-5	₹135
ಗುಡ್ ಲ್ಯಾಟ್	₹130

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ

ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ

ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.

ದಯವಿಟ್ಟು ಸಂಪರ್ಕಿಸಿ:

Vishal : 9845114560

Jerry : 9731810277 | Tanveer : 9886213331

Ravichandra : 9901641752 | Anitha R: 9900428036

ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮ್ಯಾಟ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ

https://homages.deccanherald.com

ಅಥವಾ QR code ಸ್ಕ್ಯಾನ್ ಮಾಡಿ

ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಗುಣಮಟ್ಟದ ಸೇವೆ: ಟ್ರಾಯ್ ತಾಕೀತು

ನವದೆಹಲಿ (ಪಿಟಿಐ): ಮೊಬೈಲ್ ಸೇವೆಗಳ ಗುಣಮಟ್ಟ ಸುಧಾರಿಸುವಂತೆ ಭಾರತೀಯ ದೂರಸಂಪರ್ಕ ನಿಯಂತ್ರಣ ಪ್ರಾಧಿಕಾರವು (ಟ್ರಾಯ್) ಕಂಪನಿಗಳಿಗೆ ಸೂಚನೆ ನೀಡಿದೆ. ಮೊಬೈಲ್ ಸಂಪರ್ಕ ಮತ್ತು ಸೇವೆಗಳ ಗುಣಮಟ್ಟ ಸರಿ ಇಲ್ಲ ಎಂದು ಗ್ರಾಹಕರಿಂದ ದೂರುಗಳು ಬಂದಿದ್ದರಿಂದ ಟ್ರಾಯ್ ಈ ಸೂಚನೆ ನೀಡಿದೆ.

ಮುಂಬೈ ಧಾರಣೆ

ಶೇಂಗಾ

18–2–2023

ಜಾವಾ 70/80(ಹೊಸ)	12350-12400
ಜಾವಾ 80/90(ಹೊಸ)	11350-11400
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12300-12400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1720 (1720)
ಒಂದು ಬಾರಿ ಡೆಲಿವರಿ	1715 (1715)
ಸೋಯಾ ಕಚ್ಚಾ	1055 (1060)
ಪಾಮ್ ವಾರದ ಡೆಲಿವರಿ	966 (968)
ಸೂರ್ಯಕಾಂತಿ ಎಣ್ಣೆ ಕಚ್ಚಾ	1050 (1050)

ಚಿನ್ನ-ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ	
56,300 (55,900)	
ಬೆಳ್ಳಿ ಕೆ.ಜಿ 65,700 (64,450)	

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಭಾರತಕ್ಕೆ ಜನವರಿಯಲ್ಲಿ 14 ಲಕ್ಷ ಬ್ಯಾರಲ್ ಇಂಧನ ಪೂರೈಕೆ

ರಷ್ಯಾ ತೈಲ: ದಾಖಲೆ ಆಮದು

ನವದೆಹಲಿ (ರಾಯಿಟರ್ಸ್): ಭಾರತವು ರಷ್ಯಾದಿಂದ ಆಮದು ಮಾಡಿಕೊಳ್ಳುವ ಕಚ್ಚಾ ತೈಲದ ಪ್ರಮಾಣವು ಜನವರಿಯಲ್ಲಿ ದಾಖಲೆಯ ಮಟ್ಟಕ್ಕೆ ತಲುಪಿದೆ ಎಂದು ಮೂಲಗಳು ಹೇಳಿವೆ.

ಭಾರತವು ಜನವರಿ ತಿಂಗಳಲ್ಲಿ ದಿನಕ್ಕೆ 14 ಲಕ್ಷ ಬ್ಯಾರಲ್ ತೈಲ ಆಮದು ಮಾಡಿಕೊಂಡಿದೆ. ಡಿಸೆಂಬರ್‌ನಲ್ಲಿ ಆಗಿದ್ದ ಆಮದು ಪ್ರಮಾಣಕ್ಕೆ ಹೋಲಿಸಿದರೆ ಶೇ 9.2ರಷ್ಟು ಹೆಚ್ಚಾಗಿದೆ. ಈ ಮೂಲಕ ರಷ್ಯಾ ದೇಶವು ಭಾರತಕ್ಕೆ ತೈಲ ಪೂರೈಸುವುದರಲ್ಲಿ ಮೊದಲ ಸ್ಥಾನ ಕಾಯ್ದುಕೊಂಡಿದೆ.

ಇರಾಕ್ ಮತ್ತು ಸೌದಿ ಅರೇಬಿಯಾ ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನದಲ್ಲಿವೆ ಎಂದು ಮೂಲಗಳು ತಿಳಿಸಿವೆ.

ಭಾರತದ ತೈಲ ಸಂಸ್ಕರಣಾ ಕಂಪನಿಗಳು ಡಿಸೆಂಬರ್ ಮತ್ತು ಜನವರಿ ತಿಂಗಳುಗಳಲ್ಲಿ ತಮ್ಮ ಸಂಗ್ರಹಾಗಾರಗಳ ನಿರ್ವಹಣೆ ಕೆಲಸ ಕೈಗೊಳ್ಳುತ್ತವೆ. ಹೀಗಾಗಿ ಕೇಂದ್ರ ಸರ್ಕಾರವು ನಿಗದಿಪಡಿಸುವ ವಾರ್ಷಿಕ ಉತ್ಪಾದನಾ ಗುರಿಯನ್ನು ತಲುಪಲು ಸಲುವಾಗಿ ಆಮದು ಮಾಡಿಕೊಳ್ಳುವುದು ಹೆಚ್ಚಾಗುತ್ತದೆ.

ರಷ್ಯಾ–ಉಕ್ರೇನ್ ಸಂಘರ್ಷ ಆರಂಭ ಆಗಿ, ಪಾಶ್ಚಿಮಾತ್ಯ ದೇಶಗಳು ರಷ್ಯಾ ತೈಲಕ್ಕೆ ನಿರ್ಬಂಧ ವಿಧಿಸಿದ ಬಳಿಕ ಭಾರತಕ್ಕೆ ರಷ್ಯಾದ ತೈಲ ಆಮದು ಆಗುವುದು ಹೆಚ್ಚಾಗುತ್ತಲೇ ಇದೆ.

ಜನವರಿಯಲ್ಲಿ ಕೆನಡಾದಿಂದ ದಿನಕ್ಕೆ 3.14 ಲಕ್ಷ ಬ್ಯಾರಲ್ ತೈಲ ಆಮದಾಗಿದೆ. ಕೆನಡಾ ದೇಶವು ಭಾರತಕ್ಕೆ ಹೆಚ್ಚು ತೈಲ ಪೂರೈಸುವ ದೇಶಗಳ ಸಾಲಿನಲ್ಲಿ ಐದನೇ ಸ್ಥಾನ ಪಡೆದುಕೊಂಡಿದೆ. ಯುಎಇ ನಾಲ್ಕನೇ ಸ್ಥಾನದಲ್ಲಿದೆ.

ಇರಾಕ್‌ನಿಂದ ಜನವರಿಯಲ್ಲಿ 9.83 ಲಕ್ಷ ಟನ್ ತೈಲವು ಭಾರತಕ್ಕೆ ಬಂದಿದೆ. ಇದು ಐದು ತಿಂಗಳ ಗರಿಷ್ಠ ಮಟ್ಟವಾಗಿದೆ. ಡಿಸೆಂಬರ್‌ಗೆ ಹೋಲಿಸಿದರೆ ಶೇ 11ರಷ್ಟು ಹೆಚ್ಚು ಆಮದಾಗಿದೆ.

ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಡಿಸೆಂಬರ್ ಅವಧಿಯಲ್ಲಿ ಭಾರತಕ್ಕೆ ಕಚ್ಚಾ ತೈಲ ಪೂರೈಸುವ ದೇಶಗಳ ಸಾಲಿನಲ್ಲಿ ಇರಾಕ್ ಮೊದಲ ಸ್ಥಾನದಲ್ಲಿದೆ.

ಸೌದಿ ಅರೇಬಿಯಾ ದೇಶವನ್ನು ಹಿಂದಿಕ್ಕುವ ಮೂಲಕ ರಷ್ಯಾ ಎರಡನೇ ಸ್ಥಾನ ಪಡೆದುಕೊಂಡಿದೆ. ಹೀಗಾಗಿ ಸೌದಿ ಅರೇಬಿಯಾ ಮೂರನೇ ಸ್ಥಾನಕ್ಕೆ ಇಳಿಕೆ ಕಂಡಿದೆ.

'ಸ್ಟೋನಾ' ಮೇಳದ ಸಮಾರೋಪದಲ್ಲಿ ಮುಖ್ಯಮಂತ್ರಿ ಬೊಮ್ಮಾಯಿ

ಗಣಿಗಾರಿಕೆ ಉದ್ಯಮಕ್ಕೆ ಇಟಲಿ ಮಾದರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗಣಿಗಾರಿಕೆ ಉದ್ಯಮವನ್ನು ಇಟಲಿ ಮಾದರಿಯಲ್ಲಿ ಅಭಿವೃದ್ಧಿಪಡಿಸಲು ಸರ್ಕಾರ ಸಂಪೂರ್ಣ ಸಹಕಾರ ನೀಡಲಿದೆ. ತೊಡಕುಗಳನ್ನು ನಿವಾರಿಸಲು ಗಣಿಗಾರಿಕೆಯ ನೀತಿಗಳಲ್ಲಿ ಮಾರ್ಪಾಡು ತರಲಾಗುವುದು ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹೇಳಿದರು.

ಭಾರತೀಯ ಗ್ರಾನೈಟ್ ಮತ್ತು ಗಣಿ ಉದ್ಯಮದ ಒಕ್ಕೂಟ ಶನಿವಾರ ಆಯೋಜಿಸಿದ್ದ 15ನೇ 'ಸ್ಟೋನಾ' ಮೇಳದ ಸಮಾರೋಪದಲ್ಲಿ ಅವರು ಮಾತನಾಡಿದರು.

ಆಧುನಿಕ ತಂತ್ರಜ್ಞಾನದ ಗರಿಷ್ಠ ಬಳಕೆಯಾಗಬೇಕು. ಗಣಿಗಾರಿಕೆ ಉದ್ಯಮವು ಬೆಳೆಯಬೇಕು. ಉದ್ಯಮಿಗಳಿಗೆ ಅನಗತ್ಯ ಕಿರುಕುಳ ಆಗಬಾರದು. ಪರವಾನಗಿ ಪಡೆಯುವ ಪ್ರಕ್ರಿಯೆ ಸರಳಗೊಳಿಸಲು, ತೊಡಕುಗಳನ್ನು ನಿವಾರಿಸಲು ಸರ್ಕಾರ ಕ್ರಮಕೈಗೊಳ್ಳಲಿದೆ ಎಂದರು.

ಈಗಾಗಲೇ ರಾಜಸ್ಥಾನ, ಗುಜರಾತ್ ರಾಜ್ಯಗಳಿಗಿಂತ ಕರ್ನಾಟಕ ಭಿನ್ನವಾದ ನೀತಿ ಅಳವಡಿಸಿಕೊಂಡಿದೆ. ವಿಶ್ವದಲ್ಲೇ ಅತ್ಯುತ್ತಮ ಕಲ್ಲಿನ ಆಧಾರ ರಾಜ್ಯದಲ್ಲಿ ಲಭ್ಯವಿದೆ. ಅವಕಾಶಗಳನ್ನು ಸದ್ಬಳಕೆ ಮಾಡಿಕೊಂಡು ಅಂತರರಾಷ್ಟ್ರೀಯ ಮಟ್ಟದಲ್ಲಿ ಬೇಡಿಕೆ ಕಾಯ್ದುಕೊಳ್ಳಬೇಕು. ಒಕ್ಕೂಟ ಮಾಹಿತಿ ವಿನಿಮಯದ ವೇದಿಕೆ ಒದಗಿಸಬೇಕು. ಉತ್ಪಾದನೆ ಹಾಗೂ ಮಾರಾಟದಲ್ಲಿ ಸುಧಾರಣೆ ತರಲು ಪ್ರಯತ್ನಿಸಬೇಕು. ಸುಸ್ಥಿರ ಗಣಿಗಾರಿಕೆ ಹೊಣೆಗಾರಿಕೆ ಅಗತ್ಯತೆ ನೀಡಬೇಕು ಎಂದು ಸಲಹೆ ನೀಡಿದರು.

ಮಿತಿಯಿಲ್ಲದ ಗಣಿಗಾರಿಕೆ ಭವಿಷ್ಯಕ್ಕೆ ದೊಡ್ಡ ಹೊಡೆತ. ಉದ್ಯಮದ ತ್ಯಾಜ್ಯ ಕಡಿಮೆ ಮಾಡಲು ಒತ್ತು ನೀಡಬೇಕು. ಕಲ್ಲುಗಣಿಗಾರಿಕೆಗೆ ಅವಕಾಶಗಳನ್ನು ಒದಗಿಸಲು 'ಸ್ಟೋನಾ' ಕಾರ್ಯನಿರ್ವಹಿಸುತ್ತಿದೆ ಎಂದರು. ಗಣಿ ಮತ್ತು ಭೂ ವಿಜ್ಞಾನ ಸಚಿವ ಹಾಲಪ್ಪ ಆಚಾರ್ ಅವರು, ಸ್ಟೋನಾ ಆಯೋಜಿಸಿದ ಮೇಳದಿಂದ ಭಾರತೀಯ ರಫ್ತುದಾರರಿಗೆ ಅಂತಾರಾಷ್ಟ್ರೀಯ ಖರೀದಿದಾರರನ್ನು ಭೇಟಿ ಮಾಡುವ ಅವಕಾಶ ದೊರೆತಿದೆ. ವಿವಿಧ ದೇಶಗಳ 100ಕ್ಕೂ ಹೆಚ್ಚು ಖರೀದಿದಾರರು ಭೇಟಿ ನೀಡಿದ್ದಾರೆ ಎಂದರು.

ಒಕ್ಕೂಟದ ಅಧ್ಯಕ್ಷ ಇಶ್ವಿಂದರ್ ಸಿಂಗ್, ಕಾರ್ಯದರ್ಶಿ ಕೆ.ಶ್ರೀಕ್ಷ ಪ್ರಸಾದ್, 'ಸ್ಟೋನಾ' ಅಧ್ಯಕ್ಷ ಮನೋಜ್ ಕುಮಾರ್ ಸಿಂಗ್, ರಾಜಸ್ಥಾನ ಸಣ್ಣ ಕೈಗಾರಿಕೆಗಳ ನಿಗಮದ ಅಧ್ಯಕ್ಷ ರಾಜೀವ್ ಅರೋರ ಉಪಸ್ಥಿತರಿದ್ದರು.

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in

ಜಾಹೀರಾತುಗಳಿಗಾಗಿ ಸಂಪರ್ಕಿಸಿ:

080 - 45557160 /161/ 162/ 163/ 164

9845114560 / 9731810277/ 9886213331

ಉದ್ಯೋಗಾವಕಾಶ

Cook

ವಿಸ್ಮಾಶ್ರೆ ಅರ್ಹತಾದ ಸ್ವಾಹಾರಿ ಅಡುಗೆ ಕೆಲಸಕ್ಕೆ ಮಹಿಳೆಯರು ರಾಜಾಜಿನಗರದಲ್ಲಿ ಬೇಕಾಗಿದ್ದಾರೆ.ವಸತಿ ಮತ್ತು ಆಕರ್ಷಕ ಸಂಬಳ ನೀಡಲಾಗುವುದು.ಸಂಪರ್ಕಿಸಿ +91 6366443134

WANTED three trained graduate teachers to teach science Mathematics CBSE Class 8, 9, 10 for Vidhathri Institute for Chemical Education (IITB alumnus at JP Nagar Salary up to 32000 pm. BSc BEd with 0-5 years Send documents as single pdf email vidhathri.foundation@gmail.com by 11 March 2023

Wanted

ಬೆಂಗಳೂರಿನ ನಾಗಸಂದ್ರ ಮೆಟ್ರೋ ಸ್ಟೇಷನ್ ಹತ್ತಿರದಲ್ಲಿರುವ ತೋಟ ಮತ್ತು ಮನೆ ಕೆಲಸ ಮಾಡಲು ಗಂಡ-ಹೆಂಡತಿ ಬೇಕಾಗಿದ್ದಾರೆ.ವಸತಿ ಉಚಿತ. ಸಂಪರ್ಕಿಸಿ: 9845026475

Marketing & Sales

150 SALES Executives ಕರ್ನಾಟಕದ ಎಲ್ಲ ಜಿಲ್ಲೆಯ ನಮ್ಮ ಬ್ರ್ಯಾಂಚ್‌ಗಳಲ್ಲಿ ಕೆಲಸ ಮಾಡಲು ಬೇಕಾಗಿದ್ದಾರೆ. Bright Feature ಇರುತ್ತದೆ. ವಯಸ್ಸು 18 ರಿಂದ 32. M/F 10 ಸಾವಿರದಿಂದ 15 ಸಾವಿರ ವೇತನ ನೀಡಲಾಗುತ್ತದೆ. ಸಂಪರ್ಕಿಸಿ: 9743132867, 9036262231

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

Rajajinagar

Multiple Vacancy

WANTED ELECTRICIANS/ Electrical supervisors to work at Electrical vehicle charging stations (shift duties) in Bangalore Qualification: ITI /Diploma electrical 8884107575 Contact no: Mail: smts.rr@gmail.com

GF+FF ON 30x50, Subramanyanagar very near Cluny convent, MES college, Oreon mall, hospitals, Malleshwaram railway station, 16000psft. Contact 9945560332.

Sites

Banashankari

BDA SITE for Sale BSK 6th Stg 4H BLK East Facing 40ft Road. Genuinely Interested Parties contact 9845482678

LOOKING FOR ASM,SR & SO for a potato chips manufacturing company. Attractive Packages Offered. Multiple Positions Open.Call: 9460636175 / 8073649592/ 9045936322. Email: techorganea@gmail.com

Situation Required

REQUIRED FIELD Sales Executives for Housan,Tumkur,Bellari,Hubli for reputed Company. Call / Send Bio - Data to whatsapp No : 9496585910 / 9154791112

ಬಿಲ್ಡರ್ ಎಸ್ಸೆನ್ಶಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಟ್ಟಡಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

Teachers/ Professors

VAANI INTERNATIONAL PUBLIC SCHOOL, Laggere, Bangalore-58 Requires Qualified, Trained, Experienced HM, TEACHERS (all subjects), Office-Staff with fluency in English. Contact: 9019537945 vaani.laggere@gmail.com

ಪ್ರಜಾವಾಣಿ

ಹೆಸರು ಬದಲಾವಣೆಗಾಗಿ

BOOK YOUR NAME CHANGE AD IN PRAJAVANI ALL KARNATAKA ALL DAYS

CHANGE OF NAME @ 50/-* Per Word

*conditions apply

For More Details Contact:

9731810277 | 9901641752

9845114560 | 9886213331

080- 45557160 | 163 | 164

EDUCATION CORNER

ಪುಟಿನ್ ಅಧಿಕಾರಿವರ್ಗ

ರಷ್ಯನ್ ಭಾಷಾ ತರಬೇತಿ ಹಾಗೂ ಕಾರ್ಯಪ್ರವೀಣತೆ ವಿನಿಮಯ ಕೇಂದ್ರ

PUTIN ADHIKARIVARGA

RUSSIAN LANGUAGE TRAINING AND KNOWLEDGE TRANSFERRING CENTER

https://puav8mile.wordpress.com/

ಕೋರ್ಸ್		ಮೌಲ್ಯ
CERTIFICATE IN RUSSIAN (SOCIAL).	LEVEL 1.1	₹ 10,000
	LEVEL 1.2	₹ 10,000
	LEVEL 2.0	₹ 10,000
CERTIFICATE IN RUSSIAN (BUSINESS).		₹ 10,000

ಮೇಲ್ಕಂಡ ಕೋರ್ಸ್‌ಗಳಿಗೆ ಅರ್ಜಿಗಳನ್ನು ಆಹ್ವಾನಿಸಲಾಗುತ್ತಿದೆ. ಆಸಕ್ತಿಯುಳ್ಳವರು ಹೆಚ್ಚಿನ ಮಾಹಿತಿಗೆ 9343482975 / 9643109295 ಸಂಪರ್ಕಿಸತಕ್ಕದ್ದು.

ವೈವಾಹಿಕ

Matrimonial Bureaus

UNIQUE BRAMHINS / LINGAYATS MATRIMONIAL BUREAU

Now-a-days marriages are becoming difficulty because of the difference between expectations and reality. Ours is UNIQUE BRAMHINS / LINGAYATS MATRIMONIAL BUREAU, please contact below the numbers for suitable match.

Y. SREENIVAS 9448072574, 9900977998

Brides Wanted

Hindu

ಮಡಿವಾಳರು ಕನ್ಯೆ ಬೇಕಾಗಿದೆ. ಯಾವುದೇ ಜಾತಿಯವರು ಸರಿ, ವೃತ್ತಿ ವ್ಯವಸಾಯ, ಮದುವೆ ಖರ್ಚನ್ನು ಹೆಣ್ಣಿನ ತಂದೆ ತಾಯಿಗೆ 1 ಲಕ್ಷ. 7411809894

Muslim

SUNNI MUSLIM Boy From a Affluent Family 1995 Born 5'11 Working as a Senior Software Engineer Posted in USA is looking for a suitable match (080-69070608)

SUNNI MUSLIM Boy 1997 Born Resident of Bangalore Having Own Business income 1 cr (Yearly) only Son is looking for a suitable match (080-69070609)

SUNNI MUSLIM Boy 40 Years Never Married M.Tech 60 LPA Posted in Bangalore is looking a match for Early marriage (080-69070608)

Grooms Wanted

Muslim

SUNNI MUSLIM fair and Beautiful Girl 22 Years from a Affluent Family is looking for a suitable match kindly contact. (080-69070609)

Telugu

ALLIANCE INVITED from qualified, employed, unmarried bangalore settled boy for telugu yadava bangalore girl 42 yrs/ 5'4' MCA unmarried, nw, nv. whatsapp 9380397152

ಸಾರ್ವಜನಿಕ ಪ್ರಕಟಣೆ

IN THE COURT OF HON'BLE 3rd ADDL. SENIOR CIVIL JUDGE AT TUMAKURU. O.S.372/2022

Plaintiff : Nagaraju V/S Defendant: Hemanna

1.Hemanna S/o Late Papaiah.M Aged about 43 years R/at # No.2016, 7th Cross, Chokkasandra Main Road, T. Dasarahalli, Bangalore -560 057.

NOTICE

The plaintiff has filed the above suit against the defendants seeking the relief of Specific performance of contract in view of sale agreement dated 04-02-2015 and seeking the relief of directing the defendant to execute Reg. absolute sale deed in favour of the plaintiff with respect of the plaint of this suit. Whereas the plaintiff has sought for seeking the relief of Specific performance of contract in view of Sale agreement with respect of the suit schedule property. The suit is set down for issue of court summons to the defendant to appear before this Hon'ble court on 13-03-2023 at 11-00 A.M either in person nor though Advocate and if the defendant fails to appear before this Hon'ble court and in such case the matter will be heard and adjudicate ex-parte. Given under my hand and seal of the Hon'ble court on this 1st day of February 2023.

By Order of the Court. Senior Sheristedar

Senior Civil Judge & C.J.M. Court, Tumakuru

Advocate for plaintiff

Sri. K. H. HARIKUMAR, Advocate, Chamber: Shishira Towers, General Kariyappa Road, Tumakuru City, Tumakuru-572 101. Ph: 98452 65203

ಪ್ರವಾಸ

Travel

2-3-23ರಿಂದ,ಅಯೋಧ್ಯಾ ಪ್ರಯಾಗ್ ರಾಜ್,ನೇಪಾಳ,ಕಾಶಿ26-3-23 ದೆಹಲಿ,ಅಮೃತ್ ಸರ್, ವೈಷ್ಣೋದೇವಿ ಹರಿದ್ವಾರ್ ಕಾಶಿ ಅಯೋಧ್ಯಾ ಗಯಾ30-3-23ಗುಜರಾತ್, ಮಧ್ಯಪ್ರದೇಶ,23-4-23 ಯಮುನೋತ್ರಿ,ಗಂಗೋತ್ರಿ,ಕೇದಾರನಾಥ್, ಬದ್ರಿನಾಥ್, ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755(ಮೈಸೂರು ಶಾಖೆ)9731187554

★11.04.2023 9ದಿನಗಳು★ ಕಾಶಿ,ಗಯಾ ಪ್ರಯಾಗ ಪ್ರವಾಸ, 27.04.2023 16/13ದಿನಗಳು ಕಾಶಿ,ನೇಪಾಳ,ಮುಕ್ತಿನಾಥ, ಗಣೇಶದರ್ಶನ,ಜನಕಪುರ ಪ್ರವಾಸ. ಆರ್.ಗಾಂಧಿ ಟೂರ್ಸ್(ರಿ) 9902433500/ 9945445809/ 26760367

ಸುಸಜ್ಜಿತ ವೈಷ್ಣೋದೇವಿ: 25.04.2023 16.05.2023 28.05.2023 ರಿಂದ 10/13/16 ದಿನಗಳ ಯುರೋಪ್ ಪ್ರವಾಸಗಳು. 29.03.2023 09.04.2023 27.04.2023 ರಿಂದ 11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್. 27.03.2023 11.04.2023 ರಿಂದ 6 ದಿನಗಳ ದುಬೈ,ಅಬುಧಾಬಿ. 24.03.2023 23.04.2023 ರಿಂದ 8 ದಿನಗಳ ಕಾಶಿ,ಗಯಾ. 09.04.2023 22.04.2023 ರಿಂದ 11 ದಿನಗಳ ಕಾಶಿ,ನೇಪಾಳ ಮುಕ್ತಿನಾಥ. 12.04.2023 ರಿಂದ 12 ದಿನಗಳ ವೈಷ್ಣೋದೇವಿ ಕಾಶ್ಮೀರ್ 22.04.2023 13.05.2023 ರಿಂದ 12 ದಿನಗಳ ಶಿಮ್ಲಾ,ಮನಾಲಿ. ಅಮೃತಸರ್ 27.04.2023 03.05.2023 ರಿಂದ 15 ದಿನಗಳ ಚಾರ್‌ಧಾಮ್ ಪ್ರವಾಸಗಳಿಗೆ ಇಂದೇ ವಿಚಾರಿಸಿ ಆನಂದ್ ವಿಹಾರಿ ಬೆಂಗಳೂರು-23. 080-23385837 8088887677

8 ದಿನಗಳ ಗ್ಯಾಂಗ್‌ಟಾಕ್ ಡಾರ್ಜಿಲಿಂಗ್ ಪ್ರವಾಸ. 12 ದಿನಗಳ ಚಾರ್‌ಧಾಮ್ ಯಾತ್ರೆ. ಸಂಪರ್ಕಿಸಿ: ಶ್ರೀರಂಗ ಹಾಲಿಡೇಸ್ ಬೆಂಗಳೂರು. 9980270467, 9740228186

ಭವಿಷ್ಯ

Astrology

ಶ್ರೀನಿವಾಸ್ ಎಂ. ಮುಗ್ಗೇರ, ಕೇರಳ ಜ್ಯೋತಿಷ್ಯ (ಮಂತ್ರವಾದಿ) 9632994106, 7892446291. ವಾಸ್ತುದೋಷ ಕುಂಡಲಿಗಳನ್ನು ಪರಿಶೀಲಿಸಲಾಗುತ್ತದೆ. ನಿಮ್ಮೆಲ್ಲಾ ಕಠಿಣ ಸಮಸ್ಯೆಗಳಿದ್ದರೂ ಪರಿಹಾರ ತಿಳಿಸುತ್ತಾರೆ.

ಸ್ತ್ರೀವಶೀಕರಣ, ಪುರುಷವಶೀಕರಣ, ಪ್ರೀತಿಪ್ರೇಮ ಇನ್ನು ಹಲವಾರು ಸಮಸ್ಯೆಗಳನ್ನು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಮಿಟಿ ಮುಖಾಂತರ ಪರಿಹಾರ. 9844174018

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು, ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ. 7795544894.

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳ ವಿಶ್ವಾಸಾರ್ಹತೆಯನ್ನು ಓದುಗರೇ ಖಚಿತಪಡಿಸಿಕೊಳ್ಳಬೇಕು. ... ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಅಮೆಜಾನ್: 3 ದಿನ ಕಚೇರಿಯಿಂದ ಕೆಲಸ

ನ್ಯೂಯಾರ್ಕ್ (ಎಪಿ): ಅಮೆಜಾನ್ ಕಂಪನಿಯು ಮೇ 1 ರಿಂದ ಜಾರಿಗೆ ಬರುವಂತೆ ತನ್ನ ನೌಕರರಿಗೆ ವಾರದಲ್ಲಿ ಮೂರು ದಿನ ಕಚೇರಿಯಿಂದ ಕೆಲಸ ಮಾಡುವಂತೆ ಹೇಳಿದೆ.

ಈ ಸಂಬಂಧ ಸದ್ಯ ಇರುವ ನಿಯಮದಲ್ಲಿ ಬದಲಾವಣೆ ಮಾಡಲಾಗುತ್ತಿದೆ. ಪ್ರಮುಖ ಹುದ್ದೆಯಲ್ಲಿ ಇರುವವರು ತಮ್ಮ ತಂಡವು ಹೇಗೆ ಕಾರ್ಯನಿರ್ವಹಿಸಬೇಕೆ ಎನ್ನುವ ಕುರಿತು ನಿರ್ಧಾರ ತೆಗೆದುಕೊಳ್ಳಲಿದ್ದಾರೆ ಎಂದು ಕಂಪನಿಯ ಸಿಇಒ ಆಂಡಿ ಜಸ್ಸಿ ಅವರು ನೌಕರರಿಗೆ ಬರೆದಿರುವ ಪತ್ರದಲ್ಲಿ ತಿಳಿಸಿದ್ದಾರೆ.

ಸ್ಟಾರ್‌ಬಕ್ಸ್ ಕಂಪನಿ ಸಹ ಈಗಾಗಲೇ ವಾರದಲ್ಲಿ ಮೂರು ದಿನ ಕಚೇರಿಯಿಂದ ಕೆಲಸ ಮಾಡುವಂತೆ ನೌಕರರಿಗೆ ತಿಳಿಸಿದೆ.

₹ 7,614 ಕೋಟಿ ಹೂಡಿಕೆ ಮಾಡಲಿದೆ ಓಲಾ

ಪ್ರಜಾವಾಣಿ ವಾರ್ತೆ

ಚೆನ್ನೈ: ತಮಿಳುನಾಡಿನ ಕೃಷ್ಣಗಿರಿ ಜಿಲ್ಲೆಯಲ್ಲಿನ ಪೋಚಂಪಳ್ಳಿಯಲ್ಲಿ ಇರುವ ಓಲಾ ಫ್ಯೂಚರ್ ಫ್ಯಾಕ್ಟರಿಯ ಸಾಮರ್ಥ್ಯ ವಿಸ್ತರಣೆ ಮಾಡುವ ಮೂಲಕ ವಿದ್ಯುತ್ ಚಾಲಿತ ಕಾರು ಮತ್ತು ಲಿಥಿಯಂ ಸೆಲ್ ತಯಾರಿಕೆ ಮಾಡಲು ಐದು ವರ್ಷಗಳಲ್ಲಿ ₹7,614 ಕೋಟಿ ಹೂಡಿಕೆ ಮಾಡುವುದಾಗಿ ಓಲಾ ಎಲೆಕ್ಟ್ರಿಕ್ ಕಂಪನಿಯು ಶನಿವಾರ ತಿಳಿಸಿದೆ.

ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಮತ್ತು ಓಲಾ ಎಲೆಕ್ಟ್ರಿಕ್‌ನ ಸಿಇಒ ಭವಿಷ್ ಅಗರ್‌ವಾಲ್ ಅವರ ಸಮ್ಮುಖದಲ್ಲಿ ಈ ಹೂಡಿಕೆ ಒಪ್ಪಂದಕ್ಕೆ ಓಲಾ ಎಲೆಕ್ಟ್ರಿಕ್ ಮೊಬಿಲಿಟಿ ಪ್ರೈವೇಟ್ ಲಿಮಿಟೆಡ್ ಮತ್ತು ತಮಿಳುನಾಡು ಸರ್ಕಾರ ಸಹಿ ಮಾಡಿವೆ.

ಹೂಡಿಕೆ ಮಾಡಲಿರುವ ಒಟ್ಟು ಮೊತ್ತದಲ್ಲಿ ಸೆಲ್ ತಯಾರಿಕೆಗೆ ₹5,114 ಕೋಟಿ ವೆಚ್ಚ ಆಗಲಿದೆ. ಉಳಿದ ₹2,500 ಕೋಟಿ ಮೊತ್ತವನ್ನು ಕಾರು ತಯಾರಿಕಾ ಘಟಕ ಸ್ಥಾಪನೆಗೆ ಬಳಸಲು ಕಂಪನಿ ಉದ್ದೇಶಿಸಿದೆ. ಇದರ ತಯಾರಿಕಾ ಸಾಮರ್ಥ್ಯವು ವಾರ್ಷಿಕ 1.4 ಲಕ್ಷ ಇರಲಿದೆ. ಈ ಹೂಡಿಕೆಯಿಂದಾಗಿ 3,111 ಜನರಿಗೆ ಉದ್ಯೋಗ ಸೃಷ್ಟಿಯಾಗುವ ಅಂದಾಜು ಮಾಡಲಾಗಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ

ಕೂಳೆ	400-450
ನಡುಗೋಲು	550-600
ರಾಶಿ	650-700
ರಾಶಿ ಉತ್ತಮ	650-700
ಜರಡಿ	800-900
ಹರಳಕ್ಕಿ	1250-1300
ಹಸಿರು ಸಾಧಾರಣ	900-1000
ಹಸಿರು ಉತ್ತಮ	1300-1400
ಹಸಿರು ಅತಿ ಉತ್ತಮ	1500-1550
ಕಾಳು ಮೆಣಸು	490

ಕಾಫಿ (50 ಕೆ.ಜಿ.ಗೆ ₹ ಗಳಲ್ಲಿ)

ಮಾದರಿಗಳು	ಹಾಸನ			
	ಮುದ್ದನ್ನ	ಪ್ಲಾಂಟೇಷನ್	ಅಲ್ಲಾನ	ಸ್ಥಾನೀಯ
ಎಬಿ	15500	15350	14950	185.55ಸೆಂಟ್ಸ್
ಪಿಬಿ	7560	7400	6800	
ಆರ್‌ಪಿ	10900	10400	9950	ಲಂಡನ್
ಆರ್‌ಸಿ	5225	191 on OT	4950	2067 ಡಾಲರ್

ಭೂಕಂಪನ: ಮತ್ತೆ ಮೂವರ ರಕ್ಷಣೆ

ಪ್ರಜಾವಾಣಿ ವಾರ್ತೆ

ಹಟೆ, ಟರ್ಕಿ (ಎಎಫ್‌ಪಿ): ಭಾರಿ ಭೂಕಂಪನ ಸಂಭವಿಸಿದ 13 ದಿನದ ನಂತರವು ಬದುಕುಳಿದವರಿಗೆ ಟರ್ಕಿಯಲ್ಲಿ ಶೋಧ ನಡೆದಿದ್ದು, ಶನಿವಾರ ಮಗು ಸೇರಿ ಮೂವರನ್ನು ರಕ್ಷಿಸಲಾಗಿದೆ ಎಂದು ವರದಿಯಾಗಿದೆ.

ಸ್ಥಳೀಯ ಎನ್‌ಟಿವಿ ಇದನ್ನು ವರದಿ ಮಾಡಿದ್ದು, ವಿವರ ನೀಡಿಲ್ಲ. ರಕ್ಷಿಸಿದವರನ್ನು ಆಸ್ಪತ್ರೆಗೆ ಒಯ್ಯುತ್ತಿರುವ ದೃಶ್ಯಗಳ ವರದಿ ಮಾಡಿದೆ. ಮೂವರಲ್ಲಿ ಒಬ್ಬರು ನಂತರ ಆಸ್ಪತ್ರೆಯಲ್ಲಿ ಮೃತಪಟ್ಟರು ಎಂದು ತಿಳಿಸಿದೆ.

ಫೆಬ್ರುವರಿ 6ರಂದು ಟರ್ಕಿ, ಸಿರಿಯಾದಲ್ಲಿ ಭೂಕಂಪನ ಸಂಭವಿಸಿತ್ತು. ರಿಕ್ಟರ್ ಮಾಪಕದಲ್ಲಿ ಇದರ ತೀವ್ರತೆ 7.8 ದಾಖಲಾಗಿತ್ತು. 43 ಸಾವಿರಕ್ಕೂ ಅಧಿಕ ಜನರು ಮೃತಪಟ್ಟಿದ್ದು, ಸಾವಿರಾರು ಜನ ಆತಂತ್ರರಾಗಿದ್ದಾರೆ.

ಟರ್ಕಿಯ ಹಟೇ ನಗರದಲ್ಲಿ ಭೂಕಂಪನದ ಸಂತ್ರಸ್ತರು ಆಹಾರ ಸಾಮಗ್ರಿ ಪಡೆಯಲು ಸಾಲುಗಟ್ಟಿರುವುದು –ಎಎಫ್‌ಪಿ ಚಿತ್ರ

ಬದುಕುಳಿದವರಿಗಾಗಿ 13 ದಿನದ ನಂತರವೂ ಶೋಧ ಕಾರ್ಯಾಚರಣೆ ನಡೆಸಿದ್ದು, ಅವಶೇಷಗಳಡಿ ಜೀವ ಉಳಿಸಿಕೊಂಡಿದ್ದ ಹಲವರನ್ನು ರಕ್ಷಿಸಲಾಗಿದೆ. ಶುಕ್ರವಾರ 45 ವರ್ಷದ ವ್ಯಕ್ತಿ, 14 ವರ್ಷದ ಬಾಲಕ ಸೇರಿ ಮೂವರನ್ನು ರಕ್ಷಿಸಲಾಗಿತ್ತು. ಶೋಧ ಕಾರ್ಯದಲ್ಲಿ ತೊಡಗಿದ್ದ ಸಿಬ್ಬಂದಿ ರಕ್ಷಿಸಿದ್ದರು.

ಜಪಾನ್ ನೆಲದಲ್ಲಿ ಬಿದ್ದ ಉತ್ತರ ಕೊರಿಯಾದ ಕ್ಷಿಪಣಿ

ಸೋಲ್ (ಎಪಿ): ಉತ್ತರ ಕೊರಿಯಾವು ಶನಿವಾರ ಪ್ರಯೋಗಿಸಿದ 'ಐಸಿಬಿಎಂ' ಹೆಸರಿನ ಖಂಡಾಂತರ ಕ್ಷಿಪಣಿಯು ಜಪಾನ್‌ನ ವಿಶೇಷ ಆರ್ಥಿಕ ವಲಯ (ಇಇಝಡ್) ವ್ಯಾಪ್ತಿಯಲ್ಲಿ ಅಪ್ಪಳಿಸಿದೆ.

'ಐಸಿಬಿಎಂ-ಕ್ಲಾಸ್' ಖಂಡಾಂತರ ಕ್ಷಿಪಣಿ ದೇಶದ ವಿಶೇಷ ಆರ್ಥಿಕ ವಲಯಕ್ಕೆ ಅಪ್ಪಳಿಸುವ ಮುನ್ನ 66 ನಿಮಿಷ ಹಾರಾಟ ನಡೆಸಿದೆ' ಎಂದು ಜಪಾನ್ ಸರ್ಕಾರದ ಮುಖ್ಯ ವಕ್ತಾರ ಹಿರೊಕಾಜು ಮಾಟ್ಸುನೊ ತಿಳಿಸಿದ್ದಾರೆ.

ಅಮೆರಿಕ ಮತ್ತು ದಕ್ಷಿಣ ಕೊರಿಯಾದ ಜಂಟಿ ಸೇನಾ ತಾಲೀಮು ಆರಂಭಿಸುವ ಒಂದು ದಿನ ಮೊದಲು ಈ ಕ್ಷಿಪಣಿ ಪ್ರಯೋಗ ನಡೆದಿದೆ ಎಂದು ಸೋಲ್ ಮತ್ತು ಟೋಕಿಯೊ ಹೇಳಿವೆ.

ಜಪಾನ್ ರಕ್ಷಣಾ ಸಚಿವ ಯಸುಕಜು ಹಮಡಾ, 'ಕ್ಷಿಪಣಿ 14000 ಕಿ.ಮೀ. ವರೆಗೆ ಗುರಿ ಮುಟ್ಟುವ ಸಾಮರ್ಥ್ಯ ಹೊಂದಿದೆ. ಅಂದರೆ, ಅಮೆರಿಕದ ಯಾವುದೇ ನೆಲದ ಮೇಲೆ ದಾಳಿ ನಡೆಸುವ ಸಾಮರ್ಥ್ಯವಿದೆ' ಎಂದರು.

ಆಕ್ಸ್‌ಫರ್ಡ್ ವಿ.ವಿ ಆಸ್ಪತ್ರೆ ಸಿಇಒ ಆಗಿ ಮೇಘನಾ

ಲಂಡನ್ (ಪಿಟಿಐ): ಭಾರತ ಮೂಲದ ವೈದ್ಯೆ ಪ್ರೊ. ಮೇಘನಾ ಪಂಡಿತ್ ಅವರು ಲಂಡನ್‌ನ ಆಕ್ಸ್‌ಫರ್ಡ್ ಯೂನಿವರ್ಸಿಟಿ ಹಾಸ್ಪಿಟಲ್ ಎನ್‌ಎಚ್‌ಎಸ್ ಫೌಂಡೇಶನ್ ಟ್ರಸ್ಟ್‌ನ ಸಿಇಒ ಆಗಿ ನೇಮಕಗೊಂಡಿದ್ದಾರೆ. ಮೇಘನಾ ಅವರು ಟ್ರಸ್ಟ್‌ನ ಮೊದಲ ಮಹಿಳಾ ಮುಖ್ಯಸ್ಥರಾಗಿದ್ದಾರೆ. ಶೆಲ್ಪೋರ್ಡ್ ಗ್ರೂಪ್‌ನಲ್ಲಿ ರಾಷ್ಟ್ರೀಯ ಆರೋಗ್ಯ ಸೇವೆ (ಎನ್‌ಎಚ್‌ಎಸ್) ಟ್ರಸ್ಟ್‌ನ ನೇತೃತ್ವ ಅದ ಭಾರತ ಮೂಲದ ಮೊದಲಿಗರು.

ಸಿರಿಯಾ: ಮೃತರ ಸಂಖ್ಯೆ 53ಕ್ಕೆ ಏರಿಕೆ

ಬೈರೂತ್ (ಎಪಿ): 'ಇಸ್ಲಾಮಿಕ್ ಸ್ಟೇಟ್ ಸಮೂಹದ ಉಗ್ರರು, ಕೇಂದ್ರ ಸಿರಿಯಾ ದಲ್ಲಿ ಇರುವ ಸೇನಾ ಚೆಕ್‌ಪೋಸ್ಟ್ ಮೇಲೆ ನಡೆಸಿದ ದಾಳಿಯಲ್ಲಿ ಮೃತಪಟ್ಟವರ ಸಂಖ್ಯೆ 53ಕ್ಕೆ ಏರಿದೆ. ಇವರಲ್ಲಿ ಹೆಚ್ಚಿನವರು ನಾಗರಿಕರು' ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಕರಾಚಿ: ಪೊಲೀಸ್ ಕಚೇರಿ ವಶಕ್ಕೆ ಯತ್ನ, ಐವರು ಉಗ್ರರ ಬಲಿ

ಕರಾಚಿ (ಪಿಟಿಐ): ಪೊಲೀಸ್ ಇಲಾಖೆಯ ಮುಖ್ಯಸ್ಥರ ಕಚೇರಿ ಮೇಲೆ ದಾಳಿ ನಡೆಸಿ, ಇಡೀ ಕಟ್ಟಡ ವಶಕ್ಕೆ ಪಡೆಯಲು ಯತ್ನಿಸಿದ್ದ ಐವರು ಉಗ್ರರು ಭದ್ರತಾ ಪಡೆಗಳ ಗುಂಡಿನ ದಾಳಿಗೆ ಬಲಿಯಾಗಿದ್ದಾರೆ.

ಉಗ್ರರನ್ನು ತೆಹ್ರೀಕ್ ಇ ತಾಲಿಬಾನ್ ಪಾಕಿಸ್ತಾನ (ಟಿಟಿಪಿ) ಸಂಘಟನೆ ಸದಸ್ಯರು ಎಂದು ಗುರುತಿಸಲಾಗಿದೆ. ಐದು ಮಹಡಿಗಳ ಕಚೇರಿ ವಶಕ್ಕೆ ಉಗ್ರರು ಯತ್ನಿಸಿದ್ದರು. ಶುಕ್ರವಾರ ತಡರಾತ್ರಿ ಕೃತ್ಯ ನಡೆದಿದೆ. ಈ ವೇಳೆ ಇಬ್ಬರು ಪೊಲೀಸ್ ಕಾನ್ಸ್‌ಟೆಬಲ್‌ಗಳು, ಭದ್ರತಾ ಸಿಬ್ಬಂದಿ ಮತ್ತು ನಾಗರಿಕ ರೊಬ್ಬರು ಮೃತಪಟ್ಟಿದ್ದಾರೆ.

ದಾಳಿ ಸಂದರ್ಭದಲ್ಲಿ ಮೂವರು ಉಗ್ರರು ಗುಂಡೇಟಿನಿಂದ ಮೃತಪಟ್ಟರೆ, ಇತರ ಇಬ್ಬರು ಸ್ವತಃ ತಮ್ಮನ್ನು ಸ್ಫೋಟಿಸಿಕೊಂಡರು. ದಾಳಿ ಆತಂಕ ಮೂಡಿಸಿದ್ದು, ನಾಲ್ಕು ಗಂಟೆ ಕಾಲ ಕಾರ್ಯಾಚರಣೆ ನಡೆಸಲಾಯಿತು.

ಉಗ್ರರ ದಾಳಿ, ಕಾರ್ಯಾಚರಣೆಯ ಹಿನ್ನೆಲೆಯಲ್ಲಿ ಕಟ್ಟಡವು ಭಾಗಶಃ ಜಖಂಗೊಂಡಿದೆ. ಪರಿಸ್ಥಿತಿ ಈಗ ನಿಯಂತ್ರಣದಲ್ಲಿದೆ. ಒಟ್ಟಾರೆ ಕಾರ್ಯಾಚರಣೆ ಸಂದರ್ಭದಲ್ಲಿ 17 ಮಂದಿ ಗಾಯಗೊಂಡಿದ್ದಾರೆ. ಮೂವರು ಉಗ್ರರನ್ನು ಸೆರೆ ಹಿಡಿಯಲಾಗಿದೆ ಎಂದು ಸಿಂಧ್ ಸರ್ಕಾರದ ವಕ್ತಾರ ಮುರ್ತಾಜಾ ವಾಹಬ್ ಟ್ವೀಟ್ ಮಾಡಿದ್ದಾರೆ.

ಒಟ್ಟು ಎಷ್ಟು ಮಂದಿ ಉಗ್ರರು ದಾಳಿ ನಡೆಸಿದರು ಎಂಬುದು ಖಚಿತವಾಗಿಲ್ಲ. ಅಧಿಕೃತ ಮೂಲಗಳ ಪ್ರಕಾರ, ಎಂಟು ಮಂದಿ ಶಸ್ತ್ರಸಜ್ಜಿತರು ದಾಳಿ ನಡೆಸಿದ್ದರು. ಕಟ್ಟಡದ ನಿಯಂತ್ರಣವನ್ನು ಭದ್ರತಾ ಸಿಬ್ಬಂದಿ ಪಡೆದಿದ್ದಾರೆ. ಪರಿಶೀಲನೆ ಪೂರ್ಣಗೊಂಡ ಬಳಿಕ ಖಚಿತ ವಿವರ ತಿಳಿಯಲಿದೆ ಎಂದು ವಿವರಿಸಿದ್ದಾರೆ.

ಕಟ್ಟಡದ ಬಳಿ ಎರಡು ಕಾರುಗಳು ಪತ್ತೆಯಾಗಿವೆ. ವಾಹನ ಪತ್ತೆ ಪರಿಣತರು ತಪಾಸಣೆ ನಡೆಸಿದ್ದಾರೆ. ಉಗ್ರರ ಬಳಿ ಆತ್ಮಾಹುತಿ ಕವಚ, ಶಸ್ತ್ರಗಳಿದ್ದವು, ಪೂರ್ವನಿಯೋಜಿತರಾಗಿ ಬಂದಿದ್ದರು. ಉಗ್ರರು ಪೊಲೀಸ್ ಸಮವಸ್ತ್ರದಲ್ಲಿ ಇದ್ದರು. ಮುಖ್ಯಸ್ಥರ ಕಚೇರಿ ಕಟ್ಟಡ ಪ್ರವೇಶಿಸಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಉಕ್ರೇನ್‌ಗೆ ಹೆಚ್ಚಿನ ನೆರವು ಅಗತ್ಯ: ನ್ಯಾಟೊ

ಮ್ಯುನಿಕ್, ಜರ್ಮನಿ (ಎಎಫ್‌ಪಿ): 'ಯುದ್ಧದಲ್ಲಿ ರಷ್ಯಾವನ್ನು ಮಣಿಸಲು ಉಕ್ರೇನ್‌ಗೆ ಅಗತ್ಯ ಶಸ್ತ್ರಾಸ್ತ್ರ ನೆರವು ಒದಗಿಸಬೇಕು' ಎಂದು ನ್ಯಾಟೊ ಪ್ರಧಾನ ಕಾರ್ಯದರ್ಶಿ ಜೆನ್ಸ್ ಸ್ಟೋಲ್ಟನ್‌ಬರ್ಗ್ ಸಲಹೆ ಮಾಡಿದ್ದಾರೆ.

ಇಲ್ಲಿ ನಡೆಯುತ್ತಿರುವ ಭದ್ರತಾ ವೇದಿಕೆಯ ಸಮಾವೇಶದಲ್ಲಿ ಅವರು ಈ ಮಾತು ಹೇಳಿದ್ದಾರೆ. 'ಸ್ವತಂತ್ರ ಸಾರ್ವಭೌಮ ರಾಷ್ಟ್ರವಾಗಿ ಉಕ್ರೇನ್ ಉಳಿಯಲು ನಾವು ಅಗತ್ಯ ನೆರವು ನೀಡಬೇಕಾಗಿದೆ. ಹೆಚ್ಚಿನ ಶಸ್ತ್ರಾಸ್ತ್ರಗಳ ನೆರವನ್ನು ಒದಗಿಸಬೇಕಾಗಿದೆ' ಎಂದು ಅಭಿಪ್ರಾಯಪಟ್ಟರು.

ರಷ್ಯಾ–ಉಕ್ರೇನ್ ಯುದ್ಧ ಆರಂಭವಾಗಿ ಒಂದು ವರ್ಷವಾಗುತ್ತಿರುವ ಸಂದರ್ಭದಲ್ಲೇ ಈ ಹೇಳಿಕೆ ಹೊರಬಿದ್ದಿದೆ.

ಭಾರತ್ ಜೋಡೊ ಯಾತ್ರೆಯ ಉತ್ಸಾಹ ಕುಗ್ಗದಿರಲಿ: ನಿತೀಶ್

ಪಟ್ನಾ (ಪಿಟಿಐ): 'ಕಾಂಗ್ರೆಸ್ ಪಕ್ಷವು ವಿರಮಿಸಬಾರದು. ಪಕ್ಷದ ಮುಖಂಡ ರಾಹುಲ್ ಗಾಂಧಿ ನೇತೃತ್ವದಲ್ಲಿ ನಡೆದ 'ಭಾರತ್ ಜೋಡೊ' ಯಾತ್ರೆಯ ಉತ್ಸಾಹವನ್ನು ಉಳಿಸಿಕೊಂಡು ಮುನ್ನಡೆಯಬೇಕು' ಎಂದು ಬಿಹಾರದ ಮುಖ್ಯಮಂತ್ರಿ ನಿತೀಶ್ ಕುಮಾರ್ ಅವರು ಶನಿವಾರ ಕಾಂಗ್ರೆಸ್‌ಗೆ ಸಲಹೆ ನೀಡಿದ್ದಾರೆ.

ಸಿಪಿಐ(ಎಂಎಲ್) ಲಿಬರೇಷನ್‌ನ ಮಹಾಅಧಿವೇಶನದ ಅಂಗವಾಗಿ ಆಯೋಜಿಸಿದ್ದ 'ಪ್ರಜಾಪ್ರಭುತ್ವ-ಸಂವಿಧಾನ ಉಳಿಸಿ, ಫ್ಯಾಸಿಸಂ ತೊಲಗಿಸಿ' ಕುರಿತ ಸಮ್ಮೇಳನದಲ್ಲಿ ಮಾತನಾಡಿದ ಅವರು, 'ಕಾಂಗ್ರೆಸ್ ಆದಷ್ಟು ಬೇಗ ಒಗ್ಗೂಡಿ, ಲೋಕಸಭೆಯಲ್ಲಿ 300ಕ್ಕೂ ಅಧಿಕ ಸಂಖ್ಯಾಬಲ ಹೊಂದಿರುವ ಬಿಜೆಪಿಯನ್ನು ಮುಂಬರುವ ಚುನಾವಣೆಯಲ್ಲಿ 100 ಸಂಖ್ಯಾಬಲಕ್ಕೆ ತರಲು ಕಾರ್ಯಪ್ರವೃತ್ತವಾಗಬೇಕು' ಎಂದೂ ಹೇಳಿದ್ದಾರೆ.

ಚುನಾವಣಾ ಆಯೋಗ, ಪ್ರಧಾನಿ ಮೋದಿ ವಿರುದ್ಧವೂ ಉದ್ಧವ್ ವಾಗ್ದಾಳಿ

'ಶಿವಧನಸ್ಸು ಕಳ್ಳನಿಗೆ ತಕ್ಕ ಪಾಠ ಕಲಿಸಿ'

ಪ್ರಜಾವಾಣಿ ವಾರ್ತೆ

ಮುಂಬೈ: ಚುನಾವಣಾ ಆಯೋಗವು ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣಕ್ಕೆ 'ಶಿವಸೇನಾ' ಹೆಸರು ಹಾಗೂ ಬಿಲ್ಲು ಮತ್ತು ಬಾಣ ಚಿಹ್ನೆಯನ್ನು ನೀಡಿದ್ದರ ಬೆನ್ನಲ್ಲೇ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಶಿಂದೆ ಮತ್ತು ಬಿಜೆಪಿಗೆ ಚುನಾವಣೆಯಲ್ಲಿ ಪಾಠ ಕಲಿಸಬೇಕೆಂದು ಶನಿವಾರ ಕಾರ್ಯಕರ್ತರಿಗೆ ಕರೆ ನೀಡಿದ್ದಾರೆ.

ಬಾಂದ್ರಾದ ತಮ್ಮ ನಿವಾಸ 'ಮಾತೋಶ್ರೀ'ಯ ಹೊರಗೆ ಶನಿವಾರ ನಡೆದ ಬೃಹತ್ ಶಕ್ತಿ ಪ್ರದರ್ಶನದಲ್ಲಿ ಮಾತನಾಡಿದ ಉದ್ಧವ್, 'ಶಿವರಾತ್ರಿಯ ಸಂದರ್ಭದಲ್ಲೇ ಶಿವಧನಸ್ಸು ಕಳ್ಳತನವಾಗಿದೆ. ಕಳ್ಳ ಸಿಕ್ಕಿ ಬೀಳುತ್ತಾನೆ. ಚುನಾವಣೆಗೆ ಹೋಗಿ ಶಿವಧನಸ್ಸನ್ನು ಮರಳಿ ತನ್ನಿ. ನಿಮ್ಮೆಲ್ಲರಿಗೂ ಆ ಕಳ್ಳ ಯಾರೆಂದು ತಿಳಿದಿದೆ. ಅಂತೆಯೇ ಆ ಕಳ್ಳನ ಮಾಲೀಕನೂ ಗೊತ್ತು. ಅವರಿಗೆ ತಕ್ಕ ಪಾಠ ಕಲಿಸಿ' ಎಂದು ಮುಖ್ಯಮಂತ್ರಿ ಏಕನಾಥ ಶಿಂದೆ ಮತ್ತು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.



ಮುಂಬೈನ ಬಾಂದ್ರಾದ ತಮ್ಮ ನಿವಾಸ 'ಮಾತೋಶ್ರೀ'ಯ ಹೊರಗೆ ಮಹಾರಾಷ್ಟ್ರದ ಮಾಜಿ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಶನಿವಾರ ತಮ್ಮ ಬೆಂಬಲಿಗರನ್ನು ಉದ್ದೇಶಿಸಿ ಮಾತನಾಡಿದರು —ಪಿಟಿಐ ಚಿತ್ರ

'ಅವನು ಜೇನುಗೂಡಿನ ಮೇಲೆ ಕಲ್ಲೆಸೆದಿದ್ದಾನೆ. ಆದರೆ, ಜೇನ್ನೊಣಗಳ ಕಡಿತವನ್ನು ಅವನು ಅನುಭವಿಸಿಲ್ಲ. ಬಾಳಾ ಸಾಹೇಬ್ ಅವರ ಶಿವಸೇನಾವನ್ನು ಎಂದಿಗೂ ಮುಗಿಸಲು ಸಾಧ್ಯವಿಲ್ಲ' ಎಂದರು.

ಪ್ರಧಾನಿ ನರೇಂದ್ರ ಮೋದಿ ಅವರ ವಿರುದ್ಧವೂ ಉದ್ಧವ್ ವಾಗ್ದಾಳಿ ನಡೆಸಿದರು. 'ಅವರು (ಚುನಾವಣಾ ಆಯೋಗ) ಗುಲಾಮನಂತೆ ವರ್ತಿಸಿದ್ದಾರೆ. ಪ್ರಧಾನಿ ಅವರ ಗುಲಾಮನಂತೆ ಮಾಡಿದ್ದಾರೆ. ಇಂದು ಮೋದಿ ತಮ್ಮ ಹೆಸರಿನಲ್ಲಿ ಮತಗಳನ್ನು ಪಡೆಯಲು ಸಾಧ್ಯವಿಲ್ಲ. ಅವರು ಬಾಳಾ ಸಾಹೇಬರ ಮುಖವಾಡವನ್ನೇ ತೆಗೆದುಕೊಳ್ಳಬೇಕು. ಅವರಿಗೆ ಠಾಕ್ರೆ ಹೆಸರು, ಬಾಳಾ ಸಾಹೇಬರ ಫೋಟೊ, ಚಿಹ್ನೆಯೂ ಬೇಕು. ಆದರೆ, ಶಿವಸೇನಾ ಕುಟುಂಬವಲ್ಲ' ಎಂದೂ ಹೇಳಿದರು.

'ಅವರು (ಶಿಂದೆ) ಬಿಲ್ಲು ಮತ್ತು ಬಾಣದ ಚಿಹ್ನೆಯನ್ನೇ ಹೇಗೆ ಕದ್ದಿದ್ದಾರೆ. ನಾನು ಫೇಸ್‌ಬುಕ್ ಲೈವ್ ಮಾಡಿ, ಚುನಾವಣಾ ಆಯೋಗ ಏನು ಕೇಳಿದೆ, ನಾವು ಏನು ಒದಗಿಸಿದ್ದೇವೆ ಎಂಬುದನ್ನು ನಿಮಗೆ ಹೇಳುತ್ತೇನೆ.ಈ ಹಿಂದೆ ಕಾಂಗ್ರೆಸ್, ಸಮಾಜವಾದಿ ಪಕ್ಷ ಮತ್ತು ಎಐಎಡಿಎಂಕೆಯಲ್ಲೂ ಇದೇ ರೀತಿಯ ವಿವಾದಗಳಿದ್ದವು. ಆದರೆ, ಒಡೆದುಹೋದ ಬಣಕ್ಕೆ ಎಂದಿಗೂ ಮೂಲ ಪಕ್ಷದ ಹೆಸರು ಅಥವಾ ಚಿಹ್ನೆಯನ್ನು ನೀಡಲಾಗಿಲ್ಲ' ಎಂದ ಉದ್ಧವ್, 'ಚುನಾವಣೆಯಲ್ಲಿ ಕಳ್ಳನಿಗೆ ತಕ್ಕ ಪಾಠ ಕಲಿಸುವವರೆಗೆ ನಾವು ವಿರಮಿಸಬಾರದು. ಕೂಡಲೇ ಚುನಾವಣೆಗೆ ಸಿದ್ಧತೆ ಆರಂಭಿಸಿ' ಎಂದು ಕರೆ ನೀಡಿದರು.

ಐಐಟಿ ವಿದ್ಯಾರ್ಥಿ ಸಾವು: ತನಿಖೆಗೆ ಸಮಿತಿ ರಚನೆ

ಮುಂಬೈ (ಪಿಟಿಐ): ಪ್ರಥಮ ವರ್ಷದ ಬಿ.ಟೆಕ್ ವಿದ್ಯಾರ್ಥಿ ಸಾವು ಪ್ರಕರಣದ ಸಮಗ್ರ ತನಿಖೆಗೆ ಐಐಟಿ ಬಾಂಬೆಯು ಸಮಿತಿಯೊಂದನ್ನು ರಚನೆ ಮಾಡಿದೆ.

'ಪ್ರೊ.ನಂದ ಕಿಶೋರ್ ನೇತೃತ್ವದ ಸಮಿತಿಯಲ್ಲಿ ಎಸ್‌ಸಿ/ಎಸ್‌ಟಿ ವಿದ್ಯಾರ್ಥಿ ಘಟಕದ ಸದಸ್ಯರು, ಐಐಟಿ ಬಾಂಬೆ ಆಸ್ಪತ್ರೆಯ ಮುಖ್ಯ ವೈದ್ಯಕೀಯ ಅಧಿಕಾರಿ ಇದ್ದಾರೆ' ಎಂದು ಸಂಸ್ಥೆಯ ನಿರ್ದೇಶಕ ಸುಭಾಸಿಸ್ ಚೌದರಿ ತಿಳಿಸಿದ್ದಾರೆ.

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜನೀಯರರು
ಲೋಕೋಪಯೋಗಿ ಇಲಾಖೆ ವಿಭಾಗ ಗದಗ
Phone No : 08372-238782 Fax No. 08372-237268
E.Mail : eepwdgad@gmail.com
ನಂ:ಕಾನಿಇಂಗಲೋಇ:ಪಿಬಿ-:ನಬಾರ್ಡ-28/2022-23/7259 ದಿನಾಂಕ: 16-02-2023

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಈ ಕೆಳಗೆ ಸಹಿ ಮಾಡಿದ ಅಧಿಕಾರಿಯವರಿಂದ ಲೋಕೋಪಯೋಗಿ ಇಲಾಖೆ ಗದಗ ವಿಭಾಗದಡಿ ಲೆಕ್ಕ ಶೀರ್ಷಿಕೆ 5054-04-337-0-02-436 NABARDRIDF28 ಅನುದಾನದ ಅಡಿಯಲ್ಲಿಯ ಒಟ್ಟು **2276.00** ಲಕ್ಷ ಮೊತ್ತದಲ್ಲಿ ಒಟ್ಟು 04 ಕಾಮಗಾರಿಗಳಿಗೆ (ಕನಿಷ್ಠ ಮೊತ್ತ ರೂ. **485.00** ಲಕ್ಷ ಗರಿಷ್ಠ ಮೊತ್ತ ರೂ. **600.00** ಲಕ್ಷ) ಇ-ಪ್ರಕ್ಯೂರ್‌ಮೆಂಟ್‌ನಲ್ಲಿ ನೊಂದಣಿ ಮಾಡಿಸಿದ ಲೋಕೋಪಯೋಗಿ ಇಲಾಖೆಯ ಅರ್ಹ ಗುತ್ತಿಗೆದಾರರಿಂದ ಇ-ಪ್ರೊಕ್ಯೂರಮೆಂಟ್ (ಇ-Procurement) ಸ್ಟ್ಯಾಂಡರ್ಡ ಬಿಡ್ ಡಾಕುಮೆಂಟ್ ಕೆ ಡಬ್ಲ್ಯೂ- 4 ರ ಪ್ರಕಾರ ಐಟಂವಾರು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಸಂಪೂರ್ಣ ವಿವರಗಳಿಗಾಗಿ ಅಂತರ್ ಜಾಲ ವಿಳಾಸ http://www.eproc.karnataka.gov.in/ ದಲ್ಲಿ ನೋಡಿಕೊಳ್ಳಬಹುದು.
Work Indent No:- 165264, 165263, 165265 and 165293
ಮೇಲಿನ ಕಾಮಗಾರಿಯ ಟೆಂಡರ ವಿವರ ಪಶ್ನೋತ್ತರ ದಿನಾಂಕ: **22-02-2023**, ಟೆಂಡರ್ ಸಲ್ಲಿಸುವ ದಿನಾಂಕ: **04-03-2023** ತಾಂತ್ರಿಕ /ಆರ್ಥಿಕ ಬಿಡ್ ತೆರೆಯುವ ದಿನಾಂಕ: **06-03-2023** ಆರ್ಥಿಕ ಬಿಡ್ ತೆರೆಯುವ ದಿನಾಂಕ: **07-03-2023**
ಜಿಎಸ್‌ಟಿ ವೊತ್ತವನ್ನು ಚಾಲ್ತಿಯಲ್ಲಿರುವ ಸರ್ಕಾರದ ಆದೇಶದಂತೆ ಪಾವತಿಸಲಾಗುವದು. ಗುತ್ತಿಗೆ ಅವಧಿಯನ್ನು ಗುತ್ತಿಗೆದಾರರ ವಿಳಂಬದಿಂದ ವಿಸ್ತರಿಸಿದಲ್ಲಿ ವಿಸ್ತೃತ ಗುತ್ತಿಗೆ ಅವಧಿಯಲ್ಲಿ ಆಗುವ ಜಿಎಸ್‌ಟಿ ಹೆಚ್ಚಳವನ್ನು ಗುತ್ತಿಗೆದಾರರಲೇ ಭರಿಸತಕ್ಕದ್ದು.
ಸಹಿ/- ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ವಿಭಾಗ, ಗದಗ
ವಾಸಾಸಂಇ/ಗದಗ/ಕೆಎಸ್‌ಎಂಸಿಎ/660/2022-23

'ಬಿಜೆಪಿ ಗೂಂಡಾಗಿರಿಗೆ ಸಕ್ಸೇನಾ ಬೆಂಬಲ'

ಲೆಫ್ಟಿನೆಂಟ್ ಗವರ್ನರ್ ಮನೆ ಎದುರು ಎಎಪಿ ಕಾರ್ಯಕರ್ತರ ಪ್ರತಿಭಟನೆ, ರಾಜೀನಾಮೆಗೆ ಆಗ್ರಹ

ನವದೆಹಲಿ (ಪಿಟಿಐ): ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರ ರಾಜೀನಾಮೆಗೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಕಾರ್ಯಕರ್ತರು ಶನಿವಾರ ಪ್ರತಿಭಟನೆ ನಡೆಸಿದರು. ದೆಹಲಿ ಮಹಾನಗರ ಪಾಲಿಕೆಯ ಮೇಯರ್ ಚುನಾವಣೆ ವಿಳಂಬಕ್ಕೆ ಕಾರಣವಾಗಿರುವ ಅವರು ಬಿಜೆಪಿಯ ಗೂಂಡಾಗಿರಿಗೆ ಬೆಂಬಲಿಸುತ್ತಿದ್ದಾರೆ ಎಂದು ಪಕ್ಷ ಆರೋಪಿಸಿದೆ.

ಎಎಪಿ ಶಾಸಕ ಆತಿಶಿ, ದುರ್ಗೇಶ್ ಪಾಠಕ್ ನೇತೃತ್ವದಲ್ಲಿ ಹಲವು ಮುಖಂಡರು, ಕಾರ್ಯಕರ್ತರು ರಾಜ ನಿವಾಸ ಮಾರ್ಗದಲ್ಲಿರುವ ಲೆಫ್ಟಿನೆಂಟ್ ಗವರ್ನರ್ ನಿವಾಸದ ಎದುರು ಪ್ರತಿಭಟನೆ ನಡೆಸಿ, ರಾಜೀನಾಮೆಗೆ ಆಗ್ರಹಿಸಿದರು.

'ಮೇಯರ್ ಚುನಾವಣೆ ವಿಚಾರದಲ್ಲಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶವು ಬಿಜೆಪಿ ಮುಖಕ್ಕೆ ಬಾರಿಸಿದಂತೆ ಇದೆ. ದೆಹಲಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಅವರ ಕ್ರಮಗಳೆಲ್ಲವೂ ಅಸಾಂವಿಧಾನಿಕ. ಬಿಜೆಪಿಯ ಗೂಂಡಾಗಿರಿಗೆ ಬೆಂಬಲವಾಗಿ ನಿಂತಿರುವ ಅವರು ಕೂಡಲೇ ರಾಜೀನಾಮೆ ಕೊಡಬೇಕು' ಎಂದು ಪಾಠಕ್ ಆಗ್ರಹಿಸಿದ್ದಾರೆ.

'ದೆಹಲಿ ಸರ್ಕಾರದ ಗಮನಕ್ಕೆ ತಾರದೆಯೇ ಲೆ.ಗವರ್ನರ್ ಅವರು ನಾಮನಿರ್ದೇಶಿತ ಸದಸ್ಯರನ್ನು ನೇಮಿಸಿದರು. ನಂತರ, ನಾಮನಿರ್ದೇಶಿತ ಸದಸ್ಯರಿಂದ ಮೇಯರ್ ಚುನಾವಣೆಯಲ್ಲಿ ಮತದಾನ ಮಾಡಿಸಲು ಯತ್ನಿಸಿದರು. ಇಷ್ಟೆಲ್ಲಾ ಮಾಡಿರುವ ಅವರು ರಾಜೀನಾಮೆ ಏಕೆ ನೀಡಬಾರದು? ಇಂತಹ ಅಸಾಂವಿಧಾನಿಕ ನಿರ್ಧಾರಗಳನ್ನು ಎಂದೂ ಕಂಡಿಲ್ಲ' ಎಂದಿದ್ದಾರೆ.

ಮೇಯರ್ ಚುನಾವಣೆ ಆಯ್ಕೆಗೆ ಮೂರು ಬಾರಿ ನಡೆದಿದ್ದ ಯತ್ನಗಳು ವಿಫಲವಾಗಿದ್ದವು. ಹೀಗಾಗಿ, ಎಎಪಿ ಮೇಯರ್ ಅಭ್ಯರ್ಥಿ ಶೆಲ್ಲಿ ಒಬೆರಾಯ್ ಅವರು ನ್ಯಾಯಾಲಯದ ಮೆಟ್ಟಿಲೇರಿದ್ದರು. ಶುಕ್ರವಾರ ಆದೇಶ ನೀಡಿದ್ದ ಸುಪ್ರೀಂ ಕೋರ್ಟ್, ನಾಮನಿರ್ದೇಶಿತ ಸದಸ್ಯರು ದೆಹಲಿ ಪಾಲಿಕೆಯ ಮೇಯರ್ ಚುನಾವಣೆಯಲ್ಲಿ ಮತದಾನ ಮಾಡಬಾರದು ಎಂದು ಸೂಚಿಸಿತ್ತು.

ಮೇಯರ್ ಚುನಾವಣೆ: 22ಕ್ಕೆ ಪಾಲಿಕೆ ಸಭೆ

ದೆಹಲಿ ಮಹಾನಗರ ಪಾಲಿಕೆಯ ಮೇಯರ್ ಹಾಗೂ ಉಪಮೇಯರ್ ಆಯ್ಕೆಗೆ ಚುನಾವಣೆ ನಡೆಸುವ ಕುರಿತಂತೆ, 'ಇದೇ 22ರಂದು ಪಾಲಿಕೆಯ ಸಭೆ ನಡೆಯಲಿದೆ. ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಸಭೆ ನಡೆಸಲು ಅನುಮತಿ ನೀಡಿದ್ದು, ರಾಜನಿವಾಸ ಪ್ರಕಟಣೆ ಹೊರಡಿಸಿದೆ.

ಫೆ.22ಕ್ಕೆ ಚುನಾವಣೆ ನಡೆಸುವಂತೆ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ದೆಹಲಿ ಲೆಫ್ಟಿನೆಂಟ್ ಗವರ್ನರ್‌ಗೆ ಶಿಫಾರಸು ಮಾಡಿದ ಕೆಲವೇ ಗಂಟೆಗಳಲ್ಲಿ ರಾಜನಿವಾಸದಿಂದ ಪ್ರಕಟಣೆ ಹೊರಬಿದ್ದಿದೆ.

ಮೇಯರ್, ಉಪಮೇಯರ್ ಹಾಗೂ ಸ್ಥಾಯಿಸಮಿತಿ ಸದಸ್ಯರ ಆಯ್ಕೆ ಚುನಾವಣೆ ನಡೆಸುವ ದಿನಾಂಕ ನಿಗದಿ ಮಾಡುವ ಸಲುವಾಗಿ 24 ಗಂಟೆಯೊಳಗೆ ಸಭೆ ಕರೆಯುವಂತೆ ಸುಪ್ರೀಂ ಕೋರ್ಟ್ ನಿರ್ದೇಶನ ನೀಡಿತ್ತು.

1957ರ ದೆಹಲಿ ಮಹಾನಗರ ಪಾಲಿಕೆ (ಡಿಎಂಸಿ) ಕಾಯ್ದೆಯ ಪ್ರಕಾರ, ಫಲಿತಾಂಶದ ಬಳಿಕ ನಡೆಸುವ ಮೊದಲ ಅಧಿವೇಶನದಲ್ಲಿ ಮೇಯರ್ ಹಾಗೂ ಉಪಮೇಯರ್ ಆಯ್ಕೆಗೆ ಚುನಾವಣೆ ನಡೆಸಬೇಕು. ಆದರೆ ಚುನಾವಣೆ ಆಗಿ 2 ತಿಂಗಳು ಕಳೆದರೂ ಮೇಯರ್ ಆಯ್ಕೆ ಸಾಧ್ಯವಾಗಿಲ್ಲ.

ನ್ಯಾಯಾಂಗ ನಿಂದನೆ ಆರೋಪ: ವಿ.ಕೆ. ಸಕ್ಸೇನಾ ಅವರು ನ್ಯಾಯಾಂಗ ಆಡಳಿತದಲ್ಲಿ ಹಸ್ತಕ್ಷೇಪ ಮಾಡಲು ಯತ್ನಿಸಿದ್ದು, ನ್ಯಾಯಾಂಗ ನಿಂದನೆ ಮಾಡಿದ್ದಾರೆ ಎಂದು ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಶನಿವಾರ ಆರೋಪಿಸಿದ್ದಾರೆ. ಸುಪ್ರೀಂ ಕೋರ್ಟ್‌ನಲ್ಲಿ ದೆಹಲಿ ಸರ್ಕಾರದ ಅಭಿಪ್ರಾಯ ವ್ಯಕ್ತಪಡಿಸುವುದಕ್ಕೆ ಸಕ್ಸೇನಾ ಅವರು ಏಕಾಏಕಿ ತಡೆಯೊಡ್ಡಲು ಯತ್ನಿಸುತ್ತಿದ್ದಾರೆ ಎಂದೂ ಆರೋಪಿಸಿದ್ದಾರೆ.

ಶೆಲ್ಲಿ ಒಬೆರಾಯ್ ಅವರು ಸುಪ್ರೀಂ ಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿಯಲ್ಲಿ ಲೆಫ್ಟಿನೆಂಟ್ ಗವರ್ನರ್ ಹಾಗೂ ದೆಹಲಿ ಸರ್ಕಾರವನ್ನು ಪ್ರತಿವಾದಿಗಳಾಗಿ ಹೆಸರಿಸಿದ್ದರು ಎಂದು ಕೇಜ್ರಿವಾಲ್ ಹೇಳಿದ್ದಾರೆ. ಪ್ರಕರಣದಲ್ಲಿ ವಾದ ಮಂಡಿಸಲು ಗೌತಮ್ ನಾರಾಯಣ್ ಅವರನ್ನು ನೇಮಿಸುವಂತೆ ನಗರಾಭಿವೃದ್ಧಿ ಕಾರ್ಯದರ್ಶಿಗೆ ದೆಹಲಿ ಸರ್ಕಾರ ಸೂಚಿಸಿತ್ತು. ಆದರೆ, ಸರ್ಕಾರಿ ವಕೀಲರನ್ನು ತುಷಾರ್ ಮೆಹ್ತಾ ಅವರನ್ನು ನೇಮಿಸುವಂತೆ ನಗರಾಭಿವೃದ್ಧಿ ಕಾರ್ಯದರ್ಶಿಗೆ ಸಕ್ಸೇನಾ ಅವರು ಸೂಚಿಸಿದ್ದರು. ಸಕ್ಸೇನಾ ಅವರ ಈ ನಡೆಯು, ಲೆಫ್ಟಿನೆಂಟ್ ಗವರ್ನರ್ ಹುದ್ದೆಗೆ ಶೋಭೆ ತರುವಂತಿಲ್ಲ ಎಂಬುದನ್ನು ಪತ್ರ ಬರೆದು ಅವರಿಗೆ ಮನವರಿಕೆ ಮಾಡಿಕೊಡಲು ಯತ್ನಿಸಿದ್ದೇನೆ ಎಂದು ಕೇಜ್ರಿವಾಲ್ ಹೇಳಿದ್ದಾರೆ.

ಕೊಲಿಜಿಯಂ ವ್ಯವಸ್ಥೆ ಪರಿಪೂರ್ಣ ಮಾದರಿ: ನ್ಯಾ.ಲಲಿತ್

ನವದೆಹಲಿ (ಪಿಟಿಐ): ನ್ಯಾಯಮೂರ್ತಿಗಳ ಆಯ್ಕೆಗಾಗಿ ಇರುವ ಕೊಲಿಜಿಯಂ ವ್ಯವಸ್ಥೆಯು ಬಹುಶಃ ಪರಿಪೂರ್ಣ ಮಾದರಿಯಾಗಿದೆ ಎಂದು ಸುಪ್ರೀಂ ಕೋರ್ಟ್‌ನ ನಿವೃತ್ತ ಮುಖ್ಯ ನ್ಯಾಯಮೂರ್ತಿ ಯು.ಯು.ಲಲಿತ್ ಶನಿವಾರ ಅಭಿಪ್ರಾಯಪಟ್ಟಿದ್ದಾರೆ.

ನ್ಯಾಯಾಂಗ ಉತ್ತರದಾಯಿತ್ವ ಮತ್ತು ಸುಧಾರಣೆ (ಸಿಜೆಎಆರ್) ಸಂಸ್ಥೆ ಇಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, 'ಸಾಂವಿಧಾನಿಕ ನ್ಯಾಯಾಲಯಗಳಿಗೆ ನ್ಯಾಯಮೂರ್ತಿಗಳ ಹೆಸರುಗಳನ್ನು ಶಿಫಾರಸು ಮಾಡುವಾಗ ಕಠಿಣ ಪ್ರಕ್ರಿಯೆಗಳನ್ನು ಅನುಸರಿಸಲಾಗುತ್ತಿದೆ' ಎಂದಿದ್ದಾರೆ.

'ನನ್ನ ಪ್ರಕಾರ ಕೊಲಿಜಿಯಂನಂತಹ ಉತ್ತಮವಾದ ಬೇರೆ ವ್ಯವಸ್ಥೆ ನಮ್ಮಲ್ಲಿಲ್ಲ. ಈ ಕಾರಣಕ್ಕೆ ನಾವು ಕೊಲಿಜಿಯಂ ವ್ಯವಸ್ಥೆಯನ್ನು ಉಳಿಸಿಕೊಳ್ಳುವ ವ್ಯವಸ್ಥೆ ಮಾಡಬೇಕು' ಎಂದೂ ತಿಳಿಸಿದ್ದಾರೆ.

ಕೊಲಿಜಿಯಂ ವ್ಯವಸ್ಥೆಯು ನ್ಯಾಯಾಂಗ ಮತ್ತು ಸರ್ಕಾರದ ನಡುವಿನ ವಿವಾದದ ಪ್ರಮುಖ ಕೇಂದ್ರಬಿಂದುವಾಗಿ ಬದಲಾಗಿದೆ ಎಂದೂ ಹೇಳಿದ್ದಾರೆ.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ,
ಅಮಾನಿಕೆರೆ ಪಾರ್ಕ್ ಎದುರು, ಡಿ.ಸಿ ಕಛೇರಿ ಹಿಂಭಾಗ, ತುಮಕೂರು-572101
Email: dhotumkur@gmail.com ph:0816-2278387
ಸಂ:ಜಿಆಕು/ಎಎ/38/2019-20 ದಿನಾಂಕ: 15.02.2023

ಗುಪ್ತ ದರ ಪಟ್ಟಿ ಕಂ ಹರಾಜು ಪ್ರಕಟಣೆ

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಅಧೀನದಲ್ಲಿರುವ ಜಿಲ್ಲಾದ್ಯಂತ ಆರೋಗ್ಯ ಸಂಸ್ಥೆಗಳಲ್ಲಿನ ಅನುಪಯುಕ್ತ ವಾಹನಗಳನ್ನು ಹಾಗೂ ದುರಸ್ತಿಯ ನಂತರ ತೆಗೆದುಹಾಕಿರುವ ಬಿಡಿಭಾಗಗಳನ್ನು ಹೇಗಿದೆಯೋ ಹಾಗೆ ಅದೇ ಸ್ಥಿತಿಯಲ್ಲಿ ದಿನಾಂಕ 02.03.2023 ರಂದು ಬೆಳಿಗ್ಗೆ 11.00 ಗಂಟೆಗೆ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳ ಕಛೇರಿ ತುಮಕೂರು ಇಲ್ಲಿ ಹರಾಜು ಮಾಡಲಾಗುವುದು. ದರಪಟ್ಟಿ ಫಾರಂ ವಿತರಣೆ ಮಾಡುವ ದಿನಾಂಕ : **16.02.2023**ರಿಂದ **28.02.2023** 4.00 ಗಂಟೆಯೊಳಗೆ. ದರಪಟ್ಟಿ ಸಲ್ಲಿಸುವ ಕೊನೆಯ ದಿನಾಂಕ: **1.03.2023**ರಂದು 4-00 ಗಂಟೆಯೊಳಗೆ. ದರಪಟ್ಟಿ ತೆರೆಯುವ ದಿನಾಂಕ:2.03.2023 ಹರಾಜುಪ್ರಕ್ರಿಯೆನಂತರ. ಹರಾಜು ದಿನಾಂಕ: **2.03.2023** ರಂದು ಬೆಳಿಗ್ಗೆ 11-00 ಗಂಟೆಗೆ. ಹರಾಜು ಪ್ರಕ್ರಿಯೆ ನಡೆಯುವ ಸ್ಥಳ: ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಅಧಿಕಾರಿಗಳು ಕಛೇರಿ ತುಮಕೂರು. ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಬೇಕಾದ ಅಧಿಕಾರಿ / ಸಿಬ್ಬಂದಿ ಸಹಾಯಕ ಆಡಳಿತಾಧಿಕಾರಿಗಳು / ಸೇವಾ ಅಭಿಯಂತರರು. ದೂರವಾಣಿ ಸಂಖ್ಯೆ 0816-2278387
ಸಹಿ/- ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳು, ತುಮಕೂರು.
DIPR/TUM/978/KSMCA/2022-23

ಸಂಕ್ಷಿಪ್ತ ಸುದ್ದಿ

ದೆಹಲಿ ಮೆಟ್ರೊ: ದೇಶೀಯ ಸಿಗ್ನಲಿಂಗ್ ವ್ಯವಸ್ಥೆ

ನವದೆಹಲಿ (ಪಿಟಿಐ): ದೆಹಲಿ ಮೆಟ್ರೊದ ಕೆಂಪು ಮಾರ್ಗದಲ್ಲಿ ದೇಶೀಯವಾಗಿ ಅಭಿವೃದ್ಧಿಪಡಿಸಿದ ಸಿಗ್ನಲಿಂಗ್ ತಂತ್ರಜ್ಞಾನ ಮತ್ತು ಮೇಲ್ವಿಚಾರಣಾ ವ್ಯವಸ್ಥೆಯನ್ನು (ಐ-ಎಟಿಎಸ್) ಶನಿವಾರ ಉದ್ಘಾಟಿಸಲಾಯಿತು.

'ಮೇಕ್ ಇನ್ ಇಂಡಿಯಾ' ಮತ್ತು 'ಆತ್ಮನಿರ್ಭರ ಭಾರತ್' ಅಡಿ ದೆಹಲಿ ಮೆಟ್ರೊ ರೈಲು ನಿಗಮ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್ ಜಂಟಿ ತಂಡ ದೇಶದ ಮೊದಲ ಐ-ಎಟಿಎಸ್ ವ್ಯವಸ್ಥೆಯನ್ನು ರೂಪಿಸಿದೆ. ಡಿಎಂಆರ್‌ಸಿ ಅಧ್ಯಕ್ಷರೂ ಆಗಿರುವ ಕೇಂದ್ರ ವಸತಿ ಮತ್ತು ನಗರ ವ್ಯವಹಾರಗಳ ಸಚಿವಾಲಯದ ಕಾರ್ಯದರ್ಶಿ ಮನೋಜ್ ಜೋಶಿ ಅವರು ಶಾಸ್ತ್ರಿ ಪಾರ್ಕ್ ಕಾರ್ಯಾಚರಣೆ ನಿಯಂತ್ರಣ ಕೇಂದ್ರದಿಂದ (ಒಸಿಸಿ) ಕೆಂಪು ಮಾರ್ಗದಲ್ಲಿ ಐ-ಎಟಿಎಸ್ ವ್ಯವಸ್ಥೆಗೆ ಚಾಲನೆ ನೀಡಿದರು. ಬಿಇಎಲ್ ಸಿಎಂಡಿ ಭಾನುಪ್ರಕಾಶ್ ಶ್ರೀವಾಸ್ತವ ಇದ್ದರು.

ಇಂದು ಮತ್ತೆ ಮನೀಶ್ ವಿಚಾರಣೆ

ನವದೆಹಲಿ (ಪಿಟಿಐ): ದೆಹಲಿ ಅಬಕಾರಿ ನೀತಿ ಪ್ರಕರಣಕ್ಕೆ ಸಂಬಂಧಿಸಿದಂತೆ ಚಾರ್ಜ್‌ಶೀಟ್ ಸಲ್ಲಿಸಿದ ಸುಮಾರು 3 ತಿಂಗಳ ಬಳಿಕ ಸಿಬಿಐ ದೆಹಲಿ ಉಪ ಮುಖ್ಯಮಂತ್ರಿ ಮನೀಶ್ ಸಿಸೋಡಿಯಾ ಅವರನ್ನು ಭಾನುವಾರ ಮತ್ತೆ ವಿಚಾರಣೆಗೆ ಕರೆಯಲಾಗಿದೆ ಎಂದು ಸಿಬಿಐ ಅಧಿಕಾರಿಗಳು ತಿಳಿಸಿದ್ದಾರೆ.

'ಸಿಸೋಡಿಯಾ ಮತ್ತು ಇತರ ಶಂಕಿತರ ವಿರುದ್ಧ ಇನ್ನೂ ತನಿಖೆ ನಡೆಯುತ್ತಿದ್ದು, ಸಿಸೋಡಿಯಾ ಅವರನ್ನು ಚಾರ್ಜ್‌ಶೀಟ್‌ನಲ್ಲಿ ಆರೋಪಿ ಎಂದು ಹೆಸರಿಸಲಾಗಿಲ್ಲ' ಎಂದೂ ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಪಿಎಫ್‌ಐ ಸಂಚು: ರಾಜಸ್ಥಾನದ 7 ಕಡೆ ಎನ್‌ಐಎ ಶೋಧ

ನವದೆಹಲಿ (ಪಿಟಿಐ): ನಿಷೇಧಿತ ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಸಂಘಟನೆಯ ಕಾನೂನುಬಾಹಿರ ಚಟುವಟಿಕೆಗಳ ಪ್ರಕರಣಕ್ಕೆ ಸಂಬಂಧಿಸಿದಂತೆ ರಾಷ್ಟ್ರೀಯ ತನಿಖಾ ಸಂಸ್ಥೆಯು (ಎನ್‌ಐಎ) ಶನಿವಾರ ರಾಜಸ್ಥಾನದ ಏಳು ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕಾರಿ-ಯೊಬ್ಬರು ತಿಳಿಸಿದ್ದಾರೆ.

ಕೋಟಾದ ಮೂರು ಕಡೆ ಮತ್ತು ಮಾಧೋಪುರ, ಭಿಲ್ವಾರಾ, ಬುಂಡಿ ಮತ್ತು ಜೈಪುರ ಜಿಲ್ಲೆಗಳಲ್ಲಿ ಶಂಕಿತರ ವಸತಿ ಮತ್ತು ವಾಣಿಜ್ಯ ಮಳಿಗೆಗಳ ಮೇಲೆ ದಾಳಿ ನಡೆಸಲಾಗಿದೆ ಎಂದು ಭಯೋತ್ಪಾದನಾ ನಿಗ್ರಹ ಸಂಸ್ಥೆಯ ವಕ್ತಾರರು ತಿಳಿಸಿದ್ದಾರೆ.

'ಜಾರ್ಜ್ ಸೊರೊಸ್ ಅಪಾಯಕಾರಿ'

ನವದೆಹಲಿ (ಪಿಟಿಐ): ಅಮೆರಿಕದ ಶ್ರೀಮಂತ ಉದ್ಯಮಿ ಜಾರ್ಜ್ ಸೊರೊಸ್ ಅವರು ವಯೋವೃದ್ಧ, ಶ್ರೀಮಂತ, ಪೂರ್ವಗ್ರಹ ಪೀಡಿತ ಹಾಗೂ ಅಪಾಯಕಾರಿ ವ್ಯಕ್ತಿ ಎಂದು ಜರೆದಿರುವ ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್, 'ಇದೇ ವ್ಯಕ್ತಿ ಕೆಲ ವರ್ಷಗಳ ಹಿಂದೆ ಭಾರತವು ಲಕ್ಷಾಂತರ ಮುಸ್ಲಿಮರ ಪೌರತ್ವವನ್ನು ಕಸಿದುಕೊಳ್ಳಲು ಯೋಜಿಸುತ್ತಿದೆ ಎಂದು ಆರೋಪಿಸಿದ್ದರು' ಎಂದು ಶನಿವಾರ ದೂರಿದ್ದಾರೆ.

ಮ್ಯೂನಿಕ್ ಸೆಕ್ಯೂರಿಟಿ ಕಾನ್ಫರೆನ್ಸ್‌ನಲ್ಲಿ ಗುರುವಾರ ಮಾತನಾಡಿದ್ದ ಜಾರ್ಜ್ ಸೊರೊಸ್, 'ಗೌತಮ್ ಅದಾನಿ ನೇತೃತ್ವದ ಸಮೂಹದ ಉದ್ಯಮದಲ್ಲಿ ಈಗ ಎದ್ದಿರುವ ಬಿರುಗಾಳಿ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರವನ್ನೇ ದುರ್ಬಲಗೊಳಿಸಬಹುದು' ಎಂದಿದ್ದರು. ಅಲ್ಲದೆ 'ಮೋದಿ ಪ್ರಜಾಪ್ರಭುತ್ವವಾದಿ ಅಲ್ಲ' ಎಂದು ಆರೋಪಿಸಿದ್ದರು.

ಈ ಕುರಿತು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದ ಜೈಶಂಕರ್, 'ನ್ಯೂಯಾರ್ಕ್‌ನಲ್ಲಿ ಕುಳಿತಿರುವ ವಯೋವೃದ್ಧ, ಶ್ರೀಮಂತ ಮತ್ತು ಪೂರ್ವಗ್ರಹ ಪೀಡಿತ ವ್ಯಕ್ತಿಯು, ಇಡೀ ವಿಶ್ವ ಹೇಗೆ ಕಾರ್ಯನಿರ್ವಹಿಸಬೇಕು ಎಂಬುದನ್ನು ತನ್ನ ಅಭಿಪ್ರಾಯಗಳು ನಿರ್ಧರಿಸಬೇಕು ಎಂದು ಭಾವಿಸುತ್ತಾರೆ' ಎಂದು ದೂರಿದರು.

'ಬೇರೆ ದೇಶಗಳಲ್ಲೂ ಈ ರೀತಿಯ ಅಭಿವ್ಯಕ್ತಿ ಹೊಂದಿರುವ ಕೆಲವರು ಇದ್ದಾರೆ. ತಮಗೆ ಇಷ್ಟವಾದವರು ಗೆದ್ದರೆ ಚುನಾವಣಾ ವ್ಯವಸ್ಥೆ ಒಳ್ಳೆಯದು ಎನ್ನುತ್ತಾರೆ. ಆದರೆ ಚುನಾವಣೆಯಲ್ಲಿ ಭಿನ್ನ ಫಲಿತಾಂಶ ಬಂದರೆ ಅದನ್ನು ದೋಷಪೂರಿತ ಪ್ರಜಾಪ್ರಭುತ್ವ ಎಂದು ಜರೆಯುತ್ತಾರೆ' ಎಂದು ಟೀಕಿಸಿದರು.

ಗಡಿಯಲ್ಲಿ ಕಳ್ಳಸಾಗಣೆ: ಡ್ರಗ್ಸ್, ಶಸ್ತ್ರಾಸ್ತ್ರ ವಶ

ನವದೆಹಲಿ (ಪಿಟಿಐ): ಪಂಜಾಬ್‌ನ ಅಂತರರಾಷ್ಟ್ರೀಯ ಗಡಿಯಲ್ಲಿ ಶನಿವಾರ ಪಾಕಿಸ್ತಾನದಿಂದ ಕಳ್ಳಸಾಗಣೆ ಪ್ರಯತ್ನವನ್ನು ವಿಫಲಗೊಳಿಸಿರುವ ಗಡಿ ಭದ್ರತಾ ಪಡೆ (ಬಿಎಸ್‌ಎಫ್), ಮಾದಕ ದ್ರವ್ಯಗಳು, ಚೀನಾ ಮತ್ತು ಟರ್ಕಿ ನಿರ್ಮಿತ ಪಿಸ್ತೂಲ್‌ಗಳು ಮತ್ತು 242 ಸುತ್ತು ಮದ್ದುಗುಂಡುಗಳನ್ನು ವಶಪಡಿಸಿಕೊಂಡಿದೆ.

ಗುರುದಾಸ್‌ಪುರ ಸೆಕ್ಟರ್‌ನ ಡೇರಾ ಬಾಬಾ ನಾನಕ್ (ಡಿಬಿಎನ್) ಮತ್ತು ಶಿಕಾರ್ ಗಡಿ ಪೋಸ್ಟ್‌ನ ಬಳಿ ಶೋಧ ನಡೆಸಿದಾಗ ಹೆರಾಯಿನ್ ಇರುವ ಶಂಕಿತ 20 ಪ್ಯಾಕೆಟ್‌ಗಳು, ತಲಾ ಎರಡು ಪಿಸ್ತೂಲ್‌ಗಳು, 242 ಮದ್ದುಗುಂಡುಗಳು, 6 ಮ್ಯಾಗಜೀನ್ ಪತ್ತೆಯಾಗಿವೆ ಎಂದು ಹೇಳಿದ್ದಾರೆ.

ನಿಕ್ಕಿ ಯಾದವ್ ಕೊಲೆ: ಐವರು ಪೊಲೀಸ್ ಕಸ್ಟಡಿಗೆ

ನವದೆಹಲಿ (ಪಿಟಿಐ): ಸಹಜೀವನದ ಸಂಗಾತಿ ನಿಕ್ಕಿ ಯಾದವ್ ಕೊಲೆ ಮಾಡಿ ಫ್ರಿಜ್‌ನಲ್ಲಿ ಇಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪಿ ಸಾಹಿಲ್ ಗೆಹಲೋತ್ ಅವರ ತಂದೆ ಸೇರಿ ಐವರನ್ನು ದೆಹಲಿ ಪೊಲೀಸರು ಶನಿವಾರ ಬಂಧಿಸಿದ್ದು, ಇಲ್ಲಿನ ನ್ಯಾಯಾಲಯವೊಂದು ಅವರನ್ನು ಮೂರು ದಿನಗಳ ಪೊಲೀಸ್ ಕಸ್ಟಡಿಗೆ ಒಪ್ಪಿಸಿದೆ.

ತಂದೆ ವೀರೇಂದ್ರ ಸಿಂಗ್, ಇಬ್ಬರು ಸೋದರ ಸಂಬಂಧಿಗಳಾದ ಆಶಿಶ್ ಮತ್ತು ನವೀನ್ ಹಾಗೂ ಸಾಹಿಲ್ ಗೆಹಲೋತ್‌ನ ಇಬ್ಬರು ಸ್ನೇಹಿತರಾದ ಅಮರ್ ಮತ್ತು ಲೋಕೇಶ್ ಸೇರಿದಂತೆ ಎಲ್ಲಾ ಐದು ಸಹ ಆರೋಪಿಗಳನ್ನು ವಿಚಾರಣೆ ನಡೆಸಿ, ಹತ್ಯೆಗೆ ಸಂಬಂಧಿಸಿದಂತೆ ಅವರ ಪಾತ್ರ ಪರಿಶೀಲಿಸಿದ ನಂತರ ಬಂಧಿಸಲಾಗಿದೆ ಎಂದು ವಿಶೇಷ ಪೊಲೀಸ್ ಆಯುಕ್ತ (ಅಪರಾಧ) ರವೀಂದ್ರ ಯಾದವ್ ತಿಳಿಸಿದ್ದಾರೆ.

ದೆಹಲಿ ಪೊಲೀಸ್ ಕಾನ್‌ಸ್ಟೆಬಲ್ ಆಗಿರುವ ನವೀನ್, ಪ್ರಮುಖ ಆರೋಪಿ ಸಾಹಿಲ್ ಗೆಹಲೋತ್ ಅವರ ಸಂಬಂಧಿ. ಈಗಾಗಲೇ ಪೊಲೀಸ್ ಕಸ್ಟಡಿಯಲ್ಲಿರುವ ಗೆಹಲೋತ್‌ನನ್ನು ಸುದೀರ್ಘವಾಗಿ ವಿಚಾರಣೆಗೆ ಒಳಪಡಿಸಲಾಗಿದೆ ಎಂದು ಪೊಲೀಸರು ತಿಳಿಸಿದ್ದಾರೆ

ನಿಕ್ಕಿ ತನ್ನನ್ನು ಮದುವೆ ಯಾಗುವಂತೆ ಒತ್ತಡ ಹೇರುತ್ತಿದ್ದ ಕಾರಣ ಕೊಲೆ ಮಾಡಿರುವುದಾಗಿ ಆರೋಪಿ ವಿಚಾರಣೆ ವೇಳೆ ಒಪ್ಪಿಕೊಂಡಿದ್ದಾನೆ. ಆದರೆ ಇಬ್ಬರೂ 2020ರಲ್ಲೇ ವಿವಾಹ ಆಗಿದ್ದರು ಎಂದು ಪೊಲೀಸರು ತಿಳಿಸಿದ್ದಾರೆ.

ಕರ್ನಾಟಕ ನಗರ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿ
ಮುಖ್ಯ ಅಭಿಯಂತರರವರ ಕಛೇರಿ, ಕನನೀಸ ಮತ್ತು ಒಚ ಮಂಡಳಿ, ಜಲಭವನ, ನಂ.ಪಿ-4, 10ನೇ ಮುಖ್ಯರಸ್ತೆ, 3ನೇ ಅಡ್ಡರಸ್ತೆ, 3ನೇ ಮಹಡಿ ಸರಸ್ವತಿ ಪುರಂ, ಮೈಸೂರು-09.
ದೂರವಾಣಿ ಸಂ: 0821- 2545894, ಇ-ಮೇಲ್: kwbcemys2014@gmail.com
ಇ-ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಅಧಿಸೂಚನೆ
ಜಾಲತಾಣ : https://eproc.karnataka.gov.in
ಅಮೃತ್-2.0 ಯೋಜನೆಯಡಿ ಬೆಳ್ಳೂರು ಪಟ್ಟಣಕ್ಕೆ, 5 ವರ್ಷಗಳ ಕಾರ್ಯಾಚರಣೆ ಮತ್ತು ನಿರ್ವಹಣೆ ಸೇರಿದಂತೆ, ಡಿಸೈನ್, ಬಿಲ್ಡ್, ಆಪರೇಟ್ & ಟ್ರಾನ್ಸ್‌ಫರ್ (DBOT) ಮಾದರಿಯಲ್ಲಿ ನೀರು ಸರಬರಾಜು ವಿತರಣಾ ವ್ಯವಸ್ಥೆ ಕಲ್ಪಿಸುವ ಕಾಮಗಾರಿಯ ಇಂಡೆಂಟ್ ನಂ: KUWSDB/2022-23/WS/WORK_INDENT3260/CALL-2 ಗೆ ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ 2ನೇ ಕರೆ ಅಲ್ಪಾವಧಿ ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. **ಟೆಂಡರ್ ಮೊತ್ತ : ರೂ.2294.62 ಲಕ್ಷಗಳು. ಹೆಚ್ಚಿನ ವಿವರಗಳಿಗೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ವೆಬ್‌ಸೈಟ್ ಸಂಪರ್ಕಿಸುವುದು.**
DIPR/DDMYS/KSMCA/1030/2022-23 **ಸಹಿ/- ಮುಖ್ಯ ಅಭಿಯಂತರರು, ಕ.ನ.ನೀ.ಸ ಮತ್ತು ಒ.ಚ ಮಂಡಳಿ, ಮೈಸೂರು**

ಕಲ್ಯಾಣ ಕರ್ನಾಟಕ ರಸ್ತೆ ಸಾರಿಗೆ ನಿಗಮ
ಕಾಮಗಾರಿ ವಿಭಾಗೀಯ ಕಛೇರಿ, ಎಮ್.ಎಸ್.ಕೆ ಮಿಲ್ ರಸ್ತೆ, ಜೇವರ್ಗಿ ಕ್ರಾಸ್ ಕಲಬುರಗಿ.
ಸಂಖ್ಯೆ: ಕಕರಸಾ/ಕಾನಿಅ/ಕವಿ/ /2022-23 ದಿನಾಂಕ: 16/02/2023
3 ನೇ ಸಂಸ್ಥೆಯಿಂದ ಯೋಜನಾ ನಿರ್ವಹಣೆ & ಮೇಲ್ವಿಚಾರಣೆ ಸೇವಾ
(Project Management Consultancy & Third Party Supervision)
ಅಲ್ಪಾವಧಿ ಟೆಂಡರ್ ಪ್ರಕಟಣೆ ಸಂಖ್ಯೆ: 01,02,03 &04/ 2022-23 (2ನೇ ಕರೆ)
Through GOK e-procurement platform www.eproc.karnataka.gov.in
ಕೆಳಕಂಡ ಕಾಮಗಾರಿಗೆ ಸರ್ಕಾರಿ ನೊಂದಾಯಿತ ಆರ್ಕಿಟೆಕ್ಟ್/ಸ್ಟ್ರಕ್ಚರಲ್ ಇಂಜಿನಿಯರ್/ಕನ್ಸಲ್ಟೆನ್ಸಿ ಫರ್ಮ್ಸ್/ಪ್ರೋಜೆಕ್ಟ ಮ್ಯಾನೇಜ್‌ಮೆಂಟ್ ಸರ್ವಿಸ್ ಏಜೆನ್ಸಿ/ ಬಿಡ್‌ರ್‌ಗಳಿಂದ GOK e-procurement ಮುಖಾಂತರ ಟೆಂಡರ್ ಆಹ್ವಾನಿಸಲಾಗಿದೆ.
1) ಕಾಮಗಾರಿಯ ಹೆಸರು : (1) ಬೀದರ ಪ್ರಾದೇಶಿಕ ಸಾರಿಗೆ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸುವುದು (**ಕಾಮಗಾರಿಯ ಅಂದಾಜು ಮೊತ್ತ ರೂ. 900=00 ಲಕ್ಷ**), (2) ವಿಜಯಪುರ ಪ್ರಾದೇಶಿಕ ಸಾರಿಗೆ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸುವುದು (**ಕಾಮಗಾರಿಯ ಅಂದಾಜು ಮೊತ್ತ ರೂ. 900=00 ಲಕ್ಷ**), (3) ಯಾದಗೀರ ಪ್ರಾದೇಶಿಕ ಸಾರಿಗೆ ಕಛೇರಿ ವ್ಯಾಪ್ತಿಯಲ್ಲಿ ಸ್ವಯಂಚಾಲಿತ ಚಾಲನಾ ಪರೀಕ್ಷಾ ಪಥ ನಿರ್ಮಿಸುವುದು (**ಕಾಮಗಾರಿಯ ಅಂದಾಜು ಮೊತ್ತ ರೂ. 900=00 ಲಕ್ಷ**), (4) ಕಲಬುರಗಿ ಜಿಲ್ಲೆಯ ಸೇಡಂ ತಾಲ್ಲೂಕಿನ ತೆಲ್ಕೂರ ಗ್ರಾಮದಲ್ಲಿ ಚಾಲನಾ ಹಾಗೂ ತಾಂತ್ರಿಕ ತರಬೇತಿ ಕೇಂದ್ರವನ್ನು ಸ್ಥಾಪಿಸುವ ಕಾಮಗಾರಿ (**ಕಾಮಗಾರಿಯ ಅಂದಾಜು ಮೊತ್ತ ರೂ. 1500=00 ಲಕ್ಷ**), 2) ಟೆಂಡರ ಆಧಾರ : ಎರಡು ಲಕೋಟೆ ಪದ್ಧತಿ, 3) ಮುಂಗಡ ಠೇವಣಿ ಹಣ ರೂ : ಇ-ಪ್ರೊಕ್ಯೂರಮೆಂಟ್‌ನಲ್ಲಿ ನಮೂದಿಸಿದಂತೆ, 4) ಭರ್ತಿ ಮಾಡಿದ ಟೆಂಡರನ್ನು ಸಲ್ಲಿಸಲು ಕೊನೆಯ ದಿನಾಂಕ : **03-03-2023,** 5) ಸೇವಾ ಕಾಲಾವಧಿ : 12 ತಿಂಗಳು ಅಥವಾ ಕೆಲಸ ಪೂರ್ಣಗೊಳ್ಳುವವರೆಗೆ
ಟೆಂಡರ್ ವಿವರಗಳಿಗಾಗಿ ಈ ಕೆಳಗಿನ ವೆಬ್‌ಸೈಟ್‌ಗೆ ಲಾಗ್ ಆನ್ ಮಾಡಿ ನೋಡಬಹುದಾಗಿದೆ. **(www.eproc.karnataka.gov.in)** ದೂರವಾಣಿ ಸಂಖ್ಯೆ : 08472-220663
ಸಹಿ/-
ವಾ.ಸಾ.ಸಂ.ಇ/ಕಲಬುರಗಿ/1314/ಎಂ.ಸಿ.&ಎ/2022-23 **ಕಾರ್ಯ ನಿರ್ವಾಹಕ ಅಭಿಯಂತರರು**

ಪಟ್ಟಣ ಪಂಚಾಯಿತಿ ಕಾರ್ಯಾಲಯ, ಆಲೂರು. ಹಾಸನ ಜಿಲ್ಲೆ
ದೂ.ಸಂಖ್ಯೆ: 08170-218246, Website: http://www.alurtown.mrc.gov.in/
email: townpanchayath.alur@gmail.com
No:DMA/TPA//JE/TN/06/2022-23 Date:16-02-2023
ಟೆಂಡರ್ ಪ್ರಕಟಣೆ
ಆಲೂರು ಪಟ್ಟಣ ಪಂಚಾಯಿತಿಯ ವಿವಿಧ ಅನುದಾನದಿಂದ, Work Indent NO.DMA/2022-23/OW/WORK_INDENT147234 (Estimated Cost-Rs. 75.00 Lakhs) ಕಾಮಗಾರಿಗಳಿಗೆ ಇ-ಪ್ರಕ್ಯೂರ್‌ಮೆಂಟ್ ಮುಖಾಂತರ ಟೆಂಡರ್ ಕರೆಯಲಾಗಿದ್ದು, ಅರ್ಹ ಗುತ್ತಿಗೆದಾರರು ಟೆಂಡರ್‌ನ್ನು ಇ-ಪೋರ್ಟಲ್‌ನಲ್ಲಿ ತಿಳಿಸಿರುವ ಕೊನೆಯ ದಿನಾಂಕದಂದು ಇ-ಪ್ರಕ್ಯೂರ್‌ಮೆಂಟ್ (www.eproc.karnataka.gov.in) ಮೂಲಕ ಮಾತ್ರ ಸಲ್ಲಿಸತಕ್ಕದ್ದು, ಟೆಂಡರ್ ನಿಯಮಾವಳಿಗಳ ಕುರಿತು ಹೆಚ್ಚಿನ ವಿವರಕ್ಕಾಗಿ ಆಲೂರು ಪಟ್ಟಣ ಪಂಚಾಯಿತಿಯ ಕಾಮಗಾರಿ ಶಾಖೆ/ ಕಿರಿಯ ಅಭಿಯಂತರರು, ಇವರಿಂದ ಕಛೇರಿ ವೇಳೆಯಲ್ಲಿ ಪಡೆಯಬಹುದು (ದೂರವಾಣಿ: 08170-200246).
ಸಹಿ/- ಮುಖ್ಯಾಧಿಕಾರಿ ಪಟ್ಟಣ ಪಂಚಾಯಿತಿ, ಆಲೂರು.
ವಾಸಾಸಂಇ/ಹಿಸನಿ/ಹಾಸನ/ಎಂಸಿಎ/1103/2022-23

ಕರ್ನಾಟಕ ಸರಕಾರ
(ಪಂಚಾಯತ್ ರಾಜ್ ಇಂಜನೀಯರಿಂಗ್ ಇಲಾಖೆ)
ಕಾರ್ಯನಿರ್ವಾಹಕ ಅಭಿಯಂತರವರ ಕಾರ್ಯಾಲಯ
ಪಂಚಾಯತ್ ರಾಜ್ ಇಂಜನೀಯರಿಂಗ್ ವಿಭಾಗ, ವಿಜಯಪುರ
ದೂರವಾಣಿ ಸಂ: 08352-277816, ಫ್ಯಾಕ್ಸ್: 08352-277817,
ಇ-ಮೇಲ್:zpebjp9@yahoo.co.in
ಸಂ:ಕಾಇಂ/ಪಂ.ರಾ.ಇಂ.ವಿ/ವಿಜ/ಇಪ್ರಾ/ಟೆಂಡರ್/2022-23/3319 ದಿನಾಂಕ:17.02.2023
ಇ-ಪ್ರೊಕ್ಯೂರ್‌ಮೆಂಟ್ ಟೆಂಡರ್ ಪ್ರಕಟಣೆ (ದ್ವಿ ಲಕೋಟಿ ಪದ್ಧತಿ)
ಕಾರ್ಯನಿರ್ವಾಹಕ ಇಂಜನೀಯರರು, ಪಂ.ರಾ.ಇಂ. ವಿಭಾಗ, ವಿಜಯಪುರ ಇವರು 2022-23ನೇ ಸಾಲಿನ 5054 ಪ್ರವಾಹ ಪರಿಹಾರ ಅನುದಾನ ಲೆಕ್ಕ ಶೀರ್ಷಿಕೆ ಯೋಜನೆಯಡಿಯಲ್ಲಿ (1) ಸಿಂದಗಿ ತಾಲೂಕಿನ ಆಲಮೇಲ ಸಿಂದಗಿ ಮುಖ್ಯ ರಸ್ತೆಯಿಂದ ಗಣಿಹಾರ ಕೂಡು ರಸ್ತೆ ಸುಧಾರಣೆ (ಕಿ.ಮೀ. 0.00 ದಿಂದ 4.50) ರೂ. 200.00 ಲಕ್ಷಗಳು (KW-4) ಕಾಮಗಾರಿಗಳನ್ನು ಇ-ಟೆಂಡರ್‌ನ್ನು ದ್ವಿ ಲಕೋಟಿ ಪದ್ದತಿಯಲ್ಲಿ ಅಹ್ವಾನಿಸಿದ್ದು. ಹೆಚ್ಚಿನ ಮಾಹಿತಿಗಾಗಿ ವೆಬ್ ಸೈಟ್ www.eproc.karnataka.gov.in ನಲ್ಲಿ ಅಥವಾ ಕಛೇರಿ ಸಮಯದಲ್ಲಿ ಸದರಿ ವಿಭಾಗ ಕಾರ್ಯಾಲಯಕ್ಕೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಬಹುದು.
ಸಹಿ/- ಕಾರ್ಯನಿರ್ವಾಹಕ ಇಂಜನೀಯರರು,ಪಂ.ರಾ.ಇಂ. ವಿಭಾಗ, ವಿಜಯಪುರ
ವಾಸಾಸಂಇ/ವಿಜಯಪುರ/901/ಕೆಎಸ್‌ಎಂಸಿಎ/2022-23

ಮಂಗಳೂರು ಮಹಾನಗರಪಾಲಿಕೆ
DMA/2022-23/WORK INDENT NO.145108, 146761, 147086, 147087, 147088 ದಿನಾಂಕ: 17-02-2023
ಟೆಂಡರ್ ಪ್ರಕಟಣೆ
E-PROCUREMENT OF KARNATAKA
ಕರ್ನಾಟಕ ಸರ್ಕಾರದ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 1999-2000ರ ಪ್ರಕರ ಆಕ್ಟ್ 2000ರ ನಿಯಮದಂತೆ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ ಕೆ.ಡಬ್ಲ್ಯೂ ನಿಯಮದನ್ವಯ ಹಾಗೂ ಕರ್ನಾಟಕ ಸರಕಾರದ ಸಚಿವಾಲಯ ಆರ್ಥಿಕ ಇಲಾಖೆ, ಬೆಂಗಳೂರು ಇದರ ಸುತ್ತೋಲೆ ಸಂಖ್ಯೆ ಆ ಇ 875(P-1) ವೆಚ್ಚ-12/7 ದಿನಾಂಕ: 12.10.2017ರಂತೆ **Randomization** ಮೂಲಕ ಕಾಮಗಾರಿಯ ಮುಂದೆ ಸೂಚಿಸಿರುವ ಗುತ್ತಿಗೆದಾರರ ವರ್ಗದಂತೆ ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಈ ಕೆಳಗೆ ಸೂಚಿಸಿರುವ ಕಾಮಗಾರಿಗಳಲ್ಲಿ **ಕ್ರ.ಸಂ.1ನ್ನು ಸಾಮಾನ್ಯ ನಿಧಿಯಲ್ಲಿ, ಕ್ರ.ಸಂ.2ನ್ನು 2022-23ನೇ ಸಾಲಿನ ಎಸ್.ಎಫ್.ಸಿ. ನಿಧಿಯ ಶೇ.24.10% ಅನುದಾನದಲ್ಲಿ ಮತ್ತು ಕ್ರ.ಸಂ.3 ರಿಂದ 5ನ್ನು 2022-23ನೇ ಸಾಲಿನ 15ನೇ ಹಣಕಾಸು ನಿಧಿಯಡಿಯಲ್ಲಿ** ನಿರ್ವಹಿಸುವ ಬಗ್ಗೆ ಟೆಂಡರ್ ಆಹ್ವಾನಿಸಲಾಗಿದೆ. ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ: 06-03-2023**. ಅರ್ಹ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ **https://eproc.karnataka.gov.in** ಹೆಚ್ಚಿನ ವಿವರವನ್ನು ಪಡೆಯಬಹುದು.

ಕ್ರ.ಸಂ.	ಕೆಲಸದ ಹೆಸರು	ಮೀಸಲಿಟ್ಟ ಗುತ್ತಿಗೆದಾರರ ವರ್ಗ	ಟೆಂಡರ್ ಮೊತ್ತ ರೂಪಾಯಿ
1	ಮ.ನ.ಪಾ ವ್ಯಾಪ್ತಿಯ ವಿ.ನಂ.15ನೇ ಕುಂಜತ್ತಬೈಲ್ ದಕ್ಷಿಣ ಗಾಂಧಿನಗರ ಕಾಲೇಜು ರಸ್ತೆಯ 1ನೇ ಬಲ ಅಡ್ಡ ರಸ್ತೆಯಲ್ಲಿ ತಡೆಗೋಡೆ ನಿರ್ಮಾಣ ಕಾಮಗಾರಿ. **(Indent No.145108)**	ಸಾಮಾನ್ಯ	5,00,000.00
2	ಮ.ನ.ಪಾ ವ್ಯಾಪ್ತಿಯ ವಿ.ನಂ.5 6ನೇ ಎ ವಿಭಾಗ ಶ್ರೀಧರರವರ ಮನೆಯ ಹಿಂಬದಿ ಬಾಕಿ ಇರುವ ಆವರಣಗೋಡೆ ಪೂರ್ತಿ ಗೊಳಿಸುವ ಕಾಮಗಾರಿ. **(Indent No.146761)**	ಸಾಮಾನ್ಯ	5,54,000.00
3	ಮ.ನ.ಪಾ ವ್ಯಾಪ್ತಿಯ ವಿ.ನಂ.7 ರ ಸುರತ್ಕಲ್ ಜಂಕ್ಷನ್ ನಿಂದ ಸೂರಜ್ ಹೋಟೆಲ್ ವರೆಗೆ ಕಬ್ಬಿನಹಿತ್ಲು ಸೇರಿದಂತೆ ಒಳಚರಂಡಿ ವ್ಯವಸ್ಥೆ ಜಾಲ ನಿರ್ಮಾಣ. **(Indent No.147086)**	ಪರಿಶಿಷ್ಟ ಪಂಗಡ	33,00,000.00
4	ಮ.ನ.ಪಾ ವ್ಯಾಪ್ತಿಯ ವಿ.ನಂ.22 ಕದ್ರಿ ಪದವು ಬಾರೆಬೈಲ್ ಪ್ರದೇಶದಲ್ಲಿ ರಸ್ತೆ ಮತ್ತು ಚರಂಡಿ ಅಭಿವೃದ್ಧಿ ಕಾಮಗಾರಿ. **(Indent No.147087)**	ಪರಿಶಿಷ್ಟ ಜಾತಿ	23,00,000.00
5	ಮ.ನ.ಪಾ ವ್ಯಾಪ್ತಿಯ ವಿ.ನಂ.19 ಪಚ್ಚನಾಡಿ ಮುಗ್ರೋಡಿ ಸ್ಮಶಾನದ ಅಭಿವೃದ್ಧಿ. **(Indent No.147088)**	ಸಾಮಾನ್ಯ	15,00,000.00

ಸಹಿ/- ಕಾರ್ಯಪಾಲಕ ಅಭಿಯಂತರರು, ಮಹಾನಗರಪಾಲಿಕೆ, ಮಂಗಳೂರು
DIPR/MNG/KSMCA/1351/22-23 dt: 17.02.2023

ಲೋಕೋಪಯೋಗಿ ಇಲಾಖೆ. ತುಮಕೂರು
ಕಾರ್ಯಪಾಲಕ ಇಂಜಿನಿಯರ್‌ರವರ ಕಚೇರಿ, ಲೋಕೋಪಯೋಗಿ ಇಲಾಖೆ ತುಮಕೂರು.
ಕ್ರ.ಸಂ:ಕಾಇಂ:ಲೋಇವಿ:ತುಮ:ಕಿಇಂ-3:ಟೆಂಡರ್-66/2022-23
ದಿನಾಂಕ 13.02.2023
ಟೆಂಡರ್ ಪ್ರಕಟಣೆ ಸಂ.66/2022-23 ದಿನಾಂಕ: 13.02.2023
ಈ ಕಚೇರಿ ಟೆಂಡರ್ ಪ್ರಕಟಣೆ ಸಂಖ್ಯೆ: 66/2022-23:ದಿನಾಂಕ 13-02-2023 ರಂದು ತುಮಕೂರು ವಿಭಾಗದ ವ್ಯಾಪ್ತಿಯಲ್ಲಿ ಲೆಕ್ಕ ಶೀರ್ಷಿಕೆ: 4059-80-051-0-29-386 ಇಲಾಖಾ ಕಟ್ಟಡಗಳು, 8443 ಠೇವಣಿವಂತಿಕೆ ಮತ್ತು 5054 ಜಿಲ್ಲಾ ಮತ್ತು ಇತರೆ ರಸ್ತೆಗಳು-ಸುಧಾರಣೆ ಅಡಿಯಲ್ಲಿ 25 ಕಾಮಗಾರಿಗೆ ಇ-ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್ ಆಹ್ವಾನಿಸಲಾಗಿರುತ್ತದೆ. ಟೆಂಡರಿಗಿಟ್ಟ ಗರಿಷ್ಠ ಮೊತ್ತ ರೂ.321.00 ಲಕ್ಷಗಳು, ಟೆಂಡರಿಗಿಟ್ಟ ಕನಿಷ್ಠ ಮೊತ್ತ ರೂ: 2.37 ಲಕ್ಷಗಳು, ಇ.ಎಂ.ಡಿ ಗರಿಷ್ಠ ಮೊತ್ತ ರೂ.4,80,435/- ಇ.ಎಂ.ಡಿ ಕನಿಷ್ಠ ಮೊತ್ತ ರೂ.6,000/- ಅರ್ಹ ಗುತ್ತಿಗೆದಾರರು : 2 & 4 ನೇ ದರ್ಜೆ ಮೇಲ್ಪಟ್ಟು, ಕಾಲಾವಧಿ: 2 ರಿಂದ 11 ತಿಂಗಳು ಸಂಬಂಧಿಸಿದ ವಿಚಾರಣೆ ಮತ್ತು ಸ್ಪಷ್ಟೀಕರಣಗಳಿಗೆ ಕೊನೆ ದಿನಾಂಕ ಮತ್ತು ವೇಳೆ: **27.02.2023** ರ 16.00 ಗಂಟೆಗೆ, ಇ-ಪ್ರೂಕ್ಯೂರ್‌ಮೆಂಟ್ ಮೂಲಕ ಟೆಂಡರ್‌ಗಳನ್ನು ದಿನಾಂಕ **14.02.2023 ರಿಂದ 28.02.2023** ರ 16-00 ಗಂಟೆಯವರೆಗೆ ಪಡೆಯಬಹುದಾಗಿದೆ. ಟೆಂಡರ್‌ಗಳನ್ನು ಸ್ವೀಕರಿಸಲು ಕೊನೆಯ ದಿನಾಂಕ ಮತ್ತು ವೇಳೆ: **28.02.2023** ರ ಸಂಜೆ 16.00 ಗಂಟೆವರೆಗೆ, ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **01.03.2023** ಸಂಜೆ 16.30 ಗಂಟೆಗೆ, ಆರ್ಥಿಕ ಬಿಡ್‌ಗಳನ್ನು ತೆರೆಯುವ ದಿನಾಂಕ **02.03.2023** ಬೆಳಗ್ಗೆ 11.00 ಗಂಟೆಗೆ, ಹೆಚ್ಚಿನ ವಿವರಗಳನ್ನು ಸದರಿ ಕಚೇರಿಯಿಂದ ಕಚೇರಿ ವೇಳೆಯಲ್ಲಿ ಪಡೆಯಬಹುದಾಗಿದೆ ಹಾಗೂ ವೆಬ್‌ಸೈಟ್ ಸಂ: www.eproc.karnataka.gov.in ರಲ್ಲಿ ಪಡೆಯಬಹುದಾಗಿದೆ.
ಸಹಿ/-ಕಾರ್ಯಪಾಲಕ ಇಂಜಿನಿಯರ್, ಲೋಕೋಪಯೋಗಿ ಇಲಾಖೆ ವಿಭಾಗ, ತುಮಕೂರು.
DIPR/TUM/970/KSMCA/2022-23

ಕೃಷ್ಣಾ ಭಾಗ್ಯ ಜಲ ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಒಂದು ಉದ್ಯಮ)
ಕಾರ್ಯನಿರ್ವಾಹಕ ಅಭಿಯಂತರರ ಕಛೇರಿ,ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ-586201.ತಾಲೂಕು॥ ಬ.ಬಾಗೇವಾಡಿ, ಜಿಲ್ಲೆ॥ ವಿಜಯಪೂರ. ದೂರವಾಣಿ: 08426-281027
ಇ-ಮೇಲ್:dam_division@rediffmail.com
ಸಂಖ್ಯೆ:ಕೃಭಾಜನಿನಿ/ಆಆವಿ/ಡಿಬಿ/ಟೆಂಡರ್/2022-23/3221 ದಿನಾಂಕ:17.02.2023
ಅಲ್ಪಾವಧಿ ಸಂಕ್ಷಿಪ್ತ ಟೆಂಡರ್ ಪ್ರಕಟಣೆ - 3ನೇ ಕರೆ
ಮಾನ್ಯ ವ್ಯವಸ್ಥಾಪಕ ನಿರ್ದೇಶಕರು, ಕೃಭಾಜನಿನಿ. ಬೆಂಗಳೂರು, ಇವರ ಪರವಾಗಿ ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ. ಆಣೆಕಟ್ಟು ವಿಭಾಗ ಆಲಮಟ್ಟಿ, ತಾ: ಬ.ಬಾಗೇವಾಡಿ ಇವರು ಅರ್ಹ ಗುತ್ತಿಗೆದಾರರಿಗೆ **(1) Bagalkot District (Bilagi Constituency) (SCP Non-Potential) Indent No. 23330 of Rs. 84.72 Lakhs (Others)** ಶೇಕಡಾವಾರು ದ್ವಿ-ಲಕೋಟೆಗಳಲ್ಲಿ ಕೆ.ಟಿ.ಪಿ.ಟಿ. ನಿಯಮಗಳನ್ವಯ, ಅರ್ಹ ಬಿಡ್ಡುದಾರರುಗಳಿಂದ ಟೆಂಡರ್ ಅಹ್ವಾನಿಸಿದ್ದು, ಗುತ್ತಿಗೆದಾರರುಗಳು ಭದ್ರತಾ ಠೇವಣಿಯನ್ನು E-cash ನಲ್ಲಿ ತುಂಬಿ ತಮ್ಮ ಬಿಡ್ಡುಗಳನ್ನು ದ್ವಿ-ಲಕೋಟೆ ಪದ್ಧತಿಯಲ್ಲಿ ಸಲ್ಲಿಸಬಹುದಾಗಿದೆ. ಮೊದಲ ಲಕೋಟೆಯು ತಾಂತ್ರಿಕ ಬಿಡ್ಡದಾಗಿದ್ದು ಅಗತ್ಯವಿರುವ ದಾಖಲೆಗಳನ್ನು ಒಳಗೊ0ಡಿದ್ದು ಪ್ಯಾರಾ **1.1** ರಂತೆ, ಎರಡನೇ ಲಕೋಟೆಯು ಆರ್ಥಿಕ ಬಿಡ್ಡದಾಗಿದ್ದು ತಾಂತ್ರಿಕ ಬಿಡ್ಡನಲ್ಲಿ ಅರ್ಹರಾದವರ ಆರ್ಥಿಕ ಬಿಡ್ಡುಗಳನ್ನು ಮಾತ್ರ ತೆರೆಯಲಾಗುವುದು.
1) ಟೆಂಡರ್ ಡಾಕ್ಯೂಮೆಂಟ್ಸಗಳನ್ನು ವೆಬ್‌ಸೈಟನಲ್ಲಿ ನೋಡಿಕೊಳ್ಳುವ / ಡೌನಲೋಡ್ ಮಾಡಿಕೊಳ್ಳುವ ದಿನಾಂಕ ಹಾಗೂ ಸ್ವೀಕರಿಸುವ ಕೊನೆಯ **ದಿನಾಂಕ: 21.02.2023 ರಿಂದ 02.03.2023 ಸಾಯಂಕಾಲ 5.00 ಗಂಟೆಯವರೆಗೆ.**
2) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ: 04.03.2023 ಮುಂಜಾನೆ 11.00 ಗಂಟೆಗೆ. 3)** ಆರ್ಥಿಕ ಬಿಡ್ ತೆರೆಯುವ **ದಿನಾಂಕ: 09.03.2023 ಮುಂಜಾನೆ 11.00 ಗಂಟೆಗೆ.**
ಟೆಂಡರಿಗೆ ಸಂಬಂಧಿಸಿದ ಮಾಹಿತಿಗಳನ್ನು ಈ ಕಛೇರಿಯಿಂದ ಕಛೇರಿ ಅವಧಿಯಲ್ಲಿ ಅಥವಾ ಉಳಿದಂತೆ ಟೆಂಡರಿನಲ್ಲಿ ಯಾವುದೇ ಬದಲಾವಣೆಗಳನ್ನು ಈ ವೆಬ್‌ಸೈಟನ್ನು ಸಂಪರ್ಕಿಸಿ ಪಡೆಯಬಹುದು. http://www.eproc.karnataka.gov.in ಸಂಪರ್ಕಿಸಬೇಕಾದ ಕಛೇರಿ ದೂರವಾಣಿ ಸಂಖ್ಯೆ: 08426-281027
ಸಹಿ/- ಕಾರ್ಯನಿರ್ವಾಹಕ ಅಭಿಯಂತರರು, ಕೃಭಾಜನಿನಿ, ಆಣೆಕಟ್ಟು ವಿಭಾಗ, ಆಲಮಟ್ಟಿ
ವಾಸಾಸಂಇ/ವಿಜಯಪುರ/904/ಕೆಎಸ್‌ಎಂಸಿಎ/2022-23

ಪ್ರಜಾವಾಣಿ
ಭಾನುವಾರದ ಪುರವಣಿ
ಭಾನುವಾರ, 19 ಫೆಬ್ರುವರಿ 2023

ವಿಸ್ಮಯ ವಿಂಡ್ಸರ್ ಕ್ಯಾಸಲ್ 9

ರಂಗಭೂಮಿಯಿಂದ ಪರಿವರ್ತನೆ 11

ಹೊನ್ನಾವರ ಬಳಿಯ ಟೊಂಕಾ ಬೀಚ್‌ನಲ್ಲಿ ಈಗ ಇನ್ನಿಲ್ಲದ ಗಡಿಬಿಡಿ. ಅಭಿವೃದ್ಧಿ ಚಟುವಟಿಕೆಗಳು ಅಲ್ಲಿ ಭರದಿಂದ ನಡೆಯುತ್ತಿವೆ. ಆಲೀವ್ ರಿಡ್ಲೆ ಆಮೆಗಳ ಮೊಟ್ಟೆ ಗೂಡುಗಳೂ ಅಲ್ಲಿ ಸಮಾಧಿಯಾಗುತ್ತಿವೆ. 'ಮೊಟ್ಟೆ ಎಲ್ಲಿ ಇಡ್ಲೆ' ಎಂಬ ಆಲೀವ್ ರಿಡ್ಲೆಗಳ ಪ್ರಶ್ನೆಗೆ ಯಾರ ಬಳಿ ಉತ್ತರವಿದೆ?

ನಾನು ಆಲೀವ್ ರಿಡ್ಲೆ ಮೊಟ್ಟೆ ಎಲ್ಲಿ ಇಡ್ಲೆ?

ಅಖಿಲೇಶ್ ಚಿಪ್ಪಳಿ

'ಒಡೇರಾ ಇಲ್ಲಿ ಕಲ್ಲು, ಮಣ್ಣು ಹಾಕ್ಬೇಡಿ; ಆಮೆ ಮೊಟ್ಟೆ ಇಟ್ಟಿತ್ತು ಇಲ್ಲಿ' ಎಂಬ ಪ್ರಾರ್ಥನೆಯನ್ನು ಕಿವಿಗೆ ಹಾಕಿಕೊಳ್ಳದೆ ಟಿಪ್ಪರ್ ಓಡಿಸಿಕೊಂಡು ಬಂದವರು ಅದೆಲ್ಲಿಂದಲೋ ಗುಡ್ಡ ಬಗೆದು ತಂದ ಮಣ್ಣನ್ನು ಆಮೆಯ ಗೂಡಿನ ಮೇಲೆ ಸುರುವಿದರು. ಅಲ್ಲೇ ಎರಡು ಅಡಿ ಆಳದಲ್ಲಿದ್ದ ಆಲೀವ್ ರಿಡ್ಲೆ ಆಮೆಯ ನೂರಾರು ಮೊಟ್ಟೆಗಳು ಎಂದೆಂದಿಗೂ ಮರಿಯಾಗಿ ಹೊರಗೆ ಬಾರದಂತೆ ಜೀವಂತ ಸಮಾಧಿಯಾದವು. ಹೀಗೆ ರಸ್ತೆ ನಿರ್ಮಿಸಿದ ಉದ್ದಕ್ಕೂ ಹತ್ತಾರು ಗೂಡುಗಳು ಮತ್ತದರ ಸಾವಿರಾರು ಮೊಟ್ಟೆಗಳು ಕಲ್ಲು ಮಣ್ಣಿನಡಿಯಲ್ಲಿ ಹೂತು ಹೋದವು. ಇದು ಹೊನ್ನಾವರದ ಟೊಂಕಾ ಬೀಚಿನ ಆಮೆಗಳಿಗೆ ಎದುರಾಗಿರುವ ಗಂಡಾಂತರದ ಕಥೆ.

ಸಮುದ್ರದೊಂದಿಗೆ ಶರಾವತಿ ನದಿ ಸಂಗಮವಾಗುವ ಮುಖಜ ಭೂಮಿಯ ಹತ್ತಿರದಲ್ಲೇ ಈ ಟೊಂಕಾ ಬೀಚ್ ಇದ್ದು, ಡಾಲ್ಫಿನ್ ಸೇರಿದಂತೆ ಸುಮಾರು ಐವತ್ತು ಜಾತಿ ಮೀನುಗಳ ಆವಾಸಸ್ಥಾನವಾಗಿದೆ. ಈ ಪ್ರದೇಶದ ಸಮೀಪದಲ್ಲಿ ಸಾವಿರಾರು ಬೆಸ್ತರ ಕುಟುಂಬಗಳು ಜೀವನ ಸಾಗಿಸುತ್ತಿವೆ. ಹಸಿಮೀನನ್ನು ಬಿಸಿಲಿನಲ್ಲಿ ಒಣಗಿಸಲು ಈ ಬೀಚ್‌ನ ಬಹುಭಾಗ ಬಳಕೆಯಾಗುತ್ತಿದೆ. ಮೀನು ತೊಳೆಯುವ ಮತ್ತು ಒಣಗಿಸುವ ಬೆಸ್ತರ ಶ್ರಮಜೀವನದ ಜಂಜಾಟಗಳು ಇರುಳಿನ ಹೊತ್ತಿಗೆ ಕೊನೆಗೊಳ್ಳುತ್ತವೆ. ಇಡೀ ಪ್ರದೇಶ ನಿರ್ಮಾನುಷವಾಗುತ್ತದೆ. ನದಿ ಮುಖಜ ಪ್ರದೇಶದಲ್ಲಿ ಶರಾವತಿ ನದಿಯ ನೀರಿಗೂ ಸಮುದ್ರದಲ್ಲಿ ಭರತವುಂಟಾಗಿ ನದಿಯೊಳಗೆ ನುಗ್ಗುವ ಸಮುದ್ರದ ನೀರಿಗೂ ಶರಂಪರ ಜಗಳ ನಡೆಯುತ್ತಿರುವ ಭೀಕರ ಸದ್ದು ಮಾತ್ರ ನೀರವ ರಾತ್ರಿಯಲ್ಲಿ ಕೇಳುತ್ತದೆ.

ನಿರ್ಜನವಾದ ಬೀಚ್‌ನ ಮರಳಿನಲ್ಲಿ ರಂಗೋಲಿಯಿಕ್ಕುತ್ತಾ, ಮೊಟ್ಟೆಯಿಡಲು ಸೂಕ್ತ ಸ್ಥಳಕ್ಕಾಗಿ ಪರಿಶೀಲನೆ ನಡೆಸುತ್ತಿರುವ ಹತ್ತಾರು ಆಲೀವ್ ರಿಡ್ಲೆ ಆಮೆಗಳು ನಿಶ್ಯಬ್ದವಾಗಿ ಬೀಚ್‌ನ ಕಡೆಗೆ ಬರುತ್ತವೆ. ಎಲ್ಲಿ ಮೊಟ್ಟೆಯಿಡಬೇಕೆಂದು ಗರ್ಭಿಣಿ ತಾಯಿಗೆ ಮೊದಲೇ ಗೊತ್ತಿರುವುದಿಲ್ಲ. ಸುಮಾರು 160 ಮೀಟರ್ ಸುತ್ತಳತೆಯ ಪ್ರದೇಶದಲ್ಲಿ ಸೂಕ್ತ ಜಾಗವನ್ನು ಹುಡುಕಿಕೊಳ್ಳುತ್ತದೆ. ಎರಡಡಿ ಆಳದ ಗುಂಡಿ ತೆಗೆದರೂ ಸಮುದ್ರದ ನೀರು ಆ ಗುಂಡಿಯಲ್ಲಿ ಒಸರುವ ಹಾಗಿಲ್ಲ. ಮೊಟ್ಟೆ ಮರಿಯಾಗಲೂ ಸೂಕ್ತ ಶಾಖ ಬೇಕಲ್ಲ.

ಹಾಗೆಯೇ ಇಟ್ಟ ಮೊಟ್ಟೆಗಳು ಪ್ರಾಣಿಗಳ ಪಾಲಾಗದಿರಲಿ ಎಂದು ಆಮೆ ತನ್ನ ಬುದ್ಧಿಯನ್ನು ಉಪಯೋಗಿಸುತ್ತದೆ. ಒಟ್ಟು ಮೂರು ಗುಂಡಿಗಳನ್ನು ತೆಗೆದು, ಒಂದರಲ್ಲಿ ಮಾತ್ರ ಮೊಟ್ಟೆಯಿಡುತ್ತದೆ. ಉಳಿದೆರಡು ಗುಂಡಿಗಳು ಡಮ್ಮಿ! ಒಂದು ಆಮೆ ಒಂದು ಬಾರಿಗೆ ಸುಮಾರು 100-150 ಮೊಟ್ಟೆಗಳನ್ನಿಡುತ್ತದೆ. ಹಾಗೆ ಮೊಟ್ಟೆಯಿಟ್ಟ ನಂತರದಲ್ಲಿ ಬೇರೊಂದು ದಿಕ್ಕಿನಿಂದ ಚಿತ್ತಾರದ ರಂಗೋಲಿಯಿಡುತ್ತಾ, ತೆವಳುತ್ತಾ ವಾಪಾಸ್‌ಸಮುದ್ರಕ್ಕೆ ಹೋಗುತ್ತದೆ.

ಸೂಕ್ತ ಶಾಖವನ್ನು ಬಳಸಿಕೊಂಡ ಮೊಟ್ಟೆಗಳು ಒಂದೂವರೆ ತಿಂಗಳಲ್ಲಿ ಮರಿಯಾಗಿ, ಮರಳಿನಿಂದೆದ್ದು ಮೇಲೆ ಬರುತ್ತವೆ; ಅನುಷಂಗಿಕ ತಿಳಿವಳಿಕೆಯಿಂದ ಮತ್ತೆ ಸಮುದ್ರ ಸೇರುತ್ತವೆ. ಇಡೀ ಪ್ರಕ್ರಿಯೆ ತುಂಬಾ ಕ್ಲಿಷ್ಟಕರವೂ ಮತ್ತು ಕಷ್ಟದಾಯಕವೂ ಆಗಿದೆ. ತಾಯಿ ಆಮೆ ಮತ್ತೆ ವಾಪಾಸ್ ಬಂದು ಮೊಟ್ಟೆಗಳ ದೇಖಿರೇಖಿ ನೋಡುವುದಿಲ್ಲ. ತಾಯಿ-ತಂದೆಗಳ ಆರೈಕೆಯಿಲ್ಲದೆ ಮರಿಯಾಗುವ ಆಲೀವ್ ರಿಡ್ಲೆಗಳ ಯೋಗಕ್ಷೇಮವನ್ನು ನೋಡಿಕೊಳ್ಳುವ ಜವಾಬ್ದಾರಿ ಈಗ ಮಾನವನ ಮೇಲಿದೆ. ಬಹುಶಃ ಮನುಷ್ಯನೇ ತನ್ನ ಮುಂದಿನ ಸಂತತಿಯನ್ನು ಕಾಪಾಡಬಲ್ಲ ಹಾಗೂ ಉಳಿಸಬಲ್ಲ ಎಂಬ ನಂಬಿಕೆ ಅವುಗಳಿಗೂ ಇದೆಯೇನೋ?

ಟೊಂಕಾ ಬೀಚಿನ ಆಸುಪಾಸು ವಾಸಿಸುತ್ತಿರುವ ಬೆಸ್ತರಿಗೆ ಈ ಆಮೆಗಳು ಹೊಸತೇನಲ್ಲ. ಅವರಜ್ಜನ ಕಾಲದಿಂದಲೂ ಆಮೆಗಳು ಬರುತ್ತಿದ್ದವು, ಮೊಟ್ಟೆಯಿಟ್ಟು ತೆರಳುತ್ತಿದ್ದವು. ತಿಂಗಳ ನಂತರದಲ್ಲಿ ಮೊಟ್ಟೆಯೊಡೆದು ಹೊರಬರುವ ಮರಿಗಳು ತೆವಳುತ್ತಾ ಸಮುದ್ರ ಸೇರುತ್ತಿದ್ದವು. ಸುಮಾರು 40-50 ವರ್ಷಗಳ ಹಿಂದೆ ಈ ಆಮೆಗಳ ಮೊಟ್ಟೆಯನ್ನು ಕೆಲವು ಬೆಸ್ತರು ಬೇಯಿಸಿ ತಿನ್ನುವ ಪರಿಪಾಟವಿತ್ತು. ಕ್ರಮೇಣ ಜಾಗೃತಿ ಹಾಗೂ ಕಾನೂನಿನ ಭಯದಿಂದಾಗಿ ಬೆಸ್ತರ ಊಟದ ಮೆನುವಿನಿಂದ ಆಮೆಮೊಟ್ಟೆಗಳು ಹೊರಗುಳಿದವು. ಆದರೆ ನಾಯಿಗಳು ಮತ್ತು ಅಪರೂಪಕ್ಕೆ ನರಿಗಳು ಆಮೆಗಳ ಮೊಟ್ಟೆಗಳನ್ನು ಕದಿಯುತ್ತವೆ.

ಆಮೆ ಸಮುದ್ರದಿಂದ ತೀರಕ್ಕೆ ತೆವಳಿ ಬರುವಾಗ ಅದರ ಪಾದದ ಗುರುತು ಚಿತ್ತಾರದಂತೆ ಮೂಡಿರುತ್ತದೆ. ಮೊಟ್ಟೆಯಿಟ್ಟು ಬೇರೆ ದಾರಿಯಲ್ಲಿ ಹೋಗುವಾಗಲೂ ಚಿತ್ತಾರವಿರುತ್ತದೆ. ಮೊಟ್ಟೆಯಿಟ್ಟು ಹೋದ 2-3 ತಾಸುಗಳಲ್ಲಿ ಆಮೆಗಳ ಪಾದದ ಗುರುತು ಸಮುದ್ರದ ಗಾಳಿಯ ಹೊಡೆತಕ್ಕೆ ಅಳಿಸಿಹೋಗುತ್ತದೆ. ಆ ನಂತರದಲ್ಲಿ ಆಮೆ ಮೊಟ್ಟೆ ಇಟ್ಟ ಜಾಗವನ್ನು ಹುಡುಕುವುದು ಅಸಾಧ್ಯವೇ ಸರಿ. ಕೆಲವೇ ಕೆಲವು ನುರಿತ ಬೆಸ್ತರು ಮಾತ್ರ ತಮ್ಮ ಪಾರಂಪರಿಕ ಜ್ಞಾನದಿಂದ ಆಲೀವ್ ರಿಡ್ಲೆ ಆಮೆಗಳು ಮೊಟ್ಟೆಯಿಟ್ಟ ಜಾಗವನ್ನು ಪತ್ತೆ ಮಾಡಬಲ್ಲರು. ಮೊಟ್ಟೆಯಿಡುವ ಸಮಯದಲ್ಲಿ ಪಸರಿಸುವ ವಾಸನೆಯನ್ನು ಹಿಡಿಯುವ ನಾಯಿ-ನರಿಗಳು ಮೊಟ್ಟೆಗಳನ್ನು ಕಳುವು ಮಾಡುತ್ತವೆ. ಮೊಟ್ಟೆಗಳ ವಾಸನೆ ಮರಳಿನಲ್ಲಿ ಮುಚ್ಚಿ, ಗಾಳಿಯಲ್ಲಿ ಬೆರೆತು, ಮತ್ತೆರಡು ತಾಸು ಕಳೆಯಿತು ಅಂದರೆ, ಗೂಡನ್ನು ಹುಡುಕುವುದು ನಾಯಿ-ನರಿಗಳಿಗೂ ಸಾಧ್ಯವಿಲ್ಲ.

ಆಲೀವ್ ರಿಡ್ಲೆ ಆಮೆಗಳು ಸಾಗರಗಳ ಆರೋಗ್ಯವನ್ನು ಪ್ರತಿನಿಧಿಸುವ ಸೂಚಕ ಜೀವಿಗಳು. ಸೂಕ್ಷ್ಮಜೀವಿಗಳಾದ ಈ ಪ್ರಭೇದದ ಆಮೆಗಳು ಹೇರಳವಾಗಿವೆ ಎಂದರೆ ಅಲ್ಲಿನ ಸಮುದ್ರದ ಆರೋಗ್ಯ ಸುಸ್ಥಿರವಾಗಿದೆಯೆಂದು ಅರ್ಥ. ಜೊತೆಗೆ ಇವು ಬೆಸ್ತಸ್ನೇಹಿಗಳೂ ಆಗಿ ಆಹಾರಭದ್ರತೆ ಕಾಪಿಡುವ ಕಾವಲುಗಾರರಾಗಿ ಕಾರ್ಯನಿರ್ವಹಿಸುತ್ತವೆ. ಬೆಸ್ತರು ಹಿಡಿಯುವ ಎಲ್ಲಾ ಜಾತಿಯ ಮೀನು ಮರಿಗಳನ್ನು ಕಬಳಿಸುವ ಜೆಲ್ಲಿ ಮೀನುಗಳನ್ನು ಭಕ್ಷಿಸುವ ಮೂಲಕ ಆಲೀವ್ ರಿಡ್ಲೆ ಆಮೆಗಳು ಬೆಸ್ತರ ನೆರವಿಗೆ ನಿಲ್ಲುತ್ತವೆ. ವನ್ಯಜೀವಿ ಸಂರಕ್ಷಣಾ ಕಾಯ್ದೆ (1972) ಅಡಿಯ ಪರಿಚ್ಛೇದ 1ರಲ್ಲಿ ಆಮೆಗಳನ್ನು ಸೇರಿಸಿ ಅತಿಹೆಚ್ಚು ರಕ್ಷಣೆಯನ್ನು ನೀಡಲಾಗಿದೆ. ಆಲೀವ್ ರಿಡ್ಲೆ ಆಮೆಗಳನ್ನು ಕೊಲ್ಲುವುದು, ಅವುಗಳ ಆವಾಸಸ್ಥಾನಗಳನ್ನು ನಾಶಪಡಿಸುವುದು, ಮೊಟ್ಟೆಗಳನ್ನು ಕದಿಯುವುದು ಇತ್ಯಾದಿಗಳನ್ನು ಘನ ಅಪರಾಧಗಳು ಎಂದು ಪರಿಗಣಿಸಲಾಗಿದ್ದು, ಅತಿಹೆಚ್ಚು ಶಿಕ್ಷೆಯನ್ನು ವಿಧಿಸಬಹುದಾಗಿದೆ.

ಭಾರತದಲ್ಲಿ ಮುಖ್ಯವಾಗಿ ಒಡಿಶಾ ಕಡಲು ತೀರಗಳಲ್ಲಿ ಆಲೀವ್ ರಿಡ್ಲೆ ಆಮೆಗಳು ಸಾವಿರಾರು ಸಂಖ್ಯೆಯಲ್ಲಿ ಬಂದು ಮೊಟ್ಟೆಯಿಡುತ್ತವೆ. ಅಲ್ಲಿ ಸಾಮೂಹಿಕವಾಗಿ ಅವುಗಳ ಸಂತತಿಯನ್ನು ರಕ್ಷಣೆ ಮಾಡಲಾಗುತ್ತದೆ. ಇದೇ ಮಾದರಿಯಲ್ಲಿ ಕರ್ನಾಟಕ ಅರಣ್ಯ ಇಲಾಖೆ ಈ ಆಮೆಗಳ ರಕ್ಷಣೆಯ ಜವಾಬ್ದಾರಿ ಹೊತ್ತುಕೊಂಡಿದೆ. ಸಂರಕ್ಷಣೆಯನ್ನು ಉತ್ತೇಜಿಸುವ ಸಲುವಾಗಿ ಆಲೀವ್ ರಿಡ್ಲೆ ಆಮೆ ಮೊಟ್ಟೆಯಿಟ್ಟ ಜಾಗವನ್ನು ಪತ್ತೆ ಮಾಡಿ ಇಲಾಖೆಗೆ ತಿಳಿಸುವ ಬೆಸ್ತರಿಗೆ ಇಲಾಖೆ ವತಿಯಿಂದ ಒಂದು ಸಾವಿರ ರೂಪಾಯಿ ಭಕ್ಷಿಸನ್ನು ನೀಡುವ ಪರಿಪಾಟವಿದೆ.

ಅಪರೂಪದ ಆಲೀವ್ ರಿಡ್ಲೆ ಆಮೆಗಳ ಆಗಮನ, ಮೊಟ್ಟೆಯಿಟ್ಟ ದಿನಾಂಕ, ಇಟ್ಟ ಮೊಟ್ಟೆಗಳ ಸಂಖ್ಯೆ, ಮರಿಯಾದ ಮೊಟ್ಟೆಗಳೆಷ್ಟು? ಸಮುದ್ರ ಸೇರಿದ ಮರಿಗಳೆಷ್ಟು? ಇಂತಹ ಲೆಕ್ಕಗಳನ್ನು ಅರಣ್ಯ ಇಲಾಖೆಯ ರಿಜಿಸ್ಟ್ರಿಯಲ್ಲಿ ದಾಖಲಾಗುತ್ತದೆ. ಆಮೆ ಮೊಟ್ಟೆಯಿಟ್ಟ ಗೂಡುಗಳನ್ನು ಪತ್ತೆ ಹಚ್ಚಿ ಇಲಾಖೆಗೆ ತಿಳಿಸಿದ ಮೀನುಗಾರನ ಹೆಸರು, ಅವನ ವಿಳಾಸ, ದೂರವಾಣಿ ವಿಳಾಸ ಹಾಗೂ ಅವನಿಗೆ ನೀಡಿದ ಹಣದ ಬಾಬ್ತು ಇಂತಹ ವಿವರಗಳು ದಾಖಲಾಗುತ್ತವೆ. ಇಂತಹ ದಾಖಲೆಗಳು 1984 ಇಸವಿಯಿಂದಲೂ ಲಭ್ಯವಿವೆ. ಪ್ರತಿವರ್ಷ ಆಮೆಗಳ ಸಂರಕ್ಷಣೆಗಾಗಿ ಸರ್ಕಾರದಿಂದ ಬಂದಿರುವ ಹಣವೆಷ್ಟು? ಮುಂದಿನ ಸಾಲಿನಲ್ಲಿ ಎಷ್ಟು ಹಣ ಬೇಕಾಗಬಹುದು ಎಂಬುದನ್ನು ಕ್ರಿಯಾ ಯೋಜನೆಯಲ್ಲಿ ನಮೂದಿಸಲಾಗುತ್ತದೆ.

ಹೈದರಾಬಾದ್‌ನ ಖಾಸಗಿ ಕಂಪನಿಯೊಂದು 2010ರಲ್ಲಿ ಕಾಸರಕೋಡು ಬೀಚ್ ಅನ್ನು ಬಂದರನ್ನಾಗಿ ಪರಿವರ್ತಿಸಲು ಅನುಮತಿ ಕೋರಿ ಸರ್ಕಾರಕ್ಕೆ ಅರ್ಜಿ ಸಲ್ಲಿಸಿತ್ತು. ಈ ವಿಷಯ ಸ್ಥಳೀಯ ಮೀನುಗಾರರಿಗೆ ತಿಳಿದಿರಲಿಲ್ಲ. ಬಂದರನ್ನು ನಿರ್ಮಿಸಲು ಅನುಮತಿ ದೊರಕಿದೆ ಎಂದು 2018ರಲ್ಲಿ ಖಾಸಗಿ ಕಂಪನಿಯ ಮಾಲೀಕರು ಟೊಂಕಾ ಬೀಚಿನ ಹೊರವಲಯದಲ್ಲಿ ವಾಸಿಸುವ ಬೆಸ್ತರನ್ನು ಎತ್ತಂಗಡಿ ಮಾಡುವ ಯತ್ನ ನಡೆಸಿದರು.

ಆಲೀವ್ ರಿಡ್ಲೆ ಆಮೆಗಳು ಮೊಟ್ಟೆಯಿಡುವ ಜಾಗದಲ್ಲಿ ನಾಲ್ಕು ಪಥದ ರಸ್ತೆ ನಿರ್ಮಿಸುವ ಕಾರ್ಯವನ್ನು ಕೈಗೊಳ್ಳುವ ಪೂರ್ವದಲ್ಲಿ ಕರ್ನಾಟಕ ಕರಾವಳಿ ವಲಯ ವ್ಯವಸ್ಥಾಪನಾ ಪ್ರಾಧಿಕಾರದಿಂದ ಅನುಮತಿ ಪಡೆಯದೇ ಕೈಗೆತ್ತಿಕೊಳ್ಳಲಾಗಿತ್ತು. ಸರ್ಕಾರವೇ ಮುಂದೆ ನಿಂತುಕೊಂಡು ಸ್ಥಳೀಯರ ವಿರೋಧವನ್ನು ಹತ್ತಿಕ್ಕಿತು. ಟೊಂಕಾ-ಕಾಸರಕೋಡು ಬೀಚ್ ಪ್ರದೇಶದಲ್ಲಿ ಬಂದರು ಮತ್ತು ನಾಲ್ಕು ಪಥದ ರಸ್ತೆ ನಿರ್ಮಾಣದಿಂದ, ನಂತರ ಅದಿರು ಸಾಗಾಣಿಕೆ ಕಾರಣದಿಂದ ಮೀನು ಸಂಸ್ಕರಣೆಗೆ ತೊಂದರೆಯಾಗುತ್ತದೆ. ಮೀನಿನ ಮೇಲೆ ಅಪಾರ ಪ್ರಮಾಣದ ದೂಳು ಶೇಖರಣೆಯಾಗಿ ಅದು ತಿನ್ನಲು ಯೋಗ್ಯವಾಗಿ ಉಳಿಯುವುದಿಲ್ಲ ಎಂದು ಅರಿತ ಹೊನ್ನಾವರ ಹಸಿ ಮೀನು ಮಾರಾಟಗಾರರ ಸಂಘ ರಾಜ್ಯ ಹೈಕೋರ್ಟ್ ಮೆಟ್ಟಿಲೇರಿತು.

ಮೊಟ್ಟೆ ಇಡುವ ಕ್ಷಣ

ಮೊಟ್ಟೆಯೊಡೆದು ಮರಿಗಳಾಗಿ, ಸಮುದ್ರಕ್ಕೆ ವಾಪಸ್ ಯಾತ್ರೆ ಹೊರಟಾಗ

ಟೊಂಕಾ ಮತ್ತು ಕಾಸರಕೋಡು ಬೀಚ್‌ಗಳು ಆಲೀವ್ ರಿಡ್ಲೆ ಆಮೆಗಳ ವಂಶಾಭಿವೃದ್ಧಿ ತಾಣವೂ ಆಗಿವೆ ಎಂಬುದನ್ನು ಹೈಕೋರ್ಟ್‌ಗೆ ಸಲ್ಲಿಸಿದ ಅರ್ಜಿಯಲ್ಲಿ ಉಲ್ಲೇಖಿಸಲಾಗಿತ್ತು. ವಾದ ಪ್ರತಿವಾದವನ್ನು ಆಲಿಸಿದ ಹೈಕೋರ್ಟ್, ಯೋಜನೆಗೆ ತಾತ್ಕಾಲಿಕ ತಡೆಯಾಜ್ಞೆ ನೀಡಿತು. ಆ ಪ್ರದೇಶವು ಆಲೀವ್ ರಿಡ್ಲೆ ಆಮೆಗಳ ವಂಶಾಭಿವೃದ್ಧಿ ತಾಣ ಹೌದೋ ಅಲ್ಲವೋ ಎಂದು ಪರಿಶೀಲಿಸಲು ಸಮುದ್ರಜೀವಿಗಳ ತಜ್ಞರ ಸಮಿತಿಯನ್ನು ನೇಮಕ ಮಾಡಿತು.

ವಾಡಿಕೆಯಾಗಿ ಆಲೀವ್ ರಿಡ್ಲೆ ಆಮೆಗಳು ವಂಶಾಭಿವೃದ್ಧಿಗೆ ಟೊಂಕಾ-ಕಾಸರಕೋಡು ಬೀಚ್‌ಗೆ ಬರುವುದು ಸಾಮಾನ್ಯವಾಗಿ ನವೆಂಬರ್‌ನಿಂದ ಮಾರ್ಚಿನವರೆಗೆ ಆಗಿತ್ತು. **11ನೇ ಪುಟಕ್ಕೆ...**

ತುಕ್ಕು ಹಿಡಿಯುತ್ತಿದೆ ಉಕ್ಕಿನ ನಗರ!

ಒಂದುಕಾಲಕ್ಕೆ ವೈಭವದಿಂದ ಮೆರೆದ ಊರು ಭದ್ರಾವತಿ. ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆ ಮುಚ್ಚುತ್ತದೆ ಎನ್ನುವ ಸುದ್ದಿ ಈ ಊರನ್ನು ಬರಸಿಡಿಲಿನಂತೆ ಬಡಿದಿದೆ. ಊರಿನ ವೈಭವಕ್ಕೂ ತುಕ್ಕು ಹಿಡಿದಿದೆ...

ವಿಡಿಯೊ ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಗುರು ಪಿ.ಎಸ್.

'ಯಾವುದೇ ಕಾರಣಕ್ಕೂ ಈ ಕಾರ್ಖಾನೆಯನ್ನು ಮುಚ್ಚುವುದಾಗಲಿ, ಖಾಸಗಿಯವರಿಗೆ ವಹಿಸುವುದಾಗಲಿ ಮಾಡುವುದು ಬೇಡ. ಇದು ನಮ್ಮ ಆಸ್ತಿ, ನಮ್ಮ ಸಂಸ್ಥಾನವೇ ಇದನ್ನು ನಡೆಸಬೇಕು'

105 ವರ್ಷಗಳ ಹಿಂದೆ, ಸರ್ ಎಂ. ವಿಶ್ವೇಶ್ವರಯ್ಯನವರು ಮೈಸೂರು ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರಿಗೆ, ಇವತ್ತಿನ ವಿಐಎಸ್‌ಎಲ್ ಕುರಿತು ಹೇಳಿದ ಮಾತಿದು.

ಕೆಮ್ಮಣ್ಣುಗುಂಡಿ ಮತ್ತು ಕುದುರೆಮುಖದಲ್ಲಿ ಕಬ್ಬಿಣದ ಅದಿರಿನ ಗಣಿ ಇರುವುದು ದೃಢವಾದಾಗ, ರಾಜ್ಯಕ್ಕೆ ಬೇಕಾದ ಬೀಡುಕಬ್ಬಿಣ ತಯಾರಿಸುವ ಉದ್ದೇಶದಿಂದ ಕಾರ್ಖಾನೆ ಸ್ಥಾಪಿಸಲು ಮಹಾರಾಜರು ಆಯ್ಕೆ ಮಾಡಿಕೊಂಡಿದ್ದ ಸ್ಥಳ ಭದ್ರಾವತಿ.

ಈ ಬಗ್ಗೆ ರಾಜರು ಬ್ರಿಟಿಷರಿಂದ ವರದಿ ಕೇಳಿದ್ದಾಗ, ಮೈಕಲ್ ಎಂಬ ಅಧಿಕಾರಿ, 'ಭದ್ರಾವತಿಯಲ್ಲಿ ಕಾರ್ಖಾನೆ ಸ್ಥಾಪಿಸಿ ತಯಾರಿಸುವ ಉಕ್ಕಿನ ವೆಚ್ಚ, ಈಗಾಗಲೇ ಮಾರುಕಟ್ಟೆಯಲ್ಲಿ ಲಭ್ಯವಿರುವ ಉಕ್ಕಿನ ಬೆಲೆಗಿಂತ ಹೆಚ್ಚಾಗುತ್ತದೆ. ಹಾಗಾಗಿ, ಈ ಕಾರ್ಖಾನೆಗೆ ನಾವೇ ಬಂಡವಾಳ ತೊಡಗಿಸಿ, ನಾವೇ ಆರಂಭ ಮಾಡಿದರೆ ನಮಗೆ (ಸರ್ಕಾರಕ್ಕೆ) ನಷ್ಟ ನಿಶ್ಚಿತ. ಕಾರ್ಖಾನೆ ಪ್ರಾರಂಭ ಮಾಡಲೇಬೇಕೆಂದಿದ್ದರೆ ಅದನ್ನು ಖಾಸಗಿಯವರಿಗೆ ಕೊಟ್ಟುಬಿಡೋಣ. ಆಗ, ಮೈಸೂರು ರಾಜ್ಯಕ್ಕೆ ಇಂತಿಷ್ಟು ಆದಾಯವಾದರೂ ಬರುತ್ತೆ' ಎಂದು ಸಲಹೆ ನೀಡುತ್ತಾರೆ.

ವಿಶ್ವೇಶ್ವರಯ್ಯನವರಿಗೆ ಈ ವಿಷಯ ಹೇಳುತ್ತಾರೆ ಮಹಾರಾಜರು. ಆಗಷ್ಟೇ, ಮೈಸೂರು ದಿವಾನರಾಗಿ ಕರ್ತವ್ಯ ಪೂರ್ಣಗೊಳಿಸಿ, ಮಹಾರಾಷ್ಟ್ರ ಸರ್ಕಾರದ ಕನ್ಸಲ್ಟಂಟ್ ಆಗಿ ಕಾರ್ಯನಿರ್ವಹಿಸುತ್ತಿದ್ದ ವಿಶ್ವೇಶ್ವರಯ್ಯನವರು, ತಾವೇ ವ್ಯವಸ್ಥಾಪಕರಾಗಿ ಬಂದು, ಕಾರ್ಖಾನೆಯನ್ನು ಮುನ್ನಡೆಸುವುದಾಗಿ ಹೇಳುತ್ತಾರೆ.

'ದಿವಾನರಾಗಿದ್ದವರು ಒಂದು ಕಂಪನಿಯ ಎಂ.ಡಿ. ಆಗಿ ಬರುವುದು ಬೇಡ, ನಾನೇ ನಿಮಗೆ ಹಿಂಬಡ್ತಿ ನೀಡಿದಂತಾಗುತ್ತದೆ, ಇದರಿಂದ ಜನರಿಗೆ ತಪ್ಪು ಸಂದೇಶ ಹೋಗುತ್ತದೆ' ಎಂದ ಮಹಾರಾಜರಿಗೆ, 'ನಮ್ಮ ಸಂಸ್ಥಾನಕ್ಕೆ ಒಳ್ಳೆಯದಾಗುತ್ತದೆ ಎಂದಾದರೆ ನಾನು ಪದವಿ, ಪ್ರತಿಷ್ಠೆ ನೋಡುವುದಿಲ್ಲ' ಎಂದವರೇ, ಪುಣೆಯಿಂದ ಭದ್ರಾವತಿಗೆ ತಮ್ಮ ಕಚೇರಿಯನ್ನು ಸ್ಥಳಾಂತರಿಸುತ್ತಾರೆ. ಮಹಾರಾಷ್ಟ್ರ ಸರ್ಕಾರದ ಕೆಲಸ ಮಾಡುತ್ತಲೇ, ಈ ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕರಾಗಿಯೂ ಮುಂದುವರಿಯುತ್ತಾರೆ. ಆರೇ ವರ್ಷಗಳಲ್ಲಿ ಲಾಭದ ಹಳಿಗೂ ಬರುತ್ತದೆ ಕಾರ್ಖಾನೆ.

1918ರಲ್ಲಿ ಕಾರ್ಯಾರಂಭ ಮಾಡಿದ ಮೈಸೂರು ಐರನ್ ವರ್ಕ್ಸ್, 1923ರಲ್ಲಿ ಉತ್ಪಾದನೆ ಆರಂಭಿಸುತ್ತದೆ. ಮುಂದೆ ವಿಶ್ವೇಶ್ವರಯ್ಯನವರ ಹೆಸರನ್ನೇ ಹೊಂದಿದ ಕಂಪನಿ, ತಾನೂ ಬೆಳೆದು, ನಗರವನ್ನೂ ಬೆಳೆಸುತ್ತಾ ಹೋಗುತ್ತದೆ. ಇಂತಹ ಇತಿಹಾಸ ಹೊಂದಿದ, ಈಗ ಶತಮಾನದ ಸಂಭ್ರಮದಲ್ಲಿರಬೇಕಾದ ವಿಶ್ವೇಶ್ವರಯ್ಯ ಕಬ್ಬಿಣ ಮತ್ತು ಉಕ್ಕು ಕಾರ್ಖಾನೆಯನ್ನು (ವಿಐಎಸ್‌ಎಲ್) ಮುಚ್ಚುವುದಾಗಿ ಕೇಂದ್ರಸರ್ಕಾರ 2023ರ ಫೆ.13ರಂದು ರಾಜ್ಯಸಭೆಯಲ್ಲಿ ಘೋಷಿಸಿದೆ.

***

ಕ್ರೀಡಾಂಗಣದ ಬೋರ್ಡ್‌ನಂತೆಯೇ ಭದ್ರಾವತಿಯ ಕನಸುಗಳಿಗೂ ಈಗ ತುಕ್ಕು ಹಿಡಿದಿದೆ

ಕಾರ್ಖಾನೆಯ ಕಾರ್ಮಿಕರ ವಸತಿಗೃಹಕ್ಕೆ ಒದಗಿದ ಗತಿ

ಚಿತ್ರಗಳು: ಎಸ್. ಪ್ರಶಾಂತ್

ಅಭಿವೃದ್ಧಿಯ ಉತ್ತುಂಗದಲ್ಲಿದ್ದ ಕಂಪನಿಯು, ವಿನಾಶದ ಹಾದಿ ಹಿಡಿದಿದ್ದು ಹೇಗೆ ಎಂದು ತಿಳಿಯಲು ಭದ್ರಾವತಿಗೆ ಕಾಲಿಟ್ಟಾಗ ಕಂಡಿದ್ದು ಹಲವು ಕಥೆ, ಹಲವರ ವ್ಯಥೆ.

ಸ್ವಾತಂತ್ರ್ಯ ಪೂರ್ವ ಮತ್ತು ನಂತರವೂ ರಾಜ್ಯ, ದೇಶದ ಪ್ರಗತಿಗೆ ಕೊಡುಗೆ ನೀಡುತ್ತಾ ಬಂತು ವಿಐಎಸ್‌ಎಲ್. ಕಾರ್ಖಾನೆಯ ಹಿಂದೆಯೇ ನದಿ ಇರುವ ಏಕೈಕ ಕಾರ್ಖಾನೆ ಎಂಬ ಗರಿಮೆಯೊಂದಿಗೆ, ದೇಶದ ಮೊದಲ ಸರ್ಕಾರಿ ಸ್ವಾಮ್ಯದ ಕಂಪನಿ ಎಂಬ ಹೆಗ್ಗಳಿಕೆಯನ್ನೂ ಪಡೆಯಿತು.

1949ರ ನಂತರ ಜೋಗದಿಂದ ನಿರಂತರ ಜಲವಿದ್ಯುತ್ ಸಿಗಲು ಆರಂಭವಾದ ಮೇಲೆ, ಕಾರ್ಖಾನೆಯ ಉತ್ಪಾದನೆಯೂ ಹೆಚ್ಚಾಯಿತು. ಆಗ ತಾನೆ, ಸ್ವತಂತ್ರ ಪಡೆದ ಉತ್ಸಾಹದಲ್ಲಿದ್ದ ದೇಶದ ರಕ್ಷಣಾ ವಲಯವನ್ನೂ ವಿಐಎಸ್‌ಎಲ್ ಉತ್ಪನ್ನಗಳು ಪ್ರವೇಶಿಸತೊಡಗಿದವು.

ಶಿವಮೊಗ್ಗ ಜಿಲ್ಲೆಯು ಫೌಂಡ್ರಿ ಪ್ರಾಡಕ್ಟ್ಸ್‌ಗೆ ಪ್ರಪಂಚದಲ್ಲಿಯೇ ಹೆಸರುವಾಸಿಯಾಯಿತು. ಕಂಪನಿಯ ವ್ಯಾಪ್ತಿಯ ಜಾಗದಲ್ಲಿ ಶಾಲಾ-ಕಾಲೇಜುಗಳು, ಆಸ್ಪತ್ರೆ, ತಾಂತ್ರಿಕ ಶಿಕ್ಷಣ ಸಂಸ್ಥೆಗಳು ತಲೆ ಎತ್ತಿದವು. ಕಾರ್ಮಿಕರ ಮಕ್ಕಳಿಗೆ, ಸಾರ್ವಜನಿಕರಿಗೆ ಕಡಿಮೆ ದರದಲ್ಲಿ ಗುಣಮಟ್ಟದ ಶಿಕ್ಷಣ ಸಿಗತೊಡಗಿತು. ಕಂಪನಿಯು ರಜತ ಮಹೋತ್ಸವದ ಸಂಭ್ರಮದಲ್ಲಿದ್ದಾಗ ವಿಐಎಸ್‌ಎಲ್ ಕ್ರೀಡಾಂಗಣವೂ ನಿರ್ಮಾಣವಾಯಿತು, ಅಲ್ಲಿ ರಣಜಿ ಕ್ರಿಕೆಟ್ ಪಂದ್ಯವನ್ನು ಕೂಡ ನಡೆಸಲಾಯಿತು. ಹೀಗೆ, ಅಕ್ಕ-ಪಕ್ಕದ ಜಿಲ್ಲೆ, ರಾಜ್ಯಗಳು ಹೊಟ್ಟೆಕಿಚ್ಚು ಪಟ್ಟುಕೊಳ್ಳುವಷ್ಟು ಬೆಳೆಯಿತು ಭದ್ರಾವತಿ.

ಸುಮಾರು 17 ಸಾವಿರ ಕಾಯಂ ನೌಕರರು, ಐದು ಸಾವಿರ ಗುತ್ತಿಗೆ ನೌಕರರು ಕಾರ್ಯನಿರ್ವಹಿಸುತ್ತಿದ್ದರು. ಒಂದು ಲಕ್ಷಕ್ಕೂ ಹೆಚ್ಚು ಜನ ಕಾರ್ಖಾನೆಯನ್ನು ಪ್ರತ್ಯಕ್ಷವಾಗಿ, ಪರೋಕ್ಷವಾಗಿ ಅವಲಂಬಿಸಿದ್ದರು.

ಈ ನಡುವೆ, 1936ರ ವೇಳೆಗೆ, ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಕಾಲದಲ್ಲಿಯೇ ಭದ್ರಾವತಿಯಲ್ಲಿ ಮೈಸೂರು ಕಾಗದ ಕಾರ್ಖಾನೆ (ಎಂಪಿಎಂ) ಕೂಡ ತಲೆ ಎತ್ತಿತು. ಭದ್ರಾವತಿಯ ಎರಡು ಕಣ್ಣುಗಳಂತೆ ಕಾರ್ಯನಿರ್ವಹಿಸ ತೊಡಗಿದವು ವಿಐಎಸ್‌ಎಲ್ ಮತ್ತು ಎಂಪಿಎಂ.

9ನೇ ಪುಟಕ್ಕೆ...

ಥೇಮ್ಸ್ ನದಿಯ ತೀರದ ಮೇಲಿರುವ ವಿಂಡ್ಸರ್ ಕ್ಯಾಸಲ್ ಅರಮನೆಯ ವಿಹಂಗಮ ನೋಟ

ವಿಸ್ಮಯ ವಿಂಡ್ಸರ್ ಕ್ಯಾಸಲ್

ಪ್ರವಾಸ

ಪುಷ್ಪಾ ಮೋಹನ ಮುದಕವಿ

ಬ್ರಿಟನ್ ರಾಣಿ ಎರಡನೆಯ ಎಲಿಜಬೆತ್‌ಳ ನೆಚ್ಚಿನ ವಾರಾಂತ್ಯದ ನಿವಾಸವಾಗಿತ್ತು ಈ ವಿಸ್ಮಯ ವಿಂಡ್ಸರ್ ಕ್ಯಾಸಲ್. ಎಪ್ಪತ್ತು ವರ್ಷಗಳ ಸುದೀರ್ಘ ಆಳ್ವಿಕೆಯ ನಂತರ ಕಳೆದ ಸೆಪ್ಟೆಂಬರ್ 8ರಂದು ನಿಧನಳಾದ ರಾಣಿ ಶಾಶ್ವತವಾಗಿ ಇಲ್ಲಿಯೇ ವಿರಮಿಸಿದಳು.

ಬೇಸಿಗೆಯಲ್ಲಿ ಲಂಡನ್ ವಾಸ್ತವ್ಯದ ಸಮಯದಲ್ಲಿ ಒಂದು ಭಾನುವಾರ ಮಗಳೊಟ್ಟಿಗೆ ನಾವು ವಿಂಡ್ಸರ್ ಕ್ಯಾಸಲ್ ವೀಕ್ಷಣೆಗೆ ಹೊರಟು, ಲಂಡನ್ನಿನಿಂದ ಸುಸಜ್ಜಿತ ರೈಲಿನಲ್ಲಿ 11 ಗಂಟೆಗೆ ವಿಂಡ್ಸರ್‌ಗೆ ಬಂದಿಳಿದೆವು. ಲಂಡನ್‌ನಿಂದ ಸುಮಾರು 22 ಮೈಲಿಗಳ ಅಂತರದ ಬರ್ಕ್‌ಶೈರ್ ಪ್ರಾಂತ್ಯದ ವಿಂಡ್ಸರ್ ಎಂಬಲ್ಲಿದೆ ಈ ರಾಜನಿವಾಸ.

ಘನಗಾಂಭೀರ್ಯದ ದ್ಯೋತಕವಾದ ಕೋಟೆ, ಗೋಡೆ, ಗೋಪುರ, ಮೋಹಕವಾದ ಸುಂದರ ವಾಸ್ತುಶಿಲ್ಪ ಪ್ರವಾಸಿಗರನ್ನು ಚುಂಬಕದಂತೆ ಸೆಳೆಯುತ್ತದೆ. ಪ್ರತಿವರ್ಷ 15 ಲಕ್ಷ ಪ್ರವಾಸಿಗರು ಭೇಟಿ ನೀಡುವ ಆಕರ್ಷಣೀಯ ತಾಣ. ಈ ಕೋಟೆಯ ಸಾಮ್ರಾಜ್ಞಿಯಾಗಿದ್ದ ರಾಣಿ ಎಲಿಜಬೆತ್-2 ಒಳಗೊಂಡಂತೆ ಇಂಗ್ಲೆಂಡ್‌ನ 39 ಅಧೀಶ್ವರರ ನಿವಾಸ.

ರಾಣಿಯ ಮೆಚ್ಚಿನ ವಾರಾಂತ್ಯದ ವಾಸಸ್ಥಳ ಈ ವಿಂಡ್ಸರ್ ಕ್ಯಾಸಲ್. ಈ ಕೋಟೆಯ ಗೋಪುರದ ಮೇಲೆ ರಾಜಧ್ವಜ ಹಾರಾಡುತ್ತಿದ್ದರೆ ರಾಣಿ ವಾಸವಿರುವ ಕುರುಹು. ಸುಸಜ್ಜಿತ ಕೋಟೆಯ ಕಟ್ಟಡದಲ್ಲಿ ಸಾವಿರ ಕೋಣೆಗಳಿವೆ. ರಾಜವೈಭವಕ್ಕೆ ತಕ್ಕಂತೆ ಪೀಠೋಪಕರಣಗಳು, ವರ್ಣಚಿತ್ರಗಳು ಇಲ್ಲಿವೆ. ವೈಭವೋಪೇತ ರಾಜನಿವಾಸವಿದು. ಇಂಗ್ಲೆಂಡ್ ಅನ್ನು 1066ರಲ್ಲಿ ಗೆದ್ದ ವಿಲಿಯಮ್-1 ಎಂಬ ಮೊದಲ ನಾರ್ಮನ್ ರಾಜ ಈ ಕೋಟೆಯ ನಿರ್ಮಾತೃ. ಥೇಮ್ಸ್ ನದಿಯ ದಕ್ಷಿಣ ತಟದಲ್ಲಿ 13 ಎಕರೆ ಪ್ರದೇಶದ ಹುಲ್ಲುಹಾಸಿನ ಮಧ್ಯೆ ಸ್ಥಿತವಾದ ಈ ಕೋಟೆ ಮೂಲತಃ ನಾರ್ಮನ್ ಶೈಲಿಯದು. ಮಣ್ಣಿನ ದಿಬ್ಬದ ಮೇಲೆ ಕಟ್ಟಿಗೆ ಅಥವಾ ಕಲ್ಲಿನ ವರ್ತುಲಾಕಾರದ ರಚನೆ, ಸುತ್ತುವರಿದ ಪ್ರಾಕಾರದ ಸುತ್ತಲೂ ರಕ್ಷಣಾ ಕಾರಣಗಳಿಗಾಗಿ ಕಂದಕ ನಿರ್ಮಿಸಲಾಗಿದೆ. ಮೂಲತಃ ಮರದ ರಚನೆ ನಂತರ ಬಂದ ರಾಜ ರಾಣಿಯರ ಕಾಲದಲ್ಲಿ ಕಲ್ಲಿನ ರಚನೆಯೊಂದಿಗೆ ಇನ್ನಷ್ಟು ಆಲಂಕಾರಿಕವಾಗಿ ಮಾರ್ಪಾಡಾಗುತ್ತ ಬಂದಿದೆ. ಅಮೂಲ್ಯ ಕಲಾಕೃತಿಗಳು ಮಾತ್ರವಲ್ಲದೆ ವಿಶ್ವದ ಮೂಲೆ ಮೂಲೆಗಳಿಂದ ಬ್ರಿಟಿಷರು ಹೊತ್ತು ತಂದ ಉತ್ಕೃಷ್ಟ ವಸ್ತುಗಳನ್ನು ಈ ಅರಮನೆಯಲ್ಲಿ ಕಾಣಬಹುದು.

ವಿಂಡ್ಸರ್ ಕೋಟೆಯ ಮಧ್ಯದ ಸಿಲಿಂಡರಾಕಾರದ ಎತ್ತರದ ಗೋಪುರ ಸುಮಾರು ಮೈಲಿಗಳ ಅಂತರದಿಂದ ಗೋಚರಿಸುತ್ತದೆ. ಗೋಪುರದ ಇಕ್ಕೆಲಗಳಲ್ಲಿ ಚತುರ್ಭುಜಾಕೃತಿಯ ಸಂಕೀರ್ಣ ಕಟ್ಟಡಗಳಿವೆ. ಗೋಪುರದ ಪಶ್ಚಿಮ ಕಟ್ಟಡವನ್ನು ಲೋವರ್ ವಾರ್ಡ್ ಎಂದೂ ಪೂರ್ವಕ್ಕಿರುವುದನ್ನು ಅಪ್ಪರ್ ವಾರ್ಡ್ ಎಂತಲೂ ಕರೆಯಲಾಗುತ್ತದೆ.

ಲೋವರ್ ವಾರ್ಡ್‌ನಲ್ಲಿ 1348ರಲ್ಲಿ ಎಡ್ವರ್ಡ್-3 ನಿರ್ಮಿಸಿದ ಗೋಥಿಕ್ ಶೈಲಿಯ ವಾಸ್ತುವಿನಿಂದ ಕೂಡಿದ ಸೇಂಟ್ ಜಾರ್ಜ್ ಚಾಪೆಲ್ ಮತ್ತು ಅಲ್ಬರ್ಟ್ ಮೆಮೋರಿಯಲ್ ಚಾಪೆಲ್‌ಗಳಿವೆ. ಸೇಂಟ್ ಜಾರ್ಜ್ ಚಾಪೆಲ್‌ನಲ್ಲಿ ಇಂಗ್ಲೆಂಡ್‌ನ ಹತ್ತು ಅಧೀಶ್ವರರ ಸಮಾಧಿಗಳಿವೆ. ಶತಮಾನಗಳಿಂದ ರಾಜಮನೆತನದ ಪ್ರಾರ್ಥನಾ ಮಂದಿರವಾದ ಈ ಚಾಪೆಲ್‌ನಲ್ಲಿ ಮದುವೆಗಳೂ ಜರುಗುತ್ತವೆ. ಅಪ್ಪರ್ ವಾರ್ಡ್‌ನಲ್ಲಿ ರಾಜರ ವೈಭವೋಪೇತ ಅಪಾರ್ಟ್‌ಮೆಂಟ್‌ಗಳಿದ್ದು ಒಳಮಾಳಿಗೆ ಸುಂದರ ಪೇಂಟಿಂಗ್‌ಗಳಿಂದ ಅಲಂಕೃತಗೊಂಡಿದೆ. ಗ್ರ್ಯಾಂಡ್ ರೆಸಿಪ್ಶನ್ ರೂಮ್‌ನಲ್ಲಿ ರಾಣಿ ವಿಕ್ಟೋರಿಯಾಳ ಖಾಸಗಿ ಪ್ರಾರ್ಥನಾ ಮಂದಿರವಿದೆ. ಪ್ರಸಿದ್ಧ ಕಲಾವಿದರ (ಲಿಯೋನಾರ್ಡೊ ಡಾ ವಿಂಚಿ, ಮೈಕೆಲೆಂಜೆಲೊ, ರಾಫೆಲ್) ಕಲಾಕೃತಿಗಳಿಂದ ಗೋಡೆಗಳು ಅಲಂಕೃತಗೊಂಡು ಪ್ರವಾಸಿಗರ ಮನಸೆಳೆಯುತ್ತವೆ. ನಮ್ಮ ಭಾರತದ ಸುಂದರ ರತ್ನಗಂಬಳಿ ರಾಣಿ ವಿಕ್ಟೋರಿಯಾಳ ಪಟ್ಟಾಭಿಷೇಕದ ಸುವರ್ಣ ಮಹೋತ್ಸವದ ಅಂಗವಾಗಿ ಕೊಟ್ಟಿದ್ದು, ಅಲ್ಲಿನ ಇನ್ನೊಂದು ವಿಶೇಷ ಆಕರ್ಷಣೆ. ಭಾರೀ ಗಾತ್ರದ ಜೋಡಣೆರಹಿತ ರತ್ನಗಂಬಳಿ ಎಂಬುದು ನಮ್ಮ ಹೆಮ್ಮೆ. 1992ರಲ್ಲಾದ ಅಪಘಾತದಲ್ಲಿ ಕೆಲ ವಸ್ತುಗಳು, ಪೀಠೋಪಕರಣಗಳು, ಕೋಣೆಯ ಭಾಗಗಳು ನಾಶವಾದರೂ ಅದೃಷ್ಟವಶಾತ್ ರತ್ನಗಂಬಳಿಯನ್ನು ರಕ್ಷಿಸಲಾಯಿತು. ಅದನ್ನು ಸುತ್ತಲು 50 ಜನ ಬೇಕಾಯಿತಂತೆ. ನಾಶವಾದವುಗಳನ್ನು ನವೀಕರಿಸಿ ಪುನಃ 1997ರಲ್ಲಿ ಸಾರ್ವಜನಿಕರಿಗಾಗಿ ಪ್ರದರ್ಶನಕ್ಕೆ ಇಡಲಾಯಿತು.

ವಿಂಡ್ಸರ್ ಕ್ಯಾಸಲ್‌ನ ಮತ್ತೊಂದು ಪ್ರಮುಖ ಆಕರ್ಷಣೆ ರಾಣಿ ಮೇರಿಯ ಬೊಂಬೆ ಮನೆ. ಜಗತ್ಪ್ರಸಿದ್ಧವಾದದ್ದು. ಈಕೆ ಐದನೆಯ ಕಿಂಗ್ ಜಾರ್ಜ್‌ನ ಪತ್ನಿ. ರಾಣಿ ಎಲಿಜಬೆತ್‌ಳ ಅಜ್ಜಿ. 1921ರಿಂದ 1924ರ ಅವಧಿಯಲ್ಲಿ ಆಗಿನ ಪ್ರಸಿದ್ಧ ವಾಸ್ತುಶಾಸ್ತ್ರಜ್ಞ ಎಡ್ವಿನ್ ಲುಟೆನ್ಸ್‌ನಿಂದ ರಚಿತವಾದ ಇದನ್ನು ಬ್ರಿಟಿಷ್ ಜನತೆ ರಾಣಿಗಾಗಿ ಕೊಡುಗೆಯಾಗಿ ಕೊಟ್ಟದ್ದು. ಅದ್ಭುತ ಸೂಕ್ಷ್ಮ ಆಕಾರದ ಉತ್ಕೃಷ್ಟ ವಸ್ತುಗಳ ಭವ್ಯ ಮನೆ. 1:12 ಸ್ಕೇಲ್ ಪ್ರಮಾಣದಲ್ಲಿ ರಚಿಸಲಾದ ಸಾವಿರಾರು ಸಂಗತಿಗಳನ್ನೊಳಗೊಂಡ ವಸ್ತುವಿನ್ಯಾಸಗಳ ಮಿನಿಯೇಚರ್ ಆಕೃತಿಗಳನ್ನು ಅಲ್ಲಿ ಕಾಣಬಹುದಾಗಿದೆ ಉದಾ: ಪಿಠೋಪಕರಣ, ಸುಸಜ್ಜಿತ ಸ್ನಾನದ ಕೋಣೆ, ವಾಚನಾಲಯ, ಅಲ್ಲಿ ಪ್ರಸಿದ್ಧ ಲೇಖಕರಾದ ಆರ್ಥರ್ ಕಾನನ್ ಡಾಯಲ್, ರುಡ್ಯಾರ್ಡ್ ಕಿಪ್ಲಿಂಗ್ ಮುಂತಾದವರ ಸುಮಾರು 700 ಮಿನಿಯೇಚರ್ ಪುಸ್ತಕಗಳಿವೆ. ಕಾರು ಗ್ಯಾರೇಜ್‌ನಲ್ಲಿ ಕಾರ್ಯ ನಿರ್ವಹಿಸುತ್ತಿರುವ ಕಾರುಗಳ ಸೂಕ್ಷ್ಮ ಆಕೃತಿಗಳಿವೆ. ಹೀಗೆ ಹಲವಾರು ಪ್ರತಿಕೃತಿಗಳ ಈ ಬೊಂಬೆ ಮನೆಯ ಅಚ್ಚರಿಯನ್ನು ನೋಡಿಯೇ ಅನುಭವಿಸಬೇಕು.

ಚೇಂಜಿಂಗ್ ದ ಗಾರ್ಡ್ಸ್ ಇಲ್ಲಿ ನೋಡತಕ್ಕ ಅಪರೂಪದ ವಿದ್ಯಮಾನ. ಬಣ್ಣ ಹಾಗೂ ವಾದ್ಯ ಶಬ್ದಗಳ ಅಪೂರ್ವ ಸಮ್ಮಿಲನದ ಆ ಸೈನಿಕರ ನಡೆ ಮೈನವಿರೇಳಿಸುವ ಅದ್ಭುತ ಅನುಭವ. 45 ನಿಮಿಷಗಳ ಈ ಪ್ರದರ್ಶನದಲ್ಲಿ ರಕ್ಷಣಾದಳದವರ ಕರ್ತವ್ಯ ಹಸ್ತಾಂತರದ ಕಾರ್ಯಕ್ರಮ ಜರುಗುವುದು. ಇದು ಬಹುತೇಕ ಸೋಮವಾರ, ಬುಧವಾರ, ಶುಕ್ರವಾರ, ಶನಿವಾರ ಬೆಳಿಗ್ಗೆ 11 ಗಂಟೆಗೆ ನಡೆಯುವ ಕಾರ್ಯಕ್ರಮ. ಪ್ರವಾಸದ ಮೊದಲು ಒಮ್ಮೆ ಖಚಿತಪಡಿಸಿಕೊಂಡಲ್ಲಿ ಈ ಪ್ರದರ್ಶನ ವೀಕ್ಷಿಸಲು ಸಾಧ್ಯ.

ಇಷ್ಟೆಲ್ಲಾ ಸುತ್ತಿ ಸುಸ್ತಾದರೂ ಬಹು ಸುಂದರವಾದ ಕೋಟೆ, ಸೊಬಗಿನಿಂದ ಕಂಗೊಳಿಸುವ ವಿಶಾಲವಾದ ಹಜಾರಗಳು, ಅವುಗಳನ್ನು ಅಲಂಕರಿಸಿರುವ ಅವರ ಕೌಶಲ, ಸಾರ್ವಜನಿಕರಿಗೆ ಸದಾ ತೆರೆದಿಟ್ಟು ನಿರ್ವಹಿಸುವ ವೈಖರಿ ಅಲ್ಲಿಂದ ಕಾಲ್ಕೀಳದಂತೆ ಮಾಡುತ್ತವೆ. ಮುಚ್ಚುವ ಸಮಯವಾದ್ದರಿಂದ ಹೊರಬರುವುದು ಅನಿವಾರ್ಯ. ಹೊಟ್ಟೆ ಚುರುಗುಟ್ಟುತ್ತಿದ್ದರಿಂದ ಸ್ಯಾಂಡ್‌ವಿಚ್, ಕಾಫಿ ಸೇವಿಸಿ ಉಲ್ಲಸಿತರಾಗಿ ಬಂದಂತೆಯೇ ಪುನಃ ರೈಲಿನಲ್ಲಿ ಲಂಡನ್‌ಗೆ ವಾಪಸಾದೆವು.

ತುಕ್ಕು ಹಿಡಿಯುತ್ತಿದೆ

8ನೇ ಪುಟದಿಂದ...

ಈಗ, ಎಂಪಿಎಂ 2017ರಲ್ಲಿಯೇ ಸ್ಥಗಿತಗೊಂಡಿದೆ. ವಿಐಎಸ್‌ಎಲ್ ಮುಚ್ಚುವ ಹಾದಿಯಲ್ಲಿದೆ. ಇದಕ್ಕಾರು ಕಾರಣ ಎಂದು ಕೇಳಿದರೆ, ಸ್ಥಳೀಯ ರಾಜಕಾರಣಿಗಳು, 'ಚರ್ಚಾಸ್ಪರ್ಧೆ'ಗೆ ನಿಂತಂತೆ ವಾದ ಮಂಡಿಸುತ್ತಾ ಸಾಗುತ್ತಾರೆ.

1983ರವರೆಗೂ ವಿಐಎಸ್‌ಎಲ್‌ನ್ನು ರಾಜ್ಯಸರ್ಕಾರ ಲಾಭದಾಯಕವಾಗಿಯೇ ನಡೆಸಿಕೊಂಡು ಬಂತು. ಕಾಲಕ್ಕೆ ತಕ್ಕಂತೆ ತಾಂತ್ರಿಕವಾಗಿ 'ಅಪ್‌ಡೇಟ್' ಆಗದಿರುವುದು, ಹಳೆಯ ಯಂತ್ರಗಳು, ಅದಿರು ಕೊರತೆಯಿಂದ ಉತ್ಪಾದನೆ ಕ್ಷೀಣಿಸುತ್ತಿದೆ ಎಂಬ ಕಾರಣಗಳನ್ನು ಮುಂದುಮಾಡಿ 1983-84ರಲ್ಲಿ, ಕಾರ್ಖಾನೆಯ ಶೇ 60ರಷ್ಟು ಪಾಲನ್ನು ಭಾರತೀಯ ಉಕ್ಕು ಪ್ರಾಧಿಕಾರ (ಸೇಲ್)ಗೆ ನೀಡಲಾಗುತ್ತದೆ. ಆಗ, ರಾಜ್ಯದ ಮುಖ್ಯಮಂತ್ರಿಯಾಗಿದ್ದವರು ಜನತಾ ಪಕ್ಷದ ರಾಮಕೃಷ್ಣ ಹೆಗ್ಡೆ. ಕಾಂಗ್ರೆಸ್‌ನ ರಾಜೀವ್‌ಗಾಂಧಿ ಪ್ರಧಾನಿಯಾಗಿದ್ದರು.

ನಷ್ಟದಲ್ಲಿರುವ ಕಂಪನಿ ನಿಭಾಯಿಸಲು ರಾಜ್ಯಸರ್ಕಾರಕ್ಕೆ ಹೊರೆಯಾಗುತ್ತಿದೆ ಎಂಬ ಕಾರಣ ನೀಡಿ ಮತ್ತು ₹650 ಕೋಟಿ ಬಂಡವಾಳ ತೊಡಗಿಸುವ ಸೇಲ್‌ನ ಭರವಸೆಯ ಆಧಾರದ ಮೇಲೆ, ಆಗಿನ ಮುಖ್ಯಮಂತ್ರಿ ಎಚ್.ಡಿ. ದೇವೇಗೌಡರು ಉಳಿದ ಶೇ 40ರಷ್ಟು ಪಾಲನ್ನೂ ಸೇಲ್‌ಗೆ ನೀಡುತ್ತಾರೆ.

ಇನ್ನು, 'ಆಡಳಿತ' ಮಾಡುವುದಷ್ಟೇ ಸರ್ಕಾರದ ಕೆಲಸ, 'ಬಿಸಿನೆಸ್' ಮಾಡುವುದಲ್ಲ ಎಂಬ ಕಲ್ಪನೆಯಡಿ, ಸಾರ್ವಜನಿಕ ಆಸ್ತಿ ನಿರ್ವಹಣೆ ಮತ್ತು ಬಂಡವಾಳ ಹಿಂತೆಗೆತ ಇಲಾಖೆ (ದೀಪಂ) ರೂಪಿಸಿದ ಪ್ರಧಾನಿ ಮನಮೋಹನ್‌ಸಿಂಗ್ ನೇತೃತ್ವದ ಯುಪಿಎ ಸರ್ಕಾರ, ನಷ್ಟದಲ್ಲಿರುವ ಸರ್ಕಾರಿ ಸಂಸ್ಥೆಗಳನ್ನು 'ಡಿಸ್‌ಇನ್ವೆಸ್ಟ್‌ಮೆಂಟ್' ಪಟ್ಟಿಗೆ ತಂದಿತು. ಆ ಪಟ್ಟಿಯಲ್ಲಿ ವಿಐಎಸ್‌ಎಲ್ ಕೂಡ ಇತ್ತು.

ಮುಂದೆ, ಜಾಗತಿಕ ಟೆಂಡರ್‌ನಲ್ಲಿ ಕೂಡ ಯಾರೂ ವಿಎಐಎಸ್‌ನಲ್ಲಿ ಬಂಡವಾಳ ಹೂಡಲು ಮುಂದೆ ಬರಲಿಲ್ಲ. ಪರಿಣಾಮ, ಇದನ್ನು ಮುಚ್ಚುವ ನಿರ್ಧಾರ ಪ್ರಕಟಿಸಿದೆ ಸೇಲ್.

***

ವಿಐಎಸ್‌ಎಲ್‌ನಲ್ಲಿ ಸದ್ಯ, 1,500 ಗುತ್ತಿಗೆ ಕಾರ್ಮಿಕರಿದ್ದರೆ, ಕಾಯಂ ನೌಕರರ ಸಂಖ್ಯೆ 200 ಮಾತ್ರ. ಕಾರ್ಮಿಕರಿಗೆ ಕೊಟ್ಟಿದ್ದ ಮನೆಗಳು ಶಿಥಿಲವಾಗಿವೆ. ಶಾಲಾ-ಕಾಲೇಜುಗಳು ಮುಚ್ಚುತ್ತಿವೆ. ವಿಐಎಸ್‌ಎಲ್ ಆಸ್ಪತ್ರೆಯಲ್ಲಿ ಹೆಚ್ಚು ವೈದ್ಯರಿಲ್ಲ, ಚಿಕಿತ್ಸೆ ಸಿಗುವುದಿಲ್ಲ, ಔಷಧಿಯೂ ಇಲ್ಲ.

ಕೆಲಸ ಹೋದರೆ ಮಕ್ಕಳ ಗತಿಯೇನು, ವಯಸ್ಸಾದ ಹೆತ್ತವರನ್ನ ನೋಡಿಕೊಳ್ಳುವುದೆಂತು ಎಂಬ ಚಿಂತೆ ಗುತ್ತಿಗೆ ಕಾರ್ಮಿಕರದ್ದಾದರೆ, ಶಿಥಿಲ ಮನೆಯನ್ನೂ ಕಿತ್ತುಕೊಂಡರೆ ಗತಿಯೇನು ಎಂಬ ಆತಂಕ ನಿವೃತ್ತ ನೌಕರರದ್ದು. ಕೆಲಸ ಇದ್ದರೆ ಜೀವನ ಸಲೀಸು ಎಂಬ ಕಾರಣಕ್ಕೆ, ಸ್ವಯಂ ನಿವೃತ್ತಿಯನ್ನೂ ಪಡೆಯದೇ (ವಿಆರ್‌ಎಸ್) ಮುಂದುವರಿದು, ಈಗ ಕೆಲಸವನ್ನೇ ಕಳೆದುಕೊಂಡಿರುವ ಎಂಪಿಎಂ ನೌಕರರ ಬದುಕು ಇನ್ನೂ ನರಕ.

***

ಶಿವಮೊಗ್ಗ ಜಿಲ್ಲೆಯಲ್ಲೀಗ ಈ ಕಾರ್ಖಾನೆಗಳೇ ಪ್ರಮುಖ ಚುನಾವಣಾ ವಿಷಯ. ಶೇ 100ರಷ್ಟೂ ಪಾಲನ್ನು ಸೇಲ್‌ಗೆ ವಹಿಸಿದ ಕಾಂಗ್ರೆಸ್-ಜನತಾದಳ ಸರ್ಕಾರಗಳ ನಿರ್ಧಾರವೇ ಕಾರ್ಖಾನೆಯ ಈ ಸ್ಥಿತಿಗೆ ಕಾರಣ ಎಂದು ಬಿಜೆಪಿ ಹೇಳಿದರೆ, 2013ರಲ್ಲಿಯೇ ರಾಜ್ಯ ಕಾಂಗ್ರೆಸ್ ಸರ್ಕಾರ, ಬಳ್ಳಾರಿಯ ರಮಣದುರ್ಗದಲ್ಲಿ 150 ಎಕರೆ ಗಣಿಯನ್ನು ಕಾರ್ಖಾನೆಗೆ ನೀಡಿದೆ. ಆದರೆ, ಕೇಂದ್ರದಿಂದ ಅಗತ್ಯ ಬಂಡವಾಳ ತರದಿರುವುದು ಬಿಜೆಪಿ ನಾಯಕರ ಅಸಮರ್ಥತೆಗೆ ಸಾಕ್ಷಿ ಎನ್ನುವುದು ಕಾಂಗ್ರೆಸ್ ಆರೋಪ. ಮುಖ್ಯಮಂತ್ರಿಯಾಗಿದ್ದಾಗ ಸೇಲ್ ವಶಕ್ಕೆ ಕಾರ್ಖಾನೆ ನೀಡಿದ ದೇವೇಗೌಡರು, ನಂತರ ಪ್ರಧಾನಿಯಾದ 11 ತಿಂಗಳ ಅವಧಿಯಲ್ಲಿ ಸೇಲ್‌ನಿಂದ ₹650 ಕೋಟಿ ಬಂಡವಾಳವನ್ನು ತರುವ ಪ್ರಯತ್ನವನ್ನೇಕೆ ಮಾಡಲಿಲ್ಲ ಎಂದು ಪ್ರಶ್ನಿಸುತ್ತದೆ ಬಿಜೆಪಿ.

ದೇವೇಗೌಡರು ಕಾರ್ಖಾನೆಯನ್ನು ಸೇಲ್‌ಗೆ ವಹಿಸಿದ್ದರಿಂದಲೇ ಅದು ಇನ್ನೂ ಉಸಿರಾಡುತ್ತಿದೆ. ಇಲ್ಲದಿದ್ದರೆ ಎಂಪಿಎಂಗಿಂತಲೂ ಮುಂಚೆಯೇ ವಿಐಎಸ್‌ಎಲ್ ಮುಚ್ಚುತ್ತಿತ್ತು ಎಂಬ ಅಭಿಪ್ರಾಯ ಕಾರ್ಖಾನೆಯ ಕೆಲವು ನಿವೃತ್ತ ನೌಕರರದ್ದು.

ಆದರೆ, ಅತ್ತ ಇದೇ ಡಿಸ್‌ಇನ್ವೆಸ್ಟ್‌ಮೆಂಟ್ ಪಟ್ಟಿಯಲ್ಲಿದ್ದ ರೂರ್ಕೆರಾ, ದುರ್ಗಾಪುರ, ಬೊಕಾರೊ, ಸೇಲಂನಲ್ಲಿನ ಇಂತಹ ಕಾರ್ಖಾನೆಗಳು ₹1,500 ಕೋಟಿಯಿಂದ ₹2,000 ಕೋಟಿಯವರೆಗೆ ಬಂಡವಾಳ ಪಡೆಯುತ್ತವೆ. ಆದರೆ, ವಿಐಎಸ್‌ಎಲ್‌ಗೆ ಕಳೆದ 20 ವರ್ಷಗಳಲ್ಲಿ ಸೇಲ್ ಕೊಟ್ಟಿರುವುದು ₹157 ಕೋಟಿ ಮಾತ್ರ.

ಪ್ರತಿವರ್ಷ ಸೇಲ್ ಬಜೆಟ್ ಮಂಡಿಸುವಾಗ, ವಿಐಎಸ್‌ಎಲ್‌ಗಾದ ಅನ್ಯಾಯವನ್ನು ನಮ್ಮ ಜನಪ್ರತಿನಿಧಿಗಳು ಗಟ್ಟಿಯಾಗಿ ಪ್ರಶ್ನಿಸದಿರುವುದು, ಕಂಪನಿಯ ಮಹತ್ವವನ್ನು ಕೇಂದ್ರ ಸರ್ಕಾರಕ್ಕೆ ಸ್ಪಷ್ಟವಾಗಿ ಮನವರಿಕೆ ಮಾಡದಿರುವುದು, ಬಂಡವಾಳ ಹೂಡಲಾಗದಿದ್ದರೆ ನಮ್ಮ ಕಂಪನಿಯನ್ನು ನಮಗೆ ವಾಪಸ್ ಆದರೂ ಕೊಡಿ ಎಂದು ಕೇಳದಿರುವುದು ನಮ್ಮ ಈ ಪರಿಸ್ಥಿತಿಗೆ ಕಾರಣ ಎಂದು ದೂರುವ ಸ್ಥಳೀಯರು, '30 ವರ್ಷಗಳಲ್ಲಿ ಬಿಜೆಪಿ,ಕಾಂಗ್ರೆಸ್, ಜೆಡಿಎಸ್ ಮೂರೂ ಪಕ್ಷಗಳೂ ಶಿವಮೊಗ್ಗ ಜಿಲ್ಲೆಯನ್ನು ಪ್ರತಿನಿಧಿಸಿವೆ. ಈ ಚುನಾವಣೆಯನ್ನು ಬಹಿಷ್ಕರಿಸುವ ಮೂಲಕ ಮೂರೂ ಪಕ್ಷಗಳಿಗೆ ಬುದ್ಧಿ ಕಲಿಸುತ್ತೇವೆ' ಎಂದು 'ಬಡವರ ಸಿಟ್ಟನ್ನು' ಹೊರ ಹಾಕಿದರು.

'ವಿಶ್ವೇಶ್ವರಯ್ಯನವರು ಮಹಾರಾಜರಿಗೆ ಹೇಳಿದಂತೆ, ಇದು ನಮ್ಮ ಆಸ್ತಿ, ನಾವೇ ಮುನ್ನಡೆಸುತ್ತೇವೆ ಕೊಡಿ ಎಂದು ಪ್ರಧಾನಿಯವರ ಮುಂದೆ ಪಟ್ಟು ಹಿಡಿದು ಕೇಳುವ, ಇದೊಂದು 'ಪಾರಂಪರಿಕ ಸ್ಥಳ' ಎಂದು ಪರಿಗಣಿಸಿಯಾದರೂ ಕಾರ್ಖಾನೆಯನ್ನು ಉಳಿಸಿ ಎಂದು ಒತ್ತಾಯಿಸುವ ಸಮರ್ಥರು ನಮಗೆ ಬೇಕಿದೆ. ಬಿಯಾಂಡ್ ಬೆಂಗಳೂರು, ವಿಷನ್ ಕರ್ನಾಟಕ ಎಂಬ ಯೋಜನೆಗಳನ್ನು ಘೋಷಿಸುತ್ತಿರುವವರಿಗೆ ಭದ್ರಾವತಿಯ ಗತವೈಭವವನ್ನು ಕಣ್ಣ ಮುಂದೆ ತರಬೇಕಿದೆ' ಎಂದ ಹಿರಿಯರೊಬ್ಬರು, 'ವಿಶ್ವೇಶ್ವರಯ್ಯನವರಂಥ ರಾಜನೀತಿಜ್ಞರನ್ನು ಈಗಿನ ರಾಜಕಾರಣಿಗಳಲ್ಲಿ ಕಾಣಲಾದೀತೆ' ಎಂದೂ ಪ್ರಶ್ನಿಸಿದರು.

ಈ ಮಾತು ಸಾಗಿದ್ದಾಗಲೇ ಹಿರಿಯರೊಬ್ಬರು, 'ಭದ್ರಾವತಿ ಮೇಲೆ ಯಾರ ಕಣ್ಣು ಬಿತ್ತೋ ಏನೋ' ಎಂದರು. ಅದಕ್ಕೆ ಪ್ರತಿಕ್ರಿಯಿಸಿದ ಮತ್ತೊಬ್ಬ ನಿವೃತ್ತ ನೌಕರ, 'ಭದ್ರಾವತಿಯ ಮೇಲಲ್ಲ. ಕಾರ್ಖಾನೆಯ ಜಾಗ, ನೀರು ಮತ್ತು ಎಲ್ಲದಕ್ಕಿಂತ ಹೆಚ್ಚಾಗಿ ನಿರಂತರವಾಗಿ ಸಿಗುವ ವಿದ್ಯುತ್ ಮೇಲೆ ಕಣ್ಣು ಬಿದ್ದಿದೆ. ಮುಂದೆ ಯಾರ ಒಡೆತನದ ಕಾರ್ಖಾನೆಯನ್ನು ಈ ವಿದ್ಯುತ್ ಬೆಳಗುತ್ತದೋ, ಏನೋ' ಎಂದು ನಕ್ಕರು. ಬೇಸರ ತುಂಬಿದ ಹುಸಿ ನಗೆಯೊಂದಿಗೆ ನಾನೂ ಹಿಂದಿರುಗಿದೆ.

ಕಾರ್ಖಾನೆಯ ಒಳಗೆ ದ್ರವ ರೂಪಿ ಕಬ್ಬಿಣ ಸುರಿಯುತ್ತಿರುವ ಪರಿ

ಮುನ್ನೋಟ 19-02-2023 ರಿಂದ 25-02-2023

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1
ರಾಜಕಾರಣಿಗಳು ಯಾವುದೇ ಮುಂದಾಲೋಚನೆ ಇಲ್ಲದೆ ಭರವಸೆಗಳನ್ನು ನೀಡಬೇಡಿ, ಇಲ್ಲವಾದಲ್ಲಿ ಸಂಕಷ್ಟಕ್ಕೆ ಸಿಲುಕುವಿರಿ. ಹೊಸದೊಂದು ವಿದ್ಯೆಯನ್ನು ಕಲಿಯುವ ಉತ್ಸಾಹ ನಿಮ್ಮಲ್ಲಿ ಇರುತ್ತದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ. ಕೃಷಿಕರಿಗೆ ಕೃಷಿ ಕ್ಷೇತ್ರದಲ್ಲಿ ಚೇತರಿಕೆ ಕಂಡು ತುಸು ನೆಮ್ಮದಿ ಮೂಡುತ್ತದೆ. ಆಸ್ತಿ ವಿವಾದಗಳನ್ನು ಕುಳಿತು ಮಾತನಾಡಿ ಬಗೆಹರಿಸಿಕೊಳ್ಳುವುದು ಬಹಳ ಉತ್ತಮ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2
ವಿಮಾ ಸಲಹೆಗಾರರಿಗೆ ಹೆಚ್ಚು ಯಶಸ್ಸು ಕಂಡುಬರುವ ಸಾಧ್ಯತೆ ಇದೆ. ಈ ಕಾರ್ಯಕ್ಕಾಗಿ ದೂರ ಪ್ರಯಾಣ ಮಾಡಿದರೂ ನಷ್ಟವೇನಿಲ್ಲ. ಈ ಹಿಂದೆ ಬಂಗಾರದಲ್ಲಿ ಹೂಡಿಕೆ ಮಾಡಿದ್ದವರಿಗೆ ಹೆಚ್ಚಿನ ಲಾಭ ದೊರಕುತ್ತದೆ. ಹೂವಿನ ವ್ಯಾಪಾರಿಗಳಿಗೆ ಉತ್ತಮ ವ್ಯವಹಾರ ನಡೆದು ಹೆಚ್ಚು ಲಾಭ ಬರುತ್ತದೆ. ಉದ್ದಿಮೆದಾರರು ಹೊಸ ರೂಪದ ವಸ್ತುವನ್ನು ತಯಾರಿಸಲು ಆರಂಭಿಸಬಹುದು.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3
ಮೇಲಧಿಕಾರಿಗಳ ಅನುಗ್ರಹವಿದ್ದು ವೃತ್ತಿಯಲ್ಲಿ ನಿಮ್ಮ ಕೆಲಸ ಕಾರ್ಯಗಳು ಸಲೀಸಾಗಿ ಆಗುವುದು. ವ್ಯಾಪಾರಿಗಳಿಗೆ ತೃಪ್ತಿಕರವಾದ ವ್ಯಾಪಾರ ಆಗುವ ಸಂದರ್ಭವಿದೆ. ಮರದ ಕೆತ್ತನೆಯ ಕುಶಲಕರ್ಮಿಗಳಿಗೆ ಬೇಡಿಕೆ ಹೆಚ್ಚಾಗಿ ಆದಾಯವು ಹೆಚ್ಚುತ್ತದೆ. ಸ್ವಂತ ಉದ್ಯೋಗವನ್ನು ನಡೆಸುತ್ತಿರುವವರು ತಮ್ಮ ಕೆಲವೊಂದು ಜವಾಬ್ದಾರಿಗಳನ್ನು ಹಂಚುವುದು ಬಹಳ ಒಳ್ಳೆಯದು.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ
ಹಾಡುಗಾರರಿಗೆ ತಮ್ಮ ಸಾಧನೆಯಿಂದ ಯಶಸ್ಸನ್ನು ಪಡೆಯುವ ಯೋಗವಿದೆ. ಕೆಲವೊಂದು ಗುಂಪು ಚಟುವಟಿಕೆಗಳಿಗೆ ನಿಮಗೆ ಮುಂದಾಳತ್ವ ದೊರೆಯುತ್ತದೆ. ಕಾನೂನು ಪಂಡಿತರಿಗೆ ಹೆಚ್ಚಿನ ಬೇಡಿಕೆ ಇದ್ದು ಆದಾಯವು ಹೆಚ್ಚುತ್ತದೆ. ತಾಂತ್ರಿಕ ಕ್ಷೇತ್ರದಲ್ಲಿನ ನಿಮ್ಮ ತಿಳಿವಳಿಕೆಯ ಸಲಹೆಗೆ ಹೆಚ್ಚು ಮನ್ನಣೆಯು ದೊರೆಯುತ್ತದೆ. ವಿದ್ಯಾರ್ಥಿಗಳಿಗೆ ಅಧ್ಯಯನದಲ್ಲಿ ಹೆಚ್ಚಿನ ಯಶಸ್ಸು ಇರುತ್ತದೆ.

ಸಿಂಹ — ಮಖಾ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1
ನಿಮ್ಮ ಭಾವನೆಗಳನ್ನು ಹಂಚಿಕೊಂಡು ಸಮಸ್ಯೆಗಳಿಗೆ ಪರಿಹಾರ ಒದಗಿಸಬಲ್ಲ ವ್ಯಕ್ತಿಗಳ ಸ್ನೇಹ ಮತ್ತು ಪರಿಚಯ ಒದಗಲಿದೆ. ಸಿದ್ಧಪಡಿಸಿದ ಆಹಾರವನ್ನು ಮಾರಾಟ ಮಾಡುವವರಿಗೆ ಹೆಚ್ಚಿನ ವ್ಯಾಪಾರ ಒದಗಿ ಬರುತ್ತದೆ. ಮಾತುಗಳನ್ನು ಹೆಚ್ಚು ಎಚ್ಚರದಿಂದ ಆಡಿರಿ, ಇಲ್ಲವಾದಲ್ಲಿ ಮುಜುಗರಕ್ಕೆ ಒಳಗಾಗುವ ಸಂದರ್ಭವಿದೆ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ.

ಕನ್ಯಾ — ಉತ್ತರಫಲ್ಗುಣಿ 2,3,4 ಹಸ್ತ, ಚಿತ್ತಾ 1,2
ಪೋಷಕರಿಂದ ಮಕ್ಕಳ ಆಸೆಗೆ ಹೆಚ್ಚಿನ ಪ್ರೋತ್ಸಾಹ ದೊರೆಯುತ್ತದೆ. ಮನೆ ನಿರ್ಮಾಣ ಮಾಡುತ್ತಿದ್ದವರಿಗೆ ಇದ್ದ ಅಡೆತಡೆಗಳು ಸ್ವಲ್ಪಮಟ್ಟಿಗೆ ದೂರವಾಗುತ್ತವೆ. ಲೇಖನ ಮಾಲೆಯನ್ನು ಸಿದ್ಧಪಡಿಸುವವರಿಗೆ ಹೆಚ್ಚಿನ ಕೆಲಸ ದೊರೆಯುತ್ತದೆ. ಬಂಧುಗಳ ಗಲಾಟೆಗಳಲ್ಲಿ ಮಧ್ಯಸ್ಥಿಕೆ ವಹಿಸುವುದು ನಿಮಗೆ ದುಬಾರಿಯಾಗಬಹುದು. ವೃತ್ತಿಯಲ್ಲಿ ಸ್ವಲ್ಪ ಪ್ರಗತಿ ಇರುತ್ತದೆ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖಾ 1,2,3
ಸಾರ್ವಜನಿಕ ಜೀವನದಲ್ಲಿ ಇರುವವರು ಒರಟು ಮಾತು ಆಡುವುದನ್ನು ಬಿಡುವುದು ಒಳ್ಳೆಯದು. ಸ್ವಂತ ಉದ್ದಿಮೆ ನಡೆಸುವವರ ಹಣಕಾಸಿನ ಸ್ಥಿತಿ ಸ್ವಲ್ಪಮಟ್ಟಿಗೆ ಸುಧಾರಿಸುತ್ತದೆ. ಕೃಷಿ ವ್ಯಾಪಾರಿಗಳು ದಲ್ಲಾಳಿಗಳಿಂದ ಮೋಸ ಹೋಗುವ ಸಾಧ್ಯತೆ ಇದೆ, ಹೆಚ್ಚು ಎಚ್ಚರವಹಿಸಿರಿ. ಖರ್ಚು ಕಡಿಮೆ ಮಾಡುವುದನ್ನು ಅಭ್ಯಾಸ ಮಾಡಿಕೊಳ್ಳುವಿರಿ. ಹಣದ ಒಳಹರಿವು ಮಂದಗತಿಯಲ್ಲಿರುತ್ತದೆ.

ವೃಶ್ಚಿಕ — ವಿಶಾಖಾ 4 ಅನೂರಾಧ, ಜ್ಯೇಷ್ಠ
ವೃತ್ತಿಯಲ್ಲಿ ಸಮಸ್ಯೆಗಳು ಎದುರಾದರೂ ಅದನ್ನು ಧೈರ್ಯದಿಂದ ಎದುರಿಸಿ ಗೆಲ್ಲುವಿರಿ. ಸಂಶೋಧಕರಿಗೆ ಸಂಶೋಧನೆಯಲ್ಲಿ ಉತ್ತಮ ಫಲಿತಾಂಶ ದೊರೆಯುವ ಸಾಧ್ಯತೆಗಳಿವೆ. ಕಾರ್ಮಿಕರು ಅವರ ಅಧಿಕಾರಿಗಳ ಜೊತೆ ಮುಕ್ತ ಚರ್ಚೆ ಮಾಡಿದಲ್ಲಿ ಅವರ ಸಮಸ್ಯೆಗಳು ಪರಿಹಾರವಾಗುವುದು.

ಧನುಸ್ಸು — ಮೂಲಾ, ಪೂರ್ವಾಷಾಢ, ಉತ್ತರಾಷಾಢ 1
ಕಚೇರಿ ಕೆಲಸದ ನಿಮಿತ್ತ ವಿದೇಶಕ್ಕೆ ಹೋಗಿ ಬರುವ ಸಾಧ್ಯತೆಗಳಿವೆ. ಉದ್ದಿಮೆದಾರರು ತಮ್ಮ ಯೋಜನೆಗಳ ಬಗ್ಗೆ ಹಿರಿಯ ತಂತ್ರಜ್ಞರೊಡನೆ ಸಮಾಲೋಚನೆ ಮಾಡುವುದು ಉತ್ತಮ. ವಿದ್ಯಾರ್ಥಿಗಳಿಗೆ ನಿರೀಕ್ಷಿತ ಯಶಸ್ಸು ಇರುವುದಿಲ್ಲ. ಪತ್ರಿಕೋದ್ಯಮದವರಿಗೆ ಬಿಡುವಿಲ್ಲದ ಕೆಲಸವಿರುತ್ತದೆ. ಆದಾಯವು ತೃಪ್ತಿಕರವಾಗಿರುತ್ತದೆ. ಬಂಧುಗಳೊಡನೆ ವಿಶ್ವಾಸವನ್ನು ವೃದ್ಧಿಸಿಕೊಳ್ಳುವಿರಿ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2
ಉದ್ದಿಮೆದಾರರಿಗೆ ಅವರ ಉದ್ದಿಮೆಯನ್ನು ಸುಧಾರಿಸಲು ಮತ್ತು ಸರಿದಾರಿಗೆ ತರಲು ಸಾಕಷ್ಟು ಅವಕಾಶಗಳು ಒದಗುತ್ತವೆ. ತಾಂತ್ರಿಕ ತಜ್ಞರಿಗೆ ಹೊಸ ಹೊಸ ಅವಕಾಶಗಳು ದೊರೆಯುತ್ತವೆ. ಮಾಧ್ಯಮದಲ್ಲಿ ಕೆಲಸ ಮಾಡುವವರು ಹೆಚ್ಚು ಎಚ್ಚರದಿಂದ ಕೆಲಸ ಮಾಡಬೇಕು. ದಂತ ವೈದ್ಯರಿಗೆ ಹೆಚ್ಚು ಅನುಕೂಲವಿರುತ್ತದೆ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3
ಸೇವಕ ವರ್ಗದವರಿಗೆ ಆದಾಯ ಹೆಚ್ಚಿದಂತೆ ಕೆಲಸವೂ ಹೆಚ್ಚಾಗುತ್ತದೆ. ಹಿರಿಯರು ತೆಗೆದುಕೊಳ್ಳುವ ಪರಿಣಾಮಕಾರಿ ನಿರ್ಧಾರಗಳು ಅವರ ಕುಟುಂಬವನ್ನು ಮೇಲೆತ್ತುತ್ತದೆ. ಚಾಲಕ ವರ್ಗದವರಿಗೆ ಹೆಚ್ಚಿನ ಸಂಪಾದನೆಯಾಗುವ ಯೋಗವಿದೆ. ವಾಹನ ತರಬೇತಿ ಶಾಲೆ ನಡೆಸುತ್ತಿರುವವರಿಗೆ ಆದಾಯ ಹೆಚ್ಚುತ್ತದೆ. ಹಣದ ಒಳಹರಿವು ನಿಮ್ಮ ನಿರೀಕ್ಷೆಯನ್ನು ತಲುಪುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ
ಎಂಜಿನಿಯರಿಂಗ್ ವಿದ್ಯಾರ್ಥಿಗಳು ತಮ್ಮ ಪರೀಕ್ಷೆಗಾಗಿ ಹೆಚ್ಚಿನ ತಯಾರಿ ಮಾಡಿಕೊಳ್ಳಬೇಕು. ಹಾಲಿನ ಉತ್ಪನ್ನಗಳನ್ನು ಮಾರಾಟ ಮಾಡುವವರಿಗೆ ಲಾಭವಿದೆ. ಸಿಹಿತಿಂಡಿ ತಯಾರಿಸಿ ಮಾರುವವರಿಗೆ ಮಾರುಕಟ್ಟೆ ವಿಸ್ತರಿಸುತ್ತದೆ. ಹಿರಿಯರ ಆರೋಗ್ಯ ವ್ಯತ್ಯಾಸದಿಂದಾಗಿ ಆಸ್ಪತ್ರೆಯ ಅಲೆದಾಟ ಹೆಚ್ಚಾಗುವ ಸಾಧ್ಯತೆಗಳಿವೆ. ಹಣದ ಒಳಹರಿವು ಸಾಮಾನ್ಯ ಗತಿಯಲ್ಲಿರುತ್ತದೆ.

ಪದಬಂಧ 2777



ಮೇಲಿನಿಂದ ಕೆಳಕ್ಕೆ
1. ಒಳ್ಳೆಯ ಮನಸ್ಸಿನ ಹುಡುಗಿಯನ್ನು ಹೀಗೆ ಕರೆಯಿರಿ 3
2. ಅರುಣಾಚಲದ ಮೌನ ಮಹರ್ಷಿ 3
3. ದೇವತೆಗಳ ಪಾನವನ್ನು ಕುಡಿದ ಆಲಸಿ 3
4. ತಲೆಕೆಳಕಾದ ಹಮ್ಮಿನ ಪ್ರಿಯಕರ 3
7. ಬಾಯಿಗೆ ರುಚಿಕೊಡುವ ಆರು ದ್ರವ್ಯಗಳು 3
9. ಪುರಾತನ ಕಾಲದಿಂದ ಹೇಳಿಕೊಂಡು ಬಂದ ಕಥೆ 3
10. ನೇರ ಉತ್ತರ ನೀಡದೆ ಎಗರಿಸುವ ಕಲೆ 3
11. ರೂಪಿಸುವ ಮಹಾಶಿಲ್ಪಿ 3
12. ದೇವಂಗೆ ಸಲ್ಲಿಸುವ ಅಂತರಂಗದ ಬಿನ್ನಪ 3
13. ಮಹಾಶಿವನ ಮಹಾಸತಿ 3
16. ಅನ್ನವನ್ನು ಉಣಬಡಿಸುವ ಕೈಂಕರ್ಯ 3
18. ವರವನ್ನು ಕೊಡುವ ವೆಂಕಟರಮಣ 3
19. ಮೂರು ಮೊಳದ ಅಳತೆಯ ಅಂದಾಜು 3
20. ಶೃಂಗಾರವನ್ನು ಆಸ್ವಾದಿಸುವ ಅನುಭವಿ 3
21. ಸಂಸ್ಕೃತದ ನಾಯಕ ನಟಿ 3
22. ನೀರಿನ ಬಿಂದಿಗೆಯಷ್ಟು ಮುಖ ದಪ್ಪಗಾಗುವ ಗಾತ್ರ 3

ಎಡದಿಂದ ಬಲಕ್ಕೆ
1. ಸಂತೋಷ ಸಮೃದ್ಧಿಯಿಂದ ಕೂಡಿದ ಜೀವನವೆಂಬ ಸಮುದ್ರ 5
3. ಚಂದ್ರನಂತೆ ತಂಪಾಗಿರುವ ಶಿವ ಸ್ಫುರದ್ರೂಪಿ 5
5. ಅಷ್ಟಸಿದ್ಧಿಗಳಲ್ಲಿ ಪವಾಡ ಸದೃಶವಾದದ್ದು 3
6. ಸೂಕ್ಷ್ಮವಾದ ಕಣ್ಣುಳ್ಳ ಸರ್ಪವನ್ನು ಕೊರಳಿಗೆ ಧರಿಸಿದವ 5
8. ಶತ್ರುವಿನ ಸಂಚು 5
10. ಕ್ಷೀರ ಮತ್ತು ಹೆಪ್ಪುಗಟ್ಟಿದ ಕ್ಷೀರ 5
12. ಉಸಿರನ್ನು ಜೀವವಾಗಿರಿಸಿಕೊಂಡ ದೈವ ರೂಪ 5
14. ಪಾರ್ವತಿ ಪರಮೇಶ್ವರರು ತಾಯ್ತಂದೆ ಎಂಬ ಕಾಳಿದಾಸನ ಮಾತು ಮತ್ತು ವಿವರ 3
15. ಕೆರೆ ಹಳ್ಳದ ರಾಡಿ ತುಂಬಿದ ಹಾದಿ 5
17. ಯೌವ್ವನಕ್ಕೆ ಕಾಲಿಟ್ಟಿರುವ ಆಧುನಿಕ ಹೆಣ್ಣು 5
19. ಮನಸ್ಸನ್ನು ಅಪಹರಿಸುವ ಸುಂದರ ನೋಟ 5
21. ಅಲೆ ಅಲೆಯಾಗಿ ಹರಿದ ಸಂಗೀತ ಸ್ವರ 5
23. ಶಿಸ್ತಿಗೆ ಹೆಸರಾದ ಯೋಧ 3
24. ಮಹಾ ಶಿವನಿಗೆ ಹಾಲು ಮೊಸರು ಜೇನಿನ ಮಜ್ಜನ 5
25. ಯಾರ ನೋಟಕ್ಕೂ ಬೀಳದೆ ಅರಣ್ಯದಲ್ಲಿ ಅರಳಿದ ಸುವಾಸಿತ ಹೂವು 5

ಪದಬಂಧ ಉತ್ತರ -2776

ಮೇಲಿಂದ ಕೆಳಕ್ಕೆ

1. ವಿರಿಂಚಿ 2.ವರಾಹ 3.ಗಜಾನನ 4.ರಜಾದಿನ 6.ರುದ್ರದೇವ 8.ತವರುಮನೆ 10.ಜನಿತ 12.ಲಯಕಾರಕ 14.ರವಿಜ 16.ಶತಮಾನ 18.ರಾಶಿಬಲ 19.ಮಾಲತೇಶ 21.ಕರ್ತವ್ಯ 23.ಸುದೈವ

ಎಡದಿಂದ ಬಲಕ್ಕೆ

1. ವಿಶ್ವಮಾನವ 3.ಗದಾಧರ 5.ಚಿಗುರು 7.ಹಗೆತನ 9.ವನಭೋಜನ 11.ದೇಗುಲ 13.ಕೌರವ 15.ಯಲಮ 16.ಶತಕ 17.ನೆಗೆತ 18.ರಾಜಕುಮಾರ 20.ಲಕಲಕ 22.ನಗಿಸು 24.ಲವಲೇಶ 25.ವ್ಯಕ್ತಿಪ್ರಭಾವ

ಸತ್ಯದ ನಿತ್ಯ ಅನ್ವೇಷಕ

ಹೊಸತನಗಳಿಂದ ಕೂಡಿದ ಜಿಡ್ಡು ಕೃಷ್ಣಮೂರ್ತಿಯವರ ಚಿಂತನೆಗಳು ಇಂದು ಹೆಚ್ಚು ಪ್ರಸ್ತುತ

ಮುರಲೀಧರ ಮಳಗಿ

ಇಪ್ಪತ್ತನೇ ಶತಮಾನದಲ್ಲಿ ಈ ವಿಶ್ವಕಂಡ ಶ್ರೇಷ್ಠ ದಾರ್ಶನಿಕರು ಹಾಗೂ ಚಿಂತಕರಲ್ಲಿ ಜಿಡ್ಡು ಕೃಷ್ಣಮೂರ್ತಿ ಅವರು ಸದಾ ಮಿನುಗುವ ತಾರೆ. ತಮ್ಮ ವಿಶಿಷ್ಟ ರೀತಿಯ ಚಿಂತನಾಲಹರಿಯ ಮೂಲಕ ಸತ್ಯ ಅಥವಾ ನೈಜಜ್ಞಾನದ ಅನ್ವೇಷಕರಾಗಿದ್ದವರು ಅವರು. ಆಕಾಶದೆತ್ತರಕ್ಕೆ ಹಾರುವ ಪಕ್ಷಿಗಳು ಹೇಗೆ ತಮ್ಮ ಹಾರಾಟದ ಮಾರ್ಗವನ್ನು ಕಾಣದಂತೆ ಬಿಟ್ಟು ಹೋಗುವುವೋ ಹಾಗೆಯೇ ಸತ್ಯವನ್ನು ಹುಡುಕುವ ಮಾರ್ಗ ಕೂಡ ಅಗೋಚರ ಎಂದು ಹೇಳಿದ ದಾರ್ಶನಿಕರವರು.

ಜಿಡ್ಡು ನಾರಾಯಣಯ್ಯ ಹಾಗೂ ಸಂಜೀವಮ್ಮ ದಂಪತಿಗೆ ಜನಿಸಿದ (ಜನನ: 1895ರ ಮೇ 11) ಈ ಹುಡುಗ ಮುಂದೊಮ್ಮೆ ವಿಶ್ವಮಾನ್ಯತೆ ಪಡೆಯುವ ವ್ಯಕ್ತಿಯಾಗುತ್ತಾನೆಂದು ಯಾರಿಗೆ ಗೊತ್ತಿತ್ತು? ಕಿಶೋರಾವಸ್ಥೆಯಲ್ಲಿದ್ದ ಕೃಷ್ಣಮೂರ್ತಿ ಒಮ್ಮೆ ಥಿಯೋಸಾಫಿಕಲ್ ಸೊಸೈಟಿಯ ಆ್ಯನಿ ಬೆಸೆಂಟ್‌ರ ಕಣ್ಣಿಗೆ ಬಿದ್ದರು. ಈ ಬಾಲಕನ ಕಣ್ಣಿನಲ್ಲಿದ್ದ ಹೊಳಪು ಅವರನ್ನು ಥಟ್ಟನೆ ಸೆಳೆಯಿತು. ಕೃಷ್ಣಮೂರ್ತಿ ಅವರನ್ನು, ಅವರ ಸಹೋದರ ನಿತ್ಯಾನಂದನ ಸಹಿತ ಬೆಸೆಂಟ್ ದತ್ತು ಪಡೆದರು.

ಕೃಷ್ಣಮೂರ್ತಿ ಅವರನ್ನು ಆಗಿನ ಕಾಲದಲ್ಲಿ ಜಗತ್ತಿನಲ್ಲಿಯೇ ಅತ್ಯಂತ ಶ್ರೀಮಂತ ಸಂಸ್ಥೆಯಾಗಿದ್ದ 'ಆರ್ಡರ್ ಆಫ್ ದಿ ಸ್ಟಾರ್' ಸಂಸ್ಥೆಯ ಮುಖ್ಯಸ್ಥನನ್ನಾಗಿ ಮಾಡಲಾಗಿತ್ತು. ಅಂದು 1929ರ ಆಗಸ್ಟ್ 3ನೇ ದಿನಾಂಕ. ಹಾಲೆಂಡ್‌ನಲ್ಲಿ ಸಂಸ್ಥೆಯ ವಾರ್ಷಿಕ ಸಮ್ಮೇಳನ ನಡೆದಿತ್ತು. ಕೃಷ್ಣಮೂರ್ತಿ ಅವರನ್ನು ವಿಶ್ವಗುರುವೆಂದು ಘೋಷಿಸಲು ಕ್ಷಣಗಣನೆ ಆರಂಭವಾಗಿತ್ತು. ಬೆಸೆಂಟ್ ಹಾಗೂ ಲೀಡ್ ಬೀಟರ್ ಮುಂತಾದ ಥಿಯೋಸಾಫಿಕಲ್ ಸೊಸೈಟಿಯ ದಿಗ್ಗಜರು ಕೃಷ್ಣಮೂರ್ತಿಯವರ ಬರುವಿಗಾಗಿ ಮೂರು ಸಾವಿರ ಸದಸ್ಯರೊಂದಿಗೆ ಕಾತರದಿಂದ ಕಾಯುತ್ತಿದ್ದರು.

ಕೃಷ್ಣಮೂರ್ತಿ ಅವರೇನೋ ಬಂದರು. ಆದರೆ ಅವರು ವೇದಿಕೆಯ ಮೇಲೆ ಬಂದು ಹೇಳಿದ್ದೇನು? 'ಆರ್ಡರ್ ಆಫ್ ಸ್ಟಾರ್' ಸಂಸ್ಥೆಯ ಮುಖ್ಯಸ್ಥನಾಗಿ, ನಾನು ಈ ಕ್ಷಣವೇ ಸಂಸ್ಥೆಯನ್ನು ವಿಸರ್ಜಿಸುತ್ತಿದ್ದೇನೆ ಎಂದು ಘೋಷಿಸಿಬಿಟ್ಟರು. ಅಲ್ಲಿದ್ದವರಿಗೆ ಒಂದು ಕ್ಷಣ ಏನಾಗುತ್ತಿದೆ ಎಂಬುದು ಅರಿವಿಗೂ ಬಾರದಷ್ಟು ಆಕಸ್ಮಿಕವಾದ ಘಟನೆ ಅದಾಗಿತ್ತು. ವಿಶ್ವಗುರುವಾಗಿ ಮೆರೆಯುವ ಅವಕಾಶವನ್ನು ಕ್ಷಣಾರ್ಧದಲ್ಲಿ ತೊರೆಯುವುದು ಸುಮ್ಮನೆಯೇ? ಇನ್ನೇನು ಪಟ್ಟಾಭಿಷಕ್ತನಾಗಿ ಸಾಮ್ರಾಟನಾಗಬೇಕಿದ್ದ ಶ್ರೀರಾಮ ಎಲ್ಲವನ್ನೂ ಸಂತೋಷದಿಂದ ತೊರೆದು ಕಾಡಿಗೆ ಹೊರಟ ಘಟನೆಯನ್ನು ಅದು ನೆನಪಿಗೆ ತರುತ್ತಿತ್ತು. ಈ ಘಟನೆ, ಸತ್ಯದ ಅನ್ವೇಷಣೆಗಾಗಿ ರಾತ್ರೋರಾತ್ರಿ ಎಲ್ಲವನ್ನೂ ತೊರೆದು ಹೊರನಡೆದ ಗೌತಮ ಬುದ್ಧನ ಮಹಾಪರ್ಯಕ್ತತೆಗೆ ಸಮನಾದದ್ದೂ ಹೌದು. ಕೃಷ್ಣಮೂರ್ತಿ ಅವರು ಅಂದು ಹೇಳಿದ ಮಾತುಗಳಿವು:

'ಸತ್ಯದರ್ಶನ ಯಾವುದೇ ಸಂಘಟಿತ ಚಿಂತನೆ ಅಥವಾ ಅಂತಹ ಸಂಘಟಿತ ಸಂಸ್ಥೆಯ ಗುರು ಅನ್ನಿಸಿಕೊಂಡವರಿಂದ ನಮಗೆ ಆಗುವುದಲ್ಲ. ಪುರಾಣ ಕಾಲದಿಂದ ಹಿಡಿದು ಇಲ್ಲಿಯವರೆಗೂ ಅಂತಹ ಎಷ್ಟು ಸಂಘಟಿತ ಧರ್ಮಗಳು, ಧರ್ಮಗುರುಗಳು ಬಂದು ಹೋಗಿಲ್ಲ. ಕೇವಲ ಸಂಘಟಿತ ಸಮೂಹದ ಭಾಗವಾಗುವುದರಿಂದ ಅಥವಾ ಗುರುವನ್ನು ಅನುಸರಿಸುವುದರಿಂದ ನಮಗೆ ಸತ್ಯದರ್ಶನ ಆಗದು. ಒಬ್ಬ ಗುರು ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡಿರಬಹುದು. ಆದರೆ ಅವನಿಂದ ಅದು ನಮಗೆ ದೊರೆತೀತೆಂಬುದು ವಾಸ್ತವವಲ್ಲ.

'ಸಾವಿರಾರು ವರ್ಷಗಳಿಂದ ನಾವು ಧಾರ್ಮಿಕ ವ್ಯವಸ್ಥೆ ಹಾಗೂ ಧರ್ಮಗುರುಗಳ ಉಪದೇಶ ಕೇಳುತ್ತಲೇ ಲಕ್ಷಾಂತರ ಯುದ್ಧಗಳನ್ನು, ಯುದ್ಧಗಳಲ್ಲಿ ಸಾವುಗಳನ್ನು, ಸರ್ವನಾಶಗಳನ್ನು ನೋಡುತ್ತಲೇ ಇದ್ದೇವೆ. ಕೆಲವು ರಾಜ್ಯ ಹಾಗೂ ಅಧಿಕಾರಕ್ಕಾದರೆ, ಇನ್ನೂ ಹಲವು ನನ್ನ ಧರ್ಮ, ನಿನ್ನ ಧರ್ಮವೆಂಬ ಕಾರಣದಿಂದಾಗಿವೆಯಲ್ಲವೇ? ಹಾಗಾಗಿ ಸತ್ಯವೆಂಬುದು ನಮ್ಮ ಹೊರಗೆ ಇದ್ದು ಬೇರೆ ಯಾರಿಂದಲೋ ಅದು ನಮಗೆ ಸಾಕ್ಷಾತ್ಕರಿಸುತ್ತದೆ ಎಂಬುದರಲ್ಲಿ ನನಗೆ ನಂಬಿಕೆ ಇಲ್ಲ. ಅದು ನಮ್ಮೊಳಗೇ ಇದೆ. ಅದನ್ನು ನಾವೇ ಅನ್ವೇಷಿಸಬೇಕು.

'ಒಂದು ಬೃಹತ್ ಪರ್ವತದ ಮೇಲಿನ ತುತ್ತತುದಿ ಮುಟ್ಟಬೇಕೆಂದರೆ ಆ ಪರ್ವತ ನಾವಿದ್ದಲ್ಲಿ ತಾನೇ ಬರುವುದಿಲ್ಲ. ಅದರ ಸುತ್ತಲಿನ ಕಂದಕಗಳನ್ನು ದಾಟಿ ನಾವೇ ಅದರತ್ತ ಕ್ರಮಿಸಬೇಕು. ಸತ್ಯವೂ ಹಾಗೆ. ನಾವು ಅದರತ್ತ ಕ್ರಮಿಸಬೇಕು. ಅದು ತಾನೇ ತಾನಾಗಿ ಬಂದು ನಮಗೆ ಲಭ್ಯವಾಗದು. ಇದನ್ನು ನಾನು ನಿಮಗೆ ತೋರಿಸುತ್ತೇನೆ, ನೀವು ನನ್ನನ್ನು ಹಿಂಬಾಲಿಸಿ ಎಂದೂ ನಾನು ಹೇಳಲಾರೆ. ನನಗೆ ಯಾರದೇ ಅನುಸರಣೆ ಅಥವಾ ಗುರುವಿನ ಸ್ಥಾನ ಬೇಕಿಲ್ಲ. ನಾನು ಅದರ ಅನ್ವೇಷಕನಾಗಿ ನಿರಂತರ ಪಯಣಿಸುತ್ತೇನೆ. ಆದರೆ ಈ ಪಯಣದಲ್ಲಿ ಮಾರ್ಗವೆಂಬುದಿಲ್ಲ. ಏಕೆಂದರೆ, Truth is a pathless land and you cannot approach it by path whatsoever by any religion, by any sect' ಎಂದು ಅವರು ಹೇಳಿದ್ದರು. ಇದು ಅವರ ಒಟ್ಟಾರೆ ಚಿಂತನೆಯ ಸಾರವೂ ಹೌದು.

ಬಹಳಷ್ಟು ಜನ ಕೃಷ್ಣಮೂರ್ತಿ ಅವರ ವಿಚಾರದ ಜಾಡು ಹಿಡಿಯುವುದೇ ದುಸ್ತರ, ಅವರ ವಿಚಾರಲಹರಿ ಬಹಳ abstract ಆಗಿದೆ. ಅದನ್ನು ಒಂದು ಚೌಕಟ್ಟಿನಲ್ಲಿ ಹಿಡಿದಿಡುವುದೇ ಕಷ್ಟ. ಇನ್ನು ಮತ್ತೊಬ್ಬರಿಗೆ ಹೇಳುವುದಂತೂ ಮತ್ತಷ್ಟು ಬಿಕ್ಕಟ್ಟಿನದು ಎಂದು ಮುಂತಾಗಿ ಹೇಳುತ್ತಾರೆ. ಇದು ಸ್ವಲ್ಪಮಟ್ಟಿಗೆ ನಿಜವೂ ಇರಬಹುದು. ಇದಕ್ಕೆಲ್ಲ ಅವರ ಮಾತಿನಲ್ಲಿಯೇ ಪರಿಹಾರವಿದೆ. ಅವರು ಹೇಳುವಂತೆ ನಾವು ಯೋಚಿಸುವ ರೀತಿಯೇ ಅದಕ್ಕೆ ಕಾರಣ. ವಾಸ್ತವಿಕತೆ ಅಥವಾ what is ಎಂದು ನೋಡುವುದನ್ನು ಕಲಿಯಬೇಕಿದೆ. ಸತ್ಯದೆಡೆಗೆ ನಿರ್ಲಿಪ್ತತೆಯಿಂದ ಅವಲೋಕನ ನಡೆಸುವುದೇ ಮುಖ್ಯ. ಇದನ್ನೇ ಅವರು choice less observation ಅನ್ನುವುದು.

ಒಂದು ಗುಲಾಬಿ ಹೂವಿನ ಸೌಂದರ್ಯ ಆಸ್ವಾದಿಸಲು ಅದರ ಸಸ್ಯಶಾಸ್ತ್ರದ ಹಿನ್ನೆಲೆ ಬೇಕಿಲ್ಲ. ಹಾಗೆಯೇ ನಮ್ಮ ಸ್ನೇಹಿತರನ್ನು, ನೆರೆಹೊರೆಯವನ್ನು, ಬಂಧು ಬಾಂಧವರನ್ನು, ಮಕ್ಕಳನ್ನು ನೋಡಿದಾಗ ಅವರಲ್ಲಿನ ವಾಸ್ತವವನ್ನು ಕಾಣಲು ಸಾಧ್ಯ. ಅದರ ಬದಲಾಗಿ ಅವರ ಬಗೆಗಿನ ನಮ್ಮ ಮನದಾಳದಲ್ಲಿ ರೂಪಿತವಾದ ಇಮೇಜ್ ಮೂಲಕ ನೋಡಿದಾಗ ಅವರೊಂದಿಗಿನ ನಮ್ಮ ಸಂಬಂಧವಿರದೇ ಅವರ ಬಗೆಗಿನ ನಮ್ಮ ಇಮೇಜ್‌ನೊಂದಿಗೆ ಮಾತ್ರವಿರುವುದು. ಇದರರ್ಥ ನಮ್ಮ ಸಂಬಂಧಗಳು ಇನ್ನೊಬ್ಬರೊಂದಿಗೆ ನೇರವಾಗಿರದೇ ನಾವು ಅವರ ಬಗ್ಗೆ ರೂಪಿಸಿಕೊಂಡಿರುವ ಇಮೇಜ್‌ನೊಂದಿಗೆ ಜೋಡಣೆ ಆಗಿರುತ್ತವೆ. ಈ ಇಮೇಜ್‌ಗಳು ನಮ್ಮ ವಿಚಾರಲಹರಿ ಹಾಗೂ ಪೂರ್ವಗ್ರಹಗಳಿಂದ ರೂಪು ಪಡೆಯುವುದರಿಂದ ಅವುಗಳೆಂದೂ ವಾಸ್ತವಿಕವಾಗಿರುವುದಿಲ್ಲ. ಇದರಿಂದ ನೇರಸಂಬಂಧದ ವಾಸ್ತವಿಕತೆ ಮರೆಯಾಗುವುದು. ಅದರಿಂದಲೇ ಕೃಷ್ಣಮೂರ್ತಿ ಅವರು ಹೇಳುವುದು 'Relationship is a mirror where we discover ourselves (ಸಂಬಂಧಗಳು ನಮ್ಮನ್ನು ನಾವು ಅರಿಯಲು ಇರುವ ಕನ್ನಡಿ)' ಎಂದು.

ಎಲ್ಲ ಸಂಬಂಧಗಳೂ ಸಮಾನಾಂತರ. ಹೀಗಾಗಿ ಸಮಾನತೆ ತಾನೇ ತಾನಾಗಿ ಹೊರಹೊಮ್ಮುವುದು. ಒಂದು ರಚನಾತ್ಮಕ ಸಮಾಜದ ನಿರ್ಮಾಣವಾಗುವುದು. ಇದು ನಾನು, ನೀನು ಹಾಗೂ ನಾವು ವ್ಯಕ್ತಿಗಳಾಗಿ ಸಾಧಿಸುವ ಕ್ರಾಂತಿ. ಇದಕ್ಕೆ ಯಾವುದೇ ನಾಯಕರ ಅಥವಾ ಸಂಘಟಿತ ಧಾರ್ಮಿಕ ಬೋಧನೆಯ ಅಥವಾ ಸಂಘಟಿತ ವಿಚಾರಗಳ ಆಧಾರದ ಮೇಲೆ ಹುಟ್ಟಿದ ಅಥವಾ ಹುಟ್ಟಿಕೊಳ್ಳುತ್ತಿರುವ ಇಸಂಗಳು ಬೇಕಿಲ್ಲವೆಂಬುದು ಕೃಷ್ಣಮೂರ್ತಿಯವರ ವಿಚಾರದ ಸಾರ.

ಒಟ್ಟಾರೆ ಕೃಷ್ಣಮೂರ್ತಿ ಹೇಳುವುದಿಷ್ಟೆ: ಸತ್ಯವೆಂಬುದು ಸ್ಥಾನಿಕವಾದುದಲ್ಲ (static). ಅದು ನಿರಂತರ ಚಲನಶೀಲವಾದುದು. ಆದ್ದರಿಂದಲೇ ಪುನರುಚ್ಚರಿತ ಸತ್ಯ ಸತ್ಯವಾಗುಳಿಯದು. ಅದು ಸುಳ್ಳಾಗುವುದು (If truth repeated it becomes lie). ಇಲ್ಲಿ ಸುಳ್ಳು ಅಥವಾ ಮಿಥ್ಯವೆಂಬುದು ನಿಜದ ವಿರುದ್ಧಾರ್ಥ ಶಬ್ದವಲ್ಲ. ಸುಳ್ಳೆಂದರೇನು? ಇರದೇ ಇರುವುದೇ ಸುಳ್ಳು. ಇರುವುದೆಲ್ಲ ಸತ್ಯ. ನಮಗಾದ ಅನುಭವವನ್ನು ನಾವು ಪುನಃ ಪಡೆಯುವುದು ಸಾಧ್ಯವಿಲ್ಲ. ಆ ಅನುಭವವನ್ನು ಶಬ್ದೀಕರಣಗೊಳಿಸಬಹುದು. ಆದರೆ, ಅದನ್ನೇ ಪುನಃ ಸೃಷ್ಟಿಸಲು ಸಾಧ್ಯವಿಲ್ಲ. ದುರ್ದೈವದಿಂದ ಅನುಭವದ ನಂತರ ಅದನ್ನು ಗುರುತಿಸಲು ಹುಟ್ಟಿಕೊಳ್ಳುವ ಶಬ್ದವನ್ನೇ ಪುನರುಚ್ಚರಿಸಿ, ಅದನ್ನೇ ಸತ್ಯವೆಂದು ಆರಾಧಿಸುವ ವ್ಯವಸ್ಥೆ ನಮ್ಮ ನಡುವೆ ಇದೆ.

ಮೇಲೆ ಹೇಳಿದಂತೆ ಒಂದು ಸ್ವಸ್ಥ ಹಾಗೂ ರಚನಾತ್ಮಕ ಸಮಾಜದ ನಿರ್ಮಾಣಕ್ಕೆ ಯಾವುದೇ ನಾಯಕತ್ವದ ಮಾರ್ಗದರ್ಶನ, ಧಾರ್ಮಿಕ ಗುರುವಿನ ವಿಚಾರಗಳು ಕಾರಣವಾಗುವದಿಲ್ಲ. ಅದಕ್ಕೆ ನನ್ನಲ್ಲಿ, ನಿನ್ನಲ್ಲಿ ಅಥವಾ ನಮ್ಮಲ್ಲಿ ಆಮೂಲಾಗ್ರ ಪರಿವರ್ತನೆ ಆಗಬೇಕು (A radical transformation).

ಹೀಗೆ ಹೊಚ್ಚ ಹೊಸತನಗಳಿಂದ ಕೂಡಿದ ತಮ್ಮ ವಿಚಾರಗಳಿಂದ ಕೃಷ್ಣಮೂರ್ತಿ ಅವರು ಹಿಂದೆಂದಿಗಿಂತಲೂ ಇಂದು ಹೆಚ್ಚು ಪ್ರಸ್ತುತರಾಗುತ್ತಾರೆ. ಸಂಘಟಿತ ವಿಚಾರಗಳಿಂದ, ಆಚರಣೆಗಳಿಂದ, ನಂಬುಗೆಗಳಿಂದ ನಾವೆಂದೂ ಸತ್ಯಕ್ಕೆ ಹತ್ತಿರವಾಗುವುದಿಲ್ಲ. ಏಕೆಂದರೆ ನಂಬುಗೆಗಳು, ವಿಚಾರಗಳು, ಆಚರಣೆಗಳು ನಮ್ಮನ್ನೆಂದೂ ಒಂದು ಮಾಡುವುದಿಲ್ಲ. ನಿರಂತರ ವರ್ತಮಾನದಲ್ಲಿ 'ನಾನಿರಬೇಕು'. ಆಗ 'ನನ್ನ' ಸಮಸ್ಯೆ ಸಮಸ್ಯೆಯಾಗಿರುವುದಿಲ್ಲ. ಈ ನಿತ್ಯ ನವೀನ ಮಾನಸಿಕ ಸ್ಥಿತಿಯಿಂದ ಮಾತ್ರ ನಾವು ರಚನಾತ್ಮಕ ಸಮಾಜ ನಿರ್ಮಿಸಬಲ್ಲೆವು. ವಿಶ್ವಮಾನವರಾಗಿ ಬದುಕಬಲ್ಲೆವು. ಇದೇ ಕೃಷ್ಣಮೂರ್ತಿ ಅವರ ಸರಳ, ಸುಂದರ ಫಿಲಾಸಫಿಯಾಗಿದೆ.

ಕಿಲಾರದ ಪ್ರಗತಿ ಪುರುಷನ ಸಾಹಸಗಾಥೆ

ಅಭಿಲಾಷ್ ಪಿ.ಎಸ್.

ಒಳನೋಟ

ಹಳ್ಳಿಯಿಂದ ದಿಲ್ಲಿಯವರೆಗೆ ಎನ್ನುವುದು ಆಡುಮಾತು. ಆದರೆ ತಂತ್ರಜ್ಞಾನದ ಅಳವಡಿಕೆ, ಸಾಮಾಜಿಕ, ಸಾಂಸ್ಕೃತಿಕ ಬದಲಾವಣೆಗಳ ವಿಷಯದಲ್ಲಿ ಇದು ತದ್ವಿರುದ್ಧ. ಇದು ಪೂರ್ವಗ್ರಹವೆಂದೂ ಹೇಳಬಹುದು. ಏಕೆಂದರೆ, ದಿಲ್ಲಿಯೂ ಬೆರಗಿನಿಂದ ಹಳ್ಳಿಯ ಸಾಧನೆಯನ್ನು ನೋಡಲು ಸಾಧ್ಯವಿದೆ. ಇದಕ್ಕೆ ಸಾಕ್ಷ್ಯವೆಂಬಂತೆ ಸಿಗುತ್ತಾರೆ ಕಿಲಾರ ಗಣೇಶ ಹೆಗಡೆ.

ಇನ್ನೂ ಜೋಗದ ಸಮೀಪ ವಿದ್ಯುತ್ ಉತ್ಪಾದನೆಯಾಗದ ಕಾಲವದು. ಶಿವನಸಮುದ್ರಕ್ಕೆ ಹೋಗಿ ವಿದ್ಯುತ್ತನ್ನು ಉತ್ಪಾದಿಸುವ ಸ್ಥಾವರಕ್ಕೆ ಭೇಟಿ ನೀಡಿದ್ದ ಗಣೇಶ ಹೆಗಡೆಯವರು 'ಜನರಲ್ ಎಲೆಕ್ಟ್ರಿಕ್ ಕಂ' ಪ್ರಕಟಿಸಿದ್ದ ಪುಸ್ತಕವೊಂದನ್ನು ಓದಿ ಪ್ರೇರೇಪಿತರಾಗಿದ್ದರು. ತಮ್ಮ ಪರಿಸರದಲ್ಲೇ ಸಣ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆಯ ಕನಸು ಹೊತ್ತು ಮುಂಬೈಗೆ ಹೋದರು. ಬೇಕಾದಂಥ ಎಲ್ಲ ಕಚ್ಚಾವಸ್ತುಗಳನ್ನು ಖರೀದಿಸಿ ತಂದು, ಜನರೇಟರಿನಿಂದ ವಿದ್ಯುತ್ ಉತ್ಪಾದಿಸಿದರು. 1938ರಲ್ಲಿ ಹೆಗಡೆಯವರ ಮನೆಯಲ್ಲಿನ ವಿದ್ಯುದ್ದೀಪಗಳು ಬೆಳಗಿದವು. ಇದು ಶರಾವತಿ ಕಣಿವೆಯಲ್ಲಿ ಮೊದಲ ಬಾರಿಗೆ ವಿದ್ಯುತ್ ಹರಿಯುವುದಕ್ಕೂ ದಶಕದ ಹಿಂದೆಯೇ ನಡೆದ ಘಟನೆ! 'ಕಿಲಾರ ಹೆಗಡೆ ವಿದ್ಯುತ್ ಕೇಂದ್ರ'ಕ್ಕೆ ಭೇಟಿ ನೀಡಿದ ಅನುಭವಗಳನ್ನು ಬಿಚ್ಚಿಡುತ್ತಾ ನಾ. ಡಿಸೋಜ ಅವರು 'ಓರ್ವ ಗ್ರಾಮೀಣ ರೈತ, ಜೋಗದಲ್ಲಿ ಕರೆಂಟ್ ತಯಾರಾಗುವುದಕ್ಕೆ ಮುನ್ನವೇ ತನ್ನ ಹಳ್ಳಿಯಲ್ಲಿ ವಿದ್ಯುತ್ ಉತ್ಪಾದಿಸಿದ್ದು ಮುಖ್ಯ ಅಲ್ಲವೇ' ಎಂದು ಪ್ರಶ್ನಿಸುತ್ತಾರೆ.

ಗಣೇಶ ಹೆಗಡೆ ಅವರೊಂದಿಗಿನ ಇಂಥ ಹಲವು ಅನುಭಗಳ, ನೆನಪುಗಳ ಜೊತೆಗೆ ಅವರ ಸಾಹಸಗಾಥೆಗಳ ಸರಮಾಲೆಯೇ ಈ ಕೃತಿ. ಈ ಗುಚ್ಛವನ್ನು ಕಟ್ಟಿಕೊಟ್ಟವರು ಅವರ ಬಂಧುಬಾಂಧವರು. ಅವರೊಂದಿಗಿನ ಒಡನಾಟ, ನಡೆದ ಸ್ವಾರಸ್ಯಕರ ಘಟನೆಗಳನ್ನು ಹೆಕ್ಕಿ ಇಲ್ಲಿ ಪೋಣಿಸಿದ್ದಾರೆ. ಹಳ್ಳಿಯೊಂದರಲ್ಲಿ ಹುಟ್ಟಿ ಬೆಳೆದ ಗಣೇಶ ಹೆಗಡೆಯವರು ಸಾಧಾರಣದವರೇನಲ್ಲ! ಇಲ್ಲಿನ ಲೇಖನಗಳೇ ಅವುಗಳಿಗೆ ಸಾಕ್ಷಿ. ಕೃಷಿ ಕುಟುಂಬವೊಂದರಿಂದ ಬಂದ ಹೆಗಡೆಯವರು ಆಧುನಿಕ ತಂತ್ರಜ್ಞಾನ ಇನ್ನೂ ದೇಶಕ್ಕೆ ಕಾಲಿಡದ ಸಂದರ್ಭದಲ್ಲೇ ಕಗ್ಗಾಡಿನಲ್ಲಿದ್ದುಕೊಂಡು ಸಾಧಿಸಿದ ಸಾಧನೆಗಳು, ಸಾಹಸದ ಪಟ್ಟಿ ಪುಟ ಉರುಳಿದಂತೆ ತೆರೆದುಕೊಳ್ಳುತ್ತಾ ಸಾಗುತ್ತದೆ. ಈ ಕೃತಿ ಒಂದು ರೀತಿಯಲ್ಲಿ ಅವರ ಬದುಕಿನ ಹೂರಣ. ಬದುಕು–ಹೋರಾಟ–ಸಾಧನೆಗಳ ಚಿತ್ರಣ.

ಉತ್ತರ ಕನ್ನಡದ ಸಿದ್ದಾಪುರ ತಾಲ್ಲೂಕಿನ ಹಳ್ಳಿಯಾದ ಐನಕೈಯಲ್ಲಿ ಜನಿಸಿದ ಹೆಗಡೆಯವರು, ರಾಮಯ್ಯ ಹೆಗಡೆ ಎಂಬ ಅನುಕೂಲಸ್ಥ ಕೃಷಿಕರ ಮಗ. ಬಾಲ್ಯದಲ್ಲೇ ತೀಕ್ಷ್ಣ ಬುದ್ಧಿಮತ್ತೆ, ಮೇಧಾಶಕ್ತಿಯನ್ನು ಹೊಂದಿದ್ದರಂತೆ. ಹೀಗಾಗಿ ಅವರ ಆಲೋಚನೆಯ ಕ್ರಮವೂ ಪ್ರಬುದ್ಧವಾಗಿತ್ತು. ಮಲೆನಾಡಿನಲ್ಲಿ ಮಲೇರಿಯಾ ಹಾವಳಿ ವಿಪರೀತವಾಗಿ, ಇದಕ್ಕೆ ದೆವ್ವ–ಭೂತಗಳ ಕಾಟವೆಂದು ನಂಬಿ, ಜನರು ದೊಡ್ಡ ಪ್ರಮಾಣದಲ್ಲಿ ಊರು ಬಿಡತೊಡಗಿದ್ದರು. ಇದರಿಂದಾಗಿ ಪಾಳುಬಿದ್ದ ಭೂಮಿಯನ್ನು ಖರೀದಿ ಮಾಡಿ, ಕೃಷಿಯ ಮೂಲಕ ಪುನರುದ್ಧರಿಸುವ ಕೆಲಸವನ್ನು ಹೆಗಡೆಯವರು ಆರಂಭಿಸಿದ್ದರು. ಈ ಸಂದರ್ಭದಲ್ಲಿ 'ಜನರು ಸಾಯುತ್ತಿರುವುದು ರೋಗದಿಂದ ವಿನಾ ದೆವ್ವ–ಭೂತಗಳೆಲ್ಲ ಮೂಢನಂಬಿಕೆ' ಎನ್ನುವುದನ್ನು ಹೆಗಡೆಯವರು ಜನರಿಗೆ ಮನವರಿಕೆ ಮಾಡಲು ಪ್ರಯತ್ನಿಸಿದ್ದರಂತೆ.

ಇದೇ ಸಂದರ್ಭದಲ್ಲಿ ನಡೆದ ಘಟನೆಯೊಂದನ್ನು ವಿಜಯನಳಿನಿ ರಮೇಶ್ ನೆನಪಿಸಿಕೊಳ್ಳುತ್ತಾರೆ: 'ಕಿಲಾರಕ್ಕೆ ಬಂದು ನೆಲೆಸಿದ ಹೆಗಡೆಯವರು 140 ಎಕರೆ ಜಮೀನನ್ನು ಕ್ರಯಕ್ಕೆ ತೆಗೆದುಕೊಂಡಿದ್ದರು. ಕಿಲಾರ ಪ್ರವೇಶ ಮಾಡಿದ ಅವರು ಮೊದಲಿಗೆ ಮಾಡಿದ ಕೆಲಸವೆಂದರೆ ಸುತ್ತಲೂ ದೊಡ್ಡ ಸಂಖ್ಯೆಯಲ್ಲಿ ಚದುರಿಬಿದ್ದಿದ್ದ ಭೂತ, ಚೌಡಿ ಮುಂತಾದ ಕಲ್ಲುಗಳನ್ನು ತೆಗೆದು ಪಾಗಾರಕ್ಕೆ ಹಾಕಿಸಿದ್ದು. ಈ ಸಂದರ್ಭದಲ್ಲಿ 'ನಮ್ಮ ದೇವ್ರನ್ನೆಲ್ಲಾ ಕಿತ್ತು ಹಾಕಿ ಕಂಟ್ನೆಗೆ (ಪಾಗಾರ) ಹಾಕ್ಬಿಟ್ಟೀರಿ ಹೆಗಡೇರೇ. ಈಗ ನಾವು ಹರಕೆ ಹೇಳ್ಕ್ಯಂಡ ಕುರಿ, ಕೋಳಿ ಎಲ್ಲ ಕೊಡದೆಲ್ರಾ? ನಮ್ ದೇವ್ರಿಗೆ ಶಿಟ್ ಬಂದು ಆ ಮಲೇರಿ ರೋಗೆಲ್ಲಾ ಹೆಚ್ ಆಗ್ತಾ ಐತಿ, ನಾವೆಲ್ಲಾ ನಾಸ ಆಗಿ ಹೊಕ್ಕೆಂವೆ. ನಮ್ಗೆ ಊರು ಬಿಡದು ಬಿಟ್ರೆ ಬೇರೆ ದಾರಿಯೇ ಇಲ್ಲದ ಹಾಂಗಾಗೈತಿ' ಎಂದು ರೈತರ ಗುಂಪೊಂದು ದೂರು ಸಲ್ಲಿಸಿತ್ತು. 'ಇವರಿಲ್ಲದೆ ತನ್ನ ಭೂಮಿಯಲ್ಲಿ ಕೆಲಸ ಮಾಡಲು ಆಗುವುದಿಲ್ಲವೆಂದು ತಿಳಿದ ಹೆಗಡೆಯವರು ಅವರ ಮನಸ್ಸನ್ನು ಒಳ್ಳೆಯ ಮಾತುಗಳಲ್ಲಿ ಪರಿವರ್ತಿಸಿ, ಒಂದೆರಡು ಕಲ್ಲುಗಳನ್ನು ಸರಿಯಾದ ಜಾಗದಲ್ಲಿ ಹುಗಿಸಿ, ಪೂಜೆ ಸಲ್ಲಿಸಲು ಪ್ರಶಸ್ತಗೊಳಿಸಿಕೊಟ್ಟಿದ್ದರು'.

ಈ ರೀತಿಯ ಸಾಹಸ, ಸಾಧನೆಗಳ ಪಟ್ಟಿ ಪುಸ್ತಕದುದ್ದಕ್ಕೂ ಇದೆ. ಕಾಡುಗುಡ್ಡಗಳ ಮೇಲೆ ರಾಗಿ ಬೆಳೆಯುವ ಯೋಜನೆ, ಕಿಲಾರದ ಜಮೀನಿನಲ್ಲಿ ಕಬ್ಬು ಬೆಳೆ, ಸಕ್ಕರೆ ಕಾರ್ಖಾನೆಯ ನಿರ್ಮಾಣ, ಜಿಲ್ಲೆಯಲ್ಲಿ ಮೊದಲು ವಿಧವಾ ವಿವಾಹ ಮಾಡಿಸಿದ್ದು, ಅಮೃತ ಮಹಲ್ ತಳಿಯ ಗೋವುಗಳ ಸಾಕಣೆ, ಕೃಷಿ ವಿದ್ಯಾಶಾಲೆ ಪ್ರಾರಂಭಿಸಿದ್ದು, ಅಡಿಕೆ ಸುಂಕ ರದ್ದತಿಯ ಬಗ್ಗೆ ನಡೆದ ಹೋರಾಟ, ಕರನಿರಾಕರಣೆ ಚಳವಳಿಯಲ್ಲಿ ಪರೋಕ್ಷ ಕೆಲಸ, ವಿದ್ಯುತ್ ಬೇಲಿಯ ಪರಿಕಲ್ಪನೆ ಮತ್ತು ನಾಯಿಯ ಮೇಲೆ ಅದರ ಪ್ರಯೋಗ, ಮಲೆನಾಡು ಅದರಂತೆ ಉತ್ತರ ಕನ್ನಡ ಜಿಲ್ಲೆಯ ಅಭಿವೃದ್ಧಿಯ ಕನಸು... ಸಾಧನೆಗಳ ಪಟ್ಟಿಯೇ ಇಲ್ಲಿದೆ. ಗಣೇಶ ಹೆಗಡೆ ಅವರ ಆತ್ಮಚರಿತ್ರೆಯ ಪ್ರಮುಖ ಅಂಶಗಳನ್ನೂ ಇಲ್ಲಿ ಕ್ರೋಡೀಕರಿಸಿ ನೀಡಲಾಗಿದೆ. ಇಲ್ಲಿನ ಹಲವು ಸಾಧನೆಗಳ ವಿವರ ಇಂದಿನ ಯುವಜನತೆಗೆ ಸ್ಫೂರ್ತಿಯಾಗಬಲ್ಲದು.



ಪು: 264 ₹300

ಕೆಚ್ಚೆದೆಯ ಪ್ರಗತಿ ಪುರುಷ ಕಿಲಾರ ಗಣೇಶ ಹೆಗಡೆ
ಪ್ರ.ಸಂ.: ಜಯಪ್ರಕಾಶ ಹೆಗಡೆ
ಪ್ರ: ವಿಕಾಸ ಪ್ರಕಾಶನ, ಬೆಂಗಳೂರು
ಸಂ: 9900095204

ಚರಿತ್ರೆಯನ್ನು ಕಟೆದ 'ಪ್ರಯೋಗ'

ಇತರೆ ಕಾದಂಬರಿಗಳಂತಲ್ಲ ಈ ಕೃತಿ. ಕಥೆಯನ್ನು ಕೇವಲ ಓದುತ್ತಾ ಹೋಗುವುದಲ್ಲ, ಕಣ್ಮುಂದೆ ಸರದಿ ಸಾಲಿನಲ್ಲಿ ತೆರೆದುಕೊಳ್ಳುತ್ತಾ ಸಾಗುವ ಚಿತ್ರಗಳ ಮೂಲಕ ನೋಡುತ್ತಾ, ಎರಡರ ಎರಕವನ್ನು ಮನದಂಗಳಕ್ಕೆ ಇಳಿಸುತ್ತಾ ಸಾಗಬೇಕು. ಇದೊಂದು ರೀತಿಯ ಪ್ರಯೋಗಾತ್ಮಕ ಕಾದಂಬರಿ. ಇರಾನ್ ಲೇಖಕಿ ಮಾರ್ಜಾನ್ ಸತ್ರಪಿ ಅವರ 'ದ ಪರ್ಸಪೊಲಿಸ್' ಎಂಬ ಫ್ರೆಂಚ್ ಗ್ರಾಫಿಕ್ ಕಾದಂಬರಿಯು 'ಕಾಮಿಕ್ಸ್' ಮಾದರಿಯಲ್ಲಿದೆ. ಆದರೆ ಮಾನವ ಚರಿತ್ರೆಯನ್ನು ಕಾಡಿದ ಗಂಭೀರ ವಿಚಾರವನ್ನು ಅದು ಹೊತ್ತುತಂದಿದೆ.

ಮೂಲ ಕಾದಂಬರಿಯ ಮೊದಲ ಭಾಗ 2000ನೇ ಇಸವಿಯಲ್ಲಿ ಹಾಗೂ ಎರಡನೇ ಭಾಗ 2004ರಲ್ಲಿ ಪ್ರಕಟವಾಗಿದೆ. ಅಂದಿನ ಕಾಲಕ್ಕೆ ಕಾದಂಬರಿ ಪ್ರಕಾರದಲ್ಲಿ ಇದು ವಿನೂತನ ಪ್ರಯೋಗವಾಗಿತ್ತು. ಹಲವು ಮರುಮುದ್ರಣ ಕಂಡಿರುವ ಈ ಕಾದಂಬರಿ ಅನಿಮೇಷನ್ ಸಿನಿಮಾವಾಗಿಯೂ ಪ್ರಶಸ್ತಿಗಳನ್ನು ಪಡೆದಿದೆ. 2007ರಲ್ಲಿ ಆಸ್ಕರ್ ನಾಮನಿರ್ದೇಶನ ಪಟ್ಟಿಯಲ್ಲೂ ಈ ಸಿನಿಮಾವಿತ್ತು. ಇಂತಹ ಪ್ರಯೋಗಾತ್ಮಕ ಕಾದಂಬರಿಯನ್ನು ಪ್ರೀತಿ ನಾಗರಾಜ ಇದೀಗ ಕನ್ನಡಕ್ಕೆ ತಂದಿದ್ದಾರೆ.

ಇರಾನ್‌ನ ಟೆಹರಾನ್ ನಗರದ ಮಾರ್ಜಾನ್, ಮಧ್ಯಮವರ್ಗಕ್ಕೆ ಸೇರಿದ ಕುಟುಂಬದವರು. ಅವರು ಓದಿದ್ದು ಫ್ರೆಂಚ್ ಭಾಷೆಯ ಶಾಲೆಯಲ್ಲಿ. ಮುಂದೆ ಸ್ವದೇಶದಲ್ಲಿ ಕ್ರಾಂತಿಯ ಬಿಸಿ ಏರಿದಾಗ, 14 ವರ್ಷಗಳ ಮಾರ್ಜಾನ್ ಅವರನ್ನು ಅವರ ತಂದೆ–ತಾಯಿಗಳು ಆಸ್ಟ್ರಿಯಾ ದೇಶಕ್ಕೆ ಏಕಾಂಗಿಯನ್ನಾಗಿ ಕಳುಹಿಸಿಕೊಟ್ಟರು. ಆದರೆ, ಅಲ್ಲಿ ಹೆಚ್ಚು ಕಾಲ ಉಳಿಯಲಾಗದೆ ಮತ್ತೆ ತವರಿಗೆ ಬಂದ ಮಾರ್ಜಾನ್, ಅಲ್ಲಿ ಉಳಿಯಲು ಪ್ರಯತ್ನಪಟ್ಟರೂ ಸಾಧ್ಯವಾಗದೆ ಕೊನೆಗೆ ಫ್ರಾನ್ಸ್‌ಗೆ ತೆರಳುವರು. ಅವರ ಹೋರಾಟದ ಬದುಕಿನ ಕಥನ ಯಾವ ರೋಚಕ ಕಾದಂಬರಿಗೂ ಕಡಿಮೆ ಇಲ್ಲ.

ಮಾರ್ಜಾನ್ ಅವರು ಹತ್ತು ವರ್ಷದ ಬಾಲಕಿಯಾಗಿದ್ದ ದಿನಗಳಿಂದ ಕಥೆ ಆರಂಭವಾಗುತ್ತದೆ. ಇರಾನ್‌ನಲ್ಲಿ ನಡೆದ ಇಸ್ಲಾಮಿಕ್ ಕ್ರಾಂತಿ, ತದನಂತರದಲ್ಲಿ ದೇಶವು ಮುಸ್ಲಿಂ ಮೂಲಭೂತವಾದಿಗಳ ಆಳ್ವಿಕೆಗೆ ಒಳಪಟ್ಟಿದ್ದು, ಹಿಜಾಬ್ ಪರ–ವಿರುದ್ಧದ ಹೋರಾಟ, ಅಧಿಕಾರ ವರ್ಗಾವಣೆ, ಆಗ ದೇಶದಲ್ಲಿ ನಡೆದ ವಿಚಿತ್ರ ವೈರುಧ್ಯ... ಹೀಗೆ ಹಲವು ದಶಕಗಳಲ್ಲಿ ನಡೆದ ಘಟನೆಗಳ ಸಮಗ್ರ ಚಿತ್ರಣವನ್ನು ಈ ಕೃತಿ ಕಾಮಿಕ್ಸ್ ರೂಪದಲ್ಲಿ ಕಟ್ಟಿಕೊಟ್ಟಿದೆ. ಈ ಕೃತಿಯನ್ನು ಬರೆಯುವುದಕ್ಕೆ ಕಾರಣವನ್ನು ಮಾರ್ಜಾನ್ ಅವರು ಹೀಗೆ ನೀಡುತ್ತಾರೆ; 'ಇರಾನ್‌ನ ಶ್ರೇಷ್ಠ ನಾಗರಿಕತೆಯ ಬಗ್ಗೆ ಮೂಲಭೂತವಾದ, ಮತಾಂಧತೆ ಮತ್ತು ಭಯೋತ್ಪಾದನೆಯ ಚೌಕಟ್ಟಿನಲ್ಲೇ ಸಾಕಷ್ಟು ಚರ್ಚಿಸಲಾಗಿದೆ. ಇಲ್ಲಿಯೇ ಅರ್ಧ ಜೀವನ ಕಳೆದಿರುವ ನನಗೆ ಈ ಮಾತು ಸತ್ಯಕ್ಕೆ ದೂರವಾದುದು ಎಂದು ತಿಳಿದಿದೆ. ಅದಕ್ಕಾಗಿಯೇ 'ಪರ್ಸೆಪೊಲಿಸ್' ಬರೆಯುವುದು ನನಗೆ ಮುಖ್ಯವಾದ ವಿಷಯವಾಗಿತ್ತು'.

ಕನ್ನಡದ ಮಟ್ಟಿಗೂ ಇದೊಂದು ವಿನೂತನ ಪ್ರಯೋಗ. ಅಂದಹಾಗೆ, ವಿವರಣೆಗಳು ಹಾಗೂ ಚಿತ್ರಗಳು ಒಟ್ಟಾಗಿ ಸಾಗಬೇಕಿದ್ದರಿಂದ ಈ ಪ್ರಯೋಗದಲ್ಲಿ ಹಲವು ಮಿತಿಗಳೂ ಇವೆ. ಕಾದಂಬರಿ 'ಶಿಲ್ಪ'ವನ್ನು ಅಂದಗಾಣಿಸಬಲ್ಲ ಪುಟಗಟ್ಟಲೆಯ ವಿವರಗಳು ಇಲ್ಲಿ ಕೆಲವೇ ಶಬ್ದಗಳಿಗೆ ಸೀಮಿತ. ಪ್ರತಿಯೊಂದು ಪುಟ್ಟ ವಿವರಣೆಯ ಆರಂಭ ಹಾಗೂ ಅಂತ್ಯದ ಬಿಂದುವಿನ ಆಚೀಚಿನ ಸಂಗತಿಗಳನ್ನು ಅರಿಯಲು ಓದುಗ ತುಸು ಶ್ರಮ ವಹಿಸಲೇಬೇಕು. ಈ ಬೃಹತ್ ಕೃತಿಯನ್ನು ಓದಲು ಸಮಯ ಹಾಗೂ ತಾಳ್ಮೆ ಎರಡೂ ಮುಖ್ಯ. ಚಿತ್ರಗಳೇ ತುಂಬಿರುವ ಪುಟಗಳಲ್ಲಿ ಕ್ರಮಬದ್ಧವಾಗಿ ಓದುವುದೂ ಅಷ್ಟೇ ಮುಖ್ಯ. ಸ್ಥಳದ ಅಭಾವದಿಂದ ಕೆಲವು ಕಡೆಗಳಲ್ಲಿ ಅಕ್ಷರಗಳ ಫಾಂಟ್ ಗಾತ್ರವನ್ನು ತುಂಬಾ ಚಿಕ್ಕದಾಗಿ ಹಾಕಲಾಗಿದ್ದು, ಓದಿನ ವೇಗಕ್ಕೆ ಅಡ್ಡಿಯಾಗುತ್ತದೆ.



ಪು: 360 ₹395

ಪರ್ಸೆಪೊಲಿಸ್
ಲೇ: ಮಾರ್ಜಾನ್ ಸತ್ರಪಿ
ಕನ್ನಡಕ್ಕೆ: ಪ್ರೀತಿ ನಾಗರಾಜ
ಪ್ರ: ಛಂದ ಪುಸ್ತಕ
ಸಂ: 9844422782

ಕಥೆ
ಜ್ಯೋತಿ ಅವರ
ಇರಾವಂತ ಮತ್ತು ಬರ್ಬರೀಕರ ಹರಟೆ
ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/short-story

ಕವನ
ಚನ್ನಪ್ಪ ಅಂಗಡಿ ಅವರ
ಗಜಲ್‌ಗಳು
ಮೊಬೈಲ್‌ನಲ್ಲಿ ಕವನ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ
https://www.prajavani.net/poetry



ಇದೀಗ ಲಭ್ಯ
ಹೊನ್ನ ಕಣಜ
ಪ್ರಜಾವಾಣಿ ದೀಪಾವಳಿ ಕಥಾಸ್ಪರ್ಧೆಯಲ್ಲಿ ಬಹುಮಾನ ಪಡೆದ ಸಣ್ಣ ಕಥೆಗಳ ಸಂಕಲನ
2ನೇ ಮುದ್ರಣ
ಪ್ರತಿಗಳಿಗಾಗಿ ಸಂಪರ್ಕಿಸಿ
ನವಕರ್ನಾಟಕ ಪಬ್ಲಿಕೇಷನ್ಸ್ ಪ್ರೈವೆಟ್ ಲಿಮಿಟೆಡ್
ಎಂಬೆಸಿ ಸೆಂಟರ್, ಕ್ರೆಸೆಂಟ್ ರಸ್ತೆ, ಬೆಂಗಳೂರು – 560001
ದೂರವಾಣಿ : 080 22161900/901/913/914
Shop Online www.navakarnataka.com

ಮೊದಲ ಓದು

ಮತ್ತೆ ತೆರೆದ 'ಅನಿಮಲ್ ಫಾರ್ಮ್'

ಪ್ರಾಣಿಗಳನ್ನು ರೂಪಕವಾಗಿ ಬಳಸಿಕೊಂಡು ಅಧಿಕಾರದ ದುರ್ಬಳಕೆಯನ್ನು ತೀಕ್ಷ್ಣವಾಗಿ ಟೀಕಿಸಿ 1945ರಲ್ಲಿ 'ಜಾರ್ಜ್ ಆರ್ವೆಲ್' ರಚಿಸಿದ್ದ ಈ ಕೃತಿ ವರ್ತಮಾನಕ್ಕೂ ಅಷ್ಟೇ ಪ್ರಸ್ತುತ.

ರಾಜಕೀಯ ವಿಡಂಬನೆಗಳಿಂದ ಕೂಡಿದ ಬರವಣಿಗೆಗಳಿಗೆ ಪ್ರಸಿದ್ಧರಾಗಿದ್ದ ಆರ್ವೆಲ್ ಮೂಲ ಹೆಸರು ಎರಿಕ್ ಅರ್ಥರ್ ಬ್ಲೇರ್. ಪ್ರಾಣಿ ಪ್ರಪಂಚವನ್ನು ಮುಂದಿಟ್ಟುಕೊಂಡು ಸಾರ್ವಕಾಲಿಕ ಸತ್ಯವನ್ನು ಹೇಳಿರುವ ಈ ಕೃತಿ ಅಪಾರ ಆಲೋಚನೆಗೆ ಪ್ರೇರೇಪಿಸುತ್ತದೆ. 'ಅನಿಮಲ್ ಫಾರ್ಮ್' ಕೃತಿ ಈಗಾಗಲೇ ಕನ್ನಡಕ್ಕೆ ಅನುವಾದವಾಗಿ ಪ್ರಕಟವಾಗಿದೆ. ಕೊಡುಕೊಳ್ಳುವಿಕೆಯ ಮೂಲಕ ಬೇರೆ ಭಾಷೆಯ ಸಾಹಿತ್ಯವು ಕನ್ನಡಿಗರಿಗೆ ಸಿಗಬೇಕು ಎನ್ನುವ ದೃಷ್ಟಿಯಿಂದ ಕುವೆಂಪು ಭಾಷಾ ಭಾರತಿ ಪ್ರಾಧಿಕಾರ ಆರಂಭಿಸಿರುವ ಯೋಜನೆಯ ಭಾಗವಾಗಿ ಸಹನಾ ಹೆಗಡೆ ಅವರು ಈ ಕೃತಿಯನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕೊಟ್ಟಿಗೆಯಲ್ಲಿರುವ ವಿವಿಧ ಪ್ರಾಣಿಗಳೇ ಇಲ್ಲಿನ ಮುಖ್ಯ ಪಾತ್ರಧಾರಿಗಳು. ಅವುಗಳಿಗೆ ಮಾಡಿರುವ ನಾಮಕರಣವೂ ಅಷ್ಟೇ ವಿಶೇಷವನ್ನು ಹೊಂದಿದೆ. ರಷ್ಯಾ ಕ್ರಾಂತಿಯ ಪೂರ್ವ ಮತ್ತು ನಂತರದ ಘಟನೆಗಳನ್ನು ಇಲ್ಲಿ ಮರುಸೃಷ್ಟಿಸಲಾಗಿದೆ. ಇಂದಿಗೂ ಪ್ರಸ್ತುತ ಎನ್ನುವಂತೆ ದೌರ್ಜನ್ಯವನ್ನು ಕಾಲ್ಪನಿಕ ಕಥೆಯ ರೂಪದಲ್ಲಿ ಇಲ್ಲಿ ಆರ್ವೆಲ್ ಪ್ರಸ್ತುತಪಡಿಸಿದ್ದಾರೆ. ದಂಗೆ, ದೌರ್ಜನ್ಯ, ತಂತ್ರ–ಪ್ರತಿತಂತ್ರ, ಕುತಂತ್ರವನ್ನು ಕಥೆಯ ರೂಪದಲ್ಲಿ ಇಲ್ಲಿ ಕಟ್ಟಿಕೊಡಲಾಗಿದೆ. ಪ್ರಸ್ತುತ ಸ್ಥಿತಿಗೆ ಹೋಲಿಸಿ ಕೃತಿಯನ್ನು ಓದುತ್ತಾ ಹೋದರೆ ಹೆಚ್ಚು ಹತ್ತಿರವಾಗುತ್ತದೆ.

ಆರ್ವೆಲ್ ಅವರ ಜಾಗತಿಕ ದೃಷ್ಟಿಕೋನವನ್ನು ಅರಿತು ಕೃತಿಯ ಅನುವಾದಕ್ಕೆ ಲೇಖಕರು ಇಳಿದಿದ್ದಾರೆ. ಇವುಗಳ ಉಲ್ಲೇಖವನ್ನೂ ಅವರು ಮಾಡಿದ್ದು, ಈ ಕಾರಣದಿಂದ ಅನುವಾದ ಸಮರ್ಥವಾಗಿದೆ. ಕೃತಿಯ ಕೊನೆಯಲ್ಲಿ ಟಿಪ್ಪಣಿಯಲ್ಲಿ ಕೆಲ ಪದಗಳ ವಿವರಣೆಯಿದ್ದಂತೆ, ಆರಂಭದಲ್ಲಿ ಕಥೆಯಲ್ಲಿ ಬರುವ ಪ್ರಾಣಿಗಳ ಹೆಸರು ಹಾಗೂ ಅವುಗಳ ವಿಶೇಷವನ್ನು ನೀಡಿದ್ದರೆ ಓದಿಗೆ ಇನ್ನಷ್ಟು ಅನುಕೂಲ ಮಾಡಿಕೊಟ್ಟಂತೆ ಆಗುತ್ತಿತ್ತು.



ಪು: 132 ₹80

ಅನಿಮಲ್ ಫಾರ್ಮ್
ಲೇ: ಜಾರ್ಜ್ ಆರ್ವೆಲ್
ಕನ್ನಡಕ್ಕೆ: ಸಹನಾ ಹೆಗಡೆ
ಪ್ರ: ಕುವೆಂಪು ಭಾಷಾ ಭಾರತಿ ಪ್ರಾಧಿಕಾರ
ಸಂ: 080–23183311

ಜೀವನ ಪ್ರೇಮಿಯ ಪ್ರಾಂಜಲ ಕಥನ

ಗುಡಿಪಾಟಿ ವೆಂಕಟಾಚಲಂ ಅವರ ಬದುಕನ್ನು ಅವರದೇ ಮಾತಿನಲ್ಲಿ ನಿರೂಪಿಸುತ್ತಾ ಹೋಗಿದೆ ಈ ಕೃತಿ. ಚಲಂ ಅವರ ಜೀವನಗಾಥೆ ಕನ್ನಡದಲ್ಲಿ ಈಗಾಗಲೇ ಬಂದಿವೆ. ಆದರೆ, ಈ ಕೃತಿಯ ವೈಶಿಷ್ಟ್ಯ ಇರುವುದು ಚಲಂ ಅವರ ಬದುಕಿನ ಕಥೆಯನ್ನು ಅವರೇ ಹೇಳುತ್ತಾ ಹೋಗಿರುವುದು. ಯಾವುದನ್ನೂ ಫಿಲ್ಟರ್ ಮಾಡದ ಅವರ ಪ್ರಾಮಾಣಿಕ ನಡೆ ಓದುಗನಿಗೆ ಇಷ್ಟವಾಗುತ್ತದೆ. ಒಂದೆಡೆ ಪ್ರಬಲ ಸ್ತ್ರೀ ಕಾಳಜಿಯುಳ್ಳ ವ್ಯಕ್ತಿಯಾಗಿ ಕಾಣುವ ಚಲಂ, ಮತ್ತೊಂದು ಕೋನದಲ್ಲಿ ಅಪ್ಪಟ ಪ್ರೇಮಿಯಾಗಿ, ವ್ಯಾಮೋಹಿಯಾಗಿಯೂ ಕಾಣುತ್ತಾರೆ.

ಬ್ರಹ್ಮಸಮಾಜದ ತತ್ವಗಳನ್ನು ಅನುಸರಿಸಿದರೂ ಅಲ್ಲಿನ ಕಟ್ಟುಪಾಡುಗಳು ಚಲಂ ಸ್ವಭಾವಕ್ಕೆ ಹಾಗೂ ಬದುಕಿಗೆ ಒಗ್ಗುವುದಿಲ್ಲ. ಅಲ್ಲಲ್ಲಿ ಕಾಣಿಸುವ ಚಿತ್ತ ಚಾಂಚಲ್ಯ, ಸ್ತ್ರೀ ವ್ಯಾಮೋಹ, ಓದುವಿಕೆಯ ಪರಿ, ಜೀವನ ಹೋರಾಟ, ಬರಹ ಇತ್ಯಾದಿ ಎಲ್ಲವನ್ನೂ ಚಲಂ ಮುಕ್ತವಾಗಿ ಹೇಳಿಕೊಂಡಿದ್ದಾರೆ.

ಚಿಂತಕರ ಚಾವಡಿಯಲ್ಲಿ ಖ್ಯಾತರಾಗುವ ಚಲಂ, ತಮ್ಮದೇ ಬದುಕಿನ ಗೋಜಲುಗಳಲ್ಲಿ ಸಿಲುಕುವುದು, ಯಾವುದು ಸರಿ– ತಪ್ಪು ಎಂಬ ನಿರ್ಧಾರಕ್ಕೂ ಬರಲಾಗದೇ ತೊಳಲಾಡುವ ಪ್ರಸಂಗಗಳು, ಎದುರಿಸಿದ ಸಂಕಷ್ಟಗಳೂ ಕೃತಿಯಲ್ಲಿ ದಾಖಲಾಗಿವೆ. ಚಲಂ ಬಾಲ್ಯದ ಅಧ್ಯಾಯಗಳು ಆಗಿನ ದಿನಗಳನ್ನು ದೃಶ್ಯರೂಪದಲ್ಲಿ ಕಟ್ಟಿಕೊಟ್ಟಂತಿವೆ. ಈ ಚಿಂತಕನ ಆತ್ಮಕಥೆಯನ್ನು ಮೂಲ ಧ್ಯೇಯಕ್ಕೆ ಚ್ಯುತಿ ಬಾರದಂತೆ ಲಕ್ಕೂರು ಆನಂದ ಅವರು ಕನ್ನಡಕ್ಕೆ ತಂದಿದ್ದಾರೆ. ಚಲಂ ಅವರ ಬದುಕಿನ ಕುರಿತು ಕುತೂಹಲವುಳ್ಳವರು ಓದಬೇಕಾದ ಕೃತಿ.



ಪು: 316 ₹350

ಚಲಂ (ಆತ್ಮಕಥೆ)
ಕನ್ನಡಕ್ಕೆ: ಲಕ್ಕೂರು ಆನಂದ
ಪ್ರ: ಸೃಷ್ಟಿ ಪಬ್ಲಿಕೇಷನ್ಸ್ ಬೆಂಗಳೂರು
ಸಂ.: 98450 96668

ಕನ್ನಡ ಬದುಕು ಕಟ್ಟುವ ಆಶಯ

ನಿಜ ಅರ್ಥದಲ್ಲಿ ಭಾಷೆಯೊಂದು ಬದುಕು ಕಟ್ಟಿಕೊಡಬೇಕಾದದ್ದು ಹೇಗೆ ಎನ್ನುವುದನ್ನು ವಿವರವಾಗಿ ಚರ್ಚಿಸಿದೆ ಈ ಕೃತಿ. ಭಾಷೆಯೊಂದು ಕೇವಲ ಸಂವಹನ ಮಾಧ್ಯಮವಾಗಬಾರದು. ಅನ್ನ ಕೊಡುವ ಭಾಷೆಯಾಗಬೇಕು ಎನ್ನುವುದು ಲೇಖಕರ ವಾದ. ಒಂದು ಭಾಷೆಯನ್ನು ಮಾತನಾಡುವ ಜನ ತಮ್ಮ ವೃತ್ತಿ– ಕ್ಷೇತ್ರ ಬಯಸುವ ಕೌಶಲಗಳನ್ನು ಕಲಿತುಕೊಳ್ಳಲೂ ಮುಂದಾಗಬೇಕು. ಯಾವ ಕೆಲಸವನ್ನಾದರೂ ಮಾಡುವ ಮನಸ್ಥಿತಿಯನ್ನೂ ಹೊಂದಬೇಕು. ಇಲ್ಲವಾದಲ್ಲಿ ಉದ್ಯೋಗದಾತರು ಅನ್ಯ ಭಾಷೆಯ ಪ್ರದೇಶದಿಂದ ಉದ್ಯೋಗಿಗಳನ್ನು ಕರೆಸಿಕೊಳ್ಳುವುದು ಅನಿವಾರ್ಯವಾಗಿಬಿಡುತ್ತದೆ ಎಂಬುದು ಈ ಕೃತಿ ನಡೆಸಿರುವ ಚರ್ಚೆ.

ಬೇರೆ ಭಾಷಿಗರ ವಲಸೆ ಯಾವ ಕಾರಣಕ್ಕಾಗಿ ಆಯಿತು ಎಂಬುದರಿಂದ ಚರ್ಚೆ ಆರಂಭವಾಗಿದೆ. ಕೌಶಲಯುತ ಅಥವಾ ಕೌಶಲರಹಿತ ಕಾರ್ಮಿಕರ ಕೊರತೆ ಎದುರಾದಾಗ ಅಥವಾ ಸ್ಥಳೀಯರು ನಿರ್ದಿಷ್ಟ ಕೆಲಸಕ್ಕೆ ಮುಂದಾಗದೇ ಇದ್ದಾಗ ಪಕ್ಕದ ರಾಜ್ಯಗಳಿಂದ ಕಾರ್ಮಿಕರನ್ನು ಕರೆತರಬೇಕಾಯಿತು. ಉದಾಹರಣೆಗೆ ಬೃಹತ್ ಅಣೆಕಟ್ಟೆ ಯೋಜನೆಗಳ ಕಾಮಗಾರಿಗೆ, ಬೃಹತ್ ನಿರ್ಮಾಣಗಳಿಗೆ ವಲಸಿಗರು ಅನಿವಾರ್ಯವಾದರು. ಇದೇ ಪರಿಸ್ಥಿತಿ ಮಾಹಿತಿ ತಂತ್ರಜ್ಞಾನ, ಕಾರ್ಪೊರೆಟ್ ವಲಯಕ್ಕೂ ವಿಸ್ತರಿಸಿತು. ನಮ್ಮವರು ಹೊಸ ಕಲಿಕೆಗೆ, ಹೊಸ ಪ್ರದೇಶಕ್ಕೆ ತೆರೆದುಕೊಳ್ಳದಿರುವುದೇ ಇದಕ್ಕೆ ಕಾರಣ ಎಂಬುದನ್ನು ವಿವಿಧ ಅಧ್ಯಯನ ವರದಿಗಳನ್ನು ಆಧರಿಸಿ ವಿವರಿಸಲಾಗಿದೆ. ಕರ್ನಾಟಕದಲ್ಲಿರುವ ಉದ್ಯಮ ಸಾಧ್ಯತೆಗಳು, ಐತಿಹಾಸಿಕ ಪ್ರವಾಸಿ ತಾಣಗಳು, ಸಂಪನ್ಮೂಲಗಳು, ಕೃಷಿ, ಆಹಾರ ವೈವಿಧ್ಯ, ಭೌಗೋಳಿಕ ಮಾನ್ಯತೆ ಪಡೆದಿರುವ ವಸ್ತುಗಳು, ಭೌಗೋಳಿಕ ವೈಶಿಷ್ಟ್ಯಗಳು, ಸರ್ಕಾರದ ಯೋಜನೆಗಳು ಮತ್ತು ಅವುಗಳ ಪರಿಣಾಮ ಹೀಗೆ ಹಲವಾರು ಆಯಾಮಗಳ ಕುರಿತು ಚರ್ಚಿಸಲಾಗಿದೆ. ವಿವಿಧ ಪತ್ರಿಕಾ ಬರಹಗಳು, ಸುದ್ದಿ ತುಣುಕುಗಳು, ವಿವಿಧ ವರದಿಗಳ, ಪರಿಣತರ ಅಭಿಪ್ರಾಯಗಳ ಉಲ್ಲೇಖಗಳು ಕೃತಿಯ ಹೂರಣದ ತೂಕ ಹೆಚ್ಚಿಸಿವೆ.



ಪು: 200 ₹180

ಮತ್ತೆ ಹಚ್ಚೋಣ ಕನ್ನಡದ ದೀಪ
ಲೇ: ರಾ.ನಂ. ಚಂದ್ರಶೇಖರ
ಪ್ರ: ಸಪ್ನ ಬುಕ್‌ಹೌಸ್
ಸಂ: 080 40114455

ರಂಗಭೂಮಿಯಿಂದ ಪರಿವರ್ತನೆ...

ಪ್ರಮೋದ

ರಂಗಭೂಮಿ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಂಡು ಸಾಮಾಜಿಕ ಸಮಸ್ಯೆಗಳು, ಮಹಿಳೆಯರ ಮತ್ತು ಮಕ್ಕಳ ನೋವುಗಳು, ಅನಿಷ್ಟ ಪದ್ಧತಿಗಳ ವಿರುದ್ಧ ಹೋರಾಟ ಮಾಡುತ್ತ ಹಿಂದುಳಿದ ಸಮುದಾಯ ಜಾಗೃತಿಗೊಳಿಸುತ್ತಿರುವ ಶೀಲಾ ಹಾಲ್ಕುರಿಕೆ ಕೊಪ್ಪಳ ಜಿಲ್ಲೆಯಲ್ಲಿ ತಮ್ಮದೇ ಮಾರ್ಗದ ಮೂಲಕ ಸಾಮಾಜಿಕ ಬದಲಾವಣೆಗಾಗಿ ಹೆಜ್ಜೆ ಹಾಕುತ್ತಿದ್ದಾರೆ. ಸಮಾಜದಲ್ಲಿ ತನ್ನ ಸಕಾರಾತ್ಮಕ ಬದಲಾವಣೆಗಾಗಿ 'ಡೆಕ್ಕನ್ ಹೆರಾಲ್ಡ್'ನಿಂದ 'ಚೇಂಜ್ ಮೇಕರ್ಸ್ 2023' ಗೌರವಕ್ಕೂ ಪಾತ್ರರಾಗಿದ್ದಾರೆ.

ಶೀಲಾ ಅವರ ಹೋರಾಟದ ಹಾದಿಯಲ್ಲಿ ಸಮುದಾಯಗಳು ಒಳಗೊಳ್ಳುವುದರಿಂದ ನೊಂದವರ ನೋವುಗಳು ಅನಾವರಣಗೊಳ್ಳುತ್ತಿವೆ. ನಾಟಕಗಳ ಮೂಲಕ ನಡೆಸಿದ ಜಾಗೃತಿ ಕಾರ್ಯಕ್ರಮಗಳು ಬಾಲ್ಯವಿವಾಹಗಳನ್ನು ತಡೆದಿವೆ. ಬೀದಿನಾಟಕಗಳು ಅಲೆಮಾರಿ ಸಮುದಾಯದ ಜನರಲ್ಲಿ ಅರಿವು ಮೂಡಿಸಿವೆ.

ಅವನತಿ ಅಂಚಿಗೆ ಸಾಗುತ್ತಿರುವ ರಂಗಭೂಮಿಯನ್ನು ಉಳಿಸುವುದು ಮತ್ತು ಇದೇ ಮಾರ್ಗ ಬಳಸಿಕೊಂಡು ಸಾಮಾಜಿಕ ಸಮಸ್ಯೆಗಳನ್ನು ದೂರ ಮಾಡುವುದು ಶೀಲಾ ಅವರ ಗುರಿ. ಅಲೆಮಾರಿ, ಬುಡಕಟ್ಟು ಸಮುದಾಯಗಳಾದ ದುರ್ಗಮುರಗಿ, ಸಿಂದೋಳಗಿ, ಶಿಳ್ಳೆಕ್ಯಾತ, ಮಲ್ಲ (ಪಾರ್ತ ಮಲ್ಲಯ್ಯ), ಸುಡುಗಾಡು ಸಿದ್ಧ, ಭಜಂತ್ರಿ, ವೇಷಗಾರರು, ಹಕ್ಕಿಪಿಕ್ಕಿ ಸಮುದಾಯದವರನ್ನು ರಂಗಭೂಮಿಯಲ್ಲಿ ಸಕ್ರಿಯವಾಗಿ ತೊಡಗಿಸಿದ್ದಾರೆ. ಮಹಿಳೆಯರು ಮತ್ತು ನಿರ್ದಿಷ್ಟವಾಗಿ ಅಲೆಮಾರಿ ಮಹಿಳೆಯರು ದಿನನಿತ್ಯ ಎದುರಿಸುತ್ತಿರುವ ತಾರತಮ್ಯ ಪ್ರಶ್ನಿಸುವ ಧೈರ್ಯ ತುಂಬುತ್ತಿದ್ದಾರೆ.

ಅಲೆಮಾರಿ ಸಮುದಾಯಗಳಿಗೆ ಅವರ ಮೂಲ ಸಂಸ್ಕೃತಿ ಮತ್ತು ಆಚರಣೆಗಳೇ ಸಂಪತ್ತು. ಅವುಗಳನ್ನು ಉಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ. ಇತ್ತೀಚೆಗೆ ಕೊಪ್ಪಳದಲ್ಲಿ ನಡೆದ ದೇವದಾಸಿ ಮತ್ತು ಅಲೆಮಾರಿಗಳ ರಾಜ್ಯಮಟ್ಟದ ಸಮಾವೇಶ ಉದ್ಘಾಟಿಸಲು ಎಲ್ಲರಿಗೂ ಮರೆತೇ ಹೋಗಿರುವ ಗಂಗೆ ಗೌರಿ ಕಲಾ ಪ್ರಕಾರ ಬಳಸಿದ್ದು ವಿಶೇಷ. ಭಿಕ್ಷೆಗಾಗಿ ನುಡಿಸುತ್ತಿದ್ದ ವಾದ್ಯವನ್ನು ಅಂದು ಹಕ್ಕಿಗಾಗಿ ನುಡಿಸಿದ್ದರು.

ನೊಂದವರು, ದಮನಿತರು ಭರವಸೆಯಿಟ್ಟು ಸಮಸ್ಯೆ ಹೇಳಿದಾಗ 'ಶೀಲಕ್ಕ' ಕಾಳಜಿ ತೋರಿದ್ದಾರೆ. ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿ ಅವರ ಪ್ರೀತಿ, ವಿಶ್ವಾಸ, ನಂಬಿಕೆ ಗಳಿಸಿದ್ದಾರೆ. ತಮ್ಮ ಕಾಲೊನಿ ಮಕ್ಕಳ ತಂಡ ಕಟ್ಟಿ ನಾಟಕ ಹಾಗೂ ಕಿರುನಾಟಕಗಳನ್ನು ಪ್ರದರ್ಶಿಸಿದ್ದಾರೆ.

ಶೀಲಾ ಹಾಲ್ಕುರಿಕೆ

ಒಂದೂವರೆ ದಶಕದ ಹಿಂದೆ ಶೀಲಾ ಸಮಾನ ಮನಸ್ಕರ ಸ್ವಯಂಸೇವಕರ ಜೊತೆ 'ಸಹಜ ಕಲಾತಂಡ' ಕಟ್ಟಿದರು. ಜಾತಿ ತಳಹದಿಯ ತಾರತಮ್ಯ, ಕಮರಿಹೋಗುವ ಮಹಿಳೆಯರ ಕನಸು, ಲೈಂಗಿಕ ಕಿರುಕುಳ, ಮಕ್ಕಳ ಮತ್ತು ಮಹಿಳೆಯರ ಮೇಲಿನ ದೌರ್ಜನ್ಯ, ಮುಟ್ಟಿನ ನೈರ್ಮಲ್ಯದ ಅರಿವಿನ ಅಭಾವ, ಬಾಲ್ಯ ವಿವಾಹ ಸೇರಿದಂತೆ ವಿವಿಧ ಸಮಸ್ಯೆಗಳ ಬಗ್ಗೆ ಮಹಿಳೆಯರಲ್ಲಿ ಜಾಗೃತಿ ಮೂಡಿಸಿದರು.

ನೋವುಗಳೇ ಪ್ರೇರಣೆ: ಶೀಲಾ ಅವರ ಸಾಮಾಜಿಕ ಹೋರಾಟದ ಹಿಂದೆ ನೋವಿನ

ಅಲೆಮಾರಿ ಮಕ್ಕಳ ಜೊತೆ ಶೀಲಾ ಹಾಲ್ಕುರಿಕೆ

ಕಥನಗಳಿವೆ. ವೈಯಕ್ತಿಕ ಬದುಕಿನಲ್ಲಿ ಎದುರಿಸಿದ ಕಷ್ಟ ಅವರನ್ನು ಗಟ್ಟಿಗೊಳಿಸಿದೆ. ಇವುಗಳನ್ನು ಯಾವ ಹಿಂಜರಿಕೆ ಇಲ್ಲದೇ ಹೇಳಿಕೊಳ್ಳುತ್ತಾರೆ. ವೈಯಕ್ತಿಕ ಜೀವನದ ಪಾಠಗಳು ನೋವುಂಡವರ ಮುಂದೆ ಶೀಲಾ ಅವರನ್ನು 'ಶಿಕ್ಷಕಿ'ಯಾಗಿ ಮಾಡಿವೆ.

'ಡೆಕ್ಕನ್ ಹೆರಾಲ್ಡ್'ನಿಂದ ಚೇಂಜ್ ಮೇಕರ್ಸ್ ಗೌರವಕ್ಕೆ ಪಾತ್ರರಾಗಿರುವ ಶೀಲಾ, ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಕಾರಣರಾಗಿರುವವರು

ಕೊಡಗಿನ ಸುಂಟಿಕೊಪ್ಪದಲ್ಲಿ ತಮಿಳುನಾಡಿನ ಅಂತರ್ ಧರ್ಮೀಯ ಕೂಲಿ ಕಾರ್ಮಿಕ ದಂಪತಿಗೆ ಜನಿಸಿದ ಶೀಲಾ ಬಾಲ್ಯದಿಂದಲೂ ನಿಷ್ಠುರ ಮತ್ತು ಅಧ್ಯಯನಶೀಲರಾಗಿದ್ದರು. ತಮ್ಮ ತಂದೆಯ ಮದ್ಯದ ಚಟ ಮತ್ತು ನಿಂದನೆಯಿಂದಾಗಿ ತಾಯಿ ಬಳಲುತ್ತಿರುವುದನ್ನು ಸಾಕ್ಷಾತ್ ನೋಡಿದ್ದರು. ಇದೆಲ್ಲವನ್ನೂ ಸಹಿಸಿಕೊಂಡು ಮಹಿಳೆಯರು ಏಕೆ ಮೌನವಾಗಿ ನರಳಬೇಕು? ಗಟ್ಟಿ ಧ್ವನಿಯಲ್ಲಿ ಯಾಕೆ ವಿರೋಧಿಸಬಾರದು ಎನ್ನುವ ಮನೋಭಾವ ಬೆಳೆಸಿಕೊಂಡರು. ಬಾಲ್ಯದಲ್ಲಿ ಅವರನ್ನು ಕಾಡಿದ ಈ ಜಿಜ್ಞಾಸೆಯೇ ಸಾಹಿತ್ಯ ಮತ್ತು ರಂಗಭೂಮಿಗೆ ಕರೆತಂದಿತು. ಶೀಲಾ ಅವರ ನಾಟಕಗಳು ಜಾತಿ ತಾರತಮ್ಯ, ಕಿರುಕುಳ ಮತ್ತು ಸಾಮಾಜಿಕ ಅನಿಷ್ಟಗಳ ಬಗ್ಗೆ ಸಮಾಜಕ್ಕೆ ಕಠಿಣವಾದ ಸಂದೇಶ ನೀಡುತ್ತವೆ.

ಎಲ್ಲಿಯೂ ಅಸಭ್ಯತೆ ಬಳಸದೆ ಅಥವಾ ಮಹಿಳೆಯನ್ನು ಆಕ್ಷೇಪಿಸದೆ ನಾಟಕ ಪ್ರದರ್ಶನ ಮಾಡಬಹುದು. ಅಶ್ಲೀಲತೆ ನಾಟಕಗಳ ಜೀವಾಳವಲ್ಲ. ಅದು ರಂಗಭೂಮಿಯ ಭಾಗವೂ ಅಲ್ಲ ಎನ್ನುವ ಸಂದೇಶವನ್ನು ಶೀಲಾ ನೀಡುತ್ತಿದ್ದಾರೆ. ಅಲೆಮಾರಿ ಜನರನ್ನು ವೇದಿಕೆಯ ಮೇಲೆ ಕರೆತರುವ ಮೂಲಕ ಅವರ ಕಲೆಯನ್ನು ಪರಿಣಾಮಕಾರಿ ಮಾಧ್ಯಮ ಮಾಡುವ ಪ್ರಯತ್ನ ಮಾಡುತ್ತಿದ್ದಾರೆ.

ಬಾಲ್ಯದಿಂದಲೇ ಕಷ್ಟದ ಹಾದಿಯಲ್ಲಿ ಸಾಗಿ ಬಂದ ಶೀಲಾ ಅವರಿಗೆ ನೀನಾಸಂಗೆ ಬಂದಾಗ ಬದುಕು ಬದಲಾಯಿತು. ಅಲ್ಲಿ ಸಿಕ್ಕ ಹೆಸರಾಂತ ನಾಟಕಕಾರ ಹಾಲ್ಕುರಿಕೆ ಶಿವಶಂಕರ್ ಬಾಳ ಸಂಗಾತಿಯಾದರು. ಶೀಲಾ ರಂಗಭೂಮಿ ಆಸಕ್ತಿಗೆ ಮತ್ತಷ್ಟು ಚೈತನ್ಯ ಸಿಕ್ಕಂತಾಯಿತು. ಜಟಿಲವಲ್ಲದ ದೇಹ ಭಾಷೆ, ಧ್ವನಿ ಮಾಡ್ಯುಲೇಶನ್ ಪ್ರಮುಖ ಪಾತ್ರಗಳನ್ನು ಗಳಿಸಲು ಸಹಾಯ ಮಾಡಿತು.

ಕೆ.ವಿ. ಅಕ್ಷರ ನಿರ್ದೇಶನದ 'ಸಂಸಾರದಲ್ಲಿ ಸನಿದಪ', ವಿಲಿಯಂ ಷೇಕ್ಸ್‌ಪಿಯರ್ ರಚನೆಯ 'ದ ಮಿಡ್ ಸಮ್ಮರ್ ನೈಟ್ ಡ್ರೀಮ್ಸ್' ನಾಟಕದ ಕನ್ನಡ ರೂಪಾಂತರ 'ದಿ ಪ್ರಮೀಳಾರ್ಜುನೀಯಂ', ಚಂದ್ರಶೇಖರ್ ಕಂಬಾರರು ಬರೆದ 'ಸಿಂಗಾರೆವ್ವ ಮತ್ತು ಅರಮನೆ', ಪಿ. ಲಂಕೇಶ ಅವರ 'ದೇವೀರಿ' ಸೇರಿದಂತೆ ಹಲವಾರು ನಾಟಕಗಳಲ್ಲಿ ಅಭಿನಯಿಸಿದ್ದಾರೆ. ಒಂದು ಕಾಲದಲ್ಲಿ ಮನೆಮನೆ ಮಾತಾಗಿದ್ದ ವಠಾರ, ಕದನ, ವನಿತಾ ಧಾರವಾಹಿಗಳು ಖ್ಯಾತಿಯನ್ನು ತಂದುಕೊಟ್ಟಿವೆ.

ಬೆಂಗಳೂರಿನಲ್ಲಿ ಮಕ್ಕಳು ಮತ್ತು ಮಹಿಳೆಯರ ಸಬಲೀಕರಣಕ್ಕಾಗಿ ಎನ್‌ಜಿಒಗಳಲ್ಲಿ ಮಾಡಿದ ಕೆಲಸ ಇದೇ ಕ್ಷೇತ್ರದ ಹೊಸ ಮಗ್ಗಲು ಪರಿಚಯಿಸಿತು. ನೊಂದ ಮಕ್ಕಳು ಮತ್ತು ಹೆತ್ತವರು ಈ ವೇದಿಕೆಯಲ್ಲಿ ತೋಡಿಕೊಳ್ಳುತ್ತಿದ್ದ ನೋವು, ಆಳವಾದ ಭಯ ಹಾಗೂ ಆತಂಕ ಹೊಸ ವಿಚಾರಗಳನ್ನು ತಿಳಿದುಕೊಳ್ಳಲು ನೆರವಾಯಿತು. ಹವ್ಯಾಸಿ ಕಲಾವಿದರಿಗೆ, ಶಿಕ್ಷಕರಿಗೆ ಮತ್ತು ಉಪನ್ಯಾಸಕರಿಗೆ ನಾಟಕಗಳನ್ನು ಪ್ರದರ್ಶಿಸಲು ಶೀಲಾ ತರಬೇತಿ ನೀಡುತ್ತಿದ್ದಾರೆ. ಬೇರೆ ಕಡೆಯ ನಾಟಕಗಳನ್ನು ಗ್ರಾಮೀಣ ಭಾಗದಲ್ಲಿ ಪ್ರದರ್ಶನ ಮಾಡಲಾಗುತ್ತದೆ. ಜನಕೇಂದ್ರದ ವಕಾಲತ್ತು ಶೀಲಾ ಮೂಲ ಉದ್ದೇಶ. ಸೀಮಿತ ಆರ್ಥಿಕ ಸಂಪನ್ಮೂಲಗಳ ನಡುವೆಯೂ ಕಲಾವಿದರಿಗೆ ಅದರಲ್ಲೂ ಮಹಿಳೆಯರಿಗೆ 2014ರಿಂದ 'ಸಹಜ ರಂಗಪುರಸ್ಕಾರ' ಪ್ರಶಸ್ತಿ ನೀಡುತ್ತಿದ್ದಾರೆ.

ಮದ್ಯವ್ಯಸನಿ ಗಂಡಂದಿರಿಂದ ಹಣಕ್ಕಾಗಿ ಹಲ್ಲೆಗೆ ಈಡಾಗುವುದು, ಹೆಣ್ಣುಮಕ್ಕಳ ಓದಿಗೆ ಸೀಮಿತ ಅವಕಾಶಗಳಷ್ಟೇ ಇರುವುದು, ಕುಟುಂಬದಲ್ಲಿ ಲಿಂಗ ತಾರತಮ್ಯ ಮುಂದುವರೆದಿರುವುದು- ಇಂತಹ ಎಲ್ಲ ನೋವಿನ ಕಥೆಗಳಿಗೆ ಧ್ವನಿಯಾಗುವ ಶೀಲಾ ಹಾಲ್ಕುರಿಕೆ, ನೊಂದವರ ಕಣ್ಣೀರು ಒರೆಸುತ್ತಾರೆ. ಸಾಹಿತ್ಯ ಹಾಗೂ ರಂಗಭೂಮಿ ಮೂಲಕ ಶೀಲಾ ಸಾಮಾಜಿಕ ಸಮಸ್ಯೆಗಳಿಗೆ ಮುಲಾಮು ನೀಡುತ್ತಾರೆ. 'ಈ ಬದಲಾವಣೆ ನಿಧಾನವಾಗಿಯಾದರೂ ಭವಿಷ್ಯದಲ್ಲಿ ಉತ್ತಮ ಫಲಿತಾಂಶ ಕೊಡುತ್ತದೆ. ಪರ್ಯಾಯ ಜೀವನ ತೋರಿಸದೆ ಜೀವನಕ್ಕಾಗಿ ಭಿಕ್ಷೆ ಬೇಡಬೇಡಿ ಎಂದು ನಾವು ಮಕ್ಕಳಿಗೆ ಹೇಳಲು ಸಾಧ್ಯವಿಲ್ಲ. ಅದು ಸರ್ಕಾರದ ಜವಾಬ್ದಾರಿ' ಎಂದು ಶೀಲಾ ಹೇಳುತ್ತಾರೆ. ಸಂವಿಧಾನದ ಮೊದಲಪದ 'ನಾವು' ಎನ್ನುವುದೇ ಬದುಕು ಎನ್ನುತ್ತಾರೆ.

ಹೀಗೆ ಒಂದೂವರೆ ದಶಕದಿಂದ ನಾಟಕಗಳ ಮೂಲಕ ಬದಲಾವಣೆ ಗಾಳಿ ಹರಡಲು ಪ್ರಯತ್ನಿಸುತ್ತಿರುವ ಶೀಲಾ ಕೊಪ್ಪಳದ ಕೊಳೆಗೇರಿ ಗಾಂಧಿನಗರದ ದೇವಸ್ಥಾನದ ಮುಂಭಾಗದಲ್ಲಿ ನಿಂತು ನೊಂದ ಮಹಿಳೆಯರ ಎದುರು 'ಗಂಡಸರಿಗೆ ಒಂದು ರೀತಿ, ಹೆಂಗಸರಿಗೆ ಇನ್ನೊಂದು ದಾರಿ ಯಾಕೆ ಗೊತ್ತಾ?' ಎನ್ನುವ ಹಾಡು ಹಾಡುತ್ತಿದ್ದರೆ ಸಮಾಜದಲ್ಲಿ ಬೇರುಬಿಟ್ಟ ಲಿಂಗ ಅಸಮಾನತೆ, ದೌರ್ಜನ್ಯ, ಕಿರುಕುಳ ಮತ್ತು ನಿಂದನೆ ಮುಖವಾಡಗಳು ಕಳಚುತ್ತಲೇ ಹೋಗುತ್ತವೆ. 'ನಿರಂತರ ಪ್ರಯತ್ನವೊಂದೇ ಇದಕ್ಕೆ ಉತ್ತಮ ಮಾರ್ಗ' ಎನ್ನುವ ಅವರ ಗಟ್ಟಿ ನಂಬಿಕೆ ಮತ್ತೆ ಮತ್ತೆ ನೆನಪಾಗುತ್ತದೆ.

ಮೊಟ್ಟೆ ಎಲ್ಲಿ ಇಡ್ಲೆ?

8ನೇ ಪುಟದಿಂದ...

ನ್ಯಾಯಾಲಯದ ಆದೇಶವನ್ನು ಅರಿಯದ ಆಮೆಗಳು ಮುಂದಿನ ಋತುವಿನಲ್ಲಿ ಹೆಚ್ಚೆಚ್ಚು ಸಂಖ್ಯೆಯಲ್ಲಿ ಬಂದು ಮೊಟ್ಟೆಗಳನ್ನು ಇಡುವ ಪ್ರಕ್ರಿಯೆ ಪ್ರಾರಂಭಿಸಿದವು. ತನ್ನ ಪರವಾಗಿ ಆದೇಶ ಬಂದಿದ್ದನ್ನು ಪರಿಗಣಿಸಿದ ಖಾಸಗಿ ಕಂಪನಿಯು ಆಮೆಗಳ ಮೊಟ್ಟೆಯಿಡುವ ಪ್ರದೇಶದಲ್ಲೇ ರಸ್ತೆಯನ್ನು ಮಾಡಿತು. ಈ ಸಂದರ್ಭದಲ್ಲಿ ಕೆಲವು ಆಮೆಗಳು ಸಾವನ್ನಪ್ಪಿದವು. ಆಮೆಯ ಗೂಡಿನ ಮೇಲೆ ಮಣ್ಣು ಸುರಿದು ರಸ್ತೆಯನ್ನು ನಿರ್ಮಿಸಲಾಯಿತು. ಆಲೀವ್ ರಿಡ್ಲೆಗಳ ಒದಗಿದ ಈ ಅಪಾಯವನ್ನು ಅರಣ್ಯ ಇಲಾಖೆ ನೋಡಿಯೂ ನೋಡದಂತೆ ಕಣ್ಮುಚ್ಚಿ ಕುಳಿತಿತು. ರಸ್ತೆಯ ಅಂಚಿನಿಂದ ಹಲವು ಮೀಟರುಗಳ ದೂರದಲ್ಲಿ ಮೊಟ್ಟೆಯಿಟ್ಟ ಜಾಗಗಳನ್ನು ಗುರುತಿಸಿ, ಇಲಾಖೆಯ ಗಮನಕ್ಕೆ ತಂದರೂ ಕ್ರಮ ಕೈಗೊಳ್ಳಲಿಲ್ಲ.

ಲಾಗಾಯ್ತಿನಿಂದ ಬಳಕೆಯಾಗುತ್ತಿರುವ ತಮ್ಮ ವಂಶಾಭಿವೃದ್ಧಿ ತಾಣದ ಮೇಲೆ ಮಾನವರು ದಾಳಿ ಇಡುತ್ತಿದ್ದಾರೆ ಎನ್ನುವ ವಿಷಯ ಗೊತ್ತಿಲ್ಲದ ಆಲೀವ್ ರಿಡ್ಲೆ ಆಮೆಗಳು ಮತ್ತೆ ಮತ್ತೆ ಪ್ರತಿವರ್ಷ ಟೊಂಕಾ ಬೀಚ್‌ಗೆ ಬಂದು ಮೊಟ್ಟೆಯಿಡುತ್ತಿವೆ. ಕೆಲವು ದಿನಗಳ ಹಿಂದೆ ಸ್ಥಳೀಯ ಮೀನುಗಾರರು, ಹೊನ್ನಾವರ ಫೌಂಡೇಷನ್ ಮತ್ತು ಬೆಂಗಳೂರಿನ ವೃಕ್ಷ ಸಂಸ್ಥೆಯ ಪದಾಧಿಕಾರಿಗಳು ಟೊಂಕಾ ಬೀಚ್‌ಗೆ ತೆರಳಿ, ಆಮೆಗಳು ಮರಿಯಾಗುತ್ತಿರುವುದನ್ನು ಗಮನಿಸಿ, ಒತ್ತಾಯಪೂರ್ವಕವಾಗಿ ಅರಣ್ಯ ಇಲಾಖೆಯ ಸಹಕಾರವನ್ನು ಪಡೆದು ನೂರಾರು ಆಮೆ ಮರಿಗಳನ್ನು ಸಮುದ್ರಕ್ಕೆ ಬಿಡುವ ಪ್ರಯತ್ನದಲ್ಲಿ ಯಶಸ್ವಿಯಾದರು. ಸಮುದ್ರದಲ್ಲಿ ವಾಸಿಸುವ, ಬೆಸ್ತಸ್ನೇಹಿಯಾದ ಒಂದು ಪ್ರಭೇದವನ್ನೇ ಇಲ್ಲವೆಂದು ಪರಿಗಣಿಸುವ ವರದಿಯನ್ನು ಅದು ಹೇಗೆ ಅರಣ್ಯ ಇಲಾಖೆ ಮಾನ್ಯ ಮಾಡಿತು ಮತ್ತು ತನ್ನ ಹೊಣೆಗಾರಿಕೆಯಿಂದ ಹೇಗೆ ನುಣುಚಿಕೊಳ್ಳುತ್ತಿದೆ ಎಂಬ ಪ್ರಶ್ನೆ ಅಲ್ಲಿಗೆ ಹೋದವರನ್ನು ಕಾಡಿತು.

ಆಮೆಗಳ ವಂಶಾಭಿವೃದ್ಧಿ ಪ್ರದೇಶವನ್ನು ರಕ್ಷಣೆ ಮಾಡದಿದ್ದಲ್ಲಿ ಮುಂದಿನ ದಿನಗಳಲ್ಲಿ ಈ ಭಾಗದ ಬೆಸ್ತರ ಬದುಕು ದುಸ್ತರವಾಗಲಿದೆ ಮತ್ತು ಸಂರಕ್ಷಣೆಗೆ ಬೆನ್ನು ತೋರುವ ಅರಣ್ಯ ಇಲಾಖೆಯ ನಡೆ ಮಾನವೀಯತೆಗೆ ಬಗೆದ ಅಪಚಾರವಾಗಿದೆ ಎನ್ನುತ್ತಾರೆ ಆಲೀವ್ ರಿಡ್ಲೆ ಆಮೆಗಳ ಕುರಿತಾಗಿ ಕಳೆದ ಹಲವು ವರ್ಷಗಳಿಂದ ಸಂಶೋಧನೆ ನಡೆಸುತ್ತಿರುವ ಸ್ಥಳೀಯ ಜೀವವಿಜ್ಞಾನಿ ಪ್ರಕಾಶ್ ಮೇಸ್ತರ. ಇದೇ ಪ್ರದೇಶದಲ್ಲಿ 1960ರಲ್ಲಿ ಚಿಕ್ಕ ಪ್ರಮಾಣದ ಬಂದರನ್ನು ನಿರ್ಮಿಸಲಾಗಿತ್ತು. ತೀವ್ರವಾದ ಕಡಲು ಕೊರೆತ ಹಾಗೂ ಸವಕಳಿಯಿಂದಾಗಿ 1980ರ ಹೊತ್ತಿಗೆ ಇಡೀ ಬಂದರು ಕೊಚ್ಚಿಕೊಂಡು ಹೋಗಿತ್ತು ಎಂದು ನೆನಪಿಸುತ್ತಾರೆ ಕರಾವಳಿ ಮೀನುಗಾರರ ಸಂಘದ ಕಾರ್ಯದರ್ಶಿಯಾದ ರಾಜೇಶ್ ಈಶ್ವರ್ ತಂಡೇಲ ಹಾಗೂ ಸದಸ್ಯರಾದ ರಮೇಶ್ ತಂಡೇಲ. ಇವರ ಮಾತುಗಳು ಅರಣ್ಯ ಇಲಾಖೆಯ ಕೆಪ್ಪ ಕಿವಿಗೆ ತಲುಪುವುದಾದರೂ ಹೇಗೆ?



ಆಮೆಗಳ ನಡಿಗೆ ಮಾರ್ಗದಲ್ಲಿ ರಂಗೋಲಿ ಚಿತ್ತಾರ...



ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ದಕ್ಷ್ನ ಚಿಕ್ಕ ಶೀರ್ಷಿಕೆಯ ಕಥೆಯ — ಗಾಳ ಮತ್ತು ಹಾವು

• ಕಲೆ-ಪರಿಕಲ್ಪನೆ: ಸಂತೋಷ್ ಸಸಿಹಿತ್ಲು



ಪದ-ಬದಲಾಟ

1) ಮರಿ ಕಣ್ಣು =......................
2) ಮನೆ ಸಾಲರಿ =......................
3) ಸವಿ ರಾಮಣ್ಣ =......................
4) ತಾಯಿಯ ಮನ =......................

ಹಿಂಗಂದ್ರ ಏನು?

7-11 ಆತು

ಕುರುಕ್ಷೇತ್ರ ಯುದ್ಧದಲ್ಲಿ ಬಳಕೆಯಾದ ಏಳು ಅಕ್ಷೋಹಿಣಿ ಹಾಗೂ 11 ಅಕ್ಷೋಹಿಣಿ ಸೈನ್ಯ ಬಲವನ್ನು ನೆನಪಿಸಿಕೊಳ್ಳಿ ಅಂದರೆ ಯುದ್ಧದ ಸಂಕೇತವೇ 7-11. ಅಂದರೆ ಒಂದು ಕೆಲಸದಲ್ಲಿ ಆಗುವ ದೊಡ್ಡ ಹೊಡೆದಾಟವೇ ಆಯಿತು ಎಂಬುದಕ್ಕೆ 7-11 ಆತು ಅನ್ನುವರು.

ಅಕ್ಷರಗಳಿಂದ ಚಿತ್ರ ರಚಿಸು

ಇದೇ ದಿನಾಂಕ 22ರಂದು ಸ್ಕೌಟ್ಸ್ ಹಾಗೂ ಗೈಡ್ಸ್ ಸಂಸ್ಥಾಪಕ ಬೇಡನ್ ಪೋವೆಲ್ ಅವರ ಹುಟ್ಟುಹಬ್ಬ ಅದಕ್ಕಾಗಿ SCOUT BOY ಅಕ್ಷರಗಳಿಂದಲೇ ಸ್ಕೌಟ್ ಬಾಯ್ ಚಿತ್ರ ರಚಿಸೋಣ.

ಇಲಿ ಅಕ್ಷರಗಳಲ್ಲಿ ಇಲಿ ಚಿತ್ರವನ್ನು ಗಿಳಿ ಅಕ್ಷರಗಳಲ್ಲಿ ಗಿಳಿ ಚಿತ್ರ ತೆಗೆಯಲು ಪ್ರಯತ್ನಿಸಿರಿ

ಜಾಣಪದ ಆಟ

ಇಲ್ಲಿ ಕೊಟ್ಟಿರುವ 'ಪರ' ಎಂಬ ಪದದೊಳಗೆ ಇನ್ನೆರಡು ಅಕ್ಷರ ತುಂಬಿ ನಾಲ್ಕಕ್ಷರ ಪದ ಮಾಡಿ

1. ಪ __ __ ರ
2. ಪ __ __ ರ
3. ಪ __ __ ರ
4. ಪ __ __ ರ
5. ಪ __ __ ರ
6. ಪ __ __ ರ

ಹೊಂದಿಸು ಆನಂದಿಸು

ಗಾದೆ ಮಾತು ನೆನಪಿಸಿಕೊಂಡು ಹೊಂದಿಸು

1. ಅಕ್ಕಿ ಮೇಲೆ ಆಸೆ ನೆಂಟರ ಮೇಲೆ	A) ಗೊಬ್ಬರ
2. ಅಂಕೆ ಇಲ್ಲದ ಕಪಿ ಸುಟ್ಟಿತು	B) ಒಲೆ
3. ಹಗ್ಗದ ಆಸೆಗೆ ಮುಗ್ಗಿದ	C) ಬುದ್ಧಿ
4. ಅಂಗೈ ಹುಣ್ಣಿಗೆ...........ಬೇಕೆ?	D)ಆನೆ
5. ಅಟ್ಟ ಮೇಲೆ....ಉರಿತು	E) ಕನ್ನಡಿ
6. ಕೆಟ್ಟ ಮೇಲೆ......... ಬಂತು	F) ದೀಪ
7. ಅಡ್ಡ ಗೋಡೆ ಮೇಲೆ........ಇಟ್ಟಂಗೆ	G) ಪ್ರೀತಿ
8. ಅಡಿಕೆಗೆ ಹೋದ ಮಾನ......ಕೊಟ್ಟರು ಬರದು	H) ಜೋಳ
9. ಅನ್ನ ಹಾಕಿದ ಮನೆ ಕೆಡಲ್ಲ........ಹಾಕಿದ ಹೊಲ ಕೆಡಲ್ಲ	I) ಲಂಕೆ

ಪುಟಾಣಿ ಪದ ಬಂಧ

	ಮಂಗ		ಮಂಗನಿಂದ ಉಂಟಾದ ಅಶುಭ
	ವರ		ವರ ಅಕ್ರಮಿಸಿಕೊಂಡ ಸುತ್ತಲಿನ ಜಾಗ
	ದರಿ		ದರಿ ಇದೆ ಎಂದು ಹೆದರಿಸು
	ಗಡಿ		ಗಡಿ ಗುರುತಿಸಿ ಬೇರ್ಪಡಿಸು
	ರಾಮ		ರಾಮನಿಂದ ನಡೆದ ವಿಮರ್ಶೆ

ಗಣಿತದಲ್ಲಿ ಗರ್ದಿಗಮ್ಮತ್ತು

ಕೂಡಿಸುವ ಮೊದಲೇ ಉತ್ತರ

ನಿಮ್ಮ ಗೆಳೆಯನಿಗೆ ಯಾವುದಾದರೂ ಒಂದು ಸಂಖ್ಯೆ ಹೇಳಲು ತಿಳಿಸಿ. ಅವನು ಇನ್ನೂ ಎರಡು ಸಂಖ್ಯೆ ಹೇಳುವವನಿದ್ದಾನೆ. ಅದಕ್ಕೆ ನೀವು ಎರಡು ಸಂಖ್ಯೆ ಹೇಳುತ್ತೀರಿ. ಒಟ್ಟು 5 ಸಂಖ್ಯೆ ಕೂಡಿಸುವ ಮೊದಲೇ ನೀವು ಅವನಿಗೆ ಉತ್ತರ ಬರೆದು ಕೊಡುವಿರಿ. ಆ ಉತ್ತರ ಸರಿ ಇರುತ್ತದೆ. ಅದು ಹೇಗೆ? ಹೀಗೆ:- ಉದಾಹರಣೆಗೆ ನಿಮ್ಮ ಮಿತ್ರ 85 ಎಂಬ ಸಂಖ್ಯೆ ಹೇಳಿದರೆ ನೀವು 85ರಲ್ಲಿ 2 ಕಳೆದು 83ಕ್ಕೆ ಹಿಂದೆ 2 ಹಚ್ಚಿ 283(ಯಾವಾಗಲೂ 2 ಕಳೆದು ಹಿಂದೆ 2 ಹಚ್ಚಿ ಹೇಳುವುದು) ಎಂದು ಮೊದಲೇ ಉತ್ತರ ಬರೆದು ಕೊಟ್ಟುಬಿಡಿ. ಈಗ ಆತ ಮತ್ತೆ ಎರಡು ಸಂಖ್ಯೆ 64, 37 ಹೇಳುತ್ತಾನೆಂದುಕೊಂಡರೆ ನೀವು 99ರಲ್ಲಿ 64 ಕಳೆದು 35ನ್ನು ಹಾಗೂ 99ರಲ್ಲಿ 37 ಕಳೆದು 62 ಅನ್ನು ಹಚ್ಚಿಕೊಂಡು ಐದು ಸಂಖ್ಯೆ ಕೂಡಿಸಿ ತೋರಿಸಿ. 283 ಉತ್ತರ ಬರುತ್ತದೆ.

ತಾಳೆ :- 85 ಮಿತ್ರನ ಸಂಖ್ಯೆ

64 ಮಿತ್ರನ ಸಂಖ್ಯೆ

37 ಮಿತ್ರನ ಸಂಖ್ಯೆ

99-64 = 35 ನಿಮ್ಮ ಸಂಖ್ಯೆ

99-37 = 62 ನಿಮ್ಮ ಸಂಖ್ಯೆ

283 ಕೂಡಿಸಿ ತೋರಿಸಿದಾಗ

ಮೊದಲೇ ಉತ್ತರ ಹಚ್ಚಿಕೊಳ್ಳುವುದು ಹೀಗೆ

85-2 = 83

2ನ್ನು ಮೊದಲು ಸೇರಿಸಿದಾಗ 283

ಕಳೆದ ಸಂಚಿಕೆಯ ಸರಿ ಉತ್ತರಗಳು

ಜಾಣಪದ ಆಟ

1 ಆಪಾದನೆ 2 ಕಸವಿಸಿ 3 ಜಮಾವಣೆ 4 ಜಾಗರಣೆ 5 ರಾರಾಜಿಸು

ಅದಲು ಬದಲು

1 ಮುಳ್ಳುಕೊಚ್ಚಿ 2 ಸರಿ ಅಣ್ಣ 3 ಕವನರೂಪ 4 ಬಗೆಹರಿಸು

ಮಜ ಮಜ ಮಜಕೂರದ ಕಳೆದ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು

ಕೇಶವ ಪ್ರಸಾದ್ ಬಿ.ಆರ್.
ಲೋಕಿಕೆರೆ (ದಾವಣಗೆರೆ)

ಅಪೂರ್ವಾ ತಳವಾರ
ಕುಳಗೇರಿ ಕ್ರಾಸ್ (ಬಾಗಲಕೋಟೆ)

ಸಮೃದ್ಧಿ, ಬೆಂಗಳೂರು

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಕ್ರಿಕೆಟ್ ಟೆಸ್ಟ್: ಲಯನ್‌ಗೆ 5 ವಿಕೆಟ್; ಆಸ್ಟ್ರೇಲಿಯಾ ಹೋರಾಟ

ಭಾರತದ ನೆರವಿಗೆ ಅಕ್ಷರ್– ಅಶ್ವಿನ್

ಪ್ರಜಾವಾಣಿ ವಾರ್ತೆ

ನವದೆಹಲಿ: ಅಕ್ಷರ್ ಪಟೇಲ್ ಮತ್ತು ಆರ್.ಅಶ್ವಿನ್ ಜೋಡಿ ಎಂಟನೇ ವಿಕೆಟ್‌ಗೆ 114 ರನ್‌ಗಳನ್ನು ಸೇರಿಸಿ, ಆಸ್ಟ್ರೇಲಿಯಾ ವಿರುದ್ಧದ ಕ್ರಿಕೆಟ್ ಟೆಸ್ಟ್ ಪಂದ್ಯದಲ್ಲಿ ಭಾರತ ತಂಡವನ್ನು ಭಾರಿ ಹಿನ್ನಡೆಯಿಂದ ಪಾರು ಮಾಡಿತು.

ಅರುಣ್ ಜೇಟ್ಲಿ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಬಾರ್ಡರ್–ಗಾವಸ್ಕರ್ ಟ್ರೋಫಿ ಸರಣಿಯ ಎರಡನೇ ಪಂದ್ಯದ ಎರಡನೇ ದಿನದಾಟದಲ್ಲಿ ನೇಥನ್ ಲಯನ್ (67ಕ್ಕೆ 5) ಕೈಚಳಕ ಮೆರೆದರು.

ಭಾರತದ ಅಗ್ರಕ್ರಮಾಂಕದ ಬ್ಯಾಟರ್‌ಗಳು ವಿಫಲರಾದ ಕಾರಣ 139 ರನ್ ಆಗುವಷ್ಟರಲ್ಲಿ ಏಳು ವಿಕೆಟ್‌ಗಳು ಬಿದ್ದವು. ಮೊದಲ ಇನಿಂಗ್ಸ್‌ನಲ್ಲಿ 263 ರನ್ ಗಳಿಸಿದ್ದ ಪ್ಯಾಟ್ ಕಮಿನ್ಸ್ ಬಳಗ ಭಾರಿ ಮುನ್ನಡೆಯ ಕನಸು ಕಂಡಿತ್ತು.

ಆದರೆ ಅಕ್ಷರ್ (74ರನ್, 115 ಎ., 4X9, 6X3) ಮತ್ತು ಅಶ್ವಿನ್ (37 ರನ್, 71 ಎ., 4X5) ಅವರ ಛಲದ ಆಟದಿಂದ ರೋಹಿತ್ ಶರ್ಮಾ ಬಳಗ ಮೊದಲ ಇನಿಂಗ್ಸ್‌ನಲ್ಲಿ 262 ರನ್ ಗಳಿಸಿ, ಕೇವಲ ಒಂದು ರನ್‌ನಿಂದ ಹಿಂದೆ ಬಿದ್ದಿತು.

ದಿನದಾಟದ ಅಂತ್ಯಕ್ಕೆ ಪ್ರವಾಸಿ ತಂಡ ಎರಡನೇ ಇನಿಂಗ್ಸ್‌ನಲ್ಲಿ ಒಂದು ವಿಕೆಟ್‌ಗೆ 61 ರನ್ ಗಳಿಸಿದ್ದು, ಒಟ್ಟಾರೆ 62 ರನ್‌ಗಳ ಮುನ್ನಡೆ ಸಾಧಿಸಿದೆ. ಉಸ್ಮಾನ್ ಖ್ವಾಜಾ (6) ಬೇಗನೇ ಔಟಾದರೂ, ಟ್ರಾವಿಸ್ ಹೆಡ್ ಹಾಗೂ ಮಾರ್ನಸ್ ಲಾಬುಷೇನ್ ಹೆಚ್ಚಿನ ವಿಕೆಟ್ ಬೀಳದಂತೆ ನೋಡಿಕೊಂಡರು.

ಲಯನ್ ಮಿಂಚು: ಆತಿಥೇಯ ತಂಡ ವಿಕೆಟ್ ನಷ್ಟವಿಲ್ಲದೆ 21 ರನ್‌ಗಳಿಂದ ಆಟ ಮುಂದುವರಿಸಿತ್ತು. ರೋಹಿತ್ ಶರ್ಮಾ ಮತ್ತು ಕೆ.ಎಲ್.ರಾಹುಲ್ ಅವರು ಬೆಳಿಗ್ಗೆ ಎಂಟು ಓವರ್ ಗಳನ್ನು ಸಮರ್ಥವಾಗಿ ಎದುರಿಸಿದರು.

ರಾಹುಲ್ ಅವರನ್ನು ಎಲ್‌ಬಿ ಬಲೆಗೆ ಬೀಳಿಸಿದ ಲಯನ್ ಈ ಜತೆಯಾಟ ಮುರಿದರು. ಅಲ್ಪ ಸಮಯದ ಬಳಿಕ ರೋಹಿತ್ (32 ರನ್, 69 ಎ., 4X2), ಲಯನ್ ಎಸೆತದಲ್ಲಿ ಬೌಲ್ಡ್ ಆದರು. ಚೇತೇಶ್ವರ ಪೂಜಾರ ತಮ್ಮ 100ನೇ ಪಂದ್ಯದಲ್ಲಿ ಶೂನ್ಯಕ್ಕೆ ಔಟಾದರು. ಅವರ ವಿಕೆಟ್ ಕೂಡಾ ಲಯನ್ ಪಾಲಾಯಿತು.

ಶ್ರೇಯಸ್ ಅಯ್ಯರ್ (4) ಬೇಗನೇ ಔಟಾದ ಕಾರಣ ಭಾರತ ಕುಸಿತದ ಹಾದಿ ಹಿಡಿಯಿತು. ವಿರಾಟ್ ಕೊಹ್ಲಿ (44 ರನ್, 84 ಎ., 4X4) ಮತ್ತು ಜಡೇಜ (26 ರನ್, 74 ಎ., 4X4) ಐದನೇ ವಿಕೆಟ್‌ಗೆ 59 ರನ್ ಸೇರಿಸಿದರಾದರೂ, 10 ರನ್‌ಗಳ ಅಂತರದಲ್ಲಿ ಇಬ್ಬರೂ ಔಟಾದರು. ಆ ಬಳಿಕ ಅಕ್ಷರ್ ಹಾಗೂ ಅಶ್ವಿನ್ ಸೇರಿಕೊಂಡು ತಂಡವನ್ನು ಭಾರಿ ಹಿನ್ನಡೆಯಿಂದ ಪಾರು ಮಾಡಿದರು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಆಸ್ಟ್ರೇಲಿಯಾ 263. ಭಾರತ 83.3 ಓವರ್‌ಗಳಲ್ಲಿ 262 (ರೋಹಿತ್ ಶರ್ಮಾ 32, ಕೆ.ಎಲ್.ರಾಹುಲ್ 17, ವಿರಾಟ್ ಕೊಹ್ಲಿ 44, ರವೀಂದ್ರ ಜಡೇಜ 26, ಅಕ್ಷರ್ ಪಟೇಲ್ 74, ಆರ್.ಅಶ್ವಿನ್ 37, ನೇಥನ್ ಲಯನ್ 67ಕ್ಕೆ 5, ಮ್ಯಾಟ್ ಕುನೆಮನ್ 72ಕ್ಕೆ 2, ಟಾಡ್ ಮರ್ಫಿ 53ಕ್ಕೆ 2) ಎರಡನೇ ಇನಿಂಗ್ಸ್: ಆಸ್ಟ್ರೇಲಿಯಾ 12 ಓವರ್‌ಗಳಲ್ಲಿ 1 ವಿಕೆಟ್‌ಗೆ 61 (ಟ್ರಾವಿಸ್ ಹೆಡ್ ಬ್ಯಾಟಿಂಗ್ 39, ಮಾರ್ನಸ್ ಲಾಬುಷೇನ್ ಬ್ಯಾಟಿಂಗ್ 16)

ಅಕ್ಷರ್ ಪಟೇಲ್ ಮತ್ತು ಆರ್. ಅಶ್ವಿನ್ ರನ್ ಗಳಿಸಿದರು –ಪಿಟಿಐ ಚಿತ್ರ

ವಾರ್ನರ್ ‘ಔಟ್’

ಆಸ್ಟ್ರೇಲಿಯಾ ತಂಡದ ಆರಂಭಿಕ ಬ್ಯಾಟರ್ ಡೇವಿಡ್ ವಾರ್ನರ್ ಎರಡನೇ ಟೆಸ್ಟ್ ಪಂದ್ಯದ ಇನ್ನುಳಿದ ಅವಧಿಯಲ್ಲಿ ಆಡುವುದಿಲ್ಲ. ಅವರಿಗೆ ‘ಕಂಕಷನ್’ ಬದಲಿ ಆಟಗಾರನಾಗಿ ಮ್ಯಾಥ್ಯೂ ರೆನ್‌ಷಾ ಅಂತಿಮ ಇಲೆವೆನ್‌ನಲ್ಲಿ ಸ್ಥಾನ ಪಡೆದಿದ್ದಾರೆ.

ಮೊದಲ ದಿನದಾಟದ ವೇಳೆ ಮೊಹಮ್ಮದ್ ಸಿರಾಜ್ ಅವರ ಬೌಲಿಂಗ್‌ನಲ್ಲಿ ಚೆಂಡು, ವಾರ್ನರ್ ಹೆಲ್ಮೆಟ್‌ಗೆ ಬಡಿದಿತ್ತು. 15 ರನ್ ಗಳಿಸಿದ ಔಟಾಗಿದ್ದ ಅವರು ಭಾರತದ ಇನಿಂಗ್ಸ್ ವೇಳೆ ಫೀಲ್ಡಿಂಗ್‌ಗೆ ಇಳಿದಿರಲಿಲ್ಲ.

ವಿರಾಟ್ ಕೊಹ್ಲಿ ಅಸಮಾಧಾನ

ವಿರಾಟ್ ಕೊಹ್ಲಿ ಅವರು ಮ್ಯಾಟ್ ಕುನೆಮನ್ ಎಸೆತದಲ್ಲಿ ಎಲ್‌ಬಿಡಬ್ಲ್ಯು ಬಲೆಗೆ ಬಿದ್ದರು. ಅಂಪೈರ್ ತೀರ್ಪನ್ನು ಪ್ರಶ್ನಿಸಿ ಅವರು ಡಿಆರ್‌ಎಸ್ ಮೊರೆ ಹೋದರು.

ಚೆಂಡು, ಅವರ ಬ್ಯಾಟ್ ಮತ್ತು ಪ್ಯಾಡ್‌ಗೆ ಏಕಕಾಲದಲ್ಲಿ ಬಡಿದಿರುವುದು ಟಿ.ವಿ ರಿಪ್ಲೇನಲ್ಲಿ ತೋರಿಸಿತ್ತು. ಪ್ಯಾಡ್‌ಗೆ ಮೊದಲು ತಾಗಿದೆ ಎಂಬುದು ಸ್ಪಷ್ಟವಾಗದಿದ್ದರೂ, ಮೂರನೇ ಅಂಪೈರ್ ಔಟ್ ಎಂದು ತೀರ್ಪು ನೀಡಿದರು. ಪೆವಿಲಿಯನ್ ಮರಳಿದ ಕೊಹ್ಲಿ ಡ್ರೆಸಿಂಗ್ ಕೊಠಡಿಯಲ್ಲಿ ರಿಪ್ಲೇ ವೀಕ್ಷಿಸಿ ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಈ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

ಇಂಗ್ಲೆಂಡ್‌ಗೆ ಮಣಿದ ಭಾರತ

ಐಸಿಸಿ ಮಹಿಳಾ ಟಿ20 ವಿಶ್ವಕಪ್: ಸೋಲಿನಲ್ಲೂ ಗಮನಸೆಳೆದ ರೇಣುಕಾ ಸಿಂಗ್

ಗೆಬೆಹಾ, ದಕ್ಷಿಣ ಆಫ್ರಿಕಾ (ಪಿಟಿಐ): ಮಧ್ಯಮ ವೇಗಿ ರೇಣುಕಾ ಸಿಂಗ್ (15ಕ್ಕೆ 5) ಅವರ ವೈಯಕ್ತಿಕ ಶ್ರೇಷ್ಠ ಪ್ರದರ್ಶನದ ಹೊರತಾಗಿಯೂ ಭಾರತ ತಂಡ, ಐಸಿಸಿ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ ಮೊದಲ ಸೋಲಿನ ಕಹಿಯುಂಡಿತು.

ಶನಿವಾರ ನಡೆದ ಪಂದ್ಯದಲ್ಲಿ ಭಾರತ ತಂಡವನ್ನು 11 ರನ್‌ಗಳಿಂದ ಮಣಿಸಿದ ಇಂಗ್ಲೆಂಡ್, ಸೆಮಿಫೈನಲ್‌ನಲ್ಲಿ ಬಹುತೇಕ ಸ್ಥಾನ ಖಚಿತಪಡಿಸಿಕೊಂಡಿತು. ಹರ್ಮನ್‌ಪ್ರೀತ್ ಕೌರ್ ಬಳಗ ನಾಲ್ಕರಘಟ್ಟ ಪ್ರವೇಶಿಸಬೇಕಾದರೆ ಕೊನೆಯ ಲೀಗ್ ಪಂದ್ಯದವರೆಗೆ ಕಾಯಬೇಕಾಗಿದೆ.

ಮೊದಲು ಬ್ಯಾಟ್ ಮಾಡಿದ ಇಂಗ್ಲೆಂಡ್ ತಂಡ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 151 ರನ್ ಗಳಿಸಿದರೆ, ಭಾರತ ತಂಡ ನಿಗದಿತ ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ 140 ರನ್ ಕಲೆಹಾಕಿತು.

ಆರಂಭಿಕ ಬ್ಯಾಟರ್ ಸ್ಮೃತಿ ಮಂದಾನ (52 ರನ್, 41 ಎ., 4X7, 6X1) ಮತ್ತು ಕೊನೆಯಲ್ಲಿ ಅಬ್ಬರಿಸಿದ ರಿಚಾ ಘೋಷ್ (ಔಟಾಗದೆ 47, 34 ಎ., 4X4, 6X2) ಅವರು ಭಾರತ ತಂಡವನ್ನು ಗೆಲುವಿನತ್ತ ಕೊಂಡೊಯ್ಯಲು ಪ್ರಯತ್ನಿಸಿದರೂ ಯಶ ಲಭಿಸಲಿಲ್ಲ. ಸಾರಾ ಗ್ಲೆನ್ (27ಕ್ಕೆ 2) ಒಳಗೊಂಡಂತೆ ಇಂಗ್ಲೆಂಡ್‌ನ ಬೌಲರ್‌ಗಳು ಶಿಸ್ತಿನ ದಾಳಿ ನಡೆಸಿದರು.

ಇಂಗ್ಲೆಂಡ್‌ನ ನಥಾಲಿ ಸಿವರ್ ಬ್ರಂಟ್–ಎಎಫ್‌ಪಿ ಚಿತ್ರ

ಸ್ಮೃತಿ ಹೊರತುಪಡಿಸಿ ಅಗ್ರ ಕ್ರಮಾಂಕದ ಬ್ಯಾಟರ್‌ಗಳು ಅಲ್ಪ ಮೊತ್ತಕ್ಕೆ ಔಟಾದದ್ದು ಮುಳುವಾಗಿ ಪರಿಣಮಿಸಿತು. ಮೊದಲ ಹತ್ತು ಓವರ್‌ಗಳಲ್ಲಿ ವೇಗವಾಗಿ ರನ್ ಪೇರಿಸಲು ಆಗಲಿಲ್ಲ. ಭಾರತದ ಗೆಲುವಿಗೆ ಕೊನೆಯ 4 ಓವರ್‌ಗಳಲ್ಲಿ 47 ರನ್‌ಗಳು ಬೇಕಿದ್ದವು. ರಿಚಾ ಬೌಂಡರಿ ಮತ್ತು ಸಿಕ್ಸರ್‌ಗಳ ಮೂಲಕ ಅಬ್ಬರದ ಆಟವಾಡಿದರೂ ಗೆಲುವು ದಕ್ಕಲಿಲ್ಲ.

ಇದಕ್ಕೂ ಮುನ್ನ ಇಂಗ್ಲೆಂಡ್ ತಂಡ, ರೇಣುಕಾ ಸಿಂಗ್ (15ಕ್ಕೆ 5) ಅವರ ಪ್ರಭಾವಿ ಬೌಲಿಂಗ್ ಹೊರತಾಗಿಯೂ ಸವಾಲಿನ ಮೊತ್ತ ಕಲೆಹಾಕಿತು.

ನಥಾಲಿ ಸಿವರ್ ಬ್ರಂಟ್ (50 ರನ್,42 ಎ., 4X5) ಮತ್ತು ಆ್ಯಮಿ ಜೋನ್ಸ್ (40, 27 ಎ., 4X3, 6X2) ಅವರು ಇಂಗ್ಲೆಂಡ್ ನೆರವಿಗೆ ನಿಂತರು. ಹೆಥರ್ ನೈಟ್ 28 ರನ್ ಗಳಿಸಿದರು. ಆ್ಯಮಿ ಅವರು ಕೊನೆಯ ಓವರ್‌ಗಳಲ್ಲಿ ರನ್ ವೇಗ ಹೆಚ್ಚಿಸಿದರು. ರೇಣುಕಾ ಅವರಿಗೆ ಇತರ ಬೌಲರ್‌ಗಳಿಂದ ತಕ್ಕ ಬೆಂಬಲ ದೊರೆಯಲಿಲ್ಲ.

ರೇಣುಕಾ ಸಿಂಗ್– ಎಎಫ್‌ಪಿ ಚಿತ್ರ

ಭಾರತ ತನ್ನ ಮುಂದಿನ ಪಂದ್ಯದಲ್ಲಿ ಫೆ.20 ರಂದು ಐರ್ಲೆಂಡ್‌ನ ಸವಾಲು ಎದುರಿಸಲಿದೆ.

ಸಂಕ್ಷಿಪ್ತ ಸ್ಕೋರ್: ಇಂಗ್ಲೆಂಡ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 151 (ನಥಾಲಿ ಸಿವರ್ ಬ್ರಂಟ್ 50, ಹೆಥರ್ ನೈಟ್ 28, ಆ್ಯಮಿ ಜೋನ್ಸ್ 40, ಸೋಫಿ ಎಕ್ಲೆಸ್ಟೋನ್ ಔಟಾಗದೆ 11, ರೇಣುಕಾ ಸಿಂಗ್ 15ಕ್ಕೆ 5, ಶಿಖಾ ಪಾಂಡೆ 20ಕ್ಕೆ 1, ದೀಪ್ತಿ ಶರ್ಮಾ 37ಕ್ಕೆ 1)

ಭಾರತ 20 ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 140 (ಸ್ಮೃತಿ ಮಂದಾನ 52, ಶಫಾಲಿ ವರ್ಮಾ 8, ಜೆಮಿಮಾ ರಾಡ್ರಿಗಸ್ 13, ಹರ್ಮನ್‌ಪ್ರೀತ್ ಕೌರ್ 4, ರಿಚಾ ಘೋಷ್ ಔಟಾಗದೆ 47, ಸಾರಾ ಗ್ಲೆನ್ 27ಕ್ಕೆ 2, ಸೋಫಿ ಎಕ್ಲೆಸ್ಟೋನ್ 14ಕ್ಕೆ 1, ಲಾರೆನ್ ಬೆಲ್ 22ಕ್ಕೆ 1) ಫಲಿತಾಂಶ: ಇಂಗ್ಲೆಂಡ್‌ಗೆ 11 ರನ್ ಗೆಲುವು

ಕ್ರಾಸ್ ಕಂಟ್ರಿ: ಕಿಪ್ಲಿಮೊ, ಚೆಬೆಟ್‌ಗೆ ಕಿರೀಟ

ಬಾತರ್ಸ್ಟ್, ಆಸ್ಟ್ರೇಲಿಯಾ (ಎಎಫ್‌ಪಿ): ಉಗಾಂಡಾದ ಜೇಕಬ್ ಕಿಪ್ಲಿಮೊ ಹಾಗೂ ಕೆನ್ಯಾದ ಬೀಟ್ರೈಸ್ ಚೆಬೆಟ್ ಅವರು ಇಲ್ಲಿ ನಡೆದ ವಿಶ್ವ ಕ್ರಾಸ್‌ಕಂಟ್ರಿ ಚಾಂಪಿಯನ್‌ಷಿಪ್‌ನ ಕ್ರಮವಾಗಿ ಪುರುಷ ಮತ್ತು ಮಹಿಳೆಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಶನಿವಾರ ನಡೆದ ಪುರುಷರ ಸ್ಪರ್ಧೆಯಲ್ಲಿ ಜೇಕಬ್ 29 ನಿಮಿಷ 17 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಸುಮಾರು 10 ಕಿ.ಮೀ. ದೂರ ಕ್ರಮಿಸಿದ ಅವರು, ಇಥಿಯೋಪಿಯಾದ ಬೆರಿಹು ಅರೆಗವಿ (29 ನಿ. 26 ಸೆ.) ಅವರನ್ನು ಹಿಂದಿಕ್ಕಿದರು. ಉಗಾಂಡಾದ ಜೋಷುವಾ ಚೆಪ್ಟೆಗಿ (29 ನಿ. 37 ಸೆ.) ಕಂಚು ಜಯಿಸಿದರು. ಭಾರತದ ಅವಿನಾಶ್ ಸಬ್ಳೆ 35ನೇ ಸ್ಥಾನ ಗಳಿಸಿದರು.

ಮಹಿಳೆಯರ ವಿಭಾಗದಲ್ಲಿ ಚೆಬೆಟ್ 33 ನಿ. 48 ಸೆ.ಗಳಲ್ಲಿ ಗುರಿ ಮುಟ್ಟಿ ಮೊದಲ ಸ್ಥಾನ ಗಳಿಸಿದರು. ಇಥಿಯೋಪಿಯಾದ ಸಿಗಿ ಗೆಬೆರೆಸೆಲಮಾ (33 ನಿ. 56 ಸೆ.) ಬೆಳ್ಳಿ ಮತ್ತು ಕೆನ್ಯಾದ ಆ್ಯಗ್ನೆಸ್ ಗೆಟಿಚ್ (34 ನಿ.) ಕಂಚು ಜಯಿಸಿದರು. ನೆಚ್ಚಿನ ಸ್ಪರ್ಧಿ ಎನಿಸಿದ್ದ ಇಥಿಯೋಪಿಯಾದ ಲೆಟೆನ್ಸ್‌ಬೆಟ್ ಗಿಡಿ ಸ್ಪರ್ಧೆ ಮುಕ್ತಾಯದ ಹಂತದಲ್ಲಿ ಕುಸಿದುಬಿದ್ದು, ಹಿನ್ನಡೆ ಅನುಭವಿಸಿದರು.



ಜೇಕಬ್ ಕಿಪ್ಲಿಮೊ– ಎಎಫ್‌ಪಿ ಚಿತ್ರ

ಬೋರ್ಗ್ ಪುತ್ರನಿಗೆ ವೈಲ್ಡ್ ಕಾರ್ಡ್

ಬೆಂಗಳೂರು: ಟೆನಿಸ್ ದಂತಕತೆ, ಸ್ವೀಡನ್‌ನ ಬ್ಯೋನ್ ಬೋರ್ಗ್ ಅವರ ಪುತ್ರ ಲಿಯೊ ಬೋರ್ಗ್ ಅವರಿಗೆ ಬೆಂಗಳೂರು ಓಪನ್ ಟೆನಿಸ್ ಟೂರ್ನಿಯ ಸಿಂಗಲ್ಸ್ ವಿಭಾಗದಲ್ಲಿ ವೈಲ್ಡ್‌ಕಾರ್ಡ್ ಪ್ರವೇಶ ಲಭಿಸಿದೆ.

ಸಿಂಗಲ್ಸ್ ಮುಖ್ಯ ಡ್ರಾಅನ್ನು ಶನಿವಾರ ಪ್ರಕಟಿಸಲಾಗಿದೆ. ಕರ್ನಾಟಕ ಲಾನ್ ಟೆನಿಸ್ ಸಂಸ್ಥೆ (ಕೆಎಸ್‌ಎಲ್‌ಟಿಎ) ಆಯೋಜಿಸಲಿರುವ ಟೂರ್ನಿಯು ಸೋಮವಾರದಿಂದ ಇಲ್ಲಿ ನಡೆಯಲಿದೆ.

ರಣಜಿ ಟ್ರೋಫಿ ಕ್ರಿಕೆಟ್ ಫೈನಲ್: ಬಂಗಾಳ ಹಿನ್ನಡೆ

ಸೌರಾಷ್ಟ್ರ ತಂಡದ ಮೇಲುಗೈ

ಕೋಲ್ಕತ್ತ (ಪಿಟಿಐ): ಸೌರಾಷ್ಟ್ರ ತಂಡದವರು ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯ ಫೈನಲ್ ಪಂದ್ಯದಲ್ಲಿ ತಮ್ಮ ಹಿಡಿತ ಬಿಗಿಗೊಳಿಸಿದ್ದು, ಪ್ರಶಸ್ತಿಯತ್ತ ದಿಟ್ಟ ಹೆಜ್ಜೆಯಿಟ್ಟಿದ್ದಾರೆ.

ಈಡನ್ ಗಾರ್ಡನ್ಸ್ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಪಂದ್ಯದಲ್ಲಿ ಜೈದೇವ್ ಉನದ್ಕತ್ ಬಳಗ ಮೊದಲ ಇನಿಂಗ್ಸ್‌ನಲ್ಲಿ 230 ರನ್‌ಗಳ ಮುನ್ನಡೆ ಪಡೆಯಿತು. ಮೂರನೇ ದಿನವಾದ ಶನಿವಾರದ ಆಟದ ಅಂತ್ಯಕ್ಕೆ ಬಂಗಾಳ, ಎರಡನೇ ಇನಿಂಗ್ಸ್‌ನಲ್ಲಿ 4 ವಿಕೆಟ್ ನಷ್ಟಕ್ಕೆ 169 ರನ್ ಗಳಿಸಿದೆ.

ಆತಿಥೇಯ ತಂಡ ಇನ್ನೂ 61 ರನ್‌ಗಳಿಂದ ಹಿನ್ನಡೆಯಲ್ಲಿದ್ದು, ಸೋಲು ತಪ್ಪಿಸಲು ಹೋರಾಟ ನಡೆಸುತ್ತಿದೆ. ಮನೋಜ್ ತಿವಾರಿ (ಬ್ಯಾಟಿಂಗ್ 57) ಮತ್ತು ಶಹಬಾಜ್ ಅಹಮದ್ (ಬ್ಯಾಟಿಂಗ್ 13) ಕ್ರೀಸ್‌ನಲ್ಲಿದ್ದರು.

ಇದಕ್ಕೂ ಮುನ್ನ 5 ವಿಕೆಟ್‌ಗಳಿಗೆ 317 ರನ್‌ಗಳಿಂದ ಆಟ ಮುಂದು ವರಿಸಿದ್ದ ಸೌರಾಷ್ಟ್ರ, 404 ರನ್‌ಗಳಿಗೆ ಆಲೌಟಾಯಿತು. ಅರ್ಪಿತ್ ವಾಸವಡ (81) ಹಿಂದಿನ ದಿನದ ಮೊತ್ತಕ್ಕೆ ಔಟಾದರೆ, ಚಿರಾಗ್ ಜಾನಿ (60) ಮೂರು ರನ್ ಸೇರಿಸಿ ವಿಕೆಟ್ ಒಪ್ಪಿಸಿದರು. ಕೊನೆಯ ಕ್ರಮಾಂಕದ ಬ್ಯಾಟರ್‌ಗಳ ಉತ್ತಮ ಆಟದಿಂದ ತಂಡದ ಮೊತ್ತ 400ರ ಗಡಿ ದಾಟಿತು.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಬಂಗಾಳ 54.1 ಓವರ್‌ಗಳಲ್ಲಿ 174. ಸೌರಾಷ್ಟ್ರ 110 ಓವರ್‌ಗಳಲ್ಲಿ 404 (ಅರ್ಪಿತ್ ವಾಸವಡ 81, ಚಿರಾಗ್ ಜಾನಿ 60, ಪ್ರೇರಕ್ ಮಂಕಡ್ 33, ಪಾರ್ಥ್ ಭುತ್ ಔಟಾಗದೆ 14, ಧರ್ಮೇಂದ್ರಸಿಂಹ ಜಡೇಜ 29, ಮುಕೇಶ್ ಕುಮಾರ್ 111ಕ್ಕೆ 4, ಇಶಾನ್ ಪೊರೆಲ್ 86ಕ್ಕೆ 3) ಎರಡನೇ ಇನಿಂಗ್ಸ್: ಬಂಗಾಳ 53 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 169 (ಅಭಿಮನ್ಯು ಈಶ್ವರನ್ 16, ಅನುಸ್ಟುಪ್ ಮಜುಂದಾರ್ 61, ಮನೋಜ್ ತಿವಾರಿ ಬ್ಯಾಟಿಂಗ್ 57, ಶಹಬಾಜ್ ಅಹಮದ್ ಬ್ಯಾಟಿಂಗ್ 13, ಜೈದೇವ್ ಉನದ್ಕತ್ 47ಕ್ಕೆ 2, ಚೇತನ್ ಸಕಾರಿಯಾ 50ಕ್ಕೆ 2)

ವಿಕೆಟ್ ಪಡೆದ ಸಂಭ್ರಮದಲ್ಲಿ ಉನದ್ಕತ್ –ಪಿಟಿಐ ಚಿತ್ರ

ಬಿಸಿಎಫ್‌ಸಿಗೆ ಪ್ರಶಸ್ತಿ

ಬೆಂಗಳೂರು: ಬೆಂಗಳೂರು ಸಿಟಿ ಎಫ್‌ಸಿ (ಬಿಸಿಎಫ್‌ಸಿ) ತಂಡವು ಬಿಡಿಎಫ್‌ಎ ಬಿ ಡಿವಿಷನ್ ಲೀಗ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆಗಿ ಹೊರಹೊಮ್ಮಿತು.

ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಟೂರ್ನಿಯ ಕೊನೆಯ ಪಂದ್ಯದಲ್ಲಿ ಶುಕ್ರವಾರ ಬಿಸಿಎಫ್‌ಸಿ 1–0ಯಿಂದ ಸಿಐಎಲ್ ಎಫ್‌ಸಿ ಎದುರು ಗೆದ್ದಿತು. ಲೀಗ್‌ನಲ್ಲಿ ಒಟ್ಟು 21 ಪಾಯಿಂಟ್ಸ್ ಗಳಿಸಿ ಪ್ರಶಸ್ತಿ ತನ್ನದಾಗಿಸಿಕೊಂಡಿತು.

16 ಪಾಯಿಂಟ್ಸ್ ಗಳಿಸಿದ ರೂಟ್ಸ್ ಎಫ್‌ಎಸ್ ಎರಡನೇ ಸ್ಥಾನ ಗಳಿಸಿತು.

ಆರ್‌ಸಿಬಿಗೆ ಮಂದಾನ ನಾಯಕತ್ವ

ಬೆಂಗಳೂರು: ಸ್ಮೃತಿ ಮಂದಾನ ಅವರು ಮಹಿಳಾ ಪ್ರೀಮಿಯರ್ ಲೀಗ್ ಟಿ20 ಕ್ರಿಕೆಟ್ ಟೂರ್ನಿಯಲ್ಲಿ ರಾಯಲ್ ಚಾಲೆಂಜರ್ ಬೆಂಗಳೂರು (ಆರ್‌ಸಿಬಿ) ತಂಡವನ್ನು ಮುನ್ನಡೆಸಲಿದ್ದಾರೆ.

ಇತ್ತೀಚೆಗೆ ನಡೆದ ಆಟಗಾರ್ತಿಯರ ಹರಾಜಿನಲ್ಲಿ ಆರ್‌ಸಿಬಿ ತಂಡ ₹ 3.40 ಕೋಟಿ ಮೊತ್ತಕ್ಕೆ ಸ್ಮೃತಿ ಅವರನ್ನು ತನ್ನದಾಗಿಸಿಕೊಂಡಿತ್ತು. ಎಡಗೈ ಬ್ಯಾಟರ್ ಆಗಿರುವ ಅವರು ಭಾರತ ತಂಡದ ಉಪನಾಯಕಿಯೂ ಹೌದು.

ಆರ್‌ಸಿಬಿಯ ಐಪಿಎಲ್ ತಂಡದ ಆಟಗಾರ ವಿರಾಟ್ ಕೊಹ್ಲಿ ಮತ್ತು ನಾಯಕ ಫಫ್ ಡುಪ್ಲೆಸಿ ಅವರು ವಿಡಿಯೊ ಸಂದೇಶದ ಮೂಲಕ ಸ್ಮೃತಿ ಅವರ ಹೆಸರನ್ನು ಘೋಷಿಸಿ, ಮಹಿಳಾ ತಂಡಕ್ಕೆ ಶುಭಹಾರೈಸಿದ್ದಾರೆ.

ಸ್ಮೃತಿ ಮಂದಾನ

‘ನಾವು ನಾಯಕತ್ವದ ಜವಾಬ್ದಾರಿಯನ್ನು ಸ್ಮೃತಿ ಅವರಿಗೆ ನೀಡಿದ್ದೇವೆ. ಅವರು ತಂಡವನ್ನು ಯಶಸ್ಸಿನ ಹಾದಿಯಲ್ಲಿ ಮುನ್ನಡೆಸುವ ವಿಶ್ವಾಸವಿದೆ’ ಎಂದು ಆರ್‌ಸಿಬಿ ಫ್ರಾಂಚೈಸ್ ಚೇರ್‌ಮನ್ ಪ್ರಥಮೇಶ್ ಮಿಶ್ರಾ ಹೇಳಿದ್ದಾರೆ.

113 ಅಂತರರಾಷ್ಟ್ರೀಯ ಟಿ20 ಪಂದ್ಯಗಳನ್ನು ಆಡಿರುವ ಸ್ಮೃತಿ, 27.15ರ ಸರಾಸರಿಯಲ್ಲಿ 2,661 ರನ್ ಕಲೆಹಾಕಿದ್ದು, 123.19 ಸ್ಟ್ರೈಕ್‌ರೇಟ್ ಹೊಂದಿದ್ದಾರೆ. ಅವರು 11 ಪಂದ್ಯಗಳಲ್ಲಿ ಭಾರತ ತಂಡವನ್ನು ಮುನ್ನಡೆಸಿದ್ದಾರೆ.

ಇಂಗ್ಲೆಂಡ್ ಬಿಗಿ ಹಿಡಿತ

ಮೌಂಟ್ ಮಾಂಗನೂಯಿ, ನ್ಯೂಜಿಲೆಂಡ್ (ಎಪಿ): ಮೂವರ ಅರ್ಧಶತಕ ಹಾಗೂ ಸ್ಟುವರ್ಟ್ ಬ್ರಾಡ್ (21ಕ್ಕೆ 4) ಅವರ ಅಮೋಘ ಬೌಲಿಂಗ್ ಬಲದಿಂದ ಇಂಗ್ಲೆಂಡ್ ತಂಡವು ನ್ಯೂಜಿಲೆಂಡ್ ಎದುರಿನ ಮೊದಲ ಟೆಸ್ಟ್ ಪಂದ್ಯದಲ್ಲಿ ಬಿಗಿಹಿಡಿತ ಸಾಧಿಸಿದೆ.

ಪಂದ್ಯದ ಮೂರನೇ ದಿನದಾಟವಾದ ಶನಿವಾರ, ಎರಡನೇ ಇನಿಂಗ್ಸ್‌ನಲ್ಲಿ ಇಂಗ್ಲೆಂಡ್ 374 ರನ್ ಗಳಿಸಿ ಎಲ್ಲ ವಿಕೆಟ್ ಒಪ್ಪಿಸಿತು. ಬಳಿಕ ಬ್ಯಾಟಿಂಗ್ ಆರಂಭಿಸಿದ ನ್ಯೂಜಿಲೆಂಡ್ 63 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿದೆ. ಪ್ರವಾಸಿ ಇಂಗ್ಲೆಂಡ್‌ಅನ್ನು ಮಣಿಸಲು ಕಿವೀಸ್ ಇನ್ನೂ 331 ರನ್ ಗಳಿಸಬೇಕಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಇಂಗ್ಲೆಂಡ್ 9 ವಿಕೆಟ್‌ಗೆ 325 ಡಿಕ್ಲೇರ್ಡ್. ನ್ಯೂಜಿಲೆಂಡ್ 82.5 ಓವರ್‌ಗಳಲ್ಲಿ 306. ಎರಡನೇ ಇನಿಂಗ್ಸ್: ಇಂಗ್ಲೆಂಡ್ 73.5 ಓವರ್‌ಗಳಲ್ಲಿ 374 (ಒಲಿ ಪೋಪ್ 49, ಜೊ ರೂಟ್ 57, ಹ್ಯಾರಿ ಬ್ರೂಕ್ 54, ಬೆನ್ ಫೋಕ್ಸ್ 51, ಒಲಿ ರಾಬಿನ್ಸನ್ 39; ಬ್ಲೇರ್ ಟಿಕ್ನರ್ 55ಕ್ಕೆ 3, ಸ್ಕಾಟ್ ಕುಗೆಲೈನ್ 81ಕ್ಕೆ 2, ಮೈಕಲ್ ಬ್ರೇಸ್‌ವೆಲ್ 68ಕ್ಕೆ 3). ನ್ಯೂಜಿಲೆಂಡ್: 23 ಓವರ್‌ಗಳಲ್ಲಿ 5ಕ್ಕೆ 63 (ಮೈಕಲ್ ಬ್ರೇಸ್‌ವೆಲ್ ಔಟಾಗದೆ 25; ಸ್ಟುವರ್ಟ್ ಬ್ರಾಡ್ 21ಕ್ಕೆ 4).

ಏಷ್ಯಾ ಬ್ಯಾಡ್ಮಿಂಟನ್: ಭಾರತಕ್ಕೆ ಕಂಚು

ದುಬೈ (ಪಿಟಿಐ): ವೀರೋಚಿತ ಹೋರಾಟದ ನಡುವೆಯೂ ಭಾರತ ತಂಡದವರು ಏಷ್ಯಾ ಮಿಕ್ಸೆಡ್ ಟೀಮ್ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್‌ನಲ್ಲಿ ಚೀನಾ ಎದುರು ಸೋತು ಕಂಚಿನ ಪದಕ ಗಳಿಸಿದರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ ಸೆಮಿಫೈನಲ್ ಪಂದ್ಯದಲ್ಲಿ ಶನಿವಾರ ಭಾರತ 2–3ರಿಂದ ಚೀನಾ ಎದುರು ಎಡವಿತು. ನಾಲ್ಕರ ಘಟ್ಟದಲ್ಲಿ ಸೋತ ಎರಡೂ ತಂಡಗಳಿಗೆ ಕಂಚು ನೀಡಲಾಗುವುದರಿಂದ, ಟೂರ್ನಿಯಲ್ಲಿ ಭಾರತ ಮೊದಲ ಬಾರಿಗೆ ಪದಕ ಜಯದ ಸಾಧನೆ ಮಾಡಿತು.

ಪುರುಷರ ಸಿಂಗಲ್ಸ್ ವಿಭಾಗದ ಹಣಾಹಣಿಯಲ್ಲಿ ಭಾರತದ ಎಚ್.ಎಸ್.ಪ್ರಣಯ್ 13-21, 15-21ರಿಂದ ಚೀನಾದ ಲೆ ಲ್ಯಾನ್ ಷಿ ಎದುರು ಸೋತರು. ಮಹಿಳಾ ಸಿಂಗಲ್ಸ್‌ನಲ್ಲಿ ಪಿ.ವಿ. ಸಿಂಧು ಕೂಡ 9-21, 21-16, 18-21ರಿಂದ ಗವಾ ಫಂಗ್ ಜಿ ಎದುರು ಮಣಿದರು. ಇದರೊಂದಿಗೆ ಭಾರತ 0–2ರಿಂದ ಹಿನ್ನಡೆ ಅನುಭವಿಸಿತ್ತು.

ಡಬಲ್ಸ್ ಸೆಣಸಾಟಗಳಲ್ಲಿ ಜಯ ಸಾಧಿಸಿದ ಭಾರತ ತಂಡಗಳು ಸ್ಪರ್ಧೆಯನ್ನು 2–2ರಿಂದ ಸಮಬಲಗೊಳಿಸಿದವು. ಪುರುಷರ ವಿಭಾಗದಲ್ಲಿ ಧ್ರುವ ಕಪಿಲ– ಚಿರಾಗ್ ಶೆಟ್ಟಿ 21-19,21-19ರಿಂದ ಜಿ ಟಿಂಗ್– ಜೊ ಹೊವ್ ಡಾಂಗ್ ಎದುರು ಗೆದ್ದರೆ, ಮಹಿಳಾ ಡಬಲ್ಸ್‌ನಲ್ಲಿ ತ್ರಿಶಾ ಜೋಲಿ–ಗಾಯತ್ರಿ ಗೋಪಿಚಂದ್ 21-18, 13-21, 21-19ರಿಂದ ಲಿವು ಶೆಂಗ್ ಶು– ಟಾನ್ ನಿಂಗ್ ಅವರನ್ನು ಪರಾಭವಗೊಳಿಸಿದರು.

ನಿರ್ಣಾಯಕ ಎನಿಸಿದ್ದ ಮಿಶ್ರ ಡಬಲ್ಸ್ ಹಣಾಹಣಿಯ ಮೇಲೆ ಎಲ್ಲರ ಚಿತ್ತ ನೆಟ್ಟಿತ್ತು. ಆದರೆ ಭಾರತದ ಇಶಾನ್ ಭಟ್ನಾಗರ್– ತನಿಶಾ ಕ್ರಾಸ್ಟೊ ಜೋಡಿಯು 17–21, 13–21ರಿಂದ ಜೆನ್ ಬಾಂಗ್– ವೇ ಯಾ ಷಿನ್ ಎದುರು ನಿರಾಸೆ ಅನುಭವಿಸಿತು.

ಟರ್ಕಿ: ಘಾನಾ ಫುಟ್‌ಬಾಲ್ ಆಟಗಾರನ ಮೃತದೇಹ ಪತ್ತೆ

ಹತಾಯ್, ಟರ್ಕಿ (ಎಎಫ್‌ಪಿ): ಘಾನಾದ ಫುಟ್‌ಬಾಲ್ ಆಟಗಾರ ಕ್ರಿಸ್ಟಿಯನ್ ಅಟ್ಸು ಅವರ ಮೃತದೇಹ ಟರ್ಕಿಯ ಹತಾಯ್ ಪ್ರಾಂತ್ಯದಲ್ಲಿ ಭೂಕಂಪದಿಂದ ಕುಸಿದ ಕಟ್ಟಡದ ಅವಶೇಷಗಳಡಿ ಪತ್ತೆಯಾಗಿದೆ.

ಕ್ರಿಸ್ಟಿಯನ್

ಅಟ್ಸು ತಂಗಿದ್ದ ಕಟ್ಟಡ ಫೆ.6 ರಂದು ಸಂಭವಿಸಿದ್ದ ಭೂಕಂಪದಲ್ಲಿ ಕುಸಿದಿತ್ತು. ಮರುದಿನ ಅವರನ್ನು ಅವಶೇಷಗಳಡಿಯಿಂದ ರಕ್ಷಿಸಲಾಗಿದೆ ಎಂದು ಕೆಲವು ಮಾಧ್ಯಮಗಳು ವರದಿ ಮಾಡಿದ್ದವು. ಆದರೆ ಆ ವರದಿಯನ್ನು ಬಳಿಕ ಅಲ್ಲಗಳೆಯಲಾಗಿತ್ತು.

‘ಅಟ್ಸು ಮೃತದೇಹ ಪತ್ತೆಯಾಗಿದೆ’ ಎಂದು ಟರ್ಕಿಯಲ್ಲಿರುವ ಅವರ ಮ್ಯಾನೇಜರ್ ಮುರಾತ್ ಉಜುನ್ಮೆಹಮೆತ್ ಹೇಳಿದ್ದಾರೆ. ಘಾನಾದ ವಿದೇಶಾಂಗ ವ್ಯವಹಾರಗಳ ಸಚಿವಾಲಯ ಕೂಡಾ ಈ ಸುದ್ದಿಯನ್ನು ಖಚಿತಪಡಿಸಿದೆ.

ಮೃತದೇಹವನ್ನು ಘಾನಾಕ್ಕೆ ತರಿಸಿಕೊಳ್ಳುವ ನಿಟ್ಟಿನಲ್ಲಿ ಟರ್ಕಿ ಸರ್ಕಾರದ ಜತೆ ಮಾತುಕತೆ ನಡೆಸಲಾಗುವುದು ಎಂದು ಹೇಳಿದೆ.

ಘಾನಾ ರಾಷ್ಟ್ರೀಯ ತಂಡಕ್ಕೆ ಆಡಿದ್ದ 31 ವರ್ಷದ ಅಟ್ಸು, ಟರ್ಕಿಯ ಹತಾಯ್‌ಸ್ಪರ್ ತಂಡವನ್ನು ಪ್ರತಿನಿಧಿಸುತ್ತಿದ್ದರು. ಇಂಗ್ಲಿಷ್ ಪ್ರೀಮಿಯರ್ ಲೀಗ್‌ನಲ್ಲಿ ನ್ಯೂಕ್ಯಾಸಲ್ ಯುನೈಟೆಡ್ ಮತ್ತು ಎವರ್ಟನ್ ಪರ ಆಡಿದ್ದ ಅವರು, ಕಳೆದ ಸೆಪ್ಟೆಂಬರ್‌ನಲ್ಲಿ ಟರ್ಕಿಯ ಕ್ಲಬ್ ಸೇರಿದ್ದರು. ಘಾನಾ ಪರ 2019 ರಲ್ಲಿ ಕೊನೆಯ ಅಂತರರಾಷ್ಟ್ರೀಯ ಪಂದ್ಯ ಆಡಿದ್ದರು.

ಪ್ರಶಸ್ತಿಯೊಂದಿಗೆ ಅರ್ಜುನ್ ಖಾಡೆ (ಎಡ) ಮತ್ತು ಜಾಯ್ ಕ್ಲಾರ್ಕ್– ಪಿಟಿಐ ಚಿತ್ರ

ಟೆನಿಸ್: ಖಾಡೆ ಜೋಡಿಗೆ ಪ್ರಶಸ್ತಿ

ಚೆನ್ನೈ (ಪಿಟಿಐ): ಭಾರತದ ಅರ್ಜುನ್ ಖಾಡೆ ಅವರು ಬ್ರಿಟನ್‌ನ ಜಾಯ್ ಕ್ಲಾರ್ಕ್ ಜೊತೆಗೂಡಿ ಚೆನ್ನೈ ಓಪನ್ ಎಟಿಪಿ ಚಾಲೆಂಜರ್ ಟೆನಿಸ್ ಟೂರ್ನಿಯ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು. ಆದರೆ ಸುಮಿತ್ ನಗಾಲ್, ಸಿಂಗಲ್ಸ್ ವಿಭಾಗದ ಸೆಮಿಫೈನಲ್‌ನಲ್ಲಿ ಎಡವಿದರು.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಡಬಲ್ಸ್ ಫೈನಲ್‌ನಲ್ಲಿ ಶನಿವಾರ ಖಾಡೆ ಹಾಗೂ ಜಾಯ್ 6-0 6-4ರಿಂದ ಆಸ್ಟ್ರಿಯಾದ ಸೆಬಾಸ್ಟಿಯನ್ ಆಫ್ನರ್ ಮತ್ತು ಕ್ರೊವೇಷ್ಯಾದ ಸೆರ್ದಾರುಸಿಚ್ ಅವರನ್ನು ಪರಾಭವಗೊಳಿಸಿದರು.

ಮೊದಲ ಸೆಟ್‌ನಲ್ಲಿ ಸಂಪೂರ್ಣ ಪಾರಮ್ಯ ಮೆರೆದ ಭಾರತ ಮತ್ತು ಗ್ರೇಟ್ ಬ್ರಿಟನ್ ಜೋಡಿ, ಒಂದೂ ಗೇಮ್ ಕೈಚೆಲ್ಲದೆ ಗೆಲುವು ಒಲಿಸಿಕೊಂಡಿತು. ಎರಡನೇ ಸೆಟ್‌ನ ಒಂದು ಹಂತದಲ್ಲಿ 4–4ರ ಸಮಬಲದ ಹೋರಾಟ ಕಂಡುಬಂದರೂ ಖಾಡೆ–ಕ್ಲಾರ್ಕ್ ಒತ್ತಡ ಮೀರುವಲ್ಲಿ ಯಶಸ್ವಿಯಾದರು.

ಸುಮಿತ್‌ಗೆ ನಿರಾಸೆ: ಸಿಂಗಲ್ಸ್ ವಿಭಾಗದ ನಾಲ್ಕರ ಘಟ್ಟದ ಹಣಾಹಣಿಯಲ್ಲಿ ಸುಮಿತ್ 4-6, 2-6ರಿಂದ ಅಮೆರಿಕದ ನಿಕೊಲಾಸ್ ಮೊರೆನೊ ಡಿ ಅಲ್ಬೊರನ್ ಎದುರು ಎಡವಿದರು. 1 ತಾಸು 39 ನಿಮಿಷಗಳ ಕಾಲ ನಡೆದ ಹಣಾಹಣಿಯಲ್ಲಿ ಭಾರತದ ಆಟಗಾರ ಒತ್ತಡಕ್ಕೆ ಒಳಗಾದಂತೆ ಕಂಡುಬಂದರು.

ಅಥ್ಲೆಟಿಕ್ಸ್: ಮುತ್ತಣ್ಣ ದಾಖಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆ.ವೈ. ಮುತ್ತಣ್ಣ ಅವರು ಇಲ್ಲಿ ನಡೆದ ರಾಜ್ಯ ಯೂತ್ ಮತ್ತು ಜೂನಿಯರ್ ಅಥ್ಲೆಟಿಕ್ಸ್‌ನ 200 ಮೀಟರ್ಸ್ ಓಟದಲ್ಲಿ ಕೂಟ ದಾಖಲೆಯೊಂದಿಗೆ ಅಗ್ರಸ್ಥಾನ ಗಳಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಕೂಟದಲ್ಲಿ 18 ವರ್ಷದೊಳಗಿನವರ ವಿಭಾಗದಲ್ಲಿ ಮುತ್ತಣ್ಣ 21.51 ಸೆಕೆಂಡುಗಳಲ್ಲಿ ಗುರಿ ತಲುಪಿದರು. ಇದರೊಂದಿಗೆ ಈ ಹಿಂದೆ ಶಶಿಕಾಂತ್ (21.6 ಸೆ.) ನಿರ್ಮಿಸಿದ್ದ ದಾಖಲೆಯನ್ನು ಅಳಿಸಿಹಾಕಿದರು. ಮುತ್ತಣ್ಣ ಬೆಂಗಳೂರು ನಗರ ಜಿಲ್ಲೆಯನ್ನು ಪ್ರತಿನಿಧಿಸಿದ್ದರು.

ಫಲಿತಾಂಶಗಳು (ವಿಜೇತರು ಮಾತ್ರ): ಬಾಲಕರು: 20 ವರ್ಷದೊಳಗಿನವರು: 1500 ಮೀ.: ವಿಜಯ್ ಸವರ್ತಕರ್ (ಬೆಳಗಾವಿ, ಕಾಲ, 4 ನಿ.3.14ಸೆ). ಶಾಟ್‌ಪಟ್: ಅಜಯ್ ಅಶೋಕ್ (ಬೆಂ. ನಗರ, ದೂರ: 16.39 ಮೀ.). ಹೈಜಂಪ್: ಸುದೀಪ್ (ಶಿವಮೊಗ್ಗ, ಎತ್ತರ: 1.90ಮೀ,). 400 ಮೀ.: ಶ್ರೀನಾಥ್ (ಬೆಳಗಾವಿ, ಕಾಲ: 49.75 ಸೆ.). ಡಿಸ್ಕಸ್ ಥ್ರೊ: ವರುಣ್ ಡಿ.ಸಿ. (ಮಂಗಳೂರು, ದೂರ: 45.97 ಮೀ.). ಶಿಜನ್ ಥಾಮಸ್ (ದಕ್ಷಿಣ ಕನ್ನಡ, ಕಾಲ: 10.67 ಸೆ.). 110 ಮೀ. ಹರ್ಡಲ್ಸ್: ಕೃಷಿಕ್ (ತುಮಕೂರು, ಕಾಲ: 14.34 ಸೆ.). ಲಾಂಗ್‌ಜಂಪ್: ಜಾಫರ್‌ಖಾನ್ (ಬೆಳಗಾವಿ, ದೂರ: 6.63 ಮೀ.). 400 ಮೀ. ಹರ್ಡಲ್ಸ್: ಆರ್ಯನ್ ಕಶ್ಯಪ್ (ಮೈಸೂರು, ಕಾಲ: 54.24ಸೆ.). ಟ್ರಿಪಲ್ ಜಂಪ್: ರಮೇಶ್ ನಾಯಕ (ದಕ್ಷಿಣ ಕನ್ನಡ, ದೂರ: 13.99 ಮೀ.). 800 ಮೀ.: ಸುಪ್ರೀತ್ ಸಿ. (ದ.ಕ, ಕಾಲ: 1 ನಿ. 57.28ಸೆ.). ಪೋಲ್‌ವಾಲ್ಟ್: ಆದಿತ್ಯ ವಿ.ಎಂ. (ಬೆಂ.ನಗರ, ದೂರ: 3.30 ಮೀ.). 5000 ಮೀ.: ಶಿವಾಜಿ ಪಿ.ಎಂ. (ಬೆಂ.ನಗರ, ಕಾಲ: 15 ನಿ. 34.33 ಸೆ.). 200 ಮೀ.: ಕೃಷಿಕ್ (ತುಮಕೂರು, ಕಾಲ: 21.73ಸೆ.). 18 ವರ್ಷದೊಳಗಿನವರು: 200 ಮೀ.: ಮುತ್ತಣ್ಣ ಕೆ.ವೈ. (ಬೆಂ. ನಗರ, ಕೂಟ ದಾಖಲೆ: 21.51 ಸೆ.)

ಕೆ.ವೈ.ಮುತ್ತಣ್ಣ

ಬಾಲಕಿಯರು: 20 ವರ್ಷದೊಳಗಿನವರು: 1500 ಮೀ.: ರೂಪಶ್ರೀ ಎನ್.ಎಸ್. (ದ.ಕ. ಕಾಲ: 5 ನಿ. 0.85 ಸೆ.). ಲಾಂಗ್‌ಜಂಪ್: ಐಶ್ವರ್ಯ ಆರ್.ಪಿ. (ದ.ಕ. ದೂರ: 5.66 ಮೀ.). 400 ಮೀ.: ಮಾನಸಾ ಎನ್.ಸಿ. (ಕೊಡಗು, ಕಾಲ: 58.63 ಸೆ.). ಶಾಟ್‌ಪಟ್: ಬೃಂದಾ ಎಸ್. ಗೌಡ (ಮೈಸೂರು, ದೂರ: 11.88 ಮೀ.), ಡಿಸ್ಕಸ್ ಥ್ರೊ: ದೈನಿ ಸಿ.ಎ. (ಮೈಸೂರು, ದೂರ: 34.42 ಮೀ.). 100 ಮೀ.: ನಯನಾ ಜಿ.ಕೆ. (ಉತ್ತರ ಕನ್ನಡ, ಕಾಲ: 11.90 ಸೆ.). ಹೈಜಂಪ್: ತಾರುಣ್ಯಾ ಪಿ. (ಬೆಂ. ನಗರ, ದೂರ: 1.40 ಮೀ.). 200 ಮೀ.: ನಯನಾ ಜಿ.ಕೆ. (ಉ.ಕ, ಕಾಲ: 24.64 ಸೆ.). 400 ಮೀ. ಹರ್ಡಲ್ಸ್: ದೀಕ್ಷಿತಾ (ದ.ಕ, ಕಾಲ: 1 ನಿ. 6.01 ಸೆ.). 800 ಮೀ.: ದೀಪಶ್ರೀ (ದ.ಕ. ಕಾಲ: 2 ನಿ. 17.20 ಸೆ.). ಟ್ರಿಪಲ್ ಜಂಪ್: ಕೃತಿ ಶೆಟ್ಟಿ (ದ.ಕ, ದೂರ: 12.04 ಮೀ.). 500 ಮೀ.: ಶುಭಾಂಗಿ ಕಾಕತ್ಕರ್ (ಬೆಳಗಾವಿ, ಕಾಲ: 20 ನಿ. 59.17ಸೆ.)